**This article is written by Sri Madhava Murthy, who has studied under Sri Satyapramoda Tirtharu and Elimeli Acharyaru. He has contributed this article to our www.sumadhwaseva.com. We really appreciate the work done by Sri Madhava Murthy for his nice presentation of Madhwa Prameyagalu in his article containing 162 pages.**

**www.Sumadhwaseva.com**

---

## ||ಶ್ರೀಗುರುಭ್ಯೋ ನಮಃ ಹರಿಃ ಓಂ||

ನರಸಿಂಹೋ$ಖಿಲಾಜ್ಞಾನಮತಧ್ವಾಂತ ದಿವಾಕರಃ|
ಜಯತ್ಯಮಿತ ಸದ್ಜ್ಞಾನಸುಖಶಕ್ತಿ ಪಯೋನಿಧಿಃ ||
ಪ್ರಹ್ಲಾದಾಹ್ಲಾದಕಂ ಲಕ್ಷ್ಮೀನೃಸಿಂಹಂ ಭಕ್ತವತ್ಸಲಮ್|
ದೈತ್ಯಮತ್ತೇಭ ದಮನಂ ಶ್ರೀನಿವಾಸಂ ಭಜೆ$ಹಮ್||
ಶ್ರವಣಾತ್ ಸರ್ವ ಪಾಪಘ್ನಂ ಮನನಾದಿಷ್ಟವರ್ಷಿಣಮ್|
ಸ್ವಧ್ಯಾನಾತ್ ಸಿದ್ಧಿದಂ ಪ್ರೇಕ್ಷಣಾತ್ ಮೋಕ್ಷದಂ ಭಜೇ ||
ಅಭ್ರಮಂ ಭಂಗರಹಿತಂ ಅಜಡಂ ವಿಮಲಂ ಸದಾ|
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್ ||
ಏನಾಹಮಿಹ ದುರ್ಮಾರ್ಗಾದುದ್ಧೃತ್ಯಾಭಿನಿವೇಶಿತಃ|
ಸಮ್ಯಕ್ ಶ್ರೀವೈಷ್ಣವೇ ಮಾರ್ಗೇ ಪೂರ್ಣಪ್ರಜ್ಞಂ ನಮಾಮ್ಯಹಮ್ ||
ಯಸ್ಯವಾಕ್ ಕಾಮದೇನುರ್ಃ ಕಾಮಿತಾರ್ಥಾನ್ ಪ್ರಯಚ್ಛತಿ|
ಸೇವೇ ತಂ ಜಯಯೋಗೀಂದ್ರಂ ಕಾಮಬಾಣಛಿದಂ ಸದಾ ||
ಚಿತ್ರೈಃ ಪದ್ಯೈಶ್ಚ ಗಂಭೀರೈರ್ವಾಕ್ಯೈರ್ಮಾನೈರಖಂಡಿತೈ|
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ||
ವ್ಯಾಸರಾಜೇಂದು ಮಾಶಾಸೇ ಚಂದ್ರಿಕಾ ಯಸ್ಯ ಸಮ್ಮತಾ|
ದುರ್ವಾದಿ ಚೋರಾನ್ ವಿದ್ರಾವ್ಯ ರಕ್ಷಿತಂ ಭುವನತ್ರಯಮ್ ||
ಮೂಕೋ$ಪಿ ಯತ್ಪ್ರಸಾದೇನ ಮುಕುಂದಶಯನಾಯತೇ|
ರಾಜರಾಜಾಯತೇ ರಿಕ್ತೋ ರಾಘವೇಂದ್ರಂ ತಮಾಶ್ರಯೇ ||

ಸತ್ಯಾಭಿಜ್ಞಕರಾಬ್ಜೋತ್ಥಾನ್ ಪಂಚಾಶದ್ವರ್ಷ ಪೂಜಕಾನ್।
ಶ್ರೀಸತ್ಯಪ್ರಮೋದತೀರ್ಥಾನ್ ನೌಮಿ ನ್ಯಾಯಸುಧಾರತಾನ್ ॥
ಆಪಾದಮೌಳಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್।
ತೇನ ವಿಘ್ನಾಃ ಪ್ರಣಶ್ಯಂತಿ ಸಿಧ್ಯಂತಿ ಚ ಮನೋರಥಾಃ ॥

# ಪ್ರಮಾಣ ಪ್ರಕರಣ

## ಪ್ರಮಾಣದ ಅವಶ್ಯಕತೆ

ಶ್ರೀಮನ್ಮಧ್ವಾಚಾರ್ಯರಿಂದ ರಚಿತವಾದ ಗ್ರಂಥಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಮಾಣದ ಜ್ಞಾನವು ಅತ್ಯಾವಶ್ಯಕವಾಗಿದೆ. ಪ್ರಮಾಣ ಪ್ರಮಿತವಾಗಿ ಪ್ರಮೇಯ ಜ್ಞಾನವನ್ನು ಮಾಡಿಕೊಂಡರೆ ಮಾತ್ರ ಅದು ನಿರ್ದುಷ್ಟವಾಗಿಯೂ, ನಿಶ್ಚಯಾತ್ಮಕವಾಗಿಯೂ ಇದ್ದು ಉಪಾಸನೆಗೆ ಅನುಕೂಲವಾಗುತ್ತದೆ. ಶ್ರೀಮತ್ ಸತ್ಯಧ್ಯಾನತೀರ್ಥರು ಸಭಾಸಾರ ಸಂಗ್ರಹ (ಗೀತೋಪನ್ಯಾಸ ಭಾಗ-೨)ದಲ್ಲಿ "ಕೇವಲ ಕೆಲವು ಪ್ರಮೇಯಗಳ ವಿಶ್ವಾಸದಿಂದಲೇ ಮುಕ್ತಿಯಾಗುವುದೆಂದು ಮೂಢ ಭರವಸೆಯನ್ನು ಹೊಂದಿದ್ದರೆ ದುಸ್ತರವಾದ ಸಾಗರವನ್ನು ಸಣ್ಣ ದೋಣಿಯಿಂದ ದಾಟುವುದಕ್ಕೆ ಯತ್ನಿಸಿದಂತಾಗುವುದು. ಜ್ಯೋತಿಷ್ಯದಲ್ಲಿ ಗಣಿತಭಾಗವು ಹೇಗೆ ಶ್ರೇಷ್ಠವೋ ಮತ್ತು ಅಧಿಕ ಪುಣ್ಯಪ್ರದವೋ ಹಾಗೆಯೇ ಪ್ರಮಾಣ ಪ್ರಮೇಯ ಭಾಗಗಳಲ್ಲಿ ಪ್ರಮಾಣಭಾಗದ ಜ್ಞಾನವು ಶ್ರೇಷ್ಠವೂ ಪುಣ್ಯಪ್ರದವೂ ಆಗಿರುವುದು. ಆದರೆ ಒಂದನ್ನು ಬಿಟ್ಟು ಒಂದನ್ನು ಅವಲಂಬಿಸಿ ಪುರುಷಾರ್ಥವನ್ನು ಸಂಪಾದಿಸುವುದು ಅಶಕ್ಯವು. ಉಭಯದಿಂದಲೂ ಸಹಿತನಾಗಿಯೇ ಗುರುದೇವತೆಗಳ ಅನುಗ್ರಹದಿಂದ ಅಧಿಕಾರಿಯು ಮುಕ್ತನಾಗುವನು"ಎಂದು ಹೇಳಿದ್ದಾರೆ. ಶ್ರೀಮದಾಚಾರ್ಯರು ವೇದೋಕ್ತವಾದ ಪರಬ್ರಹ್ಮತತ್ತ್ವವನ್ನು ನಿರೂಪಣೆಮಾಡಿ ಅದನ್ನು ಅರ್ಥಮಾಡಿಕೊಳ್ಳುವುದಕ್ಕೆ ಬಹಳ ಎಚ್ಚರಿಕೆ ಬೇಕು ಎಂದು ಹೇಳುವ ಸಂದರ್ಭದಲ್ಲಿ "ಕಿಂಚಿತ್ ತದನ್ಯಥಾ ಜ್ಞಾತಂ. . ಕಿಂ ತೇನ ನ ಕೃತಂ ಪಾಪಂ ಚೋರೇಣ ಈಶಾಪಹಾರಿಣಾ" (ಯಾರಿಗೆ ಇಲ್ಲಿಯವರೆಗೆ ನಿರೂಪಿತವಾದ ಪರಬ್ರಹ್ಮತತ್ತ್ವವು ಕಿಂಚಿತ್ತಾದರೂ ಅದಿಲ್ಲದಿರುವಂತೆ ಗೃಹೀತವಾಗುವುದೋ . . . . ಪರಮಾತ್ಮನನ್ನು ಕದ್ದ ಕಳ್ಳನಾದ ಅವನಿಂದ ಯಾವ ಪಾಪವು ಮಾಡಲ್ಪಡಲಿಲ್ಲ? ಎಂದರೆ ಅವನು ಸರ್ವಪಾಪಗಳನ್ನು ಮಾಡಿದವನು) ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಅಂದರೆ ಶ್ರುತ್ಯುಕ್ತನಾದ ಪರಬ್ರಹ್ಮನನ್ನು ಶ್ರೀಮದಾಚಾರ್ಯರು ತಮ್ಮ ಗ್ರಂಥಗಳಲ್ಲಿ ಹೇಳಿರುವ ರೀತಿಯಲ್ಲಿ ತಿಳಿದುಕೊಂಡರೆ ಮಾತ್ರ ಅವನನ್ನು ಸರಿಯಾಗಿ ತಿಳಿದಂತಾಗುತ್ತದೆ. ಇದಕ್ಕಾಗಿ ಅವರು ತಮ್ಮ

**ಗ್ರಂಥಗಳಲ್ಲಿ ಬಹುಸೂಕ್ಷ್ಮವಾಗಿ ಪ್ರಮಾಣದ ಸ್ವರೂಪವನ್ನು ನಿರ್ಧರಿಸಿ, ತಾವು ಶ್ರುತಪಡಿಸಿರುವ ಪರಬ್ರಹ್ಮನು ಅಂತಹ ಪ್ರಮಾಣಗಳಿಂದ ಸಿದ್ಧವಾದವನು ಎಂದು ನಿರೂಪಿಸಿದ್ದಾರೆ**.

ಪ್ರಾಮಾಣ್ಯವಿಚಾರವು ನಿಯಮವಾಗಿ ಅಧ್ಯಾತ್ಮಪರವಾದುದು. ಮನುಷ್ಯನು ಐಹಿಕವಿಷಯಗಳಲ್ಲಿ ವೈರಾಗ್ಯಹೊಂದಿ, ಇಲ್ಲಿರುವ ನಾನಾ ವಿಷಯಸುಖಗಳನ್ನು ತ್ಯಜಿಸಿ ಪರಲೋಕದ ಶ್ರೇಯಸ್ಸನ್ನು ಬಯಸುವನು. ತತ್ತ್ವಜ್ಞಾನವಿಲ್ಲದೇ ಪರಲೋಕ ಪರನಾಗಲು ಸಾಧ್ಯವಾಗುವುದಿಲ್ಲ. ಅಂತಹ ತತ್ತ್ವಜ್ಞಾನ ಯಥಾರ್ಥವಾಗಿರಬೇಕು ಅಂದರೆ ತತ್ತ್ವವನ್ನು ಅದಿರುವಂತೆ ತಿಳಿಸಬೇಕು. ಹಾಗಿಲ್ಲದಿದ್ದರೆ ಪರಲೋಕದ ಶ್ರೇಯಸ್ಸು ದುರ್ಲಭವಾಗುತ್ತದೆ. ಈ ಕಾರಣದಿಂದ ಪ್ರಮಾಣಗಳ ಅಧ್ಯಯನ ತತ್ತ್ವಜ್ಞಾನಾರ್ಥಿಗಳೆಲ್ಲರಿಗೂ ಅತ್ಯಾವಶ್ಯಕವಾಗಿದೆ.

ತತ್ತ್ವವೆಂದರೆ ಪ್ರಮೇಯ. 'ಪ್ರಮೇಯ'ಎನ್ನುವ ಶಬ್ದದ ಅರ್ಥ 'ಪ್ರಮಾ ವಿಷಯ'ಎಂದು. ಪ್ರಮಾ ಎಂದರೆ ಯಥಾರ್ಥಜ್ಞಾನ. ಯಥಾರ್ಥಜ್ಞಾನದ ವಿಷಯ ಪ್ರಮೇಯ. ತತ್ತ್ವವು ಪ್ರಮೇಯವೆಂದರೆ ಯಥಾರ್ಥಜ್ಞಾನದ ವಿಷಯ ಎಂದು ಅರ್ಥವಾಗುತ್ತದೆ.

ವೇದವೊಂದೇ ಪರತತ್ತ್ವಜ್ಞಾನವನ್ನು ಹುಟ್ಟಿಸುವ ಪ್ರಮಾಣವಾಗಿದೆ. ಅದರಿಂದ ಬೇರೆಯಾದ ಯಾವುದೂ ತತ್ತ್ವಜ್ಞಾನ ಜನಕವಾಗುವುದಿಲ್ಲ. "ಪ್ರಮಾಣಂ ವೇದ ಏವೈಕಃ ತತ್ಪ್ರಾಮಾಣ್ಯಂ ಚ ಸಾಧಿತಂ"ಎಂದು ಶ್ರೀಮದಾಚಾರ್ಯರು ಹೇಳಿದ್ದಾರೆ. ಪ್ರಮಾಣಕ್ಕೆ ಮಧ್ವಸಿದ್ಧಾಂತದಲ್ಲಿ ದೊರೆತಿರುವಷ್ಟು ಪ್ರಾಶಸ್ತ್ಯ ಬೇರೆ ಯಾವ ದರ್ಶನದಲ್ಲಿಯೂ ಇಲ್ಲ. ಈ ಪ್ರಪಂಚವನ್ನು ಪ್ರಮೇಯವೆಂದು ಕರೆದರೆ ಅದರಲ್ಲಿ ಪ್ರಮಾಣ ಮತ್ತು ಪ್ರಮೇಯ ಎಂಬ ಎರಡು ಭಾಗಗಳಿವೆ. ಪ್ರಮಾಣವೆಂದರೆ ಜ್ಞಾನ ಮತ್ತು ಜ್ಞಾನಸಾಧನ. ಪ್ರಮಾಣದಿಂದ ಸಿದ್ಧವಾದದ್ದು ಪ್ರಮೇಯ. ಪ್ರಮಾಣವು ತನ್ನನ್ನೂ ತನ್ನಿಂದ ವ್ಯತಿರಿಕ್ತವಾದ ವಿಷಯವನ್ನೂ ಸಾಧಿಸಿಕೊಡುತ್ತದೆ. ಇದರಿಂದ ಪ್ರಮಾಣವು ಪ್ರಮೇಯವೂ ಆಗಿದೆ. ಜಗತ್ತಿನಲ್ಲಿ ಶ್ರೀಮನ್ಮಧ್ವಸಿದ್ಧಾಂತ ಒಂದನ್ನು ಬಿಟ್ಟು ಬೇರೆ ಎಲ್ಲಾ ಮತಗಳಲ್ಲಿಯೂ ಅವರಿಂದ ಕಲ್ಪಿತವಾದ ಪ್ರಮೇಯಕ್ಕೆ ಪ್ರಾಧಾನ್ಯತೆಯೂ ಪ್ರಮಾಣಕ್ಕೆ ಅಪ್ರಾಧಾನ್ಯತೆಯೂ ಇರುವುದು ಕಂಡುಬರುತ್ತದೆ. ಈ ಒಂದು ದೋಷವೇ ಅವುಗಳನ್ನು ತ್ಯಾಗಾರ್ಹವನ್ನಾಗಿ ಮಾಡಿತು. ಈ ಎಲ್ಲ ಮತಗಳಲ್ಲಿ ಹೇಗೋ ಮೊದಲೇ ನಂಬಿದ ವಿಷಯದಲ್ಲಿ ಪ್ರಮಾಣವನ್ನು ಹುಡುಕಲು ಹೊರಟಿದ್ದೇ ಈ ದೋಷಕ್ಕೆ ಕಾರಣವೆಂದು ತಿಳಿಯುತ್ತದೆ.. ಪ್ರಮಾಣವು ತನ್ನ ಪ್ರಾಧಾನ್ಯಕ್ಕೆ ಯಾವ ರೀತಿಯಿಂದ ಕುಂದು ಬಂದರೂ

ಆ ವಾದವನ್ನೇ ಅಪ್ರಯೋಜಕವಾಗಿ ಮಾಡುವುದು. ಇಂತಹ ಪ್ರಮಾಣದ ಬೆಳಕಿನಲ್ಲಿ ಪರತತ್ವವು ಶ್ರೀಮನ್ಮಧ್ವಸಿದ್ಧಾಂತದಲ್ಲಿ ಅನನ್ಯ ಸಾಧಾರಣವಾಗಿ ನಿರೂಪಿತವಾಗಿದೆ. ಶ್ರೀಮದಾಚಾರ್ಯರು ಪ್ರಮಾಣೈಕ ಶರಣರು. ಅವರು ಪ್ರಮೇಯಕ್ಕೆ ಅನುಕೂಲವಾದ ಪ್ರಮಾಣವನ್ನು ಕಲ್ಪಿಸಿಲ್ಲ. ಅವರು ಮೊದಲು ಜ್ಞಾನದ ಸ್ವರೂಪವನ್ನು ಪರೀಕ್ಷಿಸಿ, ಅದರ ಸ್ವಪ್ರಕಾಶ ಅಸ್ವಪ್ರಕಾಶಭಾಗಗ ಳನ್ನು, ಪ್ರಮಾಣ ಅಪ್ರಮಾಣಭಾಗಗಳನ್ನು ವಿಂಗಡಿಸಿ, ಪ್ರಮಾಣಜ್ಞಾನದ ಸಾರ್ವತ್ರಿಕ ವ್ಯಾಪ್ತಿಯನ್ನು ಸಮರ್ಥಿಸಿ, ಪ್ರಮಾಣ ಜ್ಞಾನದ ಸಾಧನವನ್ನು ನಿರೂಪಿಸಿ, ಅದರ ವಿಷಯದಲ್ಲಿ ಲೌಕಿಕಾಲೌಕಿಕ ಭಾಗಗಳನ್ನು ಪ್ರತ್ಯೇಕಮಾಡಿ, ಅಲೌಕಿಕವಾದ ಪ್ರಮೇಯದ ಅಂಗೀಕಾರ ಅನಿವಾರ್ಯವೆಂದು ತೋರಿಸಿ, ಅದರ ಜ್ಞಾನದ ಸಾಧನವೇ ವೇದವೆಂದು ಸಿದ್ಧಾಂತಮಾಡಿ, ಪ್ರಮಾಣದ ಪ್ರಾಮಾಣ್ಯ, ಅಪ್ರಮಾಣದ ಅಪ್ರಾಮಾಣ್ಯ ಇವುಗಳ ಉತ್ಪತ್ತಿ ಮತ್ತು ಜ್ಞಪ್ತಿ ಎಂದರೆ ಜ್ಞಾನ ಇವುಗಳು ಸಂಭವಿಸುವ ಕ್ರಮವನ್ನು ಉಪಪಾದಿಸಿ ಅಲೌಕಿಕ ಪ್ರಮೇಯವು ವೇದೈಕ ಸಮಧಿಗಮ್ಯವೆಂದು ತೋರಿಸಿ, ಈ ನಿಮಿತ್ತದಿಂದ ವೇದದ ಅಸಾಧಾರಣ ಪ್ರಾಮಾಣ್ಯವನ್ನು ನಿರೂಪಿಸಿ, ಅದರ ಅರ್ಥದ ಜಿಜ್ಞಾಸೆಯ ಭಾಷೆಯಾದ ಬ್ರಹ್ಮಸೂತ್ರಗಳೇ ಪ್ರಮಾಣತಮವೆಂಬ ಅಬಾಧಿವಾದ ಸಿದ್ಧಾಂತವನ್ನು ಜಗತ್ತಿಗೆ ಕೊಟ್ಟಿದ್ದಾರೆ. ಇವರ ಸಿದ್ಧಾಂತ ಕೇವಲ ಅಲೌಕಿಕವಸ್ತುವಾದ ವಿಷ್ಣುವೆಂಬ ವೈದಿಕ ಲಕ್ಷಣವುಳ್ಳ ಬ್ರಹ್ಮನಿಗಾಗಿ ಪ್ರವರ್ತಿಸಿ, ಈ ಬ್ರಹ್ಮ ಇತರ ಸಿದ್ಧಾಂತಗಳಲ್ಲಿ ನಿರೂಪಿತವಾದ ಬ್ರಹ್ಮನಿಂದ ವಿಲಕ್ಷಣವೆಂದು ತೋರಿಸಿ, ವೈದಿಕವಾದ ಬ್ರಹ್ಮವಾದವನ್ನು ಪ್ರತಿಷ್ಠಾಪಿಸಿದ್ದಾರೆ. ಪರತತ್ತ್ವ ವಿಚಾರಾಸಕ್ತರು ಇವರ ಸಿದ್ಧಾಂತವನ್ನು ತಿಳಿದು ಮನನ ಮಾಡುವುದೊಂದೇ ಶ್ರೇಯಸ್ಸಾಧನ. ಶ್ರೀಮದಾಚಾರ್ಯರ ಸಿದ್ಧಾಂತ ಅನೇಕ ಸಿದ್ಧಾಂತಗಳಲ್ಲಿ ಒಂದಲ್ಲ, ಅದೇ ಸಿದ್ಧಾಂತ. ಇತರ ಮತಗಳು ಪ್ರಮೇಯುವನ್ನು ಪ್ರಧಾನಮಾಡಿಕೊಂಡು ಪ್ರವೃತ್ತಿಸಿರುವುದು ಅವುಗಳ ದೋಷಕ್ಕೆ ಕಾರಣ. ಈ ದೋಷವಿಲ್ಲದಿರುವುದೇ ಶ್ರೀಮನ್ಮಧ್ವಸಿದ್ಧಾಂತದ ಮಹತ್ವ.

ಯಾವುದಾರೂ ಒಂದು ವಾಕ್ಯ ಪ್ರಾಮಾಣ್ಯವೆಂದರೆ ಅದನ್ನು ಇರುವಂತೆ ಹೇಳುವ ಭಾವ. ಪ್ರಾಮಾಣ್ಯವು ೧.ಆಪ್ತವಾಕ್ಯತೆ, ೨.ಶ್ರುತಿಮೂಲತೆ ಮತ್ತು ೩.ಯುಕ್ತಿಮೂಲತೆ, ಎಂದು ಈ ಮೂರರಿಂದ ಮಾತ್ರ ಬರುವುದು. ಆಪ್ತವಾಕ್ಯವೆಂದರೆ ವಸ್ತುವನ್ನು ಅದಿರುವಂತೆ ತಿಳಿದು, ಆ ಜ್ಞಾನಕ್ಕೆ ಅನುಗುಣವಾಗಿ ಪ್ರಯೋಗಿಸಿದ ವಾಕ್ಯವೆಂದು ಅರ್ಥ. ಶ್ರುತಿಮೂಲವೆಂದರೆ ಪ್ರಯೋಗಿಸಿದ ವಾಕ್ಯವು ಶ್ರುತಿಯ ಅರ್ಥಕ್ಕೆ ಅನುಗುಣವಾಗಿರಬೇಕು. ಯುಕ್ತಿಮೂಲವೆಂದರೆ ಪ್ರಯೋಗಿಸಿದ ವಾಕ್ಯ ಯುಕ್ತಿಯಿಂದ ಬಾಧಿತವಾಗದೆ ಅದರಿಂದ

ಪ್ರತಿಷ್ಠಿತವಾಗಿರಬೇಕು. ವಿವಕ್ಷಿತಾರ್ಥ ತತ್ವಜ್ಞಾನ, ಕರಣಪಾಟವ, ಅರ್ಥವಿವಕ್ಷಾ, ಅವಿಪ್ರಲಿಪ್ಸಾ ಎಂಬ ಗುಣಗಳುಳ್ಳವರು ಆಪ್ತರು.

ಬ್ರಹ್ಮಸೂತ್ರಗಳಿಗೆ ಮೇಲೆ ಹೇಳಿದ ಮೂರು ವಿಧವಾದ ಪ್ರಮಾಣಗಳೂ ಇರುವುವು. ಬ್ರಹ್ಮಸೂತ್ರಗಳು ಆಪ್ತವಾಕ್ಯ ಗಳು. ಇವನ್ನು ರಚನೆಮಾಡಿದವರು ಬಾದರಾಯಣ ಎನಿಸಿದ ವೇದವ್ಯಾಸದೇವರು. ಇವರು ಮಹಾಭಾರತಾದಿ ಸರ್ವಶಾಸ್ತ್ರ ಕರ್ತೃಗಳಾದ ಸಾಕ್ಷಾತ್ ಶ್ರೀಮನ್ನಾರಾಯಣ. "ಕೋಹ್ಯೋನ್ಯಃ ಪುಂಡರೀಕಾಕ್ಷಾತ್ ಮಹಾಭಾರತಕೃದ್ಭವೇತ್" (ಬಾದರಾಯ ಣರು ಪುಂಡರೀಕಾಕ್ಷನೇ ಅಂದರೆ ನಾರಾಯಣನೇ ಅಲ್ಲದಿದ್ದರೆ ಮಹಾಭಾರತ ಕರ್ತೃ ಹೇಗೆ ಆದಾರು?)" ಎಂದು ಸ್ಮೃತಿಯಲ್ಲಿ ಸಿದ್ಧವಾಗಿದೆ. ಹೀಗೆ ಬಾದರಾಯಣದೇವರು ನಾರಾಯಣನ ಅವತಾರ ಎನ್ನುವುದು ಪ್ರಸಿದ್ಧವಾಗಿದೆ. ನಾರಾಯಣ ಎನ್ನುವುದು ಶ್ರುತ್ಯುಕ್ತನಾದ ಬ್ರಹ್ಮನ ಗುಣಪೂರ್ಣತ್ವ, ನಿರ್ದೋಷತ್ವ, ಜ್ಞೇಯತ್ವ, ಗಮ್ಯತ್ವ ಮತ್ತು ಗುರುತ್ವಗಳೆಂಬ ಲಕ್ಷಣಗಳನ್ನು ತಿಳಿಸುವ ಹೆಸರು. ಶಾಸ್ತ್ರವಾದರೋ ನಾರಾಯಣನು ತನ್ನನ್ನು ತಾನು ಗುಣಪೂರ್ಣನೇ ಮುಂತಾದ ಲಕ್ಷಣಸಹಿತನನ್ನಾಗಿ ಗ್ರಹಿಸುವಮೂಲಕ ಬ್ರಹ್ಮನೆಂದು ತಿಳಿಯುವ ಪ್ರಕಾರ. ಅಂದರೆ ನಾರಾಯಣನು ತನ್ನನ್ನು ತಾನು ಗ್ರಹಿಸುವ ಭಾವ. ಇದನ್ನೇ ಶಾಸ್ತ್ರವೆನ್ನತ್ತಾರೆ. ಇದೇ ಅರ್ಥನಿರ್ಣಾಯಕವಾದ ಬ್ರಹ್ಮಸೂತ್ರಗಳೆಂಬ ನ್ಯಾಯದಿಂದ ಸಮನ್ವಿತ ವಾದ ವೇದ. ಇದನ್ನು ಶ್ರುತಪಡಿಸಲು ನಾರಾಯಣನೇ ಸಮರ್ಥ. ಅವನೇ ಬಾದರಾಯಣ ವೇದವ್ಯಾಸ. ಬಾದರಾಯಣ ದೇವರು ವೇದವ್ಯಾಸರಾಗಿ ವೇದಪ್ರವರ್ತಕ, ಸೂತ್ರಕಾರರಾಗಿ ವೇದಾರ್ಥನಿರ್ಣಾಯಕರೂ ಆಗಿದ್ದಾರೆ. ಶಾಸ್ತ್ರಕರ್ತೃತ್ವವು ಸರ್ವಜ್ಞನೂ, ಜಗಜ್ಜನಕನೂ ಆದ ಶ್ರೀಮನ್ನಾರಾಯಣನ ಅವತಾರವಾದ ವೇದವ್ಯಾಸದೇವರಿಗೆ ಮಾತ್ರ ಸಾಧ್ಯವಾದುದು. ಇದರಿಂದ ಸರ್ವಜ್ಞರಾದ ವೇದವ್ಯಾಸರಿಂದ ರಚಿತವಾದ ಬ್ರಹ್ಮಸೂತ್ರಗಳಿಗೆ ಆಪ್ತವಾಕ್ಯತಾ ರೂಪವಾದ ಪ್ರಾಮಾಣ್ಯವು ಬಂದಿತು. ಇದರಂತೆ ಬ್ರಹ್ಮಸೂತ್ರಗಳಿಗೆ ಶ್ರುತಿಮೂಲತೆ ಎಂಬ ಪ್ರಮಾಣವೂ ಉಂಟಾಗುತ್ತದೆ. ಶ್ರುತಿಮೂಲವೆಂದರೆ ಉಕ್ತವಾದ ಅರ್ಥವು ಶ್ರುತ್ಯುಕ್ತವಾದ ಅರ್ಥಕ್ಕೆ ಸಂವಾದಿಯಾಗಿರಬೇಕು. ಬ್ರಹ್ಮಸೂತ್ರಗಳು ಈ ಅರ್ಥದಲ್ಲಿಯೇ ಶ್ರುತಿಮೂಲ ವಾಗಿವೆ. ಸರ್ವಪ್ರವರ್ತಕನಾದ ನಾರಾಯಣನು ಶ್ರುತಿಗಳಿಗೂ ಪ್ರವರ್ತಕ. ಶ್ರುತ್ಯರ್ಥನಿರ್ಣಾಯಕಗಳಾದ ಬ್ರಹ್ಮಸೂತ್ರಗಳು ನಾರಾಯಣಾವತಾರಿಯಾದ ವೇದವ್ಯಾಸರಿಂದ ರಚಿತವಾಗಿವೆ. ಈ ಬ್ರಹ್ಮಸೂತ್ರಗಳು ಶ್ರುತ್ಯರ್ಥ ನಿರ್ಣಾಯಕವಾಗಿವೆ. ಈ ಕಾರಣದಿಂದ ಬ್ರಹ್ಮಸೂತಗಳಿಗೆ ಶ್ರುತಿಮೂಲತೆ ಎನ್ನುವ ಪ್ರಾಮಾಣ್ಯವೂ ಉಂಟು. ಇದೇ ವಿಧವಾಗಿ ಬ್ರಹ್ಮಸೂತ್ರಗಳಿಗೆ ಯುಕ್ತಿಮೂಲತೆ ಎಂಬ ಪ್ರಾಮಾಣ್ಯವೂ ಇದೆ.

ಬ್ರಹ್ಮಸೂತ್ರಗಳು ಶ್ರುತಿಸಿದ್ಧವಾದ ನ್ಯಾಯಗ್ರಥನಾತ್ಮಕ ಎಂದರೆ ವೇದದಲ್ಲಿ ವೇದಾರ್ಥಸಾಧಕವಾಗಿ ಅಡಗಿರುವ ನ್ಯಾಯದ ಭಾಷೆ. ಈ ನ್ಯಾಯವೇ ಯುಕ್ತಿ. ಇದು ಅಪ್ರತಿಹತ. ಶ್ರುತಿಸಿದ್ಧವಾದ ಯುಕ್ತಿಯು ಅಪೌರುಷೇಯವಾದ ಶ್ರುತಿಯ ಮಹಿಮೆಯಿಂದ ನಿರ್ದೋಷವಾದ ಪ್ರಮಾಣವಾಗಿದೆ. ಇದನ್ನು ಯಾವ ಲೌಕಿಕ ಯುಕ್ತಿಯೂ ಬಾಧಿಸಲಾರದು. ಮೇಲೆ ವಿವರಿಸಿದ ರೀತಿಯಲ್ಲಿ ಆಪ್ತವಾಕ್ಯತೆ ಎಂಬ ಪ್ರಾಮಾಣ್ಯವು ಬ್ರಹ್ಮಸೂತ್ರಗಳಿಗೆ ಮಾತ್ರ ಸಂಭವಿಸುವುದೇ ಹೊರತು ಶ್ರುತ್ಯನುಕೂಲವಲ್ಲದ ಬೇರೆ ಯಾವ ಆಗಮಕ್ಕೂ ಸಂಭವಿಸುದಿಲ್ಲ. ಶ್ರುತಿಗಳು ಮತ್ತು ಶ್ರುತ್ಯನುಕೂಲವಾದ ಸ್ಮೃತಿಗಳು ಇವುಗಳ ಅರ್ಥನಿರ್ಣಯಕ್ಕೋಸ್ಕರ ಬ್ರಹ್ಮಸೂತ್ರಗಳು ಪ್ರವೃತ್ತವಾಗಿವೆ. ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ "ಆಪ್ತವಾಕ್ಯ ತಯಾ ತೇನ ಶ್ರುತಿಮೂಲತಯಾ ತಥಾ।ಯುಕ್ತಿಮೂಲತಯಾ ಚೈವ ಪ್ರಮಾಣ್ಯಂ ತ್ರಿವಿಧಂ ಮತಂ।ದೃಶ್ಯತೇ ಬ್ರಹ್ಮಸೂತ್ರಾಣಾಂ ತ್ರಿಧೈವಾನ್ಯತ್ರ ಸರ್ವತಃ।ಅತೋ ನೈತಾದೃಶಂ ಕಿಂಚಿತ್ ಪ್ರಮಾಣತಮಮಿಷ್ಯತೇ" ಎಂದು ಹೇಳಿದ್ದಾರೆ. ಇದನ್ನೇ "ಶಬ್ದಜಾತಸ್ಯ ಸರ್ವಸ್ಯ ಯತ್ಪ್ರಮಾಣಶ್ಚ ನಿರ್ಣಯಃ" ಎಂದು ಸೂತ್ರಭಾಷ್ಯದಲ್ಲಿ ಹೇಳಿದ್ದಾರೆ.

## ಪ್ರಾಮಾಣ್ಯವಾದ

ಜ್ಞಾನ ಮತ್ತು ಇಂದ್ರಿಯಾದಿಗಳು ಪ್ರಮಾಣ ಅಥವಾ ಅಪ್ರಮಾಣವಾಗಬಹುದು. ಇದರಿಂದ ಜ್ಞಾನದ ಗ್ರಹಣವು ನಮಗೆ ಆಗುವಾಗ ಅದು ಪ್ರಮಾಣವೇ ಅಥವಾ ಅಪ್ರಮಾಣವೇ ಎಂಬುದೂ ತಿಳಿಯಬೇಕು. ಇಲ್ಲದಿದ್ದರೆ ಜ್ಞಾನವು ಸಫಲಪ್ರವೃತ್ತಿಜನಕವಾಗುವುದಿಲ್ಲ. ದರ್ಶನಗಳಲ್ಲಿ ಪ್ರಾಮಾಣ್ಯದ ವಿಚಾರವಾಗಿ ವಾದವಿವಾದಗಳು ಪ್ರಸಕ್ತವಾಗಿವೆ. ಎಲ್ಲ ವಾದಿಗಳೂ ದುರಾಗ್ರಹಪೀಡಿತರಾಗಿ ತಮ್ಮ ತಮ್ಮ ಕಲ್ಪನೆಗಳು ಸಾಧಿತವಾಗುವ ರೀತಿಯಲ್ಲಿ ಪ್ರಮಾಣದ ವಿಚಾರಮಾಡಿ ದ್ದಾರೆ. ಒಂದು ಉದ್ದೇಶ್ಯದ ಸಾಧನೆಗಾಗಿ ಪರೀಕ್ಷೆಮಾಡುವುದು ಸರಿಯಲ್ಲ. ಶ್ರೀಮನ್ಮಧ್ವಶಾಸ್ತ್ರವು ಇಂತಹ ದುರಾಗ್ರಹದಿಂದ ದೂರವಾಗಿ ನಿರ್ದುಷ್ಟವಾಗಿದೆ. ಯಾವ ದುರಾಗ್ರಹಕ್ಕೂ ಒಳಗಾಗದೆ ವಿಚಾರಮಾಡಿದರೆ ಇದು ಅತಿಶಯೋಕ್ತಿಯಲ್ಲ ಎನ್ನುವುದು ತಿಳಿದುಬರುತ್ತದೆ.

ಪ್ರಮಾಣದ ಭಾವ ಪ್ರಾಮಾಣ್ಯ. ಅಪ್ರಮಾಣದ ಭಾವ ಅಪ್ರಾಮಾಣ್ಯ. ಇದು ಜ್ಞಾನಕ್ಕೆ ಬರುವುದು ಉತ್ಪತ್ತಿ. ಅದು ತಿಳಿಯುವುದು ಜ್ಞಪ್ತಿ. ಅದು ಜ್ಞಾನದ ಜೊತಯಲ್ಲಿಯೇ ಹುಟ್ಟುವುದು ಎಂದರೆ ಸ್ವತಃ. ಅದು ಪ್ರತ್ಯೇಕವಾಗಿ ಹುಟ್ಟುವುದು ಎಂದರೆ ಪರತಃ. ಇದು ಜ್ಞಾನದ ಜೊತೆಯಲ್ಲಿಯೇ ತಿಳಿಯುವುದು ಸ್ವತಃ. ಪ್ರತ್ಯೇಕವಾಗಿ ತಿಳಿಯುವುದು ಪರತಃ. ಈ ಪರಿಭಾಷೆಯನ್ನು ಅರ್ಥಮಾಡಿಕೊಂಡರೆ ವಿಚಾರಗ್ರಹಣ ಸುಲಭವಾಗುತ್ತದೆ.

ನ್ಯಾಯವೈಶೇಷಿಕರು ಜ್ಞಾನದ ಪ್ರಾಮಾಣ್ಯ ಮತ್ತು ಅಪ್ರಾಮಾಣ್ಯ ಎರಡೂ ಉತ್ಪತ್ತಿಯಲ್ಲಿಯೂ ಜ್ಞಪ್ತಿಯಲ್ಲಿಯೂ ಪರತಃ ಎನ್ನುತ್ತಾರೆ. ಉದಾಹರಣೆಯಾಗಿ 'ಚಕ್ಷುಸ್ಸು ಸ್ವಯಂ ಗುಣದೋಷರಹಿತವಾಗಿದ್ದು ಅದು ಪ್ರಮಾಣವೂ ಅಲ್ಲದ ಅಪ್ರಮಾಣವೂ ಅಲ್ಲದ ಜ್ಞಾನವನ್ನು ಮಾತ್ರ ಹುಟ್ಟಿಸುತ್ತದೆ. ಅದರಲ್ಲಿ ನಿರ್ದೋಷವಾದ ಜ್ಞಾನಜನಕತ್ವಗುಣವುಂಟಾದರೆ ಪ್ರಮಾಣಜ್ಞಾನಜನಕವಾಗುತ್ತದೆ. ದೋಷವುಂಟಾದರೆ ಅಪ್ರಮಾಣಜ್ಞಾನ ಜನಕವಾಗುತ್ತದೆ ಎನ್ನುತ್ತಾರೆ. ಇವರಂತೆ ಜ್ಞಾನದ ಪ್ರಾಮಾಣ್ಯ ಅಪ್ರಾಮಾಣ್ಯ ಎರಡೂ ಉತ್ಪತ್ತಿಯಲ್ಲಿ ಪರತಃ ಆಗುತ್ತವೆ. ಹುಟ್ಟಿದ ಜ್ಞಾನವು ಪ್ರಮಾಣವೆಂದು ನಾವು ತಿಳಿಯಬೇಕಾದರೆ ಅದು ಸಫಲಪ್ರವೃತ್ತಿ ಜನಕವಾದುದೆಂಬ ಜ್ಞಾನವು ನಮಗೆ ಆಗಬೇಕು. ಆಗ ಈ ಜ್ಞಾನದಿಂದ ಜ್ಞಾನದ ಪ್ರಾಮಾಣ್ಯ ನಿಶ್ಚಯವಾಗುತ್ತದೆ ಹಾಗಿಲ್ಲದಿದ್ದರೆ ಅಪ್ರಾಮಾಣ್ಯ ನಿಶ್ಚಯಿವಾಗುತ್ತದೆ. ಹೀಗೆ ಜ್ಞಾನದ ಪ್ರಾಮಾಣ್ಯ ಅಥವಾ ಅಪ್ರಾಮಾಣ್ಯ ಎರಡೂ ಜ್ಞಪ್ತಿಯಲ್ಲಿ ಪರತಃ ಆಗುತ್ತವೆ. ಸಫಲಪ್ರವೃತ್ತಿ ಜನಕವಾದ ಜ್ಞಾನದಂತೆ ಪ್ರಮಾಣವೆಂದು ನಿಶ್ಚಿತವಾದ ಜ್ಞಾನಕ್ಕೆ ಸಂಗತವಾದ ಜ್ಞಾನವೂ ಪ್ರಮಾಣವಾಗಿರುವುದು. 'ಸಂಗತ'ವೆಂಬ ನಿಮಿತ್ತದಿಂದ ಈ ಜ್ಞಾನದ ಪ್ರಾಮಾಣ್ಯವು ಜ್ಞಾತವಾಗುತ್ತದೆ ಎನ್ನುವುದು ಅವರ ವಾದ. ಜ್ಞಾನದ ಪ್ರಾಮಾಣ್ಯ ನಿಶ್ಚಾಯಕವಾದ ಹೇತುವಿಗೆ ಸಂವಾದ ಎಂದು ಹೆಸರು. ಸಂವಾದವು, ಸಜಾತೀಯ ಮತ್ತು ವಿಜಾತೀಯ ಸಂವಾದ ಎಂದು ಎರಡು ವಿಧ. ಪ್ರಮಾಣವಾದ ಮತ್ತೊಂದು ಜ್ಞಾನಕ್ಕೆ ಸಂಗತವಾದುದು ಸಜಾತೀಯ ಸಂವಾದ. ಸಫಲ ಪ್ರವೃತ್ತಿ ಜನಕವಾದುದೆಂಬುದು ವಿಜಾತೀಯ ಸಂವಾದ.

ನ್ಯಾಯವೈಶೇಷಿಕರ ಈ ವಾದ ಅನವಸ್ಥಾದೋಷ ಯುಕ್ತವಾದ್ದರಿಂದ ಸರಿಯಲ್ಲ. ಕಾರಣಾಂತರದಿಂದ ಸಂದೇಹ ಬಂದ ವಿಷಯದಲ್ಲಿ ಸಂವಾದದಿಂದ ಪ್ರಮಾಣ್ಯವನ್ನು ನಿಶ್ಚಯಿಸಬಹುದಾದರೂ ಸಂವಾದದಿಂದಲೇ ಪ್ರಾಮಾಣ್ಯ ನಿಶ್ಚಯವಾಗುತ್ತದೆ ಇಲ್ಲವಾದರೆ ಇಲ್ಲ ಎಂಬ ನಿಯಮ ಸರಿಯಲ್ಲ. ಒಂದು ಜ್ಞಾನದ ಪ್ರಾಮಾಣ್ಯ ನಿಶ್ಚಯ ಮತ್ತೊಂದು ಜ್ಞಾನದಿಂದ ಎಂದರೆ ಆ ಜ್ಞಾನದ ಪ್ರಾಮಾಣ್ಯ ನಿಶ್ಚಯವಾದರೂ ಹೇಗೆ? ಪುನಃ ಮತ್ತೊಂದರಿಂದ ಎಂದರೆ ಅದರ ಪ್ರಾಮಾಣ್ಯವು ಹೇಗೆ ಎನ್ನುವ ಪ್ರಶ್ನೆಯ ಪರಂಪರೆಗೆ ಅವಧಿಯಿಲ್ಲವಾಗಿ ಮೊದಲನೆಯ ಜ್ಞಾನದ ಪ್ರಾಮಾಣ್ಯನಿಶ್ಚಯ ಸಾಧ್ಯವಾಗುವುದಿಲ್ಲ. ಹೀಗೆಯೇ ಚಕ್ಷುರಾದಿಂದ್ರಿಯಗಳು ಸರಿಯಾಗಿ ವಸ್ತುವನ್ನು ಗ್ರಹಿಸುವ ಗುಣವನ್ನು ಹೊಸದಾಗಿ ಪಡೆಯುವುದಾದರೆ ಅವು ಚಕ್ಷುರಾದಿಗಳಾದದ್ದಾದರೂ ಹೇಗೆ? ವಿಷಯಗಳನ್ನು ಸರಿಯಾಗಿ ಗ್ರಹಿಸುವುದು ಚಕ್ಷುರಾದಿ ಇಂದ್ರಿಯಗಳ ಸ್ವಭಾವ. ಈ ಗುಣವಿಲ್ಲದಿದ್ದರೆ ಅವು ಇಂದ್ರಿಯಗಳೇ ಅಲ್ಲ. ಚಕ್ಷುರಾದಿ ಇಂದ್ರಿಯಗಳು ಸ್ವಾಭಾವಿಕವಾಗಿ ಯಥಾರ್ಥಜ್ಞಾನ ಜನಕವಾಗಿರುತ್ತವೆ. ಯಥಾರ್ಥಜ್ಞಾನವು ಜ್ಞಾತವಾಗುವಾಗ ಸ್ವಾಭಾವಿಕವಾಗಿ ಯಥಾರ್ಥವೆಂದೇ ಜ್ಞಾತವಾಗುತ್ತದೆ.

ನ್ಯಾಯವೈಶೇಷಿಕರಲ್ಲಿರುವಂತಹ ದೋಷಗಳು ಶ್ರೀಮನ್ಮಧ್ವಸಿದ್ಧಾಂತವನ್ನು ಬಿಟ್ಟು ಬೇರೆ ಎಲ್ಲ ದರ್ಶನಗಳಲ್ಲಿಯೂ ಇವೆ ಎಂದರೆ ಅತಿಶಯವಲ್ಲ. ಜ್ಞಾನಸಾಮಗ್ರಿಯೇ ಯಥಾರ್ಥಜ್ಞಾನಕ್ಕೆ ಜನಕವಾಗಿರುತ್ತದೆ. ಇದು ಉತ್ಪತ್ತಿಯಲ್ಲಿ ಜ್ಞಾನದ ಪ್ರಮಾಣವು ಸ್ವತಃ ಎಂದು ತಿಳಿಸುತ್ತದೆ. ಹೀಗೆಯೇ ಜ್ಞಾನದ ಯಥಾರ್ಥತ್ವರೂಪಪ್ರಾಮಾಣ್ಯವು ಸ್ವತಃ ತಿಳಿದುಬರುವುದು. ಅಂದರೆ ಯಾವ ಸಾಧನದಿಂದ ಜ್ಞಾನವು ತಿಳಿಯುವುದೋ ಅದೇ ಸಾಧನದಿಂದ ಅದರ ಯಾಥಾರ್ಥ್ಯವೂ ತಿಳಿಯುತ್ತದೆ. ಇದು ಉತ್ಪತ್ತಿಯಲ್ಲಿ ಜ್ಞಾನವು ಸ್ವತಃ ಎಂದು ತೋರಿಸುತ್ತದೆ. ಹೀಗೆ ಜ್ಞಾನಗ್ರಾಹಕವೇ ಅದರ ಪ್ರಾಮಾಣ್ಯವನ್ನೂ ಗ್ರಹಿಸುತ್ತದೆ. ಇದು ಜ್ಞಾನದ ಪ್ರಾಮಾಣ್ಯ ಜ್ಞಪ್ತಿಯಲ್ಲಿ ಸ್ವತಃ ಎಂದು ತಿಳಿಸುತ್ತದೆ.

ವೃತ್ತಿಜ್ಞಾನ ಮತ್ತು ಸ್ವರೂಪಜ್ಞಾನ ಎಂದು ಜ್ಞಾನ ಎರಡುವಿಧವಾಗಿದೆ. ವೃತ್ತಿಜ್ಞಾನ ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ಹುಟ್ಟುತ್ತದೆ.

ಸ್ವರೂಪಜ್ಞಾನವೇ ಸಾಕ್ಷಿಜ್ಞಾನ. ಸಾಕ್ಷಿ ವೃತ್ತಿಜ್ಞಾನವನ್ನು ಗ್ರಹಿಸುವಾಗ ಯಥಾರ್ಥವಾದ ಆ ಜ್ಞಾನವನ್ನು ಯಥಾರ್ಥವೆಂದೇ ಗ್ರಹಿಸುತ್ತದೆ. ಸಾಕ್ಷಿಜ್ಞಾನ ಸ್ವಯಂಪ್ರಕಾಶ ಮತ್ತು ನಿಯಮವಾಗಿ ಯಥಾರ್ಥ. ಯಥಾರ್ಥ ವಾಗಿಯೇ ಅದು ಗೃಹೀತವಾಗುವುದು ಇದೇ ಜ್ಞಪ್ತಿಯಲ್ಲಿ ಜ್ಞಾನಪ್ರಾಮಾಣ್ಯ ಸ್ವತಃ ಎಂದು ಸಿದ್ಧಾಂತಪರವಾದ ಅರ್ಥ.

ಜ್ಞಾನದ ಅಪ್ರಾಮಾಣ್ಯಕ್ಕೆ ಅದರ ಸಾಧನದ ದೋಷವೇ ಕಾರಣ. ಇದು ಉತ್ಪತ್ತಿಯಲ್ಲಿ ಜ್ಞಾನದ ಅಪ್ರಾಮಾಣ್ಯ ಪರತಃ ಎಂದು ತೋರಿಸುತ್ತದೆ. ಇದರಂತೆ ಅಪ್ರಾಮಾಣ್ಯ ಜ್ಞಪ್ತಿಯಲ್ಲಿ ಪರತಃ. ಅದು ಸಂವಾದ ರಾಹಿತ್ಯದಿಂದ ಜ್ಞಾತವಾಗುವುದು. ಈ ಕಾರಣದಿಂದ ಜ್ಞಾನದ ಅಪ್ರಾಮಾಣ್ಯ ಜ್ಞಪ್ತಿಯಲ್ಲಿ ಪರತಃ ಎಂದು ಜ್ಞಾತವಾಗುತ್ತದೆ. ಶುಕ್ತಿರಜತಜ್ಞಾನಕ್ಕೆ ಸಂವಾದದ ಅಭಾವವಿರುವುದರಿಂದ ಅದು ಅಪ್ರಮಾಣ.

ಸಂಕ್ಷೇಪವಾಗಿ ಸಂಗ್ರಹೀತವಾಗಿರುವ ಈ ವಿಚಾರವನ್ನು ಸಪರಿಕರವಾಗಿಯೂ ವಿಸ್ತಾರವಾಗಿಯೂ ಗುರುಗಳಮುಖ ದಿಂದ ತಿಳಿಯುವುದು ಪ್ರಮಾಣ ಜ್ಞಾನದ ಮತ್ತು ಅದರ ಸಾಧನದ ಸ್ವರೂಪನಿರ್ಣಯಕ್ಕೆ ಸಾಧನವಾಗಿ ಜ್ಞಾನವು ಶ್ರೇಯ ಸ್ಸಾಧನವಾಗುವುದೆಂಬುದರಲ್ಲಿ ಸಂಶಯವಿಲ್ಲ. ಪ್ರಮಾಣಜ್ಞಾನದ ಬೆಳಕಿನಲ್ಲಿ ಪರತತ್ತ್ವಪ್ರಮೇಯದ ವಿಚಾರವು ಸಾಧುವಾಗಿ ರುತ್ತದೆ. ಪ್ರಮಾಣವನ್ನು ವಿನಾಕರಿಸಿದ ಪ್ರಮೇಯವು ಕಲ್ಪನಾಮಯವಾಗಿ ಪರತತ್ತ್ವಸಾಧಕವಾಗುವುದಿಲ್ಲ.

ಪ್ರಮೇಯಗ್ರಂಥಗಳನ್ನು ಓದುವ ಮೊದಲು ಈ ಕೆಳಗೆ ವಿವರಿಸಿರುವ ಕೆಲವು ಪಾರಿಭಾಷಿಕಪದಗಳ ಅರ್ಥವನ್ನೂ ಅವುಗಳ ವಿಶೇಷಗಳನ್ನೂ ಮನನಮಾಡಿ ನೆನಪಿನ್ನಲ್ಲಿ ಇಟ್ಟುಕೊಂಡು ಮತ್ತು ಸಂದರ್ಭಕ್ಕೆ ಅನುಗುಣವಾಗಿ ಅರ್ಥಮಾಡಿ ಕೊಳ್ಳಬೇಕು.

*ಯಥಾರ್ಥಜ್ಞಾನ* : **ವಸ್ತು ಇರುವ ರೀ**ತಿಯಲ್ಲಿ ಅದನ್ನು ಗ್ರಹಿಸುವ ಪ್ರಮಾಣ. ಪ್ರಮಾ, ಪ್ರಮಾಣಜ್ಞಾನ ಮೊದಲಾದುವು.

ಪರ್ಯಾಯಗಳು

***ಪ್ರಮಾ*** ಃ ಯಥಾರ್ಥಜ್ಞಾನ

*ಪ್ರಮಾತೃ* : ಯಥಾರ್ಥಜ್ಞಾನವುಳ್ಳವನು

*ಪ್ರಮೇಯ* : ಯಥಾರ್ಥಜ್ಞಾನದಿಂದ ತಿಳಿಯಲ್ಪಡುವ ವಸ್ತು. ಜ್ಞೇಯ, ವಸ್ತು, ಪದಾರ್ಥ ಪರ್ಯಾಯಗಳು.

*ಅನಾದಿ* : ಉತ್ಪತ್ತಿರಹಿತವಾದುದು. ಪರಬ್ರಹ್ಮನೇ ಆದಿಯಾಗಿ ಉಳ್ಳದ್ದು. ಬೇರೆ ದರ್ಶನಗಳಲ್ಲಿ ಆಯಾ
ದರ್ಶನದ ಪ್ರಕ್ರಿಯೆಯಂತೆ ಅರ್ಥಮಾಡಿಕೊಳ್ಳಬೇಕು.

*ನಿತ್ಯ* : ನಾಶರಹಿತವಾದುದು. ನಿತ್ಯವಿಕಾರವುಳ್ಳದ್ದು. ನಿತ್ಯವಾಗಿ ಹುಟ್ಟುಸಾವುಗಳನ್ನುಳ್ಳದ್ದು. ನಿತ್ಯಸೃಷ್ಟಿಯುಳ್ಳದ್ದು.

*ಕಾರ್ಯ* : ಹುಟ್ಟುವ ವಸ್ತು

*ಕಾರಣ* : ಒಂದು ಕಾರ್ಯವನ್ನು ನೋಡಿದ ಪುರುಷನಿಗೆ ಈ ಕಾರ್ಯವು ಯಾವುದರಿಂದ ಹುಟ್ಟಿತು ಎಂಬ ವಿಚಾರ ಹುಟ್ಟಬಹುದು. ಪರೀಕ್ಷಿಸಿದರೆ ಅದು ಯಾವ ಪದಾರ್ಥಗಳಿಂದ ಉತ್ಪತ್ತಿಯಾಯಿತೆಂದು ತಿಳಿಯುತ್ತದೆ.ಒಂದು ಕಾರ್ಯವು ಯಾವ ಯಾವ ಪದಾರ್ಥಗಳಿಂದ ಉತ್ಪತ್ತಿಯಾಯಿತೊ ಅವೆಲ್ಲಾ ಕಾರ್ಯದ ಆ ಕಾರಣಗಳೆನಿಸುತ್ತವೆ. ಉದಾಹರಣೆಗಾಗಿ ಘಟವೆಂಬ ಒಂದು ಕಾರ್ಯವನ್ನು ತೆಗೆದುಕೊ ಳ್ಳೋಣ. ಈ ಕಾರ್ಯವು ಮಣ್ಣು, ಕುಂಬಾರ, ಚಕ್ರ, ಕೋಲು, ಮುಂತಾದ ಅನೇಕ ಪದಾರ್ಥಗಳಿಂದ ಹುಟ್ಟುತ್ತದೆ. ಆದುದರಿಂದ ಘಟ ವೆಂಬ ಕಾರ್ಯವನ್ನು ಕುರಿತು ಮಣ್ಣು ಮೊದಲಾದುವುಗಳೆಲ್ಲ ಕಾರಣಗಳೆನಿಸುತ್ತವೆ.

ಕಾರಣವೆಂದರೆ ಸ್ವತಂತ್ರಕಾರಣವೆಂದೂ ಅರ್ಥವಿದೆ. ಈ ಅರ್ಥದಲ್ಲಿ ಕಾರಣವು ನಿಯಮವಾಗಿ ಒಂದು. ಕಾರಣ ಅನೇಕವಾಗುವುದು ಪಾರ ತಂತ್ರ್ಯದ ಲಕ್ಷಣ. ಒಂದು ಇನ್ನೊಂದರ ಸಹಾಯವನ್ನು ಅಪೇಕ್ಷಿಸುವುದೇ ಇದಕ್ಕೆ ನಿಮಿತ್ತ.

*ಉಪಾದಾನ ಕಾರಣ* : ಘಟವೆಂಬ ಕಾರ್ಯದ ಉತ್ಪತ್ತಿಗೆ ಕಾರಣಗಳೆಂದು ಹೇಳಲ್ಪಟ್ಟ ವಸ್ತುಗಳೆಲ್ಲ ಒಂದೇ ರೀತಿಯಲ್ಲಿಕಾರಣ ಗಳಾಗಿರು ವುದಿಲ್ಲ ಉಕ್ತವಾದ ಕಾರಣಗಳಲ್ಲಿ ಮಣ್ಣು ತಾನೇ ಕಾರ್ಯದ ರೂಪವನ್ನು ಹೊಂದುತ್ತದೆ. ಬೇರೆ ಪದಾರ್ಥಗಳು ಹೀಗೆ ಕಾರಣಗಳಲ್ಲ. ಆದುದರಿಂದ ಮಣ್ಣು ಉಪಾದಾನ ಕಾರಣ. ಕಾರಣಗಳ ಜೊತೆಯಲ್ಲಿ ಹೇಳಲ್ಪಟ್ಟರೂ ಅದು ಇತರ ಕಾರಣಗಳಿಂದ ಬೇರೆಯಾಗಿರುವುದು ಅನುಭವಸಿದ್ಧವಾಗಿದೆ. ಈ ಅರ್ಥವನ್ನು ತಿಳಿಸುವುದಕ್ಕಾಗಿ ಅದಕ್ಕೆ ಉಪಾದಾನಕಾರಣ ಎಂಬ ಹೆಸರು. ಉಪಾದಾನವು ನಿರ್ವಿಕಾರೋಪಾ ದಾನ, ವಿಕಾರೋಪಾದಾನ ಎಂದು ಎರಡು ವಿಧ.

*ನಿಮಿತ್ತ ಕಾರಣ* : ಘಟವೆಂಬ ಕಾರ್ಯದ ಉತ್ಪತ್ತಿಗೆ ಉಪಾದನವಲ್ಲದ ಕುಂಬಾರನೇ ಮುಂತಾದುವೂ ಕಾರಣಗಳು. ಇವು ಕಾರ್ಯದ ಉತ್ಪತ್ತಿಗೆ ಅಸಾಧಾರಣವಾದ ಸಹಾಯವನ್ನು ಮಾಡುತ್ತವೆ. ಈ ಅರ್ಥದಲ್ಲಿ ಅವು ನಿಮಿತ್ತಕಾರಣಗಳೆನಿಸುತ್ತವೆ. ನಿಮಿತ್ತ ಎಂದರೆ ಕಾರಣ ಎನ್ನುವುದರ ಪರ್ಯಾಯ. ಸ್ವತಂತ್ರಕಾರಣವೆಂದೂ ಇದರ ಅರ್ಥ.

ಉಪಾದಾನವು ಕಾರ್ಯವಿರುವ ಕಾಲದಲ್ಲಿ ಅದರಿಂದ ಭಿನ್ನವಾಗಿ ತೋರುವುದಿಲ್ಲ. ಮಣ್ಣಿನಿಂದ ಘಟವ ಹುಟ್ಗಲು ಆ ಮಣ್ಣು ಘಟದಿಂದ ಭಿನ್ನವಾಗಿ ಕಂಡುಬರುವುದಿಲ್ಲ. ನಿಮಿತ್ತಕಾರಣವು ಮಾತ್ರ ಕಾರ್ಯವಿರುವ ಕಾಲದಲ್ಲಿ ಅದರಿಂದ ಭಿನ್ನವಾಗಿ ಕಂಡುಬರುತ್ತದೆ. ಘಟವನ್ನು ಕುರಿತು ಕುಂಬಾರನಿಮಿತ್ತಕಾರಣ. ಅವನು ಘಟದಿಂದ ಭಿನ್ನನಾಗಿಯೇ ಕಂಡುಬರುತ್ತಾನೆ. ಹೀಗೆ ಸ್ವತಂತ್ರಕಾರಣವೂ ಕಾರ್ಯದಿಂದ ವಿಲ ಕ್ಷಣ. ಸ್ವತಂತ್ರಕಾರಣ ನಿರ್ವಿಕಾರೋಪಾದಾನವೂ ಆಗುತ್ತದೆ.

*ಸಾಧಾರಣಕಾರಣ* : ಎಲ್ಲ ಕಾರ್ಯಗಳಿಗೂ ಕಾರಣಗಳಿಗೂ ಕೆಲವು ಪದಾರ್ಥಗಳಿರುತ್ತವೆ. ಇವಕ್ಕೆ ಸಾಧಾರಣಕಾರಣಗಳು ಎಂದು ಹೆಸರು. ಉದಾಹರಣೆ: ಕಾಲ, ಆಕಾಶಾದಿಗಳು. ಹುಟ್ಟಿದ ಕಾರ್ಯಗಳೆಲ್ಲವೂ ಕಾಲ

ಮತ್ತು ಆಕಾಶದಲ್ಲಿ ಹುಟ್ಟಿರುವುದರಿಂದ ಕಾಲ, ಆಕಾಶಗಳು ಎಲ್ಲ ಕಾರ್ಯಗಳಿಗೂ ಕಾರಣಗಳಾಗಿರುತ್ತವೆ. ಆದುದರಿಂದ ಇವುಗಳಿಗೆ ಸಾಧಾರಣಕಾರಣಗಳೆಂದು ಹೆಸರು.

*ಅಸಾಧಾರಣ ಕಾರಣ* : ಸಾಧಾರಣಕಾರಣವಲ್ಲದ ಕಾರಣವು ಅಸಾಧಾರಣಕಾರಣ. ಉದಾ: ಘಟವನ್ನು ಕುರಿತು ಕೋಲು ಮೊದಲಾದುವು. ಕೋಲು ಮೊದಲಾದುವು ಎಲ್ಲ ಕಾರ್ಯಗಳಿಗೂ ಕಾರಣಗಳಾಗದುದರಿಂದ ತಮ್ಮಿಂದ ಉತ್ಪನ್ನವಾದ ಕಾರ್ಯನ್ನು ಕುರಿತು ಅಸಾಧಾರಣ ಕಾರಣಗಳೆನಿಸಿಕೊಳ್ಳುತ್ತವೆ. ಇವು ಘಟಾದಿಗಳಿಗೆ ಕಾರಣವಾಗಲು ಕಾರ್ಯೋತ್ಪತ್ತಿಗೆ ಅನುಕೂಲವಾದ ವ್ಯಾಪಾರವುಳ್ಳವಾಗಬೇಕು.

ಸ್ವತಂತ್ರ ಕಾರಣವು ಸರ್ವಕಾರಣವೂ ಆಗಿರುವುದು. ಅದು ಅಸಹಾಯಕರ್ತೃ ಮತ್ತು ಅಸಾಹಾಯ ಕಾರಯಿತೃ.

*ಕರಣ* : ದಂಡಾದಿಗಳು ನಿರ್ವ್ಯಾಪಾರವಾಗಿ ಬಿದ್ದಿದ್ದರೆ ಘಟಾದಿ ಕಾರ್ಯನ್ನು ಹುಟ್ಟಿಸಲಾರವು. ಆದ್ದರಿಂದ ಅವು ವ್ಯಾಪಾರ ಉಳ್ಳವಾಗ ಬೇಕು. ಹೀಗೆ ಸವ್ಯಾಪಾರವಾದ ಅಸಾಧಾರಣಕಾರಣಕ್ಕೆ ಕರಣವೆಂದು ಹೆಸರು. ಸ್ವತಂತ್ರಕಾರಣವು ಯಾವಾಗಲೂ ಸವ್ಯಾಪಾರವಾಗಿರುವುದ ದರಿಂದ ಅದು ಯಾವಾಗಲೂ ಕರಣವಾಗಿರುವುದು.

ಪ್ರಮಾಣ *:* ಪ್ರಮಾಣವು ಯಥಾರ್ಥಜ್ಞಾನಕ್ಕೆ ಕರಣ. ಒಂದು ವಸ್ತುವಿನಲ್ಲಿ ಇರುವ ರೂಪದ ಜ್ಞಾನವನ್ನು ಇತರ ಕಾರಣಗಳಿರುವ ಕಾಲದಲ್ಲಿ ರೂಪದ ಸಂಬಂಧವನ್ನು ಹೊಂದಿದ ನೇತ್ರೇಂದ್ರಿಯ ಹುಟ್ಟಿಸುತ್ತದೆ. ನೇತ್ರೇಂದ್ರಿಯ ರೂಪಜ್ಞಾನವನ್ನು ಕುರಿತು ಅಸಾಧಾರಣ ಕಾರಣ ಅದಕ್ಕೆ ಸಂಭವಿಸುವ ರೂಪದ ಸಂಬಂಧವೇ ವ್ಯಾಪಾರ. ಹೀಗೆ ರೂಪದ ಸಂಬಂಧವುಳ್ಳ ನೇತ್ರೇಂದ್ರಿಯರೂಪಜ್ಞಾನವನ್ನು ಕುರಿತು ಕರಣವಾಗುತ್ತದೆ. ಈ ಅರ್ಥದಲ್ಲಿಯೆಅದು ರೂಪಜ್ಞಾನದ ವಿಷಯದಲ್ಲಿ ಪ್ರಮಾಣವೆನಿಸುತ್ತದೆ.

***ಪ್ರತ್ಯಕ್ಷ*** :

"ಅಕ್ಷ"ಎಂದರೆ ಇಂದ್ರಿಯ. ತನ್ನ ವಿಷಯದ ಸಂಬಂಧವುಳ್ಳ ಇಂದ್ರಿಯಕ್ಕೆ ಪ್ರತ್ಯಕ್ಷವೆಂದು ಹೆಸರು. ( ಈ ಸಂದರ್ಭದಲ್ಲಿ ಇಂದ್ರಿಯ ಎಂದರೆ ಜ್ಞಾನೇಂದ್ರಿಯವೆಂದು ಅರ್ಥ) ತನ್ನ ವಿಷಯದ ಸಂಬಂಧವುಳ್ಳ ಇಂದ್ರಿಯದಿಂದ ಹುಟ್ಟಿದ ಎಲ್ಲ ಜ್ಞಾನಕ್ಕೂ ಪ್ರತ್ಯಕ್ಷ ಎಂದು ಹೆಸರು.

*ಅನುಮಾನ* : ಒಬ್ಬ ಪುರುಷನು ಅಡಿಗೆಮನೆ ಮುಂತಾದ ಸ್ಥಳಗಳಲ್ಲಿ ಧೂಮವನ್ನೂ ಅಗ್ನಿಯನ್ನೂ ಅನೇಕಸಲ ಒಟ್ಟಿಗೆ ನೋಡುತ್ತಾನೆ ಮತ್ತು ಅಗ್ನಿಯಿಲ್ಲದ ಸ್ಥಳದಲ್ಲಿ ಧೂಮವಿರುವುದಿಲ್ಲ ಎಂದು ಗ್ರಹಿಸುತ್ತಾನೆ. ಇದರಿಂದ ಧೂಮವಿರುವ ಸ್ಥಳದಲ್ಲಿ ಅಗ್ನಿ ಯಿರುತ್ತದೆ ಎಂದು ತಿಳಿಯುತ್ತಾನೆ ಈ ಪುರುಷನೇ ಕಾಲಾಂತರದಲ್ಲಿ ದೂರದಲ್ಲಿ ಮರೆಯಾದ ಒಂದು ಪ್ರದೇಶದ ಮೇಲ್ಭಾಗದಲ್ಲಿ ಧೂಮವಿರುವುದನ್ನು ನೋಡುತ್ತಾನೆ. ಇದರಿಂದ ಇವನಿಗೆ ಹಿಂದೆಯೇ ಅನುಭವಕ್ಕೆ ಬಂದಿದ್ದ ಧೂಮವಿರುವಲ್ಲಿ ಅಗ್ನಿಯಿರುವುದು ಎಂಬ ಧೂಮಾಗ್ನಿಗಳ ಸಂಬಂಧವು ಸ್ಮರಣೆಗೆ ಬರುತ್ತದೆ. ಅನಂತರ ತತ್ಕಾಲದಲ್ಲಿ ಕಾಣುವ ಧೂಮವೂ ಅಗ್ನಿಯ ಸಂಬಂಧವುಳ್ಳದ್ದೆಂದು ತಿಳಿಯು ತ್ತಾನೆ. ಇದರಿಂದ ಅವನಿಗೆ ಆ ಧೂಮವಿರುವ ಪ್ರದೇಶದಲ್ಲಿ ಅಗ್ನಿಯಿರುವುದೆಂಬ ಜ್ಞಾನವು ಹುಟ್ಟುತ್ತದೆ. ಹೀಗೆ ಕಾಣದ ಪ್ರದೇಶದಲ್ಲಿ ರುವ ಅಗ್ನಿಯನ್ನು ತಿಳಿಯಲು ಸಾಧಕವಾದ ಅಗ್ನಿಯ ಸಂಬಂಧವಿರುವುದೆಂದು ತಿಳಿಯಲ್ಪಟ್ಟ ಧೂಮಜ್ಞಾನಕ್ಕೆ ಅನುಮಾನವೆಂದು ಹೆಸರು.

***ಹೇತು*** : ಧೂಮಜ್ಞಾನವು ಮೇಲೆ ಹೇಳಿದ ರೀತಿಯಲ್ಲಿ ಅನುಮಾನವೆನಿಸಿದಾಗ ಧೂಮಕ್ಕೆ ಹೇತುವೆಂದು ಹೆಸರು. ಸಾಧನ, ಲಿಂಗ, ಉಪಪತ್ತಿ, ಕಾರಣ ಮುಂತಾದುವು ಇದರ ಪರ್ಯಾಯಗಳು. ಅಗ್ನಿ ಇದೆ ಎಂದು ತಿಳಿಯಲು ಸಾಧಕವಾದದ್ದು ಯಾವುದೋ (ಧೂಮ) ಅದು 'ಹೇತು' ಎನ್ನಿಸಿಕೊಳ್ಳುತ್ತದೆ.

***<u>ಸಾಧ್ಯ</u>*** : ಹಿಂದೆ ಹೇಳಿದ ರೀತಿಯಲ್ಲಿ ಧೂಮದ ಜ್ಞಾನದಿಂದ ವಹ್ನಿಯ ಜ್ಞಾನ ಹುಟ್ಟುವುದು. ಈ ಸಂದರ್ಭದಲ್ಲಿ ವಹ್ನಿಯು ಸಾಧ್ಯವೆನಿಸುವುದು. ಯಾವುದನ್ನು ಸಾಧಿಸುತ್ತೇವೆಯೋ ಅದು (ವಹ್ನಿ) ಸಾಧ್ಯ.

**<u>ಸಾಧನ</u>**: ಕಾರ್ಯಸಿದ್ಧಿಗೆ ಕಾರಣವಾದದ್ದು, ಹೇತು, ಲಿಂಗ, ಉಪಪತ್ತಿ

***<u>ಪಕ್ಷ</u>*** : ಸಾಧ್ಯವುಳ್ಳ ವಸ್ತುವೇ ಪಕ್ಷ. ಪರ್ವತವು ವಹ್ನಿಯುಳ್ಳದ್ದು ಎನ್ನುವಲ್ಲಿ ವಹ್ನಿಯು ಸಾಧ್ಯ, ಈ ಸಾಧ್ಯವುಳ್ಳ ಪರ್ವತವೇ ಪಕ್ಷ.

***<u>ದೃಷ್ಟಾಂತ</u>*** : ಸಾಧ್ಯಸಾಧನಗಳ ಸಂಬಂಧ ಗೃಹೀತವಾಗುವ ಪ್ರದೇಶಕ್ಕೆ ದೃಷ್ಟಾಂತ ಎಂದು ಹೆಸರು. ಎಲ್ಲಿ ಧೂಮವಿರುವುದೋ ಅಲ್ಲಿ ವಹ್ನಿ ಇರುವುದು ಎಂಬ ಧೂಮ ಅಗ್ನಿಗಳ ಸಂಬಂಧವು ಅಡಿಗೆಮನೆ ಮುಂತಾದ ಸ್ಥಳಗಳಲ್ಲಿ ಗೃಹೀತವಾಗುವುದು. ಈ ಪ್ರದೇಶಗಳಿಗೆ ದೃಷ್ಟಾಂತ ಎಂದು ಹೆಸರು. ಇದಕ್ಕೆ 'ಸಪಕ್ಷ'ಎಂದು ಇನ್ನೊಂದು ಹೆಸರು.

***<u>ವಿಪಕ್ಷ</u>*** : ಸಾಧ್ಯವಿಲ್ಲದಿರುವ ಸ್ಥಳಕ್ಕೆ ವಿಪಕ್ಷ ಎಂದು ಹೆಸರು. ವಹ್ನಿಯು ಸಾಧ್ಯ ಎನಿಸಿದಾಗ ನೀರಿನಮಡು ಮುಂತಾದ ವಹ್ನಿ ಇಲ್ಲದ ಸ್ಥಳಕ್ಕೆ ವಿಪಕ್ಷ ವೆಂದು ಹೆಸರು.

***<u>ಅಭಾವ</u>*** : ವಸ್ತುವಿನ ಇಲ್ಲದಿರುವಿಕೆ. ಪ್ರಥಮಗ್ರಹಣದಲ್ಲಿ ಇಲ್ಲವೆಂದು ಪ್ರತೀತವಾದ ವಸ್ತು.

***<u>ವ್ಯಾಪ್ತಿ</u>*** : ಧೂಮವಿರುವಕಡೆ ವಹ್ನಿ ಇರುವುದೆಂದೂ ವಹ್ನಿ ಇಲ್ಲದ ಸ್ಥಳದಲ್ಲಿ ಧೂಮ ಇರುವುದಿಲ್ಲವೆಂದೂ ತಿಳಿದರೆ ಧೂಮವಹ್ನಿಗಳಿಗೆ ಒಂದು ನಿಯತವಾದ ಸಂಬಂಧವಿದೆ ಎಂದು ತಿಳಿದುಬರುತ್ತದೆ. ಈ ನಿಯತಸಂಬಂಧಕ್ಕೆ ವ್ಯಾಪ್ತಿ ಎಂದು ಹೆಸರು.

***ಅನ್ವಯವ್ಯಾಪ್ತಿ*** : "ಧೂಮವಿರುವಕಡೆ ವಹ್ನಿಯಿರುವುದು"ಎಂದು ಹೇತುವಿನಿಂದ ಸಾಧ್ಯಕ್ಕಿರುವ ಸಂಬಂಧ ಅನ್ವಯವ್ಯಾಪ್ತಿ.

***ವ್ಯತಿರೇಕವ್ಯಾಪ್ತಿ :*** "ವಹ್ನಿಯಿಲ್ಲದ ಕಡೆ ಧೂಮವಿಲ್ಲ" ಎಂದು ಸಾಧ್ಯದ ಅಭಾವಕ್ಕೂ ಹೇತುವಿನ ಅಭಾವಕ್ಕೂ ಇರುವ ವ್ಯಾಪ್ತಿ ವ್ಯತಿರೇಕವ್ಯಾಪ್ತಿ.

***ವ್ಯಾಪ್ಯ*** : ಸ್ವಲ್ಪ ಪ್ರದೇಶದಲ್ಲಿರುವ ವಸ್ತುವಿಗೆ ವ್ಯಾಪ್ಯ ಎಂದು ಹೆಸರು. ಹೇತು ಸಾಧ್ಯಗಳಲ್ಲಿ ಹೇತು ವ್ಯಾಪಕವಾಗಿರುತ್ತದೆ.

***ವ್ಯಾಪಕ*** : ಅಧಿಕ ಪ್ರದೇಶದಲ್ಲಿರುವ ವಸ್ತುವಿಗೆ ವ್ಯಾಪಕ ಎಂದು ಹೆಸರು. ಹೇತು ಮತ್ತು ಸಾಧ್ಯಗಳಲ್ಲಿ ಸಾಧ್ಯವು ವ್ಯಾಪಕ ವಾಗಿರುತ್ತದೆ. ಅಥವಾ ಹೇಳಲ್ಪಟ್ಟ ಎರಡು ವಸ್ತುಗಳಲ್ಲಿ ಒಂದು ಮತ್ತೊಂದರ ಹೊತೆಯಲ್ಲಿರುವುದು, ಅದಿಲ್ಲದಿದ್ದರೆ ತಾನೂ ಇಲ್ಲದಿರುವುದು. ಅಂತಹ ವಸ್ತುವು ವ್ಯಾಪ್ಯವೆನಿಸುತ್ತದೆ; ಮತ್ತೊಂದು ವ್ಯಾಪಕವೆನಿಸುತ್ತದೆ.

***ಉಪಾಧಿ :*** ಸಾಧ್ಯಕ್ಕೆ ವ್ಯಾಪಕವಾಗಿ ಸಾಧನೆಗೆ ವ್ಯಾಪಕವಲ್ಲದ ವಸ್ತುವಿಗೆ ಉಪಾಧಿ ಎಂದು ಹೆಸರು. ಉದಾ: ಕಾದ ಕಬ್ಬಿಣವು ಧೂಮವು ಳ್ಳದ್ದು, ವಹ್ನಿಯುಳ್ಳದಾದುದರಿಂದ, ಎನ್ನುವ ಅನುಮಾನದಲ್ಲಿ ಧೂಮವು ಸಾಧ್ಯ, ವಹ್ನಿಯು ಸಾಧನ. ಈ ಅನುಮಾನಕ್ಕೆ ಹಸೀ ಕಟ್ಟಿಗೆಯ ಸಂಬಂಧವೆಂಬ ಉಪಾಧಿಯು ಸಂಬಂಧಿಸುತ್ತದೆ. ಉಪಾಧಿಯು ಧೂಮವಿರುವ ಕಡೆಯಲ್ಲೆಲ್ಲಾ ಇರುವುದಾದ್ದರಿಂದ ಸಾಧ್ಯ ವಾದ ಧೂಮಕ್ಕೆವ್ಯಾಪಕವಾಗಿರುವುದು ಮತ್ತು ಅದು ವಹ್ನಿಯಿರುವ ಸ್ಥಳದಲ್ಲಿ ಸಂದರ್ಭಾನುಸಾರವಾಗಿ ಇರುವುದಿಲ್ಲವಾದುದರಿಂದ ಸಾಧನವಾದ ವಹ್ನಿಗೆ ಅವ್ಯಾಪಕವಾಗಿರುವುದು. ಇದಕ್ಕೆ ಕಾದಕಬ್ಬಿಣ ದೃಷ್ಟಾಂತವಾಗಿರುತ್ತದೆ. ಕಾದಕಬ್ಬಿಣದಲ್ಲಿ ವಹ್ನಿ ಎಂಬ ಸಾಧನ ವಿರುವುದು ಆದರೆ ಅದರಲ್ಲಿ ಹಸೀಕಟ್ಟಿಗೆಯ ಸಂಬಂಧವೆಂಬ ಉಪಾಧಿಯಿರುವುದಿಲ್ಲ. ಹೀಗೆ ಉಕ್ತವಾದ ಉಪಾಧಿಯು ಸಾಧ್ಯವ್ಯಾಪಕ ವಾಗಿಯೂ ಸಾಧನಕ್ಕೆ ಅವ್ಯಾಪಕವಾಗಿಯೂ ಇರುವುದು. ಇದು ಸಾಧನಕ್ಕೆ

ಅವ್ಯಾಪಕವಾದುದರಿಂದ ಪಕ್ಷದಲ್ಲಿರುವುದಿಲ್ಲ ಮತ್ತು ಇದು ಸಾಧ್ಯಕ್ಕೆ ವ್ಯಾಪಕವಾದುದರಿಂದ ತಾನಿಲ್ಲದಿರುವ ಕಡೆ ತನಗೆ ವ್ಯಾಪ್ಯವಾದ ಸಾಧ್ಯವಿರಲು ಅವಕಾಶ ಕೊಡುವುದಿಲ್ಲ. ಈ ಕಾರಣಗಳಿಂದ ಹೇಳಿದ ಅನುಮಾನಕ್ಕೆ ಉಪಾಧಿ ಸಂಭವಿಸಲು ಪಕ್ಷದಲ್ಲಿ ಸಾಧ್ಯವಿಲ್ಲವೆಂದು ನಿರ್ಣಯಿಸಬಹುದು. ಇದರಿಂದ ಉಪಾಧಿ ಇರುವಾಗ ಉಕ್ತವಾದ ಸಾಧನವು ಉಕ್ತವಾದ ಸಾಧ್ಯವನ್ನು ಸಾಧಿಸಿಕೊಡಲಾರದುಎಂಬುದು ಸ್ಪಷ್ಟಪಡುತ್ತದೆ. ಕಾದಕಬ್ಬಿಣದಲ್ಲಿ ಹಸೀಕಟ್ಟಿಗೆಯ ಸಂಬಂಧವಿಲ್ಲ; ಆ ಕಾರಣದಿಂದಲೇಧೂಮವೂ ಇಲ್ಲ. ಹೀಗೆ ಕಬ್ಬಿಣದಲ್ಲಿರುವ ವಹ್ನಿಯು ಧೂಮವನ್ನು ಸಾಧಿಸಿಕೊಡುವುದಿಲ್ಲವೆಂದು ನಿರ್ಣಯವಾಗುತ್ತದೆ. ಈ ವಿಚಾರಗಳು ಉಪಾಧಿ ಎಂಬುದು ಅನುಮಾನ ದೋಷವೆಂದು ತಿಳಿಸುತ್ತವೆ.

॥ ಶ್ರೀಗುರುಭ್ಯೋ ನಮಃ ಹರಿಃ ಓಂ॥

ನರಸಿಂಹೋ$ಖಿಲಾಜ್ಞಾನಮತಧ್ವಾಂತ
ದಿವಾಕರಃ।ಜಯತ್ಯಮಿತಸದ್ಜ್ಞಾನಸುಖಶಕ್ತಿ ಪಯೋನಿಧಿಃ॥
ಅಭ್ರಮಂ ಭಂಗರಹಿರತಮಜಡಂ ವಿಮಲಂ ಸದಾ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್॥

## ***ಜ್ಞಾನತತ್ತ್ವದ ಪರೀಕ್ಷೆ – ಜ್ಞಾನದ ಸ್ವಭಾವ ಜ್ಞಾತೃಜ್ಞೇಯವೆಂಬ ಭಾವಗಳಿಗೆ ಅವಕಾಶಕೊಡುತ್ತದೆ***

ಬೇರೆ ದರ್ಶಗಳ ಜ್ಞಾನತತ್ತ್ವದ ಪರೀಕ್ಷೆಯನ್ನೂ ಅವುಗಳಲ್ಲಿರುವ ದೋಷಗಳನ್ನೂ ತಿಳಿದುಕೊಳ್ಳುವುದು ನಿರ್ದೋಷವಾದ ಜ್ಞಾನತತ್ತ್ವದ ತಿಳಿವಳಿಕೆಗೆ ಸಹಾಯಕವಾದ್ದರಿಂದ ಶ್ರೀಮನ್ಮಧ್ವಾಚಾರ್ಯರು ತಮ್ಮ ಅವತಾರಕ್ಕಿಂತ ಹಿಂದಿನ ದರ್ಶನಕಾರರು ಮಾಡಿದ್ದ ಜ್ಞಾನತತ್ತ್ವದ ಪರೀಕ್ಷೆಗಳಲ್ಲಿ ದೋಷಗಳಿದ್ದುದರಿಂದ, ಅವುಗಳಲ್ಲಿರುವ ದೋಷ ಗಳನ್ನು ತೋರಿಸಿ, ನಿರ್ದೋಷವಾದ ರೀತಿಯಲ್ಲಿ ಜ್ಞಾನತತ್ತ್ವವನ್ನು ನಿರೂಪಣೆಮಾಡಿದ್ದಾರೆ.

ಚಾರ್ವಾಕರು ಜ್ಞಾನವು ಈಚಲಗಿಡದಿಂದ ಮದ್ಯವು ಹುಟ್ಟುವಂತೆ ಪೃಥಿವೀ, ಜಲ, ಅಗ್ನಿ, ವಾಯುವೆಂಬ ಜಡಭೂತಗಳ ಶರೀರವನ್ನು ರಚಿಸುವಂತಹ, ಸಂಬಂಧದಿಂದ ಹುಟ್ಟುತ್ತದೆ ಮತ್ತು ಅದು ಶರೀರನಾಶದೊಂದಿಗೆ ನಾಶವಾಗುತ್ತದೆ ಎನ್ನುತ್ತಾರೆ. ಈ ವಾದವು ಜ್ಞಾನದ ಸ್ವರೂಪಕ್ಕೆ ಅನುಗುಣವಾಗಿಲ್ಲ. ಜ್ಞಾನವು ಪ್ರಕಾಶರೂಪವಾದದ್ದು ಹಾಗೂ ಅದು ವಿಷಯವನ್ನು ಪ್ರಕಾಶಪಡಿಸುತ್ತದೆ. ಜಡಭೂತಗಳು ತಮಸ್ಸಿನರೂಪಗಳು. ತಮಸ್ಸಿನಿಂದ ಪ್ರಕಾಶ ಹುಟ್ಟುವುದಿಲ್ಲ. ಈ ಕಾರಣದಿಂದ ಜ್ಞಾನ ಜಡದ ಕಾರ್ಯವಲ್ಲ. ಜಡದಂತೆ ಜ್ಞಾನವೂ ಒಂದು ಸ್ವತಂತ್ರವಾದ ವಸ್ತುವಾಗಿದೆ. ಜಡಗಳಿಗೆ ಹೇಗೆ ಹಿಂದಿನ ಮತ್ತು ಅವಸ್ಥೆಗಳು ಉಂಟೋ ಹಾಗೆ ಜ್ಞಾನಕ್ಕೂ ಪೂರ್ವಾಪರ ಅವಸ್ಥೆಗಳು ಇವೆ. ಈ ವಿಷಯಗಳನ್ನು ತಿಳಿಯದೇ ಹೊರಟ ಚಾರ್ವಾಕಮತದ ಜ್ಞಾನತತ್ತ್ವದ ಪರೀಕ್ಷೆ ಸಮಂಜಸವಲ್ಲ.

ವಿಜ್ಞಾನವಾದಿಬೌದ್ಧರು ಆಲಯವಿಜ್ಞಾನ ಮತ್ತು ಪ್ರವೃತ್ತಿವಿಜ್ಞಾನವೆಂದು ಜ್ಞಾನವು ಎರಡು ವಿಧವೆಂದು ವಿಭಾಗಮಾಡಿ, ಆಲಯ ವಿಜ್ಞಾನವೇ ವಾಸ್ತವವಾದ ಜ್ಞಾನವೆಂದು ಹೇಳುತ್ತಾರೆ. ಆಲಯಜ್ಞಾನವೆಂದರೆ 'ಅಹಂ'ಎಂಬ ಆಕಾರವುಳ್ಳ ಜ್ಞಾನವೆನ್ನತ್ತಾರೆ. ಹಿಂದಿನ ಅನುಭವಜನ್ಯವಾದ ಜ್ಞಾನವನ್ನು ಪ್ರವೃತ್ತಿವಿಜ್ಞಾನವೆನ್ನುತ್ತಾರೆ. ಇದರ ಅವಧಿ ಮುಕ್ತಿವರೆಗೆ ಮಾತ್ರ. ಶುದ್ಧವಾದ ಆಲಯವಿಜ್ಞಾನಪರಂಪರೆಗೇ ಮುಕ್ತಿ ಎಂದು ಹೆಸರು. ಅದು ಕನ್ನಡಿಯಂತೆ ಸ್ವಚ್ಛ ಎಂಬುದು ಇವರ ಸಿದ್ಧಾಂತ. ವಿಜ್ಞಾನವಾದಿ ಬೌದ್ಧರ ಈ ವಾದ ಸಮಂಜಸ ವಾದುದಲ್ಲ. 'ನಾನು' ಎಂಬುದು ಮಾತ್ರ ಜ್ಞಾನದ

ಸ್ವಭಾವವೆನ್ನುವುದು ಅವರು ಜ್ಞಾನದ ಸ್ವಭಾವಕ್ಕೆ ಅನಾವಶ್ಯಕವಾಗಿ ಹಾಕಿದ ಕಟ್ಟು. 'ನಾನು' ಎಂದು ಗ್ರಹಣವಿರುವಂತೆ ಅದಕ್ಕೆ 'ನಾನು'ಎನ್ನುವುದಕ್ಕೆ ಸಂಬಂಧಿಸಿದ ನಾನಾ ಧರ್ಮಗಳ ಗ್ರಹಣವಿರುವುದೂ ಅನುಭವ ಸಿದ್ಧವಾಗಿದೆ. ಆ ಜ್ಞಾನವು ಸ್ವಚ್ಛವೆಂದು ಒಪ್ಪಿದರೂ ಅದು ವಿಷಯವನ್ನು ಪ್ರಕಾಶಪಡಿಸುವುದು ಅದರ ಸ್ವಚ್ಛತೆಯ ಗುರುತಾದರೂ, ಅದು ಅಸ್ವಚ್ಛತೆಯ ಗುರುತೆಂದು ಹೇಳುವುದು ಜ್ಞಾನದ ಸ್ವಭಾವಕ್ಕೆ ತಕ್ಕುದಾದುದಲ್ಲ.

ಮಾಧ್ಯಮಿಕರು ಶೂನ್ಯವೇ ತತ್ತ್ವವೆಂದು ತಿಳಿದು ಜ್ಞಾನವೂ ಶೂನ್ಯದಲ್ಲಿ ಪರ್ಯವಸಾನ ಹೊಂದುವುದೆನ್ನುತ್ತಾರೆ. ಆದರೆ ಜ್ಞಾನವಾದರೋ ತನ್ನ ಸ್ವರೂಪದಲ್ಲಿ ತನ್ನದೇ ಆದ ಅನಂತವಾದ ಉತ್ತರಕಾಲದ ಭಾವವನ್ನು ತೋರಿಸುತ್ತದೆ. ಪೂರ್ವಜ್ಞಾನಕ್ಕಿಂತ ಉತ್ತರಜ್ಞಾನವು ಬೆಳವಣಿಗೆಯನ್ನು ತೋರಿಸುವುದೇ ಇದಕ್ಕೆ ಸಾಕ್ಷಿಯಾಗಿದೆ. ಮಾಧ್ಯಮಿಕರ ಸರ್ವಶೂನ್ಯವಾದವನ್ನು ಇದು ನಿರಾಕರಿಸುತ್ತದೆ.

ಬೌದ್ಧವಾದದಲ್ಲಿ 'ಜ್ಞಾನ' ಒಂದು ಧರ್ಮ. ಅದಕ್ಕೆ ಧರ್ಮಿಯಿಲ್ಲ. ಉಳಿದ ಬೌದ್ಧವಾದಿಗಳಾದರೋ ಜ್ಞಾನಕ್ಕೆ ಒಂದು ಆಶ್ರಯ ವಿರುವುದೆಂದೂ ಈ ಆಶ್ರಯುವೇ ಆತ್ಮನೆಂದೂ ಹೇಳುತ್ತಾರೆ. ಈ ವಾದವೂ ದೋಷಪೂರಿತವಾದುದು. ಇದು ಜ್ಞಾನವೇ ಆತ್ಮಸ್ವರೂಪ ವೆಂಬ ತತ್ತ್ವವನ್ನು ಬಾಧಿಸುವುದಿಲ್ಲ. ಸರ್ವರಿಗೂ 'ನಾನು'ಎನ್ನುವ ಆಕಾರದಲ್ಲಿ ಆತ್ಮಪ್ರತ್ಯಕ್ಷವಿರುವುದು. ಈ ರೀತಿಯಾಗಿ ಬೌದ್ಧವಾದವು ಸ್ವವ್ಯಾಹತವೂ ಅನುಭವದಿಂದ ಬಾಧಿತವೂ ಆಗಿದೆ. ಈ ಕಾರಣದಿಂದ ಬೌದ್ಧರ ಜ್ಞಾನತತ್ತ್ವ ಪರೀಕ್ಷೆ ಸಮಂಜಸವಾಗಿಲ್ಲ.

ಜೈನರು ವಸ್ತುವು ಅನಿರ್ಧಾರಿತ ಸ್ವರೂಪವುಳ್ಳದ್ದೆಂದೂ, ಅದು ಅನೇಕಾಂತವೆಂದೂ, ಅದಕ್ಕೆ ಅನುಗುಣವಾಗಿ ಜ್ಞಾನವು ಒಂದು ಅವಧಿಯಲ್ಲಿ ಪ್ರಮಾಣ ಎಂದು ಹೇಳುತ್ತಾರೆ. ಜೈನರ ಈವಾದ ಸರಿಯಾದುದಲ್ಲ. ವಸ್ತು ಅನಿರ್ಧಾರಿತ ಸ್ವರೂಪ ಉಳ್ಳದ್ದು ಎನ್ನುವುದೇ ಒಂದು ನಿರ್ಧಾರವಾಗಿದೆ.

ಒಂದು ವಸ್ತು ಅನಿರ್ಧಾರಿತಸ್ವರೂಪ ಉಳ್ಳದ್ದೆಂದು ಒಪ್ಪಿದರೂ ವಸ್ತುವನ್ನು ಅದಿರುವ ಹಾಗೆ ಗ್ರಹಿಸುವ ಜ್ಞಾನ ಪ್ರಮಾಣ ಆಗುವುದರಲ್ಲಿ ಯಾವ ಬಾಧೆಯೂ ಇರುವುದಿಲ್ಲ. ಅದು ಒಂದು ಪ್ರಮಾಣವೆಂದರೆ ಮತ್ತೊಂದು ಅವಧಿಯಲ್ಲಿ ಅಪ್ರಮಾಣವೆಂದು ಹೇಳಬೇಕಾಗುತ್ತದೆ. ಹೀಗೆ ಹೇಳುವುದರಿಂದ ಪ್ರಮಾಣ ಅಪ್ರಮಾಣ ವಿಭಾಗವೇ ಇಲ್ಲದೆ ಹೋಗುತ್ತದೆ. ಈ ಕಾರಣದಿಂದ ಜೈನರ ಜ್ಞಾನತತ್ತ್ವ ಪರೀಕ್ಷೆ ದೋಷದಿಂದ ಪೂರಿತವಾಗಿದೆ.

ನ್ಯಾಯವೈಶೇಷಿಕರು 'ಜ್ಞಾನವು ಆತ್ಮನ ಒಂದು ವಿಶೇಷಗುಣವೆಂದೂ ಅದು ಆತ್ಮನಿಗಾಗುವ ಮನಸಸ್ಸಿನ ಸಂಬಂಧದಿಂದ ಜನ್ಯವೆಂದೂ, ಆ ಸಂಬಂಧವು ತಪ್ಪಿದರೆ ನಾಶವಾಗುವುದು'ಎಂದೂ ಹೇಳುತ್ತಾರೆ. ಇದು ಜ್ಞಾನ ಆತ್ಮಸ್ವರೂಪವಲ್ಲ ವೆಂದು ಹೇಳಿದಂತಾಗುತ್ತದೆ. ಈ ಕಲ್ಪದಲ್ಲಿ ಆತ್ಮನೂ ಒಂದು ಜಡ ಪ್ರಾಯವಾಯಿತು. ನ್ಯಾಯವೈಶೇಷಿಕರ ಈ ವಾದ ಆತ್ಮನಿಲ್ಲ ಎನ್ನುವ ವಾದದಿಂದ ಅತ್ಯಂತ ವಿಲಕ್ಷಣವಾಗಿಲ್ಲ.

ಸಾಂಖ್ಯರು ಜ್ಞಾನವು ವಾಸ್ತವರೂಪದಲ್ಲಿ ಆತ್ಮ ಅಥವಾ ಪುರುಷ ಎಂಬ ವಿಷಯಸಂಬಂಧವಿಲ್ಲದ ಚೈತನ್ಯವೆಂದೂ ಅದು ವಿಷಯವನ್ನು ಗ್ರಹಿಸುವುದಿಲ್ಲವೆಂದೂ ಹೇಳುತ್ತಾರೆ. ನಿರ್ವಿಷಯವಾದ ಜ್ಞಾನವು ಜ್ಞಾನವೇ ಅಲ್ಲವಾದ್ದರಿಂದ ಸಾಂಖ್ಯರ ವಾದವೂ ದೋಷಪೂರ್ಣವಾಗಿದೆ.

ಪೂರ್ವಮೀಮಾಂಸಕರು ಆತ್ಮನು ಜ್ಞಾನಶಕ್ತಿಯುಳ್ಳವನೆನ್ನುತ್ತಾರೆ. ಜ್ಞಾನವಿಲ್ಲವೆಂದರೂ, ಜ್ಞಾನಶಕ್ತಿಯುಳ್ಳವನು ಎಂದರೂ, ಜ್ಞಾನರೂಪನಲ್ಲ ಎಂಬ ಒಂದೇ ಅರ್ಥದಲ್ಲಿ ಪರ್ಯವಸಾನಹೊಂದುವುದರಿಂದ ಆತ್ಮನು ಜಡಪ್ರಾಯನೇ ಆಗುತ್ತಾನಾಗಿ, ಈ ವಾದವೂ ದೋಷಗ್ರಸ್ತವಾಗಿರುವುದು.

ಅದ್ವೈತವು ಜ್ಞಾನವು ವಾಸ್ತವವಾಗಿ ಚೈತನ್ಯ ಎಂದೂ ಅದು ನಿರ್ವಿಶೇಷ ಎಂದೂ ಹೇಳುತ್ತದೆ. ಜ್ಞಾನ ನಿರ್ವಿಶೇಷ ಎಂದು ಹೇಳುವುದರಲ್ಲಿಯೇ ಅದು ನಿರ್ವಿಶೇಷ ಎಂಬ ವಿಶೇಷವನ್ನು ಉಳ್ಳದ್ದೆಂದು ಅರ್ಥವಾಗುವುದರಿಂದ, ಅದು

ಸವಿಶೇಷವೇ ಆಗುತ್ತದೆ. ಈ ಕಾರಣದಿಂದ ಅದ್ವೈತ ತನಗೆ ಸರಿಹೊಂದುವ ಅರ್ಥದಲ್ಲಿ ಚೈತನ್ಯವೆಂದು ಕರೆಯುವುದು ಉಚಿತವಲ್ಲ. ಈ ಕಾರಣದಿಂದ ಅದ್ವೈತದ ಜ್ಞಾನತತ್ತ್ವ ಪರೀಕ್ಷೆಯೂ ದೋಷಯುಕ್ತವಾಗಿರುವುದು.

ವಿಶಿಷ್ಟಾದ್ವೈತ ಜ್ಞಾನ ಧರ್ಮಭೂತವೆಂದೂ ಅದು ಆತ್ಮನಿಂದ ಭಿನ್ನ ಎಂದೂ ಹೇಳುತ್ತದೆ. ಈ ಕಲ್ಪದಲ್ಲಿಯೂ ಆತ್ಮನು ಜ್ಞಾನ ಸ್ವರೂಪ ಎಂಬ ಭಾವಕ್ಕೆ ಲೋಪ ಬರುವುದರಿಂದ ಯಾವಾಗಲೂ ತನ್ನಿಂದ ಭಿನ್ನವಾದ ಜ್ಞಾನದ ಜೊತೆ ಯಲ್ಲಿರಬೇಕಾದ ದುರವಸ್ಥೆಯೂ ಆತ್ಮನಿಗೆ ಪ್ರಾಪ್ತವಾಗಿ ಸ್ವಸ್ವರೂಪದಲ್ಲಿನ ಸ್ಥಿತಿಯೇ ಅವನಿಗೆ ಇಲ್ಲ. ಈ ಕಾರಣದಿಂದ ವಿಶಿಷ್ಟಾದ್ವೈತದ ಜ್ಞಾನ ಪರೀಕ್ಷೆ ಸರಿಯಲ್ಲ.

ಶ್ರೀಮನ್ಮಧ್ವಸಿದ್ಧಾಂತದಲ್ಲಿ ಜ್ಞಾನ ವಿಷಯಪ್ರಕಾಶ. ಅದು ತಾನೇ ಸ್ವರೂಪವಾಗಿರುವ ಆತ್ಮನಿಗೆ ಆ ಪ್ರಕಾಶವನ್ನು ಉಂಟುಮಾಡುತ್ತದೆ. ಈ ಪ್ರಕಾಶದ ಫಲ ಆತ್ಮನಿಗೆ ಆಗುವುದು. ಅವಧಿರಹಿತವಾದ ಪೂರ್ವೋತ್ತರ ಅವಸ್ಥೆಗಳನ್ನುಳ್ಳ ಜ್ಞಾನ ನಿತ್ಯವಾದದ್ದಾಗಿದೆ. ಈ ಕಾರಣದಿಂದ ಜ್ಞಾನವನ್ನೇ ಸ್ವರೂಪವಾಗಿರುವ ಆತ್ಮನೂ ನಿತ್ಯನಾಗಿದ್ದಾನೆ ಎಂದು ಸಿದ್ಧಿಸು ತ್ತದೆ. ಜ್ಞಾನದ ವೃದ್ಧಿಯೇ ಆತ್ಮನ ವೃದ್ಧಿ. ಜ್ಞಾನವು ವಿಷಯರಹಿತವಾದುದಲ್ಲ ಮತ್ತು ಅದನ್ನು ಹೊಂದುವ ಜ್ಞಾತೃವಿ ನಿಂದ ಹೊರಗಿನದಲ್ಲ..

## ***ಜ್ಞಾನ ಸ್ವಪ್ರಕಾಶ ಮತ್ತು ಅದಕ್ಕೆ ಅಸ್ವಪ್ರಕಾಶವಾದ ಜ್ಞಾನವನ್ನು ಸೃಷ್ಟಿಸುವ ಸಾಮರ್ಥ್ಯವಿದೆ***

ನ್ಯಾಯವೈಶೇಷಿಕರು ಜ್ಞಾನವು ಮತ್ತೊಂದು ಜ್ಞಾನದಿಂದ ಪ್ರಕಾಶಿತವಾಗುತ್ತದೆ ಎಂದು ಹೇಳುತ್ತಾರೆ. ಈ ಮತ್ತೊಂದು ಜ್ಞಾನಕ್ಕೆ ಅನುವ್ಯವಸಾಯವೆಂದು ಹೆಸರು. ಇದು ಸರಿಯಲ್ಲ ಏಕೆಂದರೆ ಈ ಅನುವ್ಯವಸಾಯವೆಂಬ ಜ್ಞಾನವಾದರೂ ಪ್ರಕಾಶಿತವಾಗುವುದು ಅವಶ್ಯಕವಾಗಿರುತ್ತದೆ. ಆದುದರಿಂದ ಅದಕ್ಕೆ ಪ್ರಕಾಶಕವಾಗಿ ಮತ್ತೊಂದು ಜ್ಞಾನವನ್ನು ಒಪ್ಪುವ ಪ್ರಸಂಗ

ಉಂಟಾಗುತ್ತದೆ. ಆ ಜ್ಞಾನಕ್ಕೂ ಮತ್ತೊಂದು ಜ್ಞಾನದಿಂದ ಪ್ರಕಾಶ ಬೇಕಾಗುತ್ತದೆ. ಈ ಕಾರಣದಿಂದ ಹೀಗೆ ಅನಂತವಾದ ಜ್ಞಾನಪರಂಪರೆಯನ್ನು ಒಪ್ಪಬೇಕಾಗುತ್ತದೆ. ಹೀಗೆ ಒಪ್ಪಿದರೂ ಮೊದಲನೇ ಜ್ಞಾನದ ಪ್ರಕಾಶವು ದುರ್ಲಭವಾಗುತ್ತದೆ. ಈ ಕಾರಣದಿಂದ ಜ್ಞಾನದ ಜ್ಞಾನತ್ವವೇ ಅಸಂಭಾವಿತವಾಗುತ್ತದೆ.

ಕುಮಾರಿಲ ಮೀಮಾಂಸಕರು ಜ್ಞಾನವು ತನ್ನನ್ನು ತಾನು ಪ್ರಕಾಶಪಡಿಸುವುದು ಇದರಿಂದ ಅದರಲ್ಲಿ ಕರ್ತೃ ಮತ್ತು ಕರ್ಮ ಇವೆರಡು ಭಾಗಗಳು ಇರುವುದು ಸಿದ್ಧಿಸುವುದೆಂದು ಹೇಳುತ್ತಾರೆ. ಈ ವಾದವೂ ಸರಿಯಾದುದಲ್ಲ ಏಕೆಂದರೆ ಒಂದೇ ಜ್ಞಾನದಲ್ಲಿ ವಿರುದ್ಧವಾದ ಎರಡು ಭಾಗಗಳನ್ನು ಒಪ್ಪಿಕೊಂಡರೆ ಅವೆರಡರ ಸಾಮರಸ್ಯವು ಸಾಧ್ಯವಾಗದೆ ಜ್ಞಾನದ ಜ್ಞಾನತ್ವಕ್ಕೇ ಲೋಪಬರುವುದು.

ಅದ್ವೈತವು ಜ್ಞಾನವು ತನ್ನನ್ನು ತಾನು ಪ್ರಕಾಶಪಡಿಸುವುದಾದರೆ ಅದು ತನಗೆ ತಾನೇ ಕರ್ಮವಾಗಿ ಪೂರ್ವೋಕ್ತ ವಾದ ವಿರೋಧಕ್ಕೆ ಅವಕಾಶ ಕೊಡುತ್ತದೆ. ಈ ಕಾರಣದಿಂದ ಈ ಅರ್ಥದಲ್ಲಿ ಅದು ಸ್ವಯಂ ಪ್ರಕಾಶವಲ್ಲ. ಆದರೆ ಅದು ಪ್ರಕಾಶವಲ್ಲವೆಂದರೆ ಜಡವಾಗುತ್ತದೆ. ಈ ನಿಮಿತ್ತದಿಂದ ಅದು ಸ್ವಪ್ರಕಾಶವೂ ಹೌದು. ಆದರೂ ಅದರಲ್ಲಿ ಕರ್ಮ ಎನಿಸುವ ಭಾಗವಿಲ್ಲ ಎಂದು ಒಪ್ಪಬೇಕಾಗುತ್ತದೆ. ಒಟ್ಟಿನಲ್ಲಿ ಅದು ಪ್ರಕಾಶವಾದರೂ ತನ್ನಿಂದ ಬೇರೆಯಾದ ವಸ್ತುವಿನ ಪ್ರಕಾಶವನ್ನು ಅಪೇಕ್ಷಿಸುವುದಿಲ್ಲ ಎಂದು ಹೇಳುತ್ತಾರೆ. ಪರೀಕ್ಷಿಸಿದರೆ ಈ ವಾದದ ಕ್ರಮವೇ ಸರಿಯಲ್ಲ ಏಕೆಂದರೆ ಈ ವಾದದಲ್ಲಿ ಸಿದ್ಧಾಂತವೇ ಇಲ್ಲ. ಲೋಕದಲ್ಲಿ ವಿಷಯವಿಲ್ಲದ ಪ್ರಕಾಶವಿಲ್ಲ. ಪ್ರಕಾಶ ತನ್ನನ್ನು ತಾನು ಗ್ರಹಿಸದೇ ಇಲ್ಲ. ಅದಿರುವುದೇ ಹೀಗೆ. ಇದರ ಎದುರಿಗೆ ಅದರ ಕರ್ಮ ಅಥವಾ ವಿಷಯವು ಪ್ರಕಾಶವಲ್ಲ ಎಂಬ ಕಲ್ಪನೆಗೆ ಅವಕಾಶವಿರು ವುದಿಲ್ಲ. ವಿಷಯವೆಂಬ ಪ್ರಪಂಚದಲ್ಲಿಯೇ ಪ್ರಕಾಶ ಮತ್ತು ಅಪ್ರಕಾಶವೆಂಬ ಎರಡು ಭಾಗಗಳಿವೆ. ಪ್ರಕಾಶವು ಅಪ್ರಕಾಶದ ಪ್ರಕಾಶವನ್ನು ಉಂಟುಮಾಡುತ್ತದೆ ಎಂದು

ಪದಾರ್ಥವಿವೇಚನೆ ಮಾಡುವುದು ಜ್ಞಾನದ ಸ್ವಭಾವಕ್ಕೆ ಅನುಗುಣವಾದ ತತ್ತ್ವವಿಭಾಗವಾಗಿರುತ್ತದೆ.

ವಿಶಿಷ್ಟಾದ್ವೈತಿಗಳು ಜ್ಞಾನವು ಧರ್ಮಭೂತವೆಂದೂ ಅದು ಚಿತ್ ಅಲ್ಲ ಎಂದರೆ ಚೈತನ್ಯ ಅಲ್ಲ ಎನ್ನುತ್ತಾರೆ. ಈ ಕಾರಣದಿಂದ ಜ್ಞಾನವನ್ನು ಸ್ವಪ್ರಕಾಶವೆಂದು ಹೇಳುವುದೇ ಸಾಧ್ಯವಾಗುವುದಿಲ್ಲ. ಚೈತನ್ಯವಲ್ಲದ (ಸ್ವಪ್ರಕಾಶವಲ್ಲದ) ಜ್ಞಾನವು ಜ್ಞಾನವೇ ಅಲ್ಲ.

ಶ್ರೀಮನ್ಮಧ್ವಸಿದ್ಧಾಂತದಂತೆ ಜ್ಞಾನವು ವಿಷಯುವನ್ನು ಪ್ರಕಾಶಪಡಿಸಲು ಆ ವಿಷಯದಲ್ಲಿ ಪ್ರಕಾಶಿತವಾದ ಭಾಗ ಯಾವುದು ಎಂದರೆ ಪ್ರಕಾಶಕ್ಕೆ ವಿಷಯುವಾಗಬಹುದಾದ ಭಾಗ ಯಾವುದು, ಅದಲ್ಲದ ಭಾಗ ಯಾವುದು ಎಂಬ ವಿಚಾರ ಹುಟ್ಟುವುದಿಲ್ಲ. ಇದಕ್ಕೆ ಪ್ರಕಾಶವಾಗದಿರುವ ಭಾಗವು ಇದು ಎಂಬ ನಿರ್ಣಯದಲ್ಲಿರುವ ಸ್ವವ್ಯಾಹತಿಯೇ ಕಾರಣ. ಇದು ಪ್ರಕಾಶಕ್ಕರ್ಹವಲ್ಲ ಎನ್ನುವಮಟ್ಟಿಗೆ ಆದರೂ ವಿಷಯ ಪ್ರಕಾಶವಾದುದರಿಂದಲೇ ಈ ನಿರ್ಣಯುವಾಗುತ್ತದೆ. ಈ ರೀತಿಯಾಗಿ ಪ್ರಕಾಶಿತವಾದುದನ್ನು ಅದಲ್ಲವೆಂದು ಹೇಳುವ ವ್ಯಾಹತಿಗೆ ಈ ನಿರ್ಣಯುವು ಅವಕಾಶವನ್ನು ಕೊಡುತ್ತದೆ.

ತನ್ನನ್ನು ತಾನು ಪ್ರಕಾಶಪಡಿಸಿಕೊಳ್ಳುವ ಜ್ಞಾನವು ಆತ್ಮಸ್ವರೂಪವಾಗಿದೆ. ಈ ಕಾರಣದಿಂದ ಜ್ಞಾನಪ್ರಕಾಶವೆಂದರೂ ಆತ್ಮಪ್ರಕಾಶವೆಂದರೂ ಒಂದೇ. ಆತ್ಮ ‘ನಾನು’ಎನ್ನುವ ಆಕಾರದಲ್ಲಿ ಎಲ್ಲರಿಗೂ ಪ್ರಕಾಶಿತನಾಗಿದ್ದಾನೆ. ಈ ಸನ್ನಿವೇಶದಲ್ಲಿ ಆತ್ಮಧರ್ಮಗಳಾದ ಸುಖ, ದುಃಖಾದಿಗಳೂ ಪ್ರಕಾಶಕ್ಕೆ ಬರುತ್ತವಲ್ಲದೆ ಆತ್ಮನಿಗೆ ಆಧಾರವಾದ ದೇಶಕಾಲಗಳೂ ಪ್ರಕಾಶಿತವಾಗುತ್ತವೆ. ಈ ದೃಷ್ಟಿಯಿಂದ ಆತ್ಮನ ಸರ್ವಾವಸ್ಥೆಗಳನ್ನೂ ಸಾಕ್ಷಿಯಾಗಿ ನೋಡುತ್ತಿರುವ ಆತ್ಮಸ್ವರೂಪವಾದ ಜ್ಞಾನವೇ "ಸಾಕ್ಷೀ". ಜ್ಞಾನವು ಸಿದ್ಧವಾಗಿರುವ ಕ್ರಮುವನ್ನು ಅನುಸರಿಸಿ ಅದನ್ನು ಆತ್ಮಾ, ಸಾಕ್ಷೀ, ಮುಂತಾಗಿ ಕರೆಯುತ್ತಾರೆ.
ಪ್ರಕಾಶರೂಪವಾದ ಜ್ಞಾನದ ಮಹಿಮೆ ಎಂತುಹುದೆಂದರೆ ಅದು ತನ್ನ ಕೇವಲ ಸನ್ನಿಧಾನದಲ್ಲಿರುವ ವಸ್ತುವನ್ನು ಪ್ರಕಾಶಪಡಿಸಬಲ್ಲುದನ್ನಾಗಿ ಮಾಡುತ್ತದೆ.

ಅದರ ಸನ್ನಿಧಾನದಲ್ಲಿರುವ ಈ ವಸ್ತುವೇ ಮನಸ್ಸು. ಮನಸ್ಸಿನ ವ್ಯಾಪಾರಕ್ಕೆ ಸಾಧಕವಾದುವುಗಳು ಚಕ್ಷುರಾದಿ ಪಂಚ ಜ್ಞಾನೇಂದ್ರಿಯಗಳು. ಈ ಇಂದ್ರಿಯಗಳು ತಮಗೆ ತಕ್ಕುದಾದ ವಿಷಯವನ್ನು ಗ್ರಹಿಸಿ ಮನಸ್ಸಿನಲ್ಲಿ ಅದರದರ ಜ್ಞಾನಹುಟ್ಟಲು ಸಾಧನವಾಗುತ್ತವೆ. ಈ ಜ್ಞಾನವು ವಿಷಯವನ್ನು ಪ್ರಕಾಶಪಡಿಸಿದರೆ ಆ ಜ್ಞಾನವನ್ನು ಸಾಕ್ಷಿಯು ಗ್ರಹಿಸುತ್ತದೆ. ಸಾಕ್ಷಿಯಿಂದ ಗೃಹೀತವಾದ ಜ್ಞಾನವು ಮನಸ್ಸಿನ ಒಂದು ಆಕಾರವಾದುದರಿಂದ ಇದಕ್ಕೆ ವೃತ್ತಿ ಜ್ಞಾನವೆಂದು ಹೆಸರು ಇರುವುದು. ಇದೇ ಮನೋವೃತ್ತಿ. ಆತ್ಮಸ್ವರೂಪಭೂತವಾದ ಜ್ಞಾನವು ಪ್ರಕಾಶರೂಪವಾದರೆ ವೃತ್ತಿಜ್ಞಾನವು ಅಪ್ರಕಾಶರೂಪವಾಗಿರುವುದು. ವೃತ್ತಿಜ್ಞಾನದ ವಿಷಯಗಳು ಬಾಹ್ಯಪ್ರಪಂಚಕ್ಕೆ ಸೇರಿದವುಗಳು. ಬಾಹ್ಯವೆಂದರೆ ಶರೀರದಿಂದ ಹೊರಗಿರುವುದೆಂದು ಅರ್ಥ. ವಿಷಯಗಳು ಉತ್ಪತ್ತಿನಾಶಗಳನ್ನುಳ್ಳವುಗಳಾದುದರಿಂದ ವೃತ್ತಿಜ್ಞಾನಕ್ಕೂ ಉತ್ಪತ್ತಿನಾಶಗಳುಂಟು. ಒಂದು ಜ್ಞಾನವು ನಾಶವಾದಮೇಲೆ ಅದರ ಸಂಸ್ಕಾರಮಾತ್ರ ಮನಸ್ಸಿನಲ್ಲಿ ಉಳಿದು ಸ್ಮೃತಿಯನ್ನು ಹುಟ್ಟಿಸಲು ಕಾರಣವಾಗುತ್ತದೆ. ಈ ವಿಧವಾಗಿ ವೃತ್ತಿಜ್ಞಾನದಲ್ಲಿ ಇಂದ್ರಿಯಜನ್ಯವಾದ ಅನುಭವ ಮತ್ತು ಸಂಸ್ಕಾರಜನ್ಯವಾದ ಸ್ಮೃತಿ ಎಂಬ ಅನುಭವರೂಪವಾದ ಎರಡು ಭಾಗಗಳಿರುವುವು.

## ಜ್ಞಾನದಲ್ಲಿ ಪ್ರಮಾಣಾಪ್ರಮಾಣ ಭಾಗಗಳು

ಜ್ಞಾನದಲ್ಲಿ ಪ್ರಮಾಣಾಪ್ರಮಾಣ ಭಾಗಗಳ ವಿಚಾರವನ್ನು ವಿಚಾರಮಾಡುವುದಕ್ಕಿಂತ ಮುಂಚೆ ಪ್ರಮಾಣ ವೆಂದರೇನೆಂದು ತಿಳಿಯಬೇಕು. ವಾದಿಗಳು ಪ್ರಮಾಣವನ್ನು ನಾನಾವಿಧವಾಗಿ ನಿರೂಪಸಿ ಅದರ ಜ್ಞಾನವನ್ನೇ ದುರ್ಲಭ ವನ್ನಾಗಿ ಮಾಡಿದ್ದಾರೆ. ಶ್ರೀಮದಾಚಾರ್ಯರು ಇತರ ಎಲ್ಲ ವಾದಗಳಲ್ಲಿರುವ ದೋಷಗಳನ್ನೂ ತೋರಿಸಿ ನಿರ್ದೋಷವಾದ ಪ್ರಮಾಣಸ್ವರೂಪವನ್ನು ನಿರೂಪಿಸಿದ್ದಾರೆ.

ಚಾರ್ವಾಕರು ಪ್ರತ್ಯಕ್ಷ ಒಂದೇ ಪ್ರಮಾಣವೆನ್ನುತ್ತಾರೆ. ಇವರ ವಾದದಂತೆ ಪ್ರತ್ಯಕ್ಷವಾದ ಜ್ಞಾನವೇ ಪ್ರಮಾಣ, ಅದಲ್ಲದುದು ಅಪ್ರಮಾಣ. ಇದು ಯುಕ್ತವಲ್ಲ. ಪ್ರತ್ಯಕ್ಷವೆಂದು ತಿಳಿದ ಜ್ಞಾನವೂ ಕೆಲವು ಸಲ ಪ್ರಮಾಣವಲ್ಲದಿರುವುದು ಎಲ್ಲರ ಅನುಭವದಲ್ಲಿದೆ. ಉದಾಹರಣೆಗಾಗಿ ಶುಕ್ತಿರಜತಭ್ರಾಂತಿಯನ್ನು ತೆಗೆದುಕೊಳ್ಳಬಹುದು. ಮತ್ತೂ ಪ್ರತ್ಯಕ್ಷವಲ್ಲದ ಅನುಮಾನ ಜನ್ಯವಾದ ಜ್ಞಾನವೂ ಪ್ರಮಾಣವಾಗಿರುವುದು ಕಾಣಬರುತ್ತದೆ. ಉದಾಹರಣೆಗೆ ದೂರದೇಶವು ಅಗ್ನಿಯುಳ್ಳದ್ದು, ಅಲ್ಲಿ ಧೂಮವಿರುವುದರಿಂದ, 'ಧೂಮವಿರುವುದರಿಂದ' ಎನ್ನುವುದಕ್ಕೇ ಅನುಮಾನವೆಂದು ಹೆಸರು. ಇದರಿಂದ 'ಅಲ್ಲಿ ಅಗ್ನಿ ಇರುವುದು' ಎಂಬ ಪ್ರಮಾಣವಾದ ಜ್ಞಾನವು ಹುಟ್ಟುವುದು ತಿಳಿದುಬರುತ್ತದೆ.

ಬೌದ್ಧರು 'ದ್ರವ್ಯ, ಗುಣ, ಕ್ರಿಯೆ, ಸಾಮಾನ್ಯ ಮತ್ತು ನಾಮ ಎಂಬುವು ವಸ್ತುಗಳಲ್ಲ. ಅವು ವಿಕಲ್ಪಗಳು. ಅವು ನಮ್ಮ ಇಂದ್ರಿಯಜನ್ಯವಾದ ಜ್ಞಾನದ ಜೊತೆಗೆ ಸೇರಿ ನಾವು ಸಾಮಾನ್ಯವಾಗಿ ತಿಳಿದ ಜ್ಞಾನದ ಆಕಾರವಾಗುವುವು. ಸಾಮಾನ್ಯವಾಗಿ ಗ್ರಹಿಸುವುದು ವಸ್ತುವನ್ನು ಮಾತ್ರ. ಅದು ದ್ರವ್ಯವೂ ಅಲ್ಲ. ಅದರಲ್ಲಿ ಗುಣವಿಲ್ಲ, ಕ್ರಿಯೆಯೂ ಇಲ್ಲ. ಅದರಲ್ಲಿ ಸಾಮಾನ್ಯ ಎಂದರೆ ಅದರ ಜಾತಿಗೆ ಸೇರಿದ ಇತರ ವಸ್ತುಗಳಲ್ಲಿ ಅನುಗತವಾದ ಧರ್ಮವಿಲ್ಲ ಮತ್ತು ನಾಮವಿಲ್ಲ. ಆದರೂ ಅದನ್ನು ಇವುಗಳನ್ನು ಉಳ್ಳದ್ದಾಗಿ ತಿಳಿಯುತ್ತೇವೆ. ಇದು ಪ್ರಮಾಣವಲ್ಲ. ಕೇವಲ ವಸ್ತುವಿನ ಗ್ರಹಣಮಾತ್ರ ಪ್ರಮಾಣ'ವೆನ್ನುತ್ತಾರೆ. ಈ ವಾದವು ಸರಿಯಲ್ಲ ಏಕೆಂದರೆ ಕೇವಲ ವಸ್ತುವನ್ನು ನೋಡಿದವರು ಇಲ್ಲ. ಅದು ಬುದ್ಧಿಯಿಂದ ಕಲ್ಪಿತವಾದದ್ದು. ವಸ್ತುವು ಯಾವಾಗಲೂ ನಿಯಮವಾಗಿ ಅತಿಸೂಕ್ಷ್ಮದೆಶೆಯಲ್ಲಿಯೂ ವಿಕಲ್ಪವೆಂದು ಕರೆಯಲ್ಪಟ್ಟ ಆಕಾರಸಹಿತವಾಗಿಯೇ ಗೃಹೀತವಾಗುತ್ತದೆ. ಈ ಕಾರಣದಿಂದ ಬೌದ್ಧವಾದವು ಜ್ಞಾನಸ್ವರೂಪಕ್ಕೆ ಅನುಗುಣವಾಗಿಲ್ಲ ಮತ್ತು ಅವರು ಕರೆಯುವ ಪ್ರಮಾಣಜ್ಞಾನವು ಅಪ್ರಸಿದ್ಧ ಮತ್ತು ಅಸಂಭಾವಿತ.

ಜೈನರು ತಮ್ಮ ನಯವಾದವೆಂಬ ಕಲ್ಪನೆಯಲ್ಲಿ ಜ್ಞಾನಕ್ಕೆ ಅವಧಿಸಹಿತವಾದ ಪ್ರಮಾಣ್ಯವನ್ನು ಹೇಳುತ್ತಾರೆ. ಈ ಅವಧಿಸಹಿತ ವೆನ್ನುವುದೂ ಅವಧಿಯನ್ನುಳ್ಳದ್ದಲ್ಲ. ಈ ನಿಮಿತ್ತದಿಂದ ಇದರ ಜ್ಞಾನಕ್ಕಾದರೂ ಪ್ರಾಮಾಣ್ಯವನ್ನು ಹೇಳಬೇಕಾಗುತ್ತದೆ. ಇದರಿಂದ ನಯವಾದವು ಜ್ಞಾನದ ಸ್ವರೂಪಕ್ಕೆ ಅನುಗುಣವಲ್ಲವೆಂದು ವ್ಯಕ್ತವಾಗುತ್ತದೆ.

ನ್ಯಾಯವೈಶೇಷಿಕರು ಆ ಧರ್ಮವುಳ್ಳ ವಸ್ತುವನ್ನು ಆ ಧರ್ಮವುಳ್ಳದ್ದೆಂದು ತಿಳಿಯುವ ಜ್ಞಾನ ಪ್ರಮಾಣವೆನ್ನುವರು. ಈ ಕಲ್ಪದಲ್ಲಿ ಜ್ಞಾನಕ್ಕಿಂತ ಮೊದಲು ವಸ್ತುವನ್ನು ತಿಳಿಯಬೇಕಾಗುವುದು. ಇದು ಸ್ವವ್ಯಾಹತ. ಆ ಧರ್ಮವುಳ್ಳ ವಸ್ತುವೆಂದಾಗ ವಸ್ತುವಿಗೂ ಧರ್ಮಕ್ಕೂ ಭೇದವು ಕಲ್ಪಿತವಾಗಿರುವುದು. ಜ್ಞಾನವು ವಸ್ತುವನ್ನು ಈ ಭೇದವುಳ್ಳದ್ದನ್ನಾಗಿ ಗ್ರಹಣಮಾಡುವುದಿಲ್ಲ. ನ್ಯಾಯವೈಶೇಷಿಕರವಾದವೂ ಜ್ಞಾನದ ಸ್ವರೂಪಕ್ಕೆ ಅನುಗುಣವಾಗಿಲ್ಲ.

ಪೂರ್ವಮೀಮಾಂಸಾ ಮತ್ತು ಅದನ್ನು ಅನುಸರಿಸಿದ ಅದ್ವೈತಮತವು ಜ್ಞಾನದ ಕಾಲದವರೆಗೆ ಅಪರಿಚಿತವಾಧ ವಸ್ತುವನ್ನು ಗ್ರಹಿಸುವ ಮತ್ತು ಬಾಧಜ್ಞಾನದಿಂದ ರಹಿತವಾದ ಜ್ಞಾನವು ಪ್ರಮಾಣವೆಂದು ಹೇಳುತ್ತಾರೆ. ಇದು ಜ್ಞಾನದ ಸ್ವತಂತ್ರವಾದ ಲಕ್ಷಣವಲ್ಲ. ಈ ವಸ್ತು ಪರಿಚಿತವಲ್ಲ ಮತ್ತು ಇದರ ಜ್ಞಾನಕ್ಕೆ ಬಾಧವಿಲ್ಲ ಎಂದು ಮತ್ತೊಂದು ಜ್ಞಾನದಿಂದ ತಿಳಿಯಬೇಕಾಗಿರುವುದು. ಅದನ್ನೂ ಮತ್ತೊಂದು ಜ್ಞಾನದಿಂದ ತಿಳಿಯಬೇಕಾಗಿರುವುದರಿಂದ ಇವರ ಕಲ್ಪನೆ ಅನವಸ್ಥಾದೋಷಗ್ರಸ್ತವಾಗಿದೆ.

ವಿಶಿಷ್ಟಾದ್ವೈತವು ವಸ್ತುವಿರುವಂತೆ ಅದನ್ನು ವ್ಯವಹರಿಸಲು ಅನುಗುಣವಾದ ಜ್ಞಾನವನ್ನು ಪ್ರಮಾ ಎನ್ನುವುದು. ಈ ವಾದದಂತೆ ಜ್ಞಾನಕ್ಕಿಂತ ಮೊದಲು ವಸ್ತುವನ್ನು ತಿಳಿಯಬೇಕಾಗುವುದರಿಂದ, ಇದೂ ಸಮಂಜಸವಲ್ಲ.

ಮೇಲೆ ನಿರೂಪಿಸಿದ ದೋಷಗಳಿಗೆ ಅವಕಾಶವಿಲ್ಲದ ರೀತಿಯಲ್ಲಿ "ಯಥಾರ್ಥಂ ಪ್ರಮಾಣಂ" ಎಂದು ಶ್ರೀಮದಾಚಾರ್ಯರು ನಿರೂಪಿಸಿದ್ದಾರೆ. ಇದರ

ಅರ್ಥವಾದರೂ ಅರ್ಥವನ್ನು ಅದಿರುವಂತೆ ಗ್ರಹಿಸುವ ಜ್ಞಾನ ಪ್ರಮಾಣವೆಂದು. ಜ್ಞಾನದ ಸ್ವಭಾವ ವಸ್ತುವನ್ನು ಅದಿರುವಂತೆ ಗ್ರಹಣ ಮಾಡುವುದು. ಅದೇ ಪ್ರಮಾಣ ಎಂಬುದರ ಅರ್ಥ. ಅಂದರೆ ಜ್ಞಾನದಂತೆ ಅರ್ಥವಿರುವುದು ಎಂದು ಇದರ ಭಾವ. ವಸ್ತುವನ್ನು ಅದಿರುವಂತೆ ಗ್ರಹಿಸುವುದು ವೃತ್ತಿಜ್ಞಾನ ಮತ್ತು ಸಾಕ್ಷೀ. ಈ ರೀತಿಯಾಗಿಯೇ ಜ್ಞಾನೇಂದ್ರಿಯಗಳು ವಸ್ತುವನ್ನು ಅದಿರುವಂತೆ ಗ್ರಹಿಸುತ್ತವೆ. ಈ ಕಾರಣದಿಂದ ಜ್ಞಾನವು ಪ್ರಮಾಣವಾದಂತೆ ಜ್ಞಾನಸಾಧನವೂ ಪ್ರಮಾಣವಾಗುತ್ತದೆ. ಈ ಸಂದರ್ಭದಲ್ಲಿ ಜ್ಞಾನವೆಂಬುದರಿಂದ ಸಾಕ್ಷೀ ಮತ್ತು ವೃತ್ತಿಜ್ಞಾನವೂ, ಜ್ಞಾನಸಾಧನವೆಂದರೆ ಮನಸ್ಸಹಿತವಾದ ಜ್ಞಾನೇಂದ್ರಿಯಗಳೂ ಪ್ರಕೃತವಾಗಿವೆ. ಸಿದ್ಧಾಂತದಲ್ಲಿ ಜ್ಞಾನವನ್ನು ಕೇವಲಪ್ರಮಾಣವೆಂದೂ, ಜ್ಞಾನಸಾಧನವನ್ನು ಅನುಪ್ರಮಾಣವೆಂದೂ ಕರೆಯಲಾಗಿದೆ.

ಯಥಾರ್ಥವಾಗುವುದು ಜ್ಞಾನದ ಸ್ವಭಾವವಾದ್ದರಿಂದ ಜ್ಞಾನವೆಂದರೆ ಪ್ರಮಾಣವೆಂದೇ ಅರ್ಥವಾಗುತ್ತದೆ. ಅಪ್ರಮಾಣವಾದದ್ದು ಜ್ಞಾನವಲ್ಲದಿದ್ದರೂ ಅದನ್ನು ತಿಳಿದುಕೊಳ್ಳುವುದು ಪ್ರಮಾಣಜ್ಞಾನದ ಮಹತ್ವವನ್ನು ತಿಳಿಯಲು ಸಹಾಯವಾಗುತ್ತದೆ. ಅಪ್ರಮಾಣದ ಜ್ಞಾನವೂ ಪ್ರಮಾಣ ಜ್ಞಾನವಿಲ್ಲದೆ ಸಾಧ್ಯವಿಲ್ಲ. ಹೀಗೆ ಪ್ರಮಾಣಜ್ಞಾನದ ವ್ಯಾಪ್ತಿಯು ಸಾರ್ವತ್ರಿಕವಾದುದು. ಪ್ರಮಾಣಜ್ಞಾನವು ಸ್ವಭಾವಸಿದ್ಧವಾದುದು. ಅಪ್ರಮಾಣ ಜ್ಞಾನವು ಉಪಾಧಿನಿಮಿತ್ತವಾದುದು. ಸ್ವಾಭಾವಿಕವಾಗಿ ಉತ್ಪನ್ನವಾಗುವ ಪ್ರಮಾಣಜ್ಞಾನವು ವಸ್ತುವನ್ನು ಗ್ರಹಿಸುವ ರೀತಿಯೇ ವಸ್ತುವಿರುವ ರೀತಿಯಾಗಿರುತ್ತದೆ. ಈ ಕಾರಣದಿಂದ ಜ್ಞಾನಕ್ಕಿಂತ ಭಿನ್ನವಾಗಿ ವಸ್ತುವಿರುವುದೆನ್ನುವ ಭ್ರಾಂತಿಗೇ ಅವಕಾಶವಿರುವುದಿಲ್ಲ.

## *ಪ್ರಮಾಣ – ಕೇವಲಪ್ರಮಾಣ*

ಪ್ರಮಾಣವು, ಕೇವಲಪ್ರಮಾಣ ಮತ್ತು ಅನುಪ್ರಮಾಣವೆಂದು ಎರಡು ವಿಧವಾಗಿದೆ. ಜ್ಞಾನವು ಸ್ವಮಹಿಮೆಯಿಂದಲೇ ಪ್ರಮಾಣ ಎನ್ನುವುದನ್ನು ಮರೆತು, ಜ್ಞಾನಸಾಧನವನ್ನು ಮಾತ್ರ ಪ್ರಮಾಣವೆಂದು ತಿಳಿದು ಅದರ

ಶೋಧನೆಯಲ್ಲಿ ಉದ್ಯುಕ್ತರಾಗಿದ್ದಾರೆ ಇದೇ ಶ್ರೀಮನ್ಮಧ್ವಸಿದ್ಧಾಂತವನ್ನು ಬಿಟ್ಟು ಉಳಿದ ದರ್ಶನಗಳಲ್ಲಿರುವ ದೋಷ. ಈ ದೋಷದಿಂದಲೇ ಅವರಿಗೆ ಜ್ಞಾನತತ್ತ್ವದ ಮತ್ತು ಅದರ ವಿಶೇಷಗಳು ಅಜ್ಞಾತವಾಗಿಯೇ ಇರುವುವು.

ಪ್ರಮಾಣಗಳಿಂದ ಸಿದ್ಧಿಸುವ ಪ್ರಮೇಯಗಳ ದೃಷ್ಟಿಯಿಂದ ಕೇವಲಪ್ರಮಾಣ ಈಶ, ಲಕ್ಷ್ಮೀ, ಯೋಗಿ ಮತ್ತು ಅಯೋಗಿ ಎಂದು ನಾಲ್ಕುವಿಧವಾಗಿದೆ. ಶ್ರೀಮದಾಚಾರ್ಯರು ತಮ್ಮ ಪ್ರಮಾಣಲಕ್ಷಣ ಗ್ರಂಥದಲ್ಲಿ "ಯಥಾರ್ಥಂ ಕೇವಲಂ. ಕೇವಲಂ ಚತುರ್ವಿಧಂ, ಈಶ ಲಕ್ಷ್ಮೀಯೋಗ್ಯಯೋಗಿ ಭೇದೇನ" ಎಂದು ಹೇಳಿದ್ದಾರೆ. ಇದರಿಂದ ಜ್ಞಾನವೇ ಈಶ, ಲಕ್ಷ್ಮೀ, ಯೋಗಿ ಮತ್ತು ಅಯೋಗಿ ಎಂಬುದಾಗಿ ಭೇದವುಳ್ಳದ್ದೆಂದು ತಿಳಿಯುತ್ತದೆ. ಶ್ರೀಮಟ್ಟೀಕಾಚಾರ್ಯರು "ಅಯಮಪಿ ಮಹಾವೈಲಕ್ಷಣ್ಯ ಜ್ಞಾಪನಾರ್ಥೋ ವಿಭಾಗಃ"ಎಂದು ಹೇಳಿದ್ದಾರೆ.

ಈಶ ಮತ್ತು ಲಕ್ಷ್ಮೀ ಜ್ಞಾನವು ಅನಾದಿ ಮತ್ತು ನಿತ್ಯ ಹಾಗೂ ಸರ್ವದಾ ಯಥಾರ್ಥವಾದುದು. ಇದರಲ್ಲಿ ಈಶ ಜ್ಞಾನವು ಸ್ವತಂತ್ರ. ಲಕ್ಷ್ಮೀ ಜ್ಞಾನವು ಪರತಂತ್ರ. ಈಶ ಜ್ಞಾನವು ತನ್ನ ಮತ್ತು ತನ್ನಿಂದ ಇತರವಾದವುಗಳ ಅಶೇಷವಿಶೇಷಗಳನ್ನು ಗ್ರಹಿಸುತ್ತದೆ. ಲಕ್ಷ್ಮೀ ಜ್ಞಾನವು ಇತರ ವಿಷಯುವನ್ನು ಪೂರ್ಣವಾಗಿ ತಿಳಿಯುವುದಲ್ಲದೆ ಇತರರಿಂತ ಹೆಚ್ಚಾಗಿ ಈಶನ್ನು ತಿಳಿಯುವುದು. ಆದರೂ ಈಶನನ್ನು ಪೂರ್ತಿಯಾಗಿ ತಿಳಿಯಲಾರದು. ಈಶ ಮತ್ತು ಲಕ್ಷ್ಮೀ ಜ್ಞಾನಗಳು ಇತರ ವಿಷಯಗಳನ್ನು ಪೂರ್ಣವಾಗಿ ಗ್ರಹಿಸಿದರೂ ಈಶ ಜ್ಞಾನವು ಸ್ಪಷ್ಟ ಲಕ್ಷ್ಮೀ ಜ್ಞಾನವು ಅಸ್ಪಷ್ಟವಾಗಿರುವುದು. ಇದರಿಂದ ಈಶ ಜ್ಞಾನ ಸರ್ವೋತ್ತಮ ವಾದ್ದೆಂದು ತಿಳಿಯಬೇಕು.

ಯೋಗಿಜ್ಞಾನ ಋಜು, ತಾತ್ವಿಕ ಮತ್ತು ಅತಾತ್ವಿಕ ಎಂದು ಮೂರು ವಿಧ. ಅವುಗಳಲ್ಲಿ ಋಜುಜ್ಞಾನ ಅನಾದಿ ಮತ್ತು ನಿತ್ಯ. ಇತರ ಜೀವರಿಗಿಂತ ಹೆಚ್ಚಿನ ರೀತಿಯಲ್ಲಿ ಅದು ಈಶನನ್ನು ತಿಳಿಯುತ್ತದೆ ಮತ್ತು ಈಶನನ್ನು ಹೊರತು ಇತರ ವಸ್ತುಗಳನ್ನು ಆಲೋಚನೆಯಿಂದ ಪೂರ್ಣವಾಗಿ ತಿಳಿಯುವುದು.

ಋಜುಜ್ಞಾನ ಕ್ರಮವಾಗಿ ವೃದ್ಧಿಹೊಂದುತ್ತದೆ. ಈ ವೃದ್ಧಿ ಮುಕ್ತಿಯವರೆಗೆ ಉಂಟಾಗಿ ನಂತರ ಅದು ನಾಶರಹಿತವಾಗಿರುತ್ತದೆ. ಸ್ವರೂಪ ಮತ್ತು ಮನೋವೃತ್ತಿರೂಪವಾದ ಋಜು ಜ್ಞಾನದಲ್ಲಿ ಸ್ವರೂಪಜ್ಞಾನ ಅನಾದಿ ನಿತ್ಯ, ವೃತ್ತಿಜ್ಞಾನ ಪ್ರವಾಹತಃ ಅನಾದಿ. ಈ ಎರಡು ಜ್ಞಾನಗಳೂ ನಿಯಮೇನ ಯಥಾರ್ಥ.

ಋಜುಜ್ಞಾನಕ್ಕಿಂತ ಕಡಮೆಯಾದ ತತ್ವಾಭಿಮಾನಿಯೋಗಿಜ್ಞಾನ ಅವರೋಹಣಕ್ರಮದಲ್ಲಿ ಕಡಮೆಯಾಗುತ್ತಾ ಬರುವುದು. ತತ್ತ್ವಾಭಿ ಮಾನಿ ಯೋಗಿಜ್ಞಾನ ಅನಾದಿ. ಈಶನಿಂದ ಇತರತ್ರ ಆಲೋಚಿಸಿದರೂ ಸರ್ವವನ್ನೂ ವಿಷಯೀಕರಿಸಲಾರದು. ಇವರ ಸ್ವರೂಪಜ್ಞಾನ ಸರ್ವದಾ ಯಥಾರ್ಥವಾಗಿರುತ್ತದೆ. ಬಾಹ್ಯಜ್ಞಾನ ಕೆಲವು ಸಲ ಅಯಥಾರ್ಥವಾಗುವುದೂ ಉಂಟು.

ಅತಾತ್ವಿಕಯೋಗಿಜ್ಞಾನ ಉತ್ಪತ್ತಿ ಮತ್ತು ನಾಶಗಳನ್ನುಳ್ಳದ್ದು ಮತ್ತು ಅಲ್ಪವಾದುದು. ಸ್ವರೂಪಜ್ಞಾನ ಅನಾದಿಯಾದರೂ ಅಗಾಗ ವ್ಯಕ್ತವಾಗುವುದರಿಂದ ಸಾದಿಯೂ ಆಗಿರುವುದು. ಸ್ವರೂಪ ನಿಯಮೇನ ಯಥಾರ್ಥ ಆದರೆ ಬಾಹ್ಯಜ್ಞಾನ ಕೆಲವು ಸಲ ಅಯಥಾರ್ಥ. ಈಶನಿಂದ ಅತಿರಿಕ್ತವಾದ ವಿಷಯದಲ್ಲಿಯೂ ಅಲ್ಪಭಾಗವನ್ನು ಮಾತ್ರ ಗ್ರಹಿಸಲು ಶಕ್ತವಾಗಿದೆ.

ಅಯೋಗಿಜ್ಞಾನ ಈಶನಿಂದ ಬೇರೆಯಾದ ವಿಷಯಗಳಲ್ಲಿಯೂ ಅಜ್ಞಾನ ಪ್ರಚುರವಾಗಿರುತ್ತದೆ. ಈ ಜ್ಞಾನವೂ ಸ್ವರೂಪ ಬಾಹ್ಯ ಎಂದು ಎರಡು ವಿಧ. ಇದು ಉತ್ಪತ್ತಿ ಮತ್ತು ನಾಶಗಳುಳ್ಳದ್ದು. ಅಯೋಗಿಜ್ಞಾನ (೧)ಮುಕ್ತಿಯೋಗ್ಯ (೨) ನಿತ್ಯಸಂಸಾರಿ ಮತ್ತು (೩) ತಮೋಯೋಗ್ಯ ಎಂದು ಮೂರು ವಿಧ. ಸ್ವರೂಪಜ್ಞಾನ ಯೋಗ್ಯತಾನುಸಾರವಾಗಿರುವುದು. ಬಾಹ್ಯಜ್ಞಾನ ಕೆಲವು ವೇಳೆ ಯಥಾರ್ಥವೂ ಇನ್ನು ಕೆಲವು ವೇಳೆ ಅಯಥಾರ್ಥವೂ ಆಗಿರುತ್ತದೆ.

ಯೋಗಿಜ್ಞಾನ ದೇಶಾಂತರ ಕಾಲಾಂತರದಲ್ಲಿರುವುಗಳನ್ನು ವಿಷಯೀಕರಿಸುತ್ತದೆ. ಅಯೋಗಿಜ್ಞಾನ ಅಯಾ ದೇಶಕಾಲಗಳಲ್ಲಿರುವುಗ ಳನ್ನು ಮಾತ್ರ ವಿಷಯೀಕರಿಸುವ ಸಾಮರ್ಥ್ಯ ಹೊಂದಿರುತ್ತದೆ.

ಕೇವಲಪ್ರಮಾಣವೇ ಪ್ರತ್ಯಕ್ಷಜನ್ಯ, ಅನುಮಾನಜನ್ಯ ಮತ್ತು ಆಗಮಜನ್ಯ ಎಂದು ಮೂರುವಿಧ. ಈ ವಿಭಾಗ ಉತ್ಪತ್ತಿಯುಳ್ಳ ಕೇವಲಜ್ಞಾನಕ್ಕೆಲ್ಲ ಸಂಭವಿಸುವುದು.

## ಅನುಪ್ರಮಾಣ

ಕೇವಲಪ್ರಮಾಣಕ್ಕೆ ಸಾಧನವಾದದ್ದು ಅನುಪ್ರಮಾಣ. ಸಾಧನವೆಂದರೆ ಕರ್ತೃ ಮತ್ತು ಕರ್ಮ ಇರುವಾಗ ಯಾವುದು ಇಲ್ಲದಿದ್ದರೆ ಕಾರ್ಯವಾಗುವುದಿಲ್ಲವೋ ಯಾವುದು ಇದ್ದರೆ ಕಾರ್ಯವಾಗುವುದೋ ಅದು ಎಂದು ಅರ್ಥ.

ಅನುಪ್ರಮಾಣವು ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಎಂದು ಮೂರುವಿಧವಾಗಿದೆ. ಪ್ರತ್ಯಕ್ಷ ಪ್ರಾಯಿಕವಾಗಿ ಸನ್ನಿಧಾನದಲ್ಲಿರುವ ಮರೆಯಿಲ್ಲದ ವರ್ತಮಾನಕಾಲದ ಕೆಲವು ಅರ್ಥಗಳನ್ನು ಗ್ರಹಿಸುವುದು. ಅನುಮಾನ ಸನ್ನಿಧಾನದಲ್ಲಿಲ್ಲದ, ಭೂತ ಮತ್ತು ಭವಿಷ್ಯತ್ತಾದ,

ವ್ಯವಹಿತವಾದ ಅರ್ಥವನ್ನು ಗೋಚರಿಸುತ್ತದೆ. ಆಗಮ ಸ್ವತಂತ್ರವಾಗಿ ಅಶೇಷವಾದ ಅರ್ಥವನ್ನು ಗ್ರಹಿಸುತ್ತದೆ. ಅರ್ಥವನ್ನು ಗ್ರಹಿಸುವ ಕ್ರಮವನ್ನು ಅನುಸರಿಸಿ ಈ ಮೂರರ ಭೇದವಿರುತ್ತದೆ.

ಪ್ರಮಾಣಪ್ರಪಂಚದಲ್ಲಿ ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಈ ಮೂರಕ್ಕೂ ತಮ್ಮದೇ ಆದ ವಿಶಿಷ್ಟವಾದ ಸ್ಥಾನವಿರುವುದು. ಇದು ಇತರ ವಾದಗಳನ್ನು ಪರೀಕ್ಷೆಮಾಡುವುದುರಿಂದ ವ್ಯಕ್ತವಾಗುತ್ತದೆ. ಪ್ರತ್ಯಕ್ಷ ಒಂದೇ ಪ್ರಮಾಣವೆಂದು ಚಾರ್ವಾಕಮತದ ವಾದವಿದೆ. ಇವರ ವಾದ ಇಷ್ಟ ಮತ್ತು ಅನಿಷ್ಟಕ್ಕೆ ಇದು ಸಾಧನ ಎಂಬ ಜ್ಞಾನಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಈ ಜ್ಞಾನ ಪ್ರತ್ಯಕ್ಷದಿಂದ

ಹುಟ್ಟುವುದೂ ಇಲ್ಲ. ಇದರಿಂದ ಚಾರ್ವಾಕವಾದ ಜೀವನವನ್ನೇ ಅನುಪಪನ್ನವಾಗಿಸುತ್ತದೆ.

ಕಾಣಾದ, ಬೌದ್ಧ ಮತಗಳು ಪ್ರತ್ಯಕ್ಷ ಮತ್ತು ಅನುಮಾನ ಎರಡೇ ಪ್ರಮಾಣಗಳೆನ್ನುತ್ತವೆ. ಅದು ಅನುಭವ ವಿರುದ್ಧವಾಗಿದೆ. ಈ ವಾದವನ್ನು ಎತ್ತಿ ಹಿಡಿಯುವವರಿಗೆ ಆಗಮವು ಯಥಾರ್ಥಜ್ಞಾನಜನಕವಾಗುವುದಿಲ್ಲವೇ?

ಪರಿಶೀಲಿಸಿದರೆ ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಈ ಮೂರೂ ಪ್ರತ್ಯೇಕವಾದ ಮತ್ತು ಒಂದರೊಲ್ಲೊಂದು ಅಂತರ್ಭಾವ ವನ್ನು ಹೊಂದದ ಪ್ರಮಾಣಗಳೆನ್ನುವ ವಿಷಯ ವ್ಯಕ್ತವಾಗುತ್ತದೆ. ಸಿದ್ಧಾಂತದಲ್ಲಿ ಈ ಮೂರನ್ನೂ 'ಅನುಪ್ರಮಾಣ'ವೆಂದು ಕರೆಯಲಾಗಿದೆ. 'ಅನುಪ್ರಮಾಣ'ವೆನ್ನುವಾಗ 'ಅನು' ಎಂದರೆ 'ಅನುಸರಿಸಿದ' ಎಂಬ ಅರ್ಥವು ಕೇವಲಪ್ರಮಾಣದ ಪ್ರಧಾನ್ಯವನ್ನು ತಿಳಿಸುತ್ತದೆ. ಅಂದರೆ ಆಂತರವಾದ ಜ್ಞಾನದ ಸಾಮರ್ಥ್ಯವನ್ನು ಅನುಸರಿಸಿ ಬಾಹ್ಯೇಂದ್ರಿಯಗಳು ಜ್ಞಾನಜನಕವಾಗುತ್ತವೆ ಎಂದು ಇದರ ಭಾವ.

ಜ್ಞಾನವೇ ಆತ್ಮಸ್ವರೂಪವಾದರೂ ಅದರಲ್ಲಿರುವ ವಿಶೇಷದಿಂದ ಜ್ಞಾತೃ ಮತ್ತು ಜ್ಞೇಯ ಎಂಬ ವಿಭಾಗವನ್ನು ಮಾಡಲಾಗಿದೆ. ಈ ವಿಶೇಷದ ಮಹಿಮೆಯಿಂದಲೇ ಯಥಾರ್ಜ್ಞಾನ 'ಪ್ರಮಾ'ಎಂದೂ ಪ್ರಮಾ ಉಳ್ಳದ್ದು 'ಪ್ರಮಾತಾ'ಎಂದೂ ಪ್ರಮಾವಿಷಯ 'ಪ್ರಮೇಯ' ಎಂದೂ ಕರೆಯಲಾಗಿದೆ. ಪ್ರಮಾಣದ ಸ್ವರೂಪಜ್ಞಾನವನ್ನು ಮಾಡಿಕೊಳ್ಳುವಾಗ ಈ ವಿಷಯವನ್ನು ತಿಳಿಯುವುದು ಅವಶ್ಯಕವಾಗಿದೆ.

ಪ್ರತ್ಯಕ್ಷ ಮೊದಲಾದ ಪದಗಳ ಅರ್ಥವೂ ಈ ಮೇಲೆ ವಿವರಿಸಿರುವ ಭಾವಕ್ಕೆ ಅನುಗುಣವಾಗಿರುವುದು. ಅರ್ಥವನ್ನು ಕುರಿತು ಇರುವ ಇಂದ್ರಿಯವೆಂದು ಪ್ರತ್ಯಕ್ಷ ಶಬ್ದದ ಅರ್ಥ. ಮತ್ತೊಂದು ಪ್ರಮಾಣವನ್ನು ಅನುಸರಿಸಿ ವಿಷಯವನ್ನು ತಿಳಿಸುವುದು ಎಂದು ಅನುಮಾನ ಶಬ್ದದ ಅರ್ಥ. ಅತೀಂದ್ರಿಯ ವಸ್ತುವಿನ ಸರಿಯಾದ ಜ್ಞಾನವನ್ನು ಹುಟ್ಟುಸುವುದೆಂದು ಆಗಮ ಶಬ್ದದ ಅರ್ಥ.

## ಅನುಪ್ರಮಾಣ – ಪ್ರತ್ಯಕ್ಷ

ನಿರ್ದೋಷವಾದ ಅರ್ಥ ಮತ್ತು ನಿರ್ದೋಷವಾದ ಇಂದ್ರಿಯ ಇವುಗಳ ಸನ್ನಿಕರ್ಷವೇ ಪ್ರತ್ಯಕ್ಷ. ಈ ಪ್ರಕರಣದಲ್ಲಿ ಅರ್ಥ ಎಂದರೆ ಆಯಾ ಇಂದ್ರಿಯಗಳ ವಿಷಯ ಎಂದು ತಿಳಿಯಬೇಕು. ಅತಿಸಮೀಪದಲ್ಲಿರುವುದು, ಅತಿದೂರದಲ್ಲಿರುವುದು ಮೊದಲಾದುವು ಅರ್ಥ ದೋಷಗಳು. ಈ ವಿಧವಾದ ದೋಷವಿಲ್ಲದ್ದು ನಿರ್ದೋಷವಾದ ಆರ್ಥ. ಮನಸ್ಸಿನ ಸಂಬಂಧ ಇಲ್ಲದಿರುವುದು ಮುಂತಾದುವು ಇಂದ್ರಿಯ ದೋಷಗಳು. ಈ ರೀತಿಯಾದ ದೋಷವಿಲ್ಲದ್ದು ನಿರ್ದೋಷೇಂದ್ರಿಯ. ಇಂದ್ರಿಯ ಮತ್ತು ಅರ್ಥಗಳಲ್ಲಿ ದೋಷವಿದ್ದರೆ ಅದು ಪ್ರತ್ಯಕ್ಷವಲ್ಲ. ವಿಷಯ ಸನ್ನಿಕರ್ಷವಿಲ್ಲದ ಇಂದ್ರಿಯ ಅಪ್ರಯೋಜಕವಾಗುವುದು. ಸನ್ನಿಕರ್ಷವು ಪ್ರತ್ಯಕ್ಷವೆನ್ನುವುದರಿಂದ ಕೇವಲ ಇಂದ್ರಿಯವೇ ಪ್ರತ್ಯಕ್ಷವೆಂಬ ವಾದವು ನಿರಾಕೃತವಾಗುತ್ತದೆ. ಈ ರೀತಿಯಾದ ಪ್ರ್ಯಕ್ಷದ ಲಕ್ಷಣವು ಅದು ಇನ್ನೊಂದು ಪ್ರಮಾಣದಲ್ಲಿ ಅಂತರ್ಭಾವವಾಗುವುದಿಲ್ಲ ಎಂದು ತಿಳಿಸುತ್ತದೆ.

## ಪ್ರತ್ಯಕ್ಷದ ವಿಶೇಷಾಂಶಗಳು

ಪ್ರತ್ಯಕ್ಷವು ಏಳು ವಿಧವಾಗಿರುವುದು. ಪಂಚ ಜ್ಞಾನೇಂದ್ರಿಯಗಳು, ಮನಸ್ಸು ಮತ್ತು ಸಾಕ್ಷೀ ಈ ಏಳೂ ಪ್ರತ್ಯಕ್ಷ ಪ್ರಮಾಣಗಳು. ಇಂದ್ರಿಯಗಳು ಪ್ರಮಾತೃ ಸ್ವರೂಪ ಮತ್ತು ಅದರಿಂದ ಭಿನ್ನವೆಂದು ಎರಡು ವಿಧವಾಗಿವೆ. ಇವುಗಳಲ್ಲಿ ಸ್ವರೂಪೇಂದ್ರಿಯಕ್ಕೇ ಸಾಕ್ಷೀ ಎಂದು ಹೆಸರು. ಸಾಕ್ಷೀಂದ್ರಿಯ ಜ್ಞಾನಸ್ವರೂಪವಾಗಿದೆ. ಇದಕ್ಕೆ ವಿಷಯಗಳು ಆತ್ಮಸ್ವರೂಪ, ಅದರ ಧರ್ಮಗಳು ಮತ್ತು ಸುಖದುಃಖಗಳು. ಇವು ಆಂತರ ವಿಷಯಗಳಾದರೆ ಬಾಹ್ಯವಾದ ಕಾಲ ಮತ್ತು ಆಕಾಶಗಳೂ ಸಾಕ್ಷಿಗೆ ವಿಷಯಗಳಾಗಿವೆ.

## ಸಾಕ್ಷೀ

ಸಾಕ್ಷಿಯನ್ನು ಈ ಕೆಳಕಂಡ ಕ್ರಮದಲ್ಲಿ ಸಾಧಿಸಬಹುದು. ಸುಖದುಃಖಗಳು ಸಾಕ್ಷಿಯಲ್ಲದ ಬೇರೆ ಇಂದ್ರಿಯಕ್ಕೆ ಗೋಚರವಾದರೆ ಕೆಲವು ಸಂದರ್ಭದಲ್ಲಿ ಅವುಗಳ ಭ್ರಾಂತಿಯೂ ಇರಬೇಕಾಗುತ್ತದೆ. ಏಕೆಂದರೆ ಇತರ ಇಂದ್ರಿಯಜನ್ಯವಾದ ಜ್ಞಾನವು ನಿಯಮವಾಗಿ ಪ್ರಮಾಣವೆನ್ನಲು ಸಾಧ್ಯವಿಲ್ಲ ಏಕೆಂದರೆ ಸಾಕ್ಷಿಯನ್ನು ಹೊರೆತು ಅನ್ಯ ಇಂದ್ರಿಯಗಳು ಕೆಲವು ವೇಳೆ ಭ್ರಾಂತಿ ಜನಕವಾಗಿರುವುದು ಎಲ್ಲರ ಅನುಭವವಾಗಿದೆ. ಆದರೆ ಸುಖದುಃಖಗಳ ವಿಷಯವಾಗಿ ಯಾರಿಗೂ ಭ್ರಾಂತಿಯಿರುವುದಿಲ್ಲ. ದುಃಖಾನುಭವ ಕಾಲದಲ್ಲಿ ಸುಖಿಯೆಂದಾಗಲೀ ಸುಖಾನುಭವ ಕಾಲದಲ್ಲಿ ದುಃಖಿ ಎಂದಾಗಲೀ ಯಾರೂ ತಿಳಿಯುವುದಿಲ್ಲ. ಈ ರೀತಿಯಾಗಿ ಸುಖದುಃಖಗಳ ಜ್ಞಾನವು ನಿಯಮವಾಗಿ ಪ್ರಮಾಣವಾಗಿರುತ್ತದೆ. ಆದರೆ ಇವು ಮನಸ್ಸೇ ಮೊದಲಾದ ಇಂದ್ರಿಯಗೋಚರವಲ್ಲ. ಇವುಗಳ ಜ್ಞಾನಜನಕವಾದ ಮನಸ್ಸೇ ಮೊದಲಾದ ಷಡಿಂದ್ರಿಯಗಳಿಂದ ಬೇರೆಯಾದ ಒಂದು ಇಂದ್ರಿಯ ಬೇಕು. ಇದೇ ಸಾಕ್ಷಿಯಾಗಿರುತ್ತದೆ. ಕಾಲ ಮತ್ತು ಆಕಾಶಾದಿಗಳಿಗೆ ರೂಪಮೊದಲಾದ ಧರ್ಮಗಳಿಲ್ಲದಿರುವುದರಿಂದ ಇವುಗಳ ಜ್ಞಾನ ಚಕ್ಷುರಾದೀಂದ್ರಿಯ ಗೋಚರ ವಲ್ಲ. ಮನಸ್ಸು ಸ್ವತಂತ್ರವಾಗಿ ಬಾಹ್ಯವಿಷಯಗಳಲ್ಲಿ ಪ್ರವೃತ್ತಿಮಾಡುವುದಿಲ್ಲವಾದ್ದರಿಂದ ಕಾಲ ಮತ್ತು ಆಕಾಶಾದಿಗಳು ಮನೋ ಗೋಚರವೂ ಅಲ್ಲ. ಮತ್ತೂ ಇವುಗಳ ವಿಷಯವಾಗಿ ವ್ಯಾಪ್ತಿ ಮೊದಲಾದ ಜ್ಞಾನವಿಲದ್ದರಿಂದ ಇವು ಅನುಮಾನ ಗೋಚರವೂ ಅಲ್ಲ. ಹುಟ್ಟು ಕಿವುಡರಿಗೂ ಇವುಗಳ ಜ್ಞಾನವಿರುವುದರಿಂದ ಇವು ಆಗಮ ಗೋಚರವಲ್ಲ. ಈ ಕಾರಣಗಳಿಂದ ಇವು ಬಾಹ್ಯೇಂದ್ರಿಯ ಗೋಚರ ವಲ್ಲವೆಂದು ಸಿದ್ಧವಾಗುತ್ತದೆ. ಈ ಕಾರಣಗಳಿಂದ ಕಾಲ ಮತ್ತು ಆಕಾಶಾದಿಗಳ ಜ್ಞಾನಜನಕವಾದುದೇ ಸಾಕ್ಷೀ ಎಂದು ತಿಳಿಯುತ್ತದೆ.

**ಸಾಕ್ಷೀಂದ್ರಿಯಕ್ಕೆ ವಿಷಯಗಳು ಆತ್ಮಸ್ವರೂಪ, ಅವನ ಧರ್ಮಗಳು, ಸುಖ, ದುಃಖ, ಇಚ್ಛೆ, ದ್ವೇಷ, ಅವಿದ್ಯಾ, ಕಾಲ, ಅವ್ಯಾಕೃತಾಕಾಶ, ಧರ್ಮಾಧರ್ಮಗಳು ಮತ್ತು ಬಾಹ್ಯೇಂದ್ರಿಯದ್ವಾರಾ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳ ಜ್ಞಾನ**.

## ಪ್ರತ್ಯಕ್ಷ ಸಪ್ತವಿಧ

ಆತ್ಮಸ್ವರೂಪವಲ್ಲದ ಇಂದ್ರಿಯಗಳು ಶ್ರೋತ್ರ, ತ್ವಕ್, ಚಕ್ಷುಸ್, ಜಿಹ್ವೆ, ಘ್ರಾಣ ಮತ್ತು ಮನಸ್ಸು. ಇವುಗಳಿಂದ ಜನ್ಯವಾದ ಜ್ಞಾನದಲ್ಲಿ ಭೇದವಿರುವುದರಿಂದ ಅದಕ್ಕೆ ಕಾರಣವಾದ ಪ್ರತ್ಯಕ್ಷವೂ ಸಪ್ತವಿಧವಾಗಿರುತ್ತದೆ.

ಪ್ರತ್ಯಕ್ಷವು ಈಶ, ಲಕ್ಷ್ಮೀ, ಯೋಗೀ ಮತ್ತು ಅಯೋಗಿ ಎಂದು ನಾಲಕ್ಕು ವಿಧವಾಗಿದೆ. ಇವುಗಳಲ್ಲಿ ಈಶ ಮತ್ತು ಲಕ್ಷ್ಮೀ ಪ್ರತ್ಯಕ್ಕಷವು ಸರ್ವದಾ ಸ್ವರೂಪೇಂದ್ರಿಯ ಸನ್ನಿಕರ್ಷರೂಪವಾಗಿರುತ್ತದೆ. ಈಶ ಪ್ರತ್ಯಕ್ಷ ಸ್ವತಂತ್ರ ಆದರೆ ಲಕ್ಷ್ಮೀ ಪ್ರತ್ಯಕ್ಷ ಪರತಂತ್ರ. ಯೋಗೀ ಮತ್ತು ಅಯೋಗಿ ಪ್ರತ್ಯಕ್ಷ ಮುಕ್ತಿಯವರೆಗೆ ಎರಡು ವಿಧ. ಇಂದ್ರಿಯಗಳ ಸನ್ನಿಕರ್ಷಾತ್ಮಕವಾದ ಯೋಗಿ ಪ್ರತ್ಯಕ್ಷ ದೇಶ, ಕಾಲ ಮತ್ತು ವಸ್ತುಸ್ವಭಾವದಿಂದ ವ್ಯವಹಿತವಾದ ಅರ್ಥವನ್ನು ಗ್ರಹಿಸುತ್ತದೆ. ಅಯೋಗಿ ಪ್ರತ್ಯಕ್ಷವು ದೇಶ, ಕಾಲಾದಿಗಳಿಂದ ವ್ಯವಹಿತವಲ್ಲದ ವಸ್ತುಗಳನ್ನು ಹಾಗೂ ಅತೀತ ಮತ್ತು ವರ್ತಮಾನಕಾಲದ ವಸ್ತುಗಳನ್ನು ಮಾತ್ರ ಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುವುದು.

## ಪ್ರತ್ಯಭಿಜ್ಞೆ

ಸಂಸ್ಕಾರ ಮತ್ತು ಇಂದ್ರಿಯಗಳ ಸಹಾಯದಿಂದ ಸಹಿತವಾದ ಮನಸ್ಸು 'ಅದೇ ಇದು'ಎನ್ನುವ ಜ್ಞಾನವನ್ನು ಹುಟ್ಟಿಸುತ್ತದೆ. ಇದಕ್ಕೆ 'ಪ್ರತ್ಯಭಿಜ್ಞೆ' ಎಂದು ಹೆಸರು.

## ನಿರ್ವಿಕಲ್ಪಕ ಮತ್ತು ಸವಿಕಲ್ಪಕ ಪ್ರತ್ಯಕ್ಷ

ಅನ್ಯ ದರ್ಶನಕಾರರು ನಿರ್ವಿಕಲ್ಪಕ ಮತ್ತು ಸವಿಕಲ್ಪಕ ಪ್ರತ್ಯಕ್ಷ ಎಂದು ಪ್ರತ್ಯಕ್ಷ ಎರಡು ವಿಧವೆಂದು ಹೇಳುತ್ತಾರೆ. ನ್ಯಾಯ ವೈಶೇಷಿಕಮತದಲ್ಲಿ ಯಾವ

ಪ್ರತ್ಯಕ್ಷವು ದ್ರವ್ಯ, ಗುಣ ಮುಂತಾದುದರ ಸ್ವರೂಪವನ್ನು ಮಾತ್ರಾ ತಿಳಿಸುವುದೋ ಅದು ಒಂದು ವಿಶೇಷ್ಯ ಅದಕ್ಕೂ ಒಂದು ವಿಶೇಷಣವಿದೆ ಎಂದು ತಿಳಿಸುವುದಿಲ್ಲವೋ ಅದು ನಿರ್ವಿಕಲ್ಪಕ. ಉದಾಹರಣೆ: 'ಇದು ಒಂದು' ಎಂದು. ಸಂಜ್ಞೆ, ಗುಣ, ಕರ್ಮ, ಜಾತಿ ಇವುಗಳಿಂದ ಕೂಡಿರುವುದು ಸವಿಕಲ್ಪಕ. ಉದಾಹರಣೆ 'ಇದು ಬಿಳಿಯದು', 'ಇವನು ಹೋಗುತ್ತಿದ್ದಾನೆ' ಎಂದು ಮುಂತಾ ದುವು. ಬೌದ್ಧರು ನಿರ್ವಿಕಲ್ಪಕ ಒಂದೇ ಪ್ರತ್ಯಕ್ಷವೆಂದು ಹೇಳುತ್ತಾರೆ. ನ್ಯಾಯವೈಶೇಷಿಕ ಹಾಗೂ ಬೌದ್ಧ ವಾದಗಳು ಸರಿಯಲ್ಲ. ಏಕೆಂದರೆ ಮೊದನೆಯದಾಗಿ ದ್ರವ್ಯ, ಗುಣಾದಿಗಳು ಪರಸ್ಪರ ಭಿನ್ನವೆಂಬ ಪಕ್ಷವೇ ಸರಿಯಲ್ಲ. ಪ್ರತ್ಯಕ್ಷ ಸಿದ್ಧವಾದ ಒಂದೇ ಎಂದರೆ ಅಭಿನ್ನವಾದ ವಸ್ತು ವಿಶೇಷಣವಿಶೇಷ್ಯ ಭಾವವುಳ್ಳ ವಿಶಿಷ್ಟವಾದ ವಸ್ತುವಾಗಿರುತ್ತದೆ. ವಿಶಿಷ್ಟವಾದ ಒಂದು ವಸ್ತುವಿನಲ್ಲಿ ಭೇದವನ್ನು ಕಲ್ಪಿಸುವುದು ಅಪರೀಕ್ಷಿತ ಕಲ್ಪನೆಯಾಗಿರುತ್ತದೆ.

ನ್ಯಾಯವೈಶೇಷಿಕರು ಒಂದು ವಿಶಿಷ್ಟವಸ್ತುವಿನಲ್ಲಿ ಭೇದವನ್ನು ಕಲ್ಪನೆಮಾಡಿ, ಆ ಭಿನ್ನವಸ್ತುಗಳಿಗೆ ಉಂಟಾಗುವ ಇಂದ್ರಿಯ ಸನ್ನಿಕರ್ಷದಲ್ಲಿಯೂ ಭೇದವನ್ನು ಹೇಳುತ್ತಾರೆ. ವಸ್ತುಭೇದಕ್ಕೆ ಅವಕಾಶಕೊಡದಂತೆ ವಸ್ತುವನ್ನು ವಿಶಿಷ್ಟ ಎಂದು ಸಾಕ್ಷಿಗೋಚರವಾದ ಭಾವದಿಂದ ನ್ಯಾಯವೈಶೇಷಿಕರ ಈ ವಾದವೂ ಸರಿಯಲ್ಲವೆಂದು ತಿಳಿಯುತ್ತದೆ.

## ಸ್ಮೃತಿ

ಸ್ಮೃತಿಯು ಮನೋಜನ್ಯವಾದ ಪ್ರತ್ಯಕ್ಷಜ್ಞಾನ. ಮನಸ್ಸು ಎರಡು ವಿಧವಾದ ಜ್ಞಾನಜನಕವಾಗಿದೆ. ಒಂದು ಆಯಾ ಇಂದ್ರಿಯಗಳಿಗೆ ಅಧಿಷ್ಠಾನವಾಗಿ ಆಯಾ ಇಂದ್ರಿಯ ವಿಷಯದ ಜ್ಞಾನವನ್ನು ಹುಟ್ಟಿಸುತ್ತದೆ ಮತ್ತು ಸ್ವತಂತ್ರವಾಗಿ ಸ್ಮೃತಿಯನ್ನೂ ಹುಟ್ಟಿಸುತ್ತದೆ. ಇದಕ್ಕೆ ಹಿಂದಿನ ಅನುಭಜನ್ಯವಾದ ಸಂಸ್ಕಾರ ಸಹಕಾರಿಯಾಗಿರುತ್ತದೆ.

ಮೀಮಾಂಸಕರು ಹಿಂದೆ ತಿಳಿದ ವಸ್ತುವನ್ನೇ ತಿಳಿಸುವ ಸ್ಮೃತಿ, ಹಿಂದೆ ಹೇಳಿದ ವಸ್ತುವನ್ನೇ ಹೇಳುವ ಅನುವಾದದಂತೆ ಪ್ರಮಾಣವಲ್ಲ ಎನ್ನುತ್ತಾರೆ. ಯಥಾರ್ಥವಾದ ಅನುವಾದವೂ ಪ್ರಮಾಣವಾಗಲು ಬಾಧಕವಿಲ್ಲ ಮತ್ತು ತಿಳಿದಿದ್ದ ವಸ್ತುವನ್ನು ತಿಳಿಸುವ ಸ್ಮೃತಿ 'ಹಿಂದೆ'ಎನ್ನುವ ಒಂದು ಹೊಸಭಾವವನ್ನು ತಿಳಿಸುತ್ತದೆ. ಹೀಗೆಯೇ ಅನುವಾದವೂ 'ಹಿಂದೆ ಹೇಳಿದುದು ಇದು' ಎಂಬ ಹೊಸಭಾವವನ್ನು ಸೂಚಿಸುವುದರಿಂದ ಸ್ಮೃತಿ ಮತ್ತು ಅನುವಾದಗಳು ಪ್ರಮಾಣವಲ್ಲ ಎಂದು ಹೇಳಲು ಆಧಾರವಿಲ್ಲ. ವರ್ತಮಾನವಾದ ದೇಶ ಮತ್ತು ಕಾಲಗಳಲ್ಲಿ ಅತೀತವಾದ ದೇಶ ಮತ್ತು ಕಾಲ ವಿಶಿಷ್ಟವಾದ ವಸ್ತವನ್ನು 'ಇದು ಹೀಗೆ ಇತ್ತು'ಎನ್ನುವ ರೂಪದಲ್ಲಿ ಸಾಕ್ಷಿ ಗ್ರಹಿಸುತ್ತದೆ. ಈ ಕಾರಣಗಳಿಂದ ಸ್ಮೃತಿಯನ್ನು ಪ್ರಮಾಣ ಎನ್ನುವುದರಿಂದ ಯಾವ ತೊಂದರೆಯೂ ಇಲ್ಲ.

## ***ತರ್ಕವೂ ಪ್ರಮಾ***

'ಯಥಾರ್ಥಂ ಪ್ರಮಾಣಂ' ಎನ್ನುವುದರಿಂದ ತರ್ಕವೂ ಪ್ರಮಾಣವೆಂದು ಸಿದ್ಧಿಯಾಗುತ್ತದೆ. ತರ್ಕವನ್ನು ಪ್ರಮಾಣ ಎಂದು ಹೇಳಿದರೆ ಯಾವ ಬಾಧೆಯೂ ಇಲ್ಲ. ಅನ್ಯ ವಾದಿಗಳು ತರ್ಕವು ಪ್ರಮಾಣವಿಷಯದಲ್ಲಿ ಅದು ತಪ್ಪು ಎಂದು ಶಂಕೆಯನ್ನು ನಿವಾರಿಸುವುದಾಗಿ ಪ್ರಮಾಣಕ್ಕೆ ಅನುಗ್ರಾಹಕವೇ ಹೊರತು ಸ್ವಯಂ ಪ್ರಮಾಣವಲ್ಲ ಎನ್ನುತ್ತಾರೆ. ಈ ವಾದವು ಸರಿಯಲ್ಲ. ಏಕೆಂದರೆ ತರ್ಕವು ಯಥಾರ್ಥವಲ್ಲ ವಾದರೆ ಅದು ಪ್ರಮಾಣಕ್ಕೆ ಅನುಗ್ರಾಹಕವಾಗಲಾರದು ಮತ್ತೂ ಯಥಾರ್ಥವಾದ ಅದು ಪ್ರಮಾಣವಾಗಲು ಯಾವ ಬಾಧಕವೂ ಇಲ್ಲ. ಅನುಮಾನವು ಯಥಾರ್ಥವಾದದ್ದರಿಂದ ಹೇಗೆ ಪ್ರಮಾಣವೋ ಹಾಗೆ ತರ್ಕವೂ ಪ್ರಮಾಣವೆಂದು ಸಾಕ್ಷಿಸಿದ್ಧವಾಗಿರುತ್ತದೆ.

## ***ಅನುಪ್ರಮಾಣ – ಅನುಮಾನ***

ನಿರ್ದೋಷವಾದ ಉಪಪತ್ತಿಗೆ ಅನುಮಾನವೆಂದು ಹೆಸರು. ಉಪಪತ್ತಿ, ಹೇತು, ಯುಕ್ತಿ, ಲಿಂಗ, ವ್ಯಾಪ್ಯ ಇವು ಪರ್ಯಾಯಗಳು. 'ಇನ್ನೊಂದು ವಸ್ತುವಿನ

ಜೊತೆಯಲ್ಲಿರುವುದು’ ಎಂಬ ಬಲದಿಂದ ಅರ್ಥವನ್ನು ತಿಳಿಸುವುದಕ್ಕೆ ‘ಲಿಂಗ’ ಎಂದು ಹೆಸರು. (ಲಿಂಗ= ಅನುಮಾನ, ವ್ಯಾಪ್ತಿಯ ಆಶ್ರಯ) ಈ ವಿಧವಾದ ಬಲವಿಲ್ಲದಿರುವುದು ಉಪಪತ್ತಿಯ ದೋಷ. ಉಪಪತ್ತಿಯು ಯಥಾರ್ಥವಾಗಿ ಜ್ಞಾತವಾದರೆ ಅರ್ಥವನ್ನು ತಿಳಿಸುತ್ತದೆ. ಜ್ಞಾತವಲ್ಲದ ಉಪಪತ್ತಿ ಅರ್ಥವನ್ನು ತಿಳಿಸುವುದಿಲ್ಲ. ಉಪಪತ್ತಿ ಎನ್ನುವುದರಿಂದಲೇ ಅದು ಇತರ ಪ್ರಮಾಣಗಳಿಂದ ಭಿನ್ನವಾದುದು ಎಂಬ ಅರ್ಥ ಸಿದ್ಧಿಸುತ್ತದೆ.

ಈ ಕೆಲವು ಪ್ರಕ್ರಿಯಗಳನ್ನು ಮನನಮಾಡುವುದರಿಂದ ಅನುಮಾನಪ್ರಕರಣವನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ.

ನ್ಯಾಯವೈಶೇಷಿಕಮತದಂತೆ ಕೇವಲಾನ್ವಯಿ, ಕೇವಲವ್ಯತಿರೇಕಿ ಮತ್ತು ಅನ್ವಯವ್ಯತಿರೇಕಿ ಎಂದು ಅನುಮಾನ ಮೂರುವಿಧ.

ಸಾಧ್ಯಧರ್ಮವುಳ್ಳ ಧರ್ಮಿಗೆ ಪಕ್ಷವೆಂದು ಹೆಸರು. ಸಾಧ್ಯಸಮಾನಧರ್ಮವುಳ್ಳ ಧರ್ಮಿಗೆ ಸಪಕ್ಷವೆಂದು ಹೆಸರು. ಸಾಧ್ಯ ಮತ್ತು ಅದರ ಸಮಾನಧರ್ಮ ಇವುಗಳಿಂದ ರಹಿತವಾದ್ದು ವಿಪಕ್ಷವೆನ್ನಿಸಿಕೊಳ್ಳುತ್ತದೆ.

**ಕೇವಲಾನ್ವಯಿ:** ಪಕ್ಷವನ್ನು ವ್ಯಾಪಿಸಿರುವುದು, ಸಪಕ್ಷದಲ್ಲಿರುವುದು ಮತ್ತು ವಿಪಕ್ಷವೇ ಇಲ್ಲದಿರುವುದು ಕೇವಲಾನ್ವಯಿ. ಇದು ಎರಡು ವಿಧ. (೧) ಸಪಕ್ಷವನ್ನು ವ್ಯಾಪಿಸಿರುವುದು ಮತ್ತು (೨) ಅದರ ಕೆಲವು ಭಾಗದಲ್ಲಿರುವುದು. ಉದಾ: (೧) ಧರ್ಮಾಧರ್ಮಗಳು ಯಾರಾದರೂ ಒಬ್ಬನಿಗೆ ಪ್ರತ್ಯಕ್ಷವಾಗಿವೆ. ಅವು ಪ್ರಮೇಯಗಳಾಗಿರುವುದರಿಂದ. ಇದು ಸಪಕ್ಷವನ್ನು ವ್ಯಾಪಿಸಿರುವ ಕೇವಲಾನ್ವಯಿಗೆ ಉದಾಹರಣೆ. (೨) ಧರ್ಮಾಧರ್ಮಗಳು ಯಾವನಾದರೊಬ್ಬನಿಗೆ ಪ್ರತ್ಯಕ್ಷವಾಗಿವೆ ಗುಣಗಳಾದುದರಿಂದ. ಇದು ಸಪಕ್ಷದ ಒಂದು ಭಾಗವನ್ನು ವ್ಯಾಪಿಸಿರುವ ಕೇವಲಾನ್ವಯಿಗೆ ಉದಾಹರಣೆ.

**ಕೇವಲವ್ಯತಿರೇಕಿ:** ಸಪಕ್ಷವಿಲ್ಲದಿರುವುದು ಮತ್ತು ವಿಪಕ್ಷದಿಂದ ವ್ಯಾವೃತ್ತವಾಗಿರುವುದು ಉದಾ: ಈಶ್ವರನು ಸರ್ವಜ್ಞನು, ಸರ್ವಕರ್ತೃವಾದುದರಿಂದ.

**ಅನ್ವಯವ್ಯತಿರೇಕಿ** – ಪಕ್ಷವನ್ನು ವ್ಯಾಪಿಸಿರುವುದು, ಸಪಕ್ಷದಲ್ಲಿರುವುದು ಮತ್ತು ವಿಪಕ್ಷದಲಿಲ್ಲದಿರುವುದು, ಇದು ಸಪಕ್ಷವನ್ನು ವ್ಯಾಪಿಸಿರಬಹುದು. ಉದಾ: ಜೀವ ನು ನಿತ್ಯ ನಾಶಕಾರಣರಹಿತನಾದುದರಿಂದ. ಅದು ಸಪಕ್ಷದ ಏಕದಲ್ಲಿರಬಹುದು ಉದಾ: ಜೀವನು ನಿತ್ಯ ಚೇತನನಾದುದರಿಂದ.

ಉಪಪತ್ತಿ ಎಂದರೆ ಅನುಮಾನ ಪುನಃ ದೃಷ್ಟ ಮತ್ತು ಸಾಮಾನ್ಯತೋದೃಷ್ಟ ಎಂದು ಎರಡು ವಿಧವಾಗಿದೆ.

ದೃಷ್ಟ : ಪ್ರತ್ಯಕ್ಷಕ್ಕೆ ಯೋಗ್ಯವಾದ ಅರ್ಥವನ್ನು ತಿಳಿಸುವುದು ದೃಷ್ಟ. ಉದಾ: ಈ ದೇಶವು ಅಗ್ನಿಯುಳ್ಳದ್ದು ಧೂಮವುಳ್ಳದ್ದಾದುದರಿಂದ.

ಸಾಮಾನ್ಯತೋದೃಷ್ಟ : ಪ್ರತ್ಯಕ್ಷಕ್ಕೆ ಅರ್ಹವಲ್ಲದ ಅರ್ಥವನ್ನು ತಿಳಿಸುವುದು ಸಾಮನ್ಯತೋದೃಷ್ಟ. ಉದಾ: ಇವನು ಚಕ್ಷುಸ್ಸನ್ನುಳ್ಳವನು ರೂಪವುಳ್ಳವನಾದುದರಿಂದ.

ಅನುಮಾನವು ಪುನಃ ಮೂರುವಿಧ. (೧) ಕಾರಣಾನುಮಾನ, (೨) ಕಾರ್ಯಾನುಮಾನ ಮತ್ತು (೩) ಸಮಾನ್ಯಾನುಮಾನ ಎಂದು.

**ಕಾರಣಾನುಮಾನ** : ಕಾರಣವು ಕಾರ್ಯವನ್ನು ತಿಳಿಸಿಕೊಡುವುದು ಕಾರಣಾನುಮಾನ, ಉದಾ: ಈ ದೇಶದಲ್ಲಿ ವೃಷ್ಟಿಯಿರುವುದು ಅದಕ್ಕೆ ಅನುಗುಣವಾದ ಮೇಘವಿರುವುದರಿಂದ.

**ಕಾರ್ಯಾನುಮಾನ** : ಕಾರ್ಯವು ಕಾರಣವನ್ನು ತಿಳಿಸಿದರೆ ಅದು ಕಾರ್ಯಾನುಮಾನ, ಉದಾ : ಈ ದೇಶ ಅಗ್ನಿಯುಳ್ಳದ್ದು ಧೂಮವುಳ್ಳದ್ದಾದುದರಿಂದ.

**ಸಾಮಾನ್ಯಾನುಮಾನ** : ಕಾರಣವೂ ಕಾರ್ಯವೂ ಅಲ್ಲದೆ ಕಾರ್ಯವೂ ಕಾರಣವೂ ಅಲ್ಲದ ವಸ್ತುವನ್ನು ತಿಳಿಸುವುದು ಸಾಮಾನ್ಯಾನುಮಾನ ಅಥವಾ ಅಕಾರ್ಯಕಾರಣಾನುಮಾನ, ಉದಾ : ಇದು ರೂಪವುಳ್ಳದ್ದು ರಸವುಳ್ಳ ದ್ದಾದುದರಿಂದ.

ಅನಿಷ್ಟ ಎರಡು ವಿಧ. (೧) ಪ್ರಾಮಾಣಿಕವಾದುದರತ್ಯಾಗ ಮತ್ತು (೨) ಅಪ್ರಾಣಿಕವಾದುದರ ಕಲ್ಪನೆ ಎಂದು. ಪ್ರಾಮಾಣಿಕವಾದು ದರತ್ಯಾಗ ಶ್ರುತವಾದುದರತ್ಯಾಗ ಮತ್ತು ದೃಷ್ಟವಾದುದರತ್ಯಾಗವೆಂದು ಎರಡುವಿಧ. ಅಪ್ರಾಣಿಕ ಕಲ್ಪನೆಯೂ 'ಅಶ್ರುತಕಲ್ಪನೆ ಮತ್ತು ಅದೃಷ್ಟಕಲ್ಪನೆ'ಯೆಂದು ಎರಡು ಬಗೆ.

## *ಅರ್ಥಾಪತ್ತಿ ಮತ್ತು ಉಪಮಾನ ಅನುಮಾನದಲ್ಲಿ ಅಂತರ್ಭವಿಸುತ್ತವೆ*

ನ್ಯಾಯವೈಶೇಷಿಕರು ಉಪಮಾನ ಬೇರೆ ಪ್ರಮಾಣವೆಂದೂ, ಪೂರ್ವಮೀಮಾಂಸಾ ಮತ್ತು ಅವರನ್ನನುಸರಿಸಿದ ಅದ್ವೈತಿಗಳು ಅರ್ಥಾಪತ್ತಿ ಮತ್ತು ಉಪಮಾನಗಳು ಬೇರೆ ಪ್ರಮಾಣಗಳೆಂದೂ ಹೇಳುತ್ತಾರೆ. ವಿಚಾರಮಾಡಿದರೆ ಇವು ಅನುಮಾನದಲ್ಲಿ ಅಂತರ್ಭಾವ ವಾಗುತ್ತವೆ.

**<u>ಅರ್ಥಾಪತ್ತಿ</u> : ಅನುಪಪದ್ಯಮಾನವಾದ ವಸ್ತುವಿನ ಪ್ರಮಿತಿಯೇ ಅರ್ಥಾಪತ್ತಿ.. ಇದು ಶ್ರುತಾರ್ಥಾಪತ್ತಿ ಮತ್ತು ದೃಷ್ಟಾರ್ಥಾಪತ್ತಿ ಎಂದು ಎರಡು ವಿಧ. ಜೀವಿಸಿರುವ ದೇವತ್ತ ಮನೆಯಲ್ಲಿಲ್ಲವೆಂದು ಕೇಳಿದವನಿಗೆ, ಜೀವಿಸಿರುವನು ಮನೆಯಲ್ಲಿಲ್ಲವೆಂಬ ಪ್ರಮಿತಿ ಶ್ರುತಾರ್ಥಾಪತ್ತಿ. ಜೀವಿಸಿರುವ ದೇವದತ್ತನು ಮನೆಯಲ್ಲಿಲ್ಲವೆಂದು ತಿಳಿದವನ ಪ್ರತೀತಿ ದೃಷ್ಟಾರ್ಥಾಪತಿ.. ಈ ಅರ್ಥಾಪತ್ತಿಯಿಂದ ಅವನು ಹೊರಗೆ ಇರುವನೆಂಬ**

ಪ್ರಮಿತಿಯು ಉಂಟಾಗುತ್ತದೆ. ಆದುದರಿಂದ ಇದು ಅನುಮಾನದಲ್ಲೇ ಅಂತರ್ಭಾವವಾಗುತ್ತದೆ. ಸ್ಪಷ್ಟವಾದ ಅನುಮಾನದ ಪ್ರಕಾರ 'ಈಗ ವಿಚಾರಕ್ಕೆ ವಿಷಯನಾದ ದೇವದತ್ತ ಹೊರಗೆ ಇದ್ದಾನೆ, ಜೀವಿಸಿಯೂ ಮನೆಯಲ್ಲಿ ಇಲ್ಲದಿರುವುದರಿಂದ, ತನ್ನಂತೆ' ಎಂದು.

<u>ಉಪಮಾನ:</u> ಉಪಮಾನ ಎಂದರೆ ಸಾದೃಶ್ಯಪ್ರಮೆಗೆ ಸಾಧನವಾದುದೆಂದು ಅರ್ಥ. ಉಪಮಾನ ಮೂರು ವಿದ (೧) ಗೃಹ್ಯಮಾಣವಾದ ವಸ್ತುವಿಗೆ ಸ್ಮರ್ಯಮಾಣವಾದ ವಸ್ತುವಿನ ಸಾದೃಶ್ಯದ ಪ್ರಮೆಗೆ ಸಾಧನವಾದ ಉಪಮಾನ, ಉದಾ ಗೋವನ್ನು ನೋಡಿ ಅರಣ್ಯಕ್ಕೆ ಹೋದವನು ಗವಯವನ್ನು ನೋಡಿ ಗೋವನ್ನು ಸ್ಮರಿಸಿ ಅದರ ಸಾದೃಶ್ಯವು ಗವಯದಲ್ಲಿದೆ ಎಂಬ ಜ್ಞಾನಕ್ಕೆ ಸಾಧನವಾದದ್ದು. (೨) ಗೃಹ್ಯಮಾಣದ ಸಾದೃಶ್ಯವನ್ನು ಸ್ಮರ್ಯಮಾಣದಲ್ಲಿ ತಿಳಿಯುವುದರ ಸಾಧನ. ಇದು ಗೃಹ್ಯಮಾಣದಲ್ಲಿ ನೋಡಿದ ಸ್ಮರ್ಯಮಾಣದ ಸಾದೃಶ್ಯಜ್ಞಾನ, ಉದಾ : ಗೋವನ್ನು ನೋಡಿದವನು ಅರಣ್ಯಕ್ಕೆ ಹೋದಾಗ ಗವಯವೆಂಬ ಪ್ರಾಣಿಯನ್ನು ನೋಡಿ ಅದಕ್ಕೆ ಗೋವಿನ ಸಾದೃಶ್ಯವಿದೆ ಎಂಬ ಜ್ಞಾನ ಗವಯದ ಸಾದೃಶ್ಯವು ಗೋವಿನಲ್ಲಿದೆ ಎಂಬ ಜ್ಞಾನಕ್ಕೆ ಸಾಧನವಾದುದು. ಗೋ ಸದೃಶವಾದುದು ಈ ಗವಯ. ಈ ಕಾರಣದಿಂದ ಗವಯ ಸದೃಶವಾದುದು ಆ ಗೋ ಎಂಬ ನಿರ್ದೋಷವಾದ ವಾಕ್ಯ. (೩) ಸಾದೃಶ್ಯ ಪ್ರಮೆಯ ಸಾಧನವಾದುದು. ಉದಾ : ಗೋ ಹೇಗೋ ಹಾಗೆಯೇ ಗವಯ ಎಂದು.

ಮೇಲೆ ವಿವರಿಸಿದ ಮೂರು ಉಪಮಾನಗಳಲ್ಲಿ ಮೊದಲನೆಯದು ಪ್ರತ್ಯಕ್ಷ, ಎರಡನೆಯದು ಅನುಮಾನ, ಮೂರನೆಯದು ಆಗಮ. ಈ ಕಾರಣದಿಂದ ಉಪಮಾನ ಪ್ರತ್ಯೇಕ ಪ್ರಮಾಣವಲ್ಲ ಎಂದು ಸಿದ್ಧಾಂತ.

## *ಅಭಾವವು ಅನುಮಾನ ಮತ್ತು ಪ್ರತ್ಯಕ್ಷ*

ವಸ್ತುವಿನ ಅಭಾವವನ್ನು ಗ್ರಹಿಸುವ ಪ್ರಮಾಣ 'ಅಭಾವ'. ಇದಕ್ಕೆ ಅನುಪಲಬ್ಧಿ ಎಂದು ಇನ್ನೊಂದು ಹೆಸರು. ಇದು ಮೂರು ವಿಧ.

೧. ಪ್ರತ್ಯಕ್ಷವಾಗಬಹುದಾದ ವಸ್ತುವಿನ ಅಭಾವವನ್ನು ಗ್ರಹಿಸುವ ಪ್ರಮಾಣ, ಉದಾ: 'ಇಲ್ಲಿ ಘಟವಿಲ್ಲ' ಎಂದು.

೨. ಅನುಮಾನಕ್ಕೆ ವಿಷಯವಾಗಬಹುದಾದ ವಸ್ತುವಿನ ಅಭಾವವನ್ನು ಗ್ರಹಿಸುವ ಪ್ರಮಾಣ, ಉದಾ : ರೂಪಜ್ಞಾನವಿಲ್ಲದವನ ವಿಷಯದಲ್ಲಿ ಇವನಿಗೆ 'ಕಕ್ಷುಸ್ ಇಲ್ಲ' ಎಂಬ ಜ್ಞಾನ.
೩. ಆಗಮಕ್ಕೆ ವಿಷಯವಾಗಬಹುದಾದವಸ್ತುವಿನ ಅಭಾವವನ್ನು ಗ್ರಹಿಸುವ ಪ್ರಮಾಣ, ಉದಾ : 'ವೇದವಿಧಿಯಲ್ಲಿ ಉಕ್ತವಾದ ಹಿಂಸೆ ಪಾಪಸಾಧನವಲ್ಲ'ಎಂಬ ಜ್ಞಾನ. ಇವುಗಳಲ್ಲಿ ಒಂದನೆಯದು ಪ್ರತ್ಯಕ್ಷ ಮತ್ತು ಅನುಮಾನದಲ್ಲಿ ಅಂತರ್ಭಾವವಾಗುತ್ತದೆ. ಎರಡನೆಯದು ಅನುಮಾನ, ಮೂರನೆಯದು ಆಗಮ.

ತತ್ಕ್ಷಣವೇ ನೋಡಿದ ಅಭಾವಕ್ಕೆ ಪ್ರತ್ಯಕ್ಷವೇ ಪ್ರಮಾಣ. ಸಾವಕಾಶವಾಗಿ ಅಭಾವಜ್ಞಾನ ಹುಟ್ಟಿದರೆ ವಸ್ತುವನ್ನು ನೋಡಬಹು ದಾದರೂ ಕಾಣಲಿಲ್ಲ ಎಂಬ ಅನುಮಾನವೇ ಆ ಜ್ಞಾನಕ್ಕೆ ಪ್ರಮಾಣ.

## *ಸಂಭವ ಮತ್ತು ಪರಿಶೇಷಗಳೂ ಅನುಮಾನದ ಆಕಾರಗಳು*

'ಸಂಭವ' ಎಂದರೆ ಇದು ಸ್ವಲ್ಪ ಎಂಬ ಪ್ರಮೆಗೆ ಸಾಧನವಾದ ಇದು ಬಹುಲ ಎಂಬ ಜ್ಞಾನ. ಉದಾ : ಇವನಲ್ಲಿ ಒಂದು ನೂರು ಇದೆ ಎಂಬ ಜ್ಞಾನವು ಅವನಲ್ಲಿಯೇ ಐವತ್ತು ಇದೆ ಎಂಬ ಜ್ಞಾನಕ್ಕೆ ಸಾಧನ. ಇದು ಅನುಮಾನವೆಂಬುದು ಸ್ಪಷ್ಟ. 'ಇವನಲ್ಲಿ ಐವತ್ತುನ ಇದೆ ನೂರು ಇರುವುದುರಿಂದ ಎಂದು ಅನುಮಾನದ ಆಕಾರ.

'ಪರಿಶೇಷ' ಎಂದರೆ ಪ್ರಸಕ್ತವಾದುದರ ವ್ಯಾವೃತ್ತಿಯಾಗಿ ಉಳಿದುದರ ಪ್ರಮೆಗೆ ಸಾಧನವಾದದು. ಇದು ವಿಧಿಮುಖ ಮತ್ತು ನಿಷೇಧಮುಖ ಎಂದು ಎರಡು ವಿಧ. ಉದಾ : ಚೈತ್ರ ಮೈತ್ರರಲ್ಲಿ ಇವನು ಚೈತ್ರನೆಂದರೆ ಮತ್ತೊಬ್ಬನು ಮೈತ್ರನಂಬ ಜ್ಞ್ಞಾನ ವಿಧಿಮುಖ. ಇವನು ಚೈತ್ರನಲ್ಲ ಎಂದರೆ ಅವನು ಮೈತ್ರನೆಂಬ ಜ್ಞಾನ ನಿಷೇಧಮುಖ. 'ಇವನು ಚೈತ್ರ, ಚೈತ್ರಮೈತ್ರರಲ್ಲಿ ಒಬ್ಬನಾಗಿ ಚೈತ್ರನಲ್ಲವಾದು ದರಿಂದ' ಎಂದು ಅನುಮಾನದ ಆಕಾರ.

## ತರ್ಕ

‘ತರ್ಕ’ ಎಂಬುದು ಮತ್ತೊಂದು ಪ್ರಮಾಣ. ವ್ಯಾಪ್ಯವನ್ನು ಅಂಗೀಕರಿಸಿದರೆ ಅನಿಷ್ಟವನ್ನು ಆಪಾದಿಸುವುದಕ್ಕೆ ‘ತರ್ಕ’ ಎಂದು ಹೆಸರು. ಅನುಮಾನ, ಉಪಪತ್ತಿ, ಲಿಂಗ, ಹೇತು, ವ್ಯಾಪ್ಯ ಇವು ಪರ್ಯಾಯಪದಗಳು. ಅನಿಷ್ಟವು ಪ್ರಾಮಾಣಿಕವಾದುದುರ ತ್ಯಾಗ, ಅಪ್ರಾಮಾಣಿಕವಾದುದರ ಕಲ್ಪನೆ ಎಂದು ಎರಡು ವಿಧ. ತರ್ಕವೇ ಮತ್ತೆ ಆತ್ಮಾಶ್ರಯ, ಅನ್ಯೋನ್ಯಾಶ್ರ, ಚಕ್ರಕಾಶ್ರಯ, ಅನವಸ್ಥಾ ಮತ್ತು ಅನಿಷ್ಟವೆಂದು ಐದು ವಿಧ. ಇವೆಲ್ಲವೂ ಅನಿಷ್ಟವೇ ಆದರೂ ಅವುಗಳಲ್ಲಿರುವ ವಿಶೇಷ ಗಳನ್ನು ತೋರಿಸುವುದಕ್ಕಾಗಿ ಈ ವಿಭಾಗವನ್ನು ಮಾಡಲಾಗಿದೆ. ಇವುಗಳಲ್ಲಿ ಮೊದಲಿನ ನಾಲಕ್ಕು ಅಪ್ರಾಮಾಣಿಕಕಲ್ಪನೆ. ಐದನೆಯದಾದ ಅನಿಷ್ಟದಲ್ಲಿ ಪ್ರಾಮಾಣಿಕವಾದುದರ ತ್ಯಾಗ ಮತ್ತು ಅಪ್ರಾಮಾಣಿಕವಾದುದರ ಕಲ್ಪನೆ ಎಂದು ಎರಡು ವಿಧ. ಮತ್ತೆ ಪ್ರಾಮಾಣಿಕಪರಿತ್ಯಾಗವು ಶ್ರುತವಾದುದರ ತ್ಯಾಗ ಮತ್ತು ದೃಷ್ಟವಾದುದರ ತ್ಯಾಗ ಎಂದು ಎರಡು ವಿಧ. ಅಪ್ರಾಣಿಕಕಲ್ಪನೆಯೂ ಅಶ್ರುತಕಲ್ಪನೆ ಮತ್ತು ಅದೃಷ್ಟಕಲ್ಪನೆ ಎಂದು ಎರಡು ವಿಧ. ಶ್ರುತವಲ್ಲದ್ದು ಅಶ್ರುತ, ದೃಷ್ಟವಲ್ಲದ್ದು ಅದೃಷ್ಟ. ಇದೇ ಅನೇಕ ವಸ್ತುಗಳ ಕಲ್ಪನೆಯನ್ನು ಒಳಗೊಂಡರೆ ಅದು ಕಲ್ಪನಾಗೌರವವಾಗು ವುದು. ಈ ರೀತಿಯಾಗಿ ತರ್ಕದಲ್ಲಿ ವಿಶೇಷಾಂಶಗಳು ಅನೇಕ.

## ಅನುಮಾನಪ್ರಮಾಣದ ವಿಶೇಷಾಂಶಗಳು

ಅನುಮಾನವು ಸ್ವಪಕ್ಷಸಾಧನ ಮತ್ತು ಪರಪಕ್ಷದೂಷಣ ಎಂದು ಎರಡು ವಿಧವಾಗಿರುತ್ತದೆ. ಸ್ವಪಕ್ಷಸಾಧನಕ್ಕೆ ಉದಾಹರಣೆ : ‘ಪರ್ವತವು ವಹ್ನಿಯುಳ್ಳದ್ದು ಧೂಮವುಳ್ಳದ್ದಾದುದರಿಂದ’ ಎಂದು. ಪರಪಕ್ಷದೂಷಣವನ್ನು ಎರಡು ವಿಧವಾಗಿ ಹೇಳಬಹುದು ೧, ‘ಇದು ಅಗ್ನಿರಹಿತವಲ್ಲ, ದೂಮವಿಲ್ಲದಿರುದಲ್ಲವಾದುದರಿಂದ’, ೨.‘ಇದು ಅಗ್ನಿರಹಿತವೆಂದು ಒಪ್ಪಿದರೆ

ಧೂಮರಹಿತವೆಂದೂ ಒಪ್ಪಬೇಕಾಗುವುದು' ಎಂದು. ಇವುಗಳಲ್ಲಿ ಎರಡನೆಯದು ಅನಿಷ್ಟಪ್ರಸಂಗವಾಗಿರುತ್ತದೆ. ಮೇಲಿನ ಎರಡು ವಿಧವಾದ ಅನುಮಾನದಲ್ಲಿ ತರ್ಕವು ದೂಷಣಾನುಮಾನದಲ್ಲಿ ಅಂತರ್ಭಾವ ಹೊಂದುತ್ತದೆ.

ಸ್ವನ್ಯಾಯದಿಂದ ಸ್ವಪಕ್ಷಸಾಧನ, ಪರನ್ಯಾಯದಿಂದ ಪರಪಕ್ಷದೂಷಣ. ಸ್ವನ್ಯಾಯವಿಲ್ಲದೆ ಸ್ವಪಕ್ಷವಿಲ್ಲ. ಪರನ್ಯಾಯದಿಂದ ಸಾಧಿಸಿದ ಸ್ವಪಕ್ಷ ವಸ್ತುತಃ ಪರಪಕ್ಷವಾಗುತ್ತದೆ. ಪ್ರತಿವಾದಿಗಳಿಗೆ ಸ್ವನ್ಯಾಯದ ಜ್ಞಾನವಿಲ್ಲದ್ದರಿಂದ, ಸ್ವನ್ಯಾಯದಿಂದ ಪರಪಕ್ಷದ ದೂಷಣವು ಯುಕ್ತವಲ್ಲ. ಒಂದು ವೇಳೆ ಹಾಗೆಮಾಡಿದರೆ ಪ್ರತಿವಾದ ಶಾಂತವಾಗುದಿಲ್ಲ. ಪರನ್ಯಾಯದಿಂದಲೇ ನಿರಾಕೃತವಾದರೆ ಆಗ ಅದು ಶಾಂತ ವಾಗುತ್ತದೆ. ಪರಪಕ್ಷಶಾಂತವಾದಾಗ ಸ್ವಪಕ್ಷಸಿದ್ಧಾಂತವಾಗಿ ತಪಸ್ಸಿಗೆ ಅನುಕೂಲವಾಗುತ್ತದೆ.

ವಾಕ್ಯದ ತಾತ್ಪರ್ಯ ಇಂತಹುದೆಂದು ತಿಳಿಯಲು ಸಾಧನವಾದ ಉಪಕ್ರಮ, ಉಪಸಂಹಾರ ಇವೆರಡು ಒಂದೇ ಆಗಿರೋಣ, ಅಭ್ಯಾಸ, ಅಪೂರ್ವತಾ, ಫಲ ಮತ್ತು ಅರ್ಥವಾದ ಇವು ಪ್ರತ್ಯೇಕ ಪ್ರಮಾಣಗಳೆಂದು ಕೆಲವು ವಾದಿಗಳು ಹೇಳುತ್ತಾರೆ. ಈ ವಾದವು ಸರಿಯಲ್ಲ. ವಿಚಾರಮಾಡಲು ಇವೆಲ್ಲವೂ ಅನುಮಾನದಲ್ಲಿಯೇ ಅಂತರ್ಭಾವವಾಗುತ್ತವೆ. ಒಂದು ಪ್ರಕರಣದ ಅರಂಭ ಉಪಕ್ರಮ. ಅದನ್ನು ಮುಗಿಸುವುದು ಉಪಸಂಹಾರ. ಇವೆರಡೂ ಒಂದೇ ಅರ್ಥಸಾಧಕವಾಗಿರುವುದೇ ಅವುಗಳಏಕರೂಪತಾ. ಒಂದೇ ವಿಧವಾಗಿ ಅನೇಕ ಸಲ ಹೇಳುವುದು ಅಭ್ಯಾಸ. ಹೇಳಿದ ಅರ್ಥ ಮತ್ತೊಂದು ಪ್ರಮಾಣ ಗೋಚರವಲ್ಲದುದು ಅಪೂರ್ವತಾ. ಉಕ್ತ ವಿಷಯಕ್ಕೆ ಫಲವಿರುವದು ಫಲ. ಸ್ತುತಿ, ನಿಂದಾ, ಪರಕೃತಿ ಮತ್ತು ಪುರಾಕಲ್ಪ ಇವು ಅರ್ಥವಾದದ ಪ್ರಭೇದಗಳು. ಇವೆಲ್ಲವೂ ವಾಕ್ಯದ ತಾತ್ಪರ್ಯಕ್ಕೆ ಜ್ಞಾಪಕವಾಗಿರುವುದು ಸ್ಪಷ್ಟವಾಗಿರುತ್ತದೆ. ಈ ಕಾರಣದಿಂದ ಇವು ಅನುಮಾನದ ವಿಶೇಷಗಳು. ಉಪಪತ್ತಿಯನ್ನೂ ಇವುಗಳ ಜೊತೆಯಲ್ಲಿ ಹೇಳಿರುರುವುದರಿಂದ ಇದೂ ಅನುಮಾನವೆನ್ನುವುದು ಸ್ಪಷ್ಟವಾಗುತ್ತದೆ. ಅವುಗಳನ್ನು ಆಗಮದಲ್ಲಿ ಅಂತರ್ಭಾವವನ್ನು ಹೊಂದುತ್ತವೆ ಎನ್ನುವುದು ಸರಿಯಲ್ಲ. ಏಕೆಂದರೆ ಆಗಮವು

ಸಾಕ್ಷಾತ್ತಾಗಿ ಜ್ಞಾನಜನಕವಾಗಿರುವುದು. ಆದರೆ ಅನುಮಾನ ವ್ಯಾಪ್ತ್ಯಾದಿಗಳನ್ನು ಅಪೇಕ್ಷಿಸಿ ಜ್ಞಾನ ಜನಕವಾಗುತ್ತದೆ. ಉಪಕ್ರಮಾದಿಗಳು 'ಈ ಪ್ರಕರಣದ ಅರ್ಥವಿದು, ಉಪಕ್ರಮಾದಿಗಳಿರುವುದರಿಂದ' ಎಂದು ಮುಂತಾದ ರೂಪದಲ್ಲಿ ಜ್ಞಾನ ಜನಕವಾಗಿರುವುದರಿಂದ ಅವುಗಳನ್ನು ಅನುಮಾನವೆಂದು ತಿಳಿಯುವುದು ಸರಿಯಾಗುತ್ತದೆ. ಉಪಕ್ರಮ ಮೊದಲಾದುವು ಆಗಮರೂಪವಾದರೂ ತಾತ್ಪರ್ಯಕ್ಕೆ ಜ್ಞಾಪಕವಾದಾಗ ಅನುಮಾನವಾಗುತ್ತವೆ.

ಸಮಾಖ್ಯಾ, ವಾಕ್ಯ, ಪ್ರಕರಣ ಮತ್ತು ಸ್ಥಾನ ಎನ್ನುವುವೂ ಅನುಮಾನದ ವಿಶೇಷಗಳು. ನಿರ್ಣೀತವಾದ ಸ್ಥಾನದಲ್ಲಿ ಸಮಾನವಾದ ಉಕ್ತಿಯೆ ಸಮಾಖ್ಯಾ. ಈ ಸಮಾನೋಕ್ತಿಯು ಅರ್ಥತಃ ಮತ್ತು ಶಬ್ದತಃ ಪ್ರವೃತ್ತಿಸಬಹುದು. ವಾಕ್ಯವೆಂದರೆ ಆಕಾಂಕ್ಷಾ, ಯೋಗ್ಯತಾ ಮತ್ತು ಸನ್ನಿಧಿಗಳನ್ನುಳ್ಳ ಪದಸಮೂಹ ಎಂದರ್ಥ. ಒಂದು ವಿವಕ್ಷೆಯಿಂದ ಒಂದು ಅರ್ಥಪರವಾದ ವಾಕ್ಯಸಮೂಹವೇ ಪ್ರಕರಣ. ಪ್ರಕರಣಗಳ ಸಮೂಹವೇ ಸ್ಥಾನ. ಇವೆಲ್ಲವೂ ಅನುಮಾನದಲ್ಲಿಯೇ ಅಂತರ್ಭಾವಹೊಂದುತ್ತವೆ. ಇವು ಆಗಮರೂಪವಾದರೂ ತಾತ್ಪರ್ಯಜ್ಞಾನಕ್ಕೆ ಸಾಧನವಾದಾಗ ಅನುಮಾನವಿಶೇಷಗಳು.

## *ಅನುಮಾನದಲ್ಲಿ ಗ್ರಹಿಸಬೇಕಾದ ಮುಖ್ಯ ಅಂಶಗಳು*

ನಿರ್ದೋಷವಾದ ಉಪಪತ್ತಿಯನ್ನು ಅನುಮಾನವೆಂದು ಹೇಳಿದಾಗ, ನಿರ್ದೋಷವೆಂಬಲ್ಲಿ ವ್ಯಾಪ್ತಿಜ್ಞಾನ ಮೊದಲಾದುವು ಸೇರಿರುತ್ತವೆ. ವ್ಯಾಪ್ತಿರಾಹಿತ್ಯಾದಿ ದೋಷಗಳಿಂದ ಕೂಡಿದ ಅನುಮಾನ ಅಯಥಾರ್ಥಜ್ಞಾನ ಜನಕವಾಗುತ್ತದೆ. ಇಂಥಾ ಅನುಮಾನಗಳೇ ಹೇತ್ವಾಭಾಸಗಳು.

ಅವಿನಾಭಾವಕ್ಕೆ ವ್ಯಾಪ್ತಿಯೆಂದು ಹೆಸರು. ಉಪಪತ್ತಿ(ಹೇತು)ಯಿಂದ ಸಾಧಿತವಾಗುವ ಅಂಶವೇ ಸಾಧ್ಯ. ಅದಕ್ಕೆ ಸಾಧನವಾಗಿ ಉಪಪತ್ತಿ ಸಾಧನವಾಗಿರುತ್ತದೆ. ಸಾಧ್ಯವನ್ನು ಬಿಟ್ಟು ಸಾಧನವಿಲ್ಲದಿರುವುದು

ಅವಿನಾಭಾವ ಅಥವಾ ಸಾಹಚರ್ಯ. ಒಬ್ಬನು ಅನೇಕ ಸಲ ಧೂಮವನ್ನು ನೋಡಿ ಅಗ್ನಿಯನ್ನೂ ನೋಡಿ ಅನಂತರ ಅಗ್ನಿಯ ಅಭಾವವನ್ನು ನೋಡಿ ಧೂಮದ ಅಭಾವವನ್ನು ನಿಶ್ಚಯ ಮಾಡಿಕೊಳ್ಳುತ್ತಾನೆ. ಹೀಗೆ ಅಗ್ನಿ ಮತ್ತು ಧೂಮ ಇವಕ್ಕೆ ಇರುವ ಸಾಹಚರ್ಯವೇ ಅವಿನಾಭಾವ. ಇದಕ್ಕೇ ವ್ಯಾಪ್ತಿಯೆಂದು ಹೆಸರು. ಇದನ್ನು ತಿಳಿದವನು ಪರ್ವತದಲ್ಲಿ ಧೂಮವನ್ನು ನೋಡಿ ವ್ಯಾಪ್ತಿಯನ್ನು ಸ್ಮರಿಸಿಕೊಳ್ಳುತ್ತಾನೆ. ಇದು ಪುರುಷರ ಸ್ವಭಾವವಾಗಿರುವುದು. ವ್ಯಾಪ್ತಿಯನ್ನು ಸ್ಮರಿಸಿದವನು ಪರ್ವತದಲ್ಲಿ ನೋಡಿದ ಧೂಮವು ವ್ಯಾಪ್ತಿಯುಳ್ಳದ್ದೆಂದು ತಿಳಿಯುತ್ತಾನೆ. ಇದರಿಂದ ಅವನಿಗೆ ಅಗ್ನಿಯ ಜ್ಞಾನವಾಗುತ್ತದೆ. ಇದಕ್ಕೇ ಅನುಮಿತಿ ಎಂದು ಹೆಸರು.

ಅವಿನಾಭಾವ ಅಂದರೆ ವ್ಯಾಪ್ತಿ (೧) ಅನ್ವಯವ್ಯಾಪ್ತಿ ಮತ್ತು (೨) ವ್ಯತಿರೇಕವ್ಯಾಪ್ತಿ ಎಂದು ಎರಡುವಿಧ. ಸಾಧ್ಯದಿಂದ ಸಾಧನಕ್ಕೆ ಇರುವ ವ್ಯಾಪ್ತಿ ಅನ್ವಯವ್ಯಾಪ್ತಿ, ಉದಾ: ಯಾವುದು ಧೂಮವುಳ್ಳದ್ದೋ ಅದು ಅಗ್ನಿಯುಳ್ಳದ್ದು. ಸಾಧನದ ಅಭಾವದಿಂದ ಸಾಧ್ಯದ ಅಭಾವಕ್ಕೆ ಇರುವ ವ್ಯಾಪ್ತಿ ವ್ಯತಿರೇಕವ್ಯಾಪ್ತಿ. ಉದಾ: ಯಾವುದು ಅಗ್ನಿಯುಳ್ಳದ್ದಾಗುವುದಿಲ್ಲವೋ ಅದು ಧೂಮವುಳ್ಳದ್ದಾಗುವುದಿಲ್ಲ.

ಅನುಮಾನವು ಪುನಃ

(೧)ಸ್ವಾರ್ಥಾನುಮಾನ ಮತ್ತು

(೨) ಪರಾರ್ಥಾನುಮಾನ ಎಂದು ಎರಡು ವಿಧ.

<u>**ಸ್ವಾರ್ಥಾನುಮಾನ**</u> : ಪುರುಷನು ತಾನೇ ಅಡುಗೆಮನೆ ಮೊದಲಾದ ಸ್ಥಳಗಳಲ್ಲಿ ಧೂಮ ಮತ್ತು ಅಗ್ನಿಗಳನ್ನು ನೋಡಿ, ಅವುಗಳಿಗೆ ವ್ಯಾಪ್ತಿ ಇರುವುದನ್ನು ತಿಳಿದು, ಅನಂತರ ಪರ್ವತವೇ ಮೊದಲಾದ ಸ್ಥಳಗಳಲ್ಲಿ ಧೂಮವನ್ನು ನೋಡಿ ವ್ಯಾಪ್ತಿಯನ್ನು ಸ್ಮರಣೆಮಾಡಿ ಕೊಂಡು, ಅನಂತರ 'ವಹ್ನಿಗೆ ವ್ಯಾಪ್ಯವಾದ ಧೂಮವು ಈ ಪ್ರದೇಶದಲ್ಲಿದೆ' ಎನ್ನುವ ಪರಾಮರ್ಶವನ್ನು ಹೊಂದಿ ಆ ಪ್ರದೇಶವು ವಹ್ನಿಯುಳ್ಳದ್ದೆಂದು ತಿಳಿಯುತ್ತಾನೆ. ಹೀಗೆ ಪರೋಪದೇಶವನ್ನು ಅಪೇಕ್ಷಿಸದೆ ಹುಟ್ಟುವ ಅನುಮಾನವೇ "ಸ್ವಾರ್ಥಾನುಮಾನ".

**ಪರಾರ್ಥಾನುಮಾನ** : ಅನುಮಾನವು ಮತ್ತೊಬ್ಬರ ಉಪಯೋಗಕ್ಕಾಗಿ ಅದರೆ ಅದು ಪರಾರ್ಥಾನುಮಾನ. ವ್ಯಾಪ್ತಿಯುಳ್ಳ ಲಿಂಗವನ್ನು ಬೋಧಿಸುವ ವಾಕ್ಯವೇ ಪರೋಪದೇಶ. ಪರೋಪದೇಶಕ್ಕೆ ಬೇಕಾಗುವ ವಾಕ್ಯಗಳನ್ನು ಅವಯುವ ಎನ್ನುತ್ತಾರೆ. ಇವುಗಳ ವಿಷಯವಾಗಿ ವಾದಿಗಳಲ್ಲಿ ವಿಪ್ರತಿಪತ್ತಿಯಿರುವುದು. ನವೀನ ನೈಯಾಯಿಕರು ಪ್ರತಿಜ್ಞಾ, ಹೇತು, ಉದಾಹರಣ, ಉಪನಯು, ನಿಗಮನ ಎಂಬ ಐದು ಅವಯುವಗಳೆನ್ನುತ್ತಾರೆ. ಪ್ರಾಚೀನ ನೈಯಾಯಿಕರು ಜಿಜ್ಞಾಸಾ, ಸಂಶಯು, ಶಕ್ಯಪ್ರಾಪ್ತಿ, ಪ್ರಯೋಜನ, ಸಂಶಯುವ್ಯುದಾಸ, ಪ್ರತಿಜ್ಞಾ, ಹೇತು, ಉದಾಹರಣ, ಉಪನಯು, ನಿಗಮನ ಎಂಬ ಹತ್ತು ಅವಯುವಗಳೆತ್ತಾರೆ. ಮೀಮಾಂಸಕರು ಪ್ರತಿಜ್ಞಾ, ಹೇತು ಮತ್ತು ನಿಗಮನ ಎಂಬ ಮೂರೇ ಅವಯುವಗಳೆನ್ನುತ್ತಾರೆ. ಬೌದ್ಧರಾದರೋ ಉದಾಹರಣ ಮತ್ತು ಉಪನಯು ಎಂಬ ಎರಡೇ ಅವಯುವಗಳು ಎನ್ನುತ್ತಾರೆ. ಆದರೆ ಮಧ್ವಸಿದ್ಧಾಂತದಂತೆ ಅವಯುವಗಳ ಸಂಖ್ಯಾನಿಯುಮವು ಯುಕ್ತವಲ್ಲ. ವಿಷಯು ಪ್ರತಿಪಾದನೆಗೆ ಎಷ್ಟು ಅವಯುವಗಳು ಅವಶ್ಯಕವೋ ಅಷ್ಟು ಇರಬೇಕು.
ವಿಷಯುಪ್ರತಿಪಾದನೆಗಾಗಿ ಪಕ್ಷವನ್ನು ಹೇಳುವುದೇ "ಪ್ರತಿಜ್ಞಾ". ಉದಾ: "ಪರ್ವತವು ಅಗ್ನಿಯುಳ್ಳದ್ದು"ಎಂದು. ಸಾಧನವಿದು ಎಂದು ಹೇಳಲು ಸಾಧಕವಾದ ವಿಭಕ್ತಿಯುಳ್ಳ ಲಿಂವಚನವೇ (ಹೇತುವನ್ನು ನಿರ್ದೇಶಿಸುವ) "ಹೇತು". ಉದಾ: "ಧೂಮವಿರುವ ದೆಸೆಯಿಂದ" ಎಂದು. ವ್ಯಾಪ್ತಿಯನ್ನು ತೋರಿಸುವ ಮೂಲಕ ಯುಕ್ತವಾದ ದೃಷ್ಟಾಂತ ವಚನವೇ "ಉದಾಹರಣ". ಉದಾ :ಧೂಮವಿರು ವಲ್ಲಿ ವಹ್ನಿಯಿರುವುದು ಅಡುಗೆಮನೆಯುಂತೆ. ವ್ಯಾಪ್ತಿಗ್ರಹಣಸ್ಥಳವೇ ದೃಷ್ಟಾಂತ. ವ್ಯಾಪ್ತಿ ವಿಶಿಷ್ಟವಾದ ಹೇತುವನ್ನು ಪಕ್ಷದಲ್ಲಿ ಪರಾಮರ್ಶಿ ಸುವುದಕ್ಕೆ "ಉಪನಯು"ವೆಂದು ಹೆಸರು. ಉದಾ: ಪರ್ವತವು ವಹ್ನಿವ್ಯಾಪ್ತವಾದ ಧೂಮವುಳ್ಳದ್ದು. ಪುನಃ ಸಿದ್ಧಾಂತರೂಪವಾಗಿ ಸಾಧ್ಯವನ್ನು ಹೇಳುವುದೇ "ನಿಗಮನ". ಉದಾ: ಆದುದರಿಂದ ಪರ್ವತವು ವಹ್ನಿಯುಳ್ಳದ್ದು.

| ಪಕ್ಷ | ಸಾಧ್ಯ | ಹೇತು | ದೃಷ್ಟಾಂತ |
|---|---|---|---|
| --- | ---- | ---- | ------ |

ಪರ್ವತೋ ವಹ್ನಿಮಾನ್ ಧೂಮಾತ್ ಮಹಾನಸವತ್
ಪರ್ವತವು ಅಗ್ನಿಯುಳ್ಳದ್ದು ಧೂಮವಿರುವುದರಿಂದ ಅಡಿಗೆಮನೆಯಂತೆ

ಸಾಧರ್ಮ್ಯದೃಷ್ಟಾಂತ ವೈಧರ್ಮ್ಯದೃಷ್ಟಾಂತವೆಂದು ದೃಷ್ಟಾಂತ ಎರಡು ವಿಧ. ಅನ್ವಯವ್ಯಾಪ್ತಿಯನ್ನು ಗ್ರಹಿಸುವ ಸ್ಥಳ ಸಾಧರ್ಮ್ಯ ದೃಷ್ಟಾಂತ. ವ್ಯತಿರೇಕವ್ಯಾಪ್ತಿಯನ್ನು ಗ್ರಹಿಸುವ ಸ್ಥಳ ವೈಧರ್ಮ್ಯದೃಷ್ಟಾಂತ.

ದೃಷ್ಟಾಂತಕ್ಕೆ ಅನುಗುಣವಾಗಿ ಉದಾಹರಣವೂ ಸಾಧರ್ಮ್ಯೋದಾಹರಣ, ವೈಧರ್ಮ್ಯೋದಾಹರಣವೆಂದು ಎರಡು ವಿಧ. "ಯಾವುದು ಧೂಮುಳ್ಳದ್ದೋ ಅದು ಅಗ್ನಿಯುಳ್ಳದ್ದು, ಅಡಿಗೆಯುಮನೆಯಂತೆ" ಎನ್ನುವುದು ಸಾಧರ್ಮ್ಯೋದಾಹರಣೆಗೆ ದೃಷ್ಟಾಂತ. "ಯಾವುದು ಅಗ್ನಿರಹಿತವೋ ಅದು ಧೂಮರಹಿತ ನೀರಿನ ಮಡುವಿನಂತೆ" ಎನ್ನುವುದು ವೈಧರ್ಮ್ಯೋದಾಹರಣೆಗೆ ದೃಷ್ಟಾಂತ.
ಉಪನಯುವೂ ಉದಾಹರಣೆಗೆ ಅನುಗುಣವಾಗಿ ಎರಡು ವಿಧ. "ಅದರಂತೆ ಇದು ಧೂಮವುಳ್ಳ ಪರ್ವತ" ಎಂದು ಸಾಧರ್ಮ್ಯೋಪನಯ. "ಅದರಂತೆ ಇದು ಧೂಮ ರಹಿತವಾದ ಪರ್ವತವಲ್ಲ" ಎನ್ನುವುದು ವೈಧರ್ಮ್ಯೋಪನಯ.

ಹೇತುಪುರಃಸ್ಸರವಾಗಿ ಪಕ್ಷದಲ್ಲಿ ಸಾಧ್ಯವನ್ನು ಉಪಸಂಹರಿಸುವುದು ನಿಗಮನ.. 'ಆದುದರಿಂದ ಪರ್ವತವು ಅಗ್ನಿಯುಳ್ಳದ್ದು'ಎಂದು.

ಜರನ್ನೈಯಾಯಿಕರು ಹೇಳುವ ಜಿಜ್ಞಾಸಾ ಮೊದಲಾದುವು ಶಬ್ದವೇ ಅಲ್ಲ. ಅವು ಅವಯುವಯುವಾಗುವುದೂ ಶಕ್ಯವಲ್ಲ. ಅವುಗಳನ್ನು ಅವಶ್ಯಕ ನಿಯುಮವೆಂದು ಹೇಳುವುದು ಅಸಂಗತವಾಗುತ್ತದೆ. ಉಪನಯನಿಗಮನಗಳು ಪ್ರತಿಜ್ಞಾ ಹೇತುಗಳಲ್ಲಿಯೇ ಅಂತರ್ಭಾವವನ್ನು ಹೊಂದುತ್ತವೆ. ಮಿಕ್ಕ ಮೂರು ಅವಯುವಗಳ ನಿಯುಮವೂ ಸರಿಯಲ್ಲ. 'ಧೂಮವುಳ್ಳ ಪರ್ವತವು ಅಗ್ನಿಯುಳ್ಳದ್ದು' ಎಂಬ ಒಂದೇ ವಾಕ್ಯದಿಂದಲೇ ಅನುಮಿತಿ ಹುಟ್ಟಬಹುದು. ಇದೇ ವಿಧವಾಗಿ ಆಯಾ ಬುದ್ಧಿಯನ್ನು ಅನುಸರಿಸಿ ಅನುಮಿತಿ ಉಂಟಾಗಲು

ಅವಕಾಶವಿರುವುದು. ಸಾಧ್ಯಜ್ಞಾನದ ಉತ್ಪತ್ತಿಯು ಅನುಮಾನ ವಾಕ್ಯ ಪ್ರಯೋಗಕ್ಕೆ ಫಲ. ಅದು ಸಂದರ್ಭಾನುಸಾರವಾಗಿ ಹೇತುವಾಕ್ಯಮಾತ್ರದಿಂದಲೂ, ಕ್ವಚಿತ್ ಎರಡು ಅವಯವ ಗಳ ಪ್ರಯೋಗದಿಂದಲೂ, ಕ್ವಚಿತ್ ಮೂರು ಅವಯುವಗಳಿಂದಲೂ, ಕ್ವಚಿತ್ ನಾಲಕ್ಕು ಅಥವಾ ಐದು ಅವಯುವಗಳಿಂದಲೂ ಮತ್ತೆ ಕೆಲವು ಸಂದರ್ಭಗಳಲ್ಲಿ ಸಂದೇಹದಿಂದ ವಿವಾದವು ಬಂದರೆ ಅನೇಕವಾಕ್ಯಗಳಿಂದಲೂ ಉತ್ಪನ್ನವಾಗುತ್ತದೆ. ಈ ಕಾರಣದಿಂದ ಅವಯುವ ನಿಯಮವು ಯುಕ್ತವಲ್ಲ ಎಂದು ಸಿದ್ಧಾಂತವಾಗಿರುತ್ತದೆ.

## ***ಅನುಮಾನದ ದೋಷಗಳು***

ನಿರ್ದೋಷವಾದ ಉಪಪತ್ತಿ ಅನುಮಾನ ಎಂದಾಗ ದೋಷವುಳ್ಳ ಉಪಪತ್ತಿಯು ಪ್ರಸಕ್ತಿಗೆ ಬಂದು ಉಪಪತ್ತಿ ದೋಷಗಳು ಯಾವುವು ಎಂಬ ಪ್ರಶ್ನಯ ಉದ್ಭವಿಸುತ್ತದೆ. ವಿರೋಧ ಅಸಂಗತಿಯೆಂದು ಉಪಪತ್ತಿದೋಷಗಳು ಎರಡು ಬಗೆ. ಅನ್ವಯಯೋಗ್ಯತೆ ಇಲ್ಲದಿರುವು ವಿರೋಧ. ಆಕಾಂಕ್ಷಾ ಇಲ್ಲದಿರುವುದು ಅಸಂಗತಿ. ಈ ದೋಷಗಳು ಅರ್ಥ ಮತ್ತು ವಚನ ಇವುಗಳಿಗೆ ಸಂಭವಿಸುತ್ತವೆ. ಅರ್ಥವು ಅಸಾಧುವಾದರೆ ವಚನವೂ ಅಸಾಧುವಾಗುತ್ತದೆ. ವಚನಕ್ಕೆ ಮಾತ್ರ ಸಂಬಂಧಪಡುವ ದೋಷಗಳಿರುವುವು. ಅವು ನ್ಯೂನ ಮತ್ತು ಅಧಿಕ ಎಂದು ಎರಡು ವಿಧ. ಅಪಕ್ಷಿತವಾದುದು ಪೂರ್ತಿ ಯಾಗದಿರಲು ಅದು ನ್ಯೂನ. ಅಪೇಕ್ಷಿತಕ್ಕಿಂತ ಅಧಿಕವಾದದ್ದು ಅಧಿಕ. ಈ ದೋಷಗಳು ಅರ್ಥಾನುಮಾನದ ಪ್ರಯೋಗಕ್ಕೆ ಮಾತ್ರ ಸಂಭವಿಸುತ್ತವೆ. ಈ ದೋಷಗಳೇ ವಚನಮೂಲಕವಾಗಿ ಉಪಪತ್ತಿಗೂ ಸಂಭವಿಸುತ್ತವೆ.

## ***ನಿಗ್ರಹಸ್ಥಾನಗಳು***

ನಿಗ್ರಹಸ್ಥಾನವೆಂದರೆ ವಾದದಲ್ಲಿ ಪರಾಜಯಹೇತುವಾದ ಸ್ಥಳ. ನಿಗ್ರಹಸ್ಥಾನದ ವಿಚಾರ ಬಹಳ ವಿಸ್ತಾರ ಮತ್ತು ಗಹನವಾದದ್ದು. ನಿಗ್ರಹಸ್ಥಾನಗಳಲ್ಲಿ

ಮುಖ್ಯವಾದದ್ದು ಹೇತ್ವಾಭಾಸ. ಹೇತುವಿನಂತೆ ತೋರುವುದು ಆದರೆ ಸಾಧ್ಯ ಸಾಧಕ(ಹೇತು)ವಾಗಿಲ್ಲದಿರುವುದೇ "ಹೇತ್ವಾಭಾಸ". ಹೇತುವಿಗೆ ಪಕ್ಷದಲ್ಲಿ ವ್ಯಾಪಿಸಿರುವುದೇ ಮೊದಲಾದ ಗುಣಗಳಲ್ಲಿ ಕೆಲವು ಇರುವುದು, ಮತ್ತೆ ಕೆಲವು ಇಲ್ಲದಿರುವುದೇ
ಹೇತ್ವಾಭಾಸ.

| <u>**ಹೇತುದೋಷ**</u> | | <u>**ದುಷ್ಟಹೇತು**</u> |
|---|---|---|
| ೧. | ಅನೇಕಾಂತ | ಸವ್ಯಭಿಚಾರ(ವ್ಯಭಿಚಾರ) |
| ೨. | ವಿರೋಧ | ವಿರುದ್ಧ |
| ೩. | ಸತ್ಪ್ರತಿಪಕ್ಷ | ಸತ್ಪ್ರತಿಪಕ್ಷಿತಃ |
| ೪. | ಅಸಿದ್ಧ | ಅಸಿದ್ಧ |
| ೫. | ಬಾಧ | ಬಾಧಿತಃ |

**ಅನೇಕಾಂತ (ವ್ಯಭಿಚಾರ)**: ಅನೇಕಾಂತವು ಸಾಧಾರಣ, ಅಸಾಧಾರಣ ಮತ್ತು ಅನುಪಸಂಹಾರೀ ಎಂದು ಮೂರು ವಿಧ.

<u>**ಸಾಧಾರಣಾನೈಕಾಂತಿಕ**</u>: ಸಾಧ್ಯವಿಲ್ಲದ ಸ್ಥಳದಲ್ಲಿರುವ ಹೇತುವಿಗೆ(ಪಕ್ಷದಲ್ಲಿಯೂ ವಿಪಕ್ಷದಲ್ಲಿಯೂ ಇರುವ ಹೇತುವು) ಸಾಧಾರಣಾನೈಕಾಂತಿಕ ಎಂದು ಹೆಸರು. (ಸಾಧ್ಯಾಭಾವವದ್ವೃತ್ತಿತ್ವಂ ಸವ್ಯಭಿಚಾರಃ). ಈ ದೋಷವಿದ್ದರೆ ವ್ಯಾಪ್ತಿಗ್ರಹಣವಾಗುವುದಿಲ್ಲ. ಉದಾ: ಪರ್ವತೋ ಧೂಮವಾನ್ ಅಗ್ನೇಃ' ಎಂಬ ಅನುಮಾನದಲ್ಲಿ ಹೇತುವಾದ ಅಗ್ನಿಯು ಸಪಕ್ಷವಾದ ಮಹಾ ನಸದಲ್ಲಿಯೂ ವಿಪಕ್ಷವಾದ ಕಾಯಿಸಿದ ಅಯೋಗೋಳಕದಲ್ಲಿಯೂ ಇರುವುದರಿಂದ ಸಾಧಾರಣವಾಗುತ್ತದೆ. ವ್ಯಭಿಚಾರಿ ಜ್ಞಾನದಿಂದ ವ್ಯಾಪ್ತಿಜ್ಞಾನ ಪ್ರತಿಬಂಧಕವಾಗುತ್ತದೆ.

<u>ಅಸಾಧಾರಣಾನೈಕಾಂತಿಕ</u> : ಹೇತುವು ಯಾವಾಗಲೂ ಸಾಧ್ಯದ ಜೊತೆಯಲ್ಲಿಲ್ಲದಿದ್ದರೆ (ಪಕ್ಷಮಾತ್ರವೃತ್ತಿರಸಾಧಾರಣಾನೈಕಾಂತಿಕಹೇತುಃ) ಅಸಾಧಾರಣಾನೈಕಾಂತಿಕವೆನ್ನಿಸಿಕೊಳ್ಳುತ್ತದೆ. ಸಪಕ್ಷವಿಪಕ್ಷವ್ಯಾವೃತ್ತವಾಗಿದ್ದು

ಪಕ್ಷದಲ್ಲಿ ಮಾತ್ರದಲ್ಲಿರುವ ಹೇತು. ಈ ದೋಷದಿಂದ ಸಾಧ್ಯಕ್ಕೂ ಹೇತುವಿಗೂ ಸಂಬಂಧ ಉಂಟಾಗುವುದಿಲ್ಲ. ಉದಾ: 'ಶಬ್ದವು ನಿತ್ಯ; ಶಬ್ದವಾದುದರಿಂದ'ಎನ್ನುವ ಅನುಮಾನದಲ್ಲಿ ಶಬ್ದತ್ವ ಹೇತುವು ಸಪಕ್ಷವಾದ ಗಗನಾದಿಗಳಲ್ಲಿಯೂ, ವಿಪಕ್ಷವಾದ ಘಟಾದಿಗಳಲ್ಲಿಯೂ ವ್ಯಾವೃತ್ತವಾಗಿದ್ದು ಪಕ್ಷವಾದ ಶಬ್ದದಲ್ಲಿ ಮಾತ್ರವಿರುತ್ತದೆ. ಈ ಜ್ಞಾನವು ಸಾಕ್ಷಾತ್ತಾಗಿ ಅನುಮಿತಿಗೆ ಪ್ರತಿಬಂಧಕವಾಗುತ್ತದೆ.

**<u>ಅನುಪಸಂಹಾರೀ</u>**: ವಸ್ತುಮಾತ್ರ ಪಕ್ಷವಾದುದು (ಅನ್ವಯುವ್ಯತಿರೇಕವ್ಯಾಪ್ತಿರಹಿತಃ) ಅನುಪಸಂಹಾರೀ. ಸರ್ವಂ ನಿತ್ಯಂಪ್ರಮೇಯತ್ವಾತ್. ಈ ಅನುಮಾನದಲ್ಲಿ ಸರ್ವವೂ ಪಕ್ಷವಾಗಿರುವುದರಿಂದ ಅನ್ವಯ ಮತ್ತು ವ್ಯತಿರೇಕದೃಷ್ಟಾಂತಗಳೆರಡೂ ಇಲ್ಲ. ಇದರಿಂದ ಅನ್ವಯುವ್ಯಾಪ್ತಿಯಾ ಗಲೀ ವ್ಯತಿರೇಕವ್ಯಾಪ್ತಿಯಾಗಲೀ (ವ್ಯಾಪ್ತಿಗ್ರಹಣಸ್ಥಳವೇ) ಇಲ್ಲದಿರುವುದರಿಂದ ಪ್ರಮೇಯತ್ವಹೇತುವು ಅನುಪಸಂಹಾರಿಯಾಗಿದೆ.

**<u>ವಿರುದ್ಧ:</u>** ಹೇತುವು ಸಾಧ್ಯದ ಅಭಾವದಿಂದ ವ್ಯಾಪ್ತವಾದರೆ ".ವಿರುದ್ಧ" ಎನಿಸುವುದು. ಈ ಸಂದರ್ಭದಲ್ಲಿ ಹೇತುವು ಸಾಧ್ಯದ ಅಭಾವವನ್ನು ಸಾಧಿಸುತ್ತದೆ. ಅಯಂ ಗೌಃ ಅಶ್ವತ್ವಾತ್ ಎನ್ನುವ ಅನುಮಾನದಲ್ಲಿ ಅಶ್ವತ್ವವಿದ್ದಲ್ಲಿ ಗೋತ್ವರೂಪ ಸಾಧ್ಯದ ಅಭಾವವಿರುವುದರಿಂದ ಸಾಧ್ಯಾಭಾವ ವ್ಯಾಪ್ತಿ ಬರುವುದರಿಂದ ಅಶ್ವತ್ವ ಹೇತು ವಿರುದ್ಧವಾಗುತ್ತದೆ. ವಿರುದ್ಧವು ಸಾಕ್ಷಾತ್ತಾಗಿ ಅನುಮಿತಿಗೆ ಪ್ರತಿಬಂಧಕವಾಗುತ್ತದೆ.ಗೋತ್ವಾಭಾವದಿಂದ ವ್ಯಾಪ್ತವಾದ ಅಶ್ವವತ್ವ ಜ್ಞಾನವಿರುವಾಗ ಗೋತ್ವನಿಶ್ಚಯ ಉಂಟಾಗುವುದಿಲ್ಲ.

**<u>ಸತ್ಪ್ರತಿಪಕ್ಷ</u>** : ಪಕ್ಷದಲ್ಲಿ ಸಾಧ್ಯದ ಅಭಾವಕ್ಕೆ ವ್ಯಾಪ್ಯವಾದ ಮತ್ತೊಂದು ಹೇತುವಿದ್ದರೆ ಆ ದೋಷವು ಸತ್ಪ್ರತಿಪಕ್ಷವಾಗುತ್ತದೆ. ಅಂದರೆ ಸಾಧ್ಯಾಭಾವ ಸಾಧಕವಾದ ಹೇತ್ವಂತರವು ಪ್ರತಿಪಕ್ಷ, ಅದು ಉಳ್ಳದ್ದು ಸತ್ಪ್ರತಿಪಕ್ಷ, ಇಂತಹ ಸಂದರ್ಭದಲ್ಲಿ ಸಾಧ್ಯ ಮತ್ತು ಅದರ ಅಭಾವ ಇವೆರಡರ ಸಾಧನೆಯೂ ಸಂಭಾವಿತವಾಗುವುದರಿಂದ ಅನುಮಿತಿಯಲ್ಲಿ ಸಂದೇಹವುಂಟಾಗುತ್ತದೆ. ಉದಾಃ

ಪರ್ವತೋ ವಹ್ನಿಮಾನ್ ಧೂಮಾತ್ ಮಹಾನಸವತ್ ಮತ್ತು ಪರ್ವತೋ ವಹ್ನ್ಯಭಾವವಾನ್ ಪಾಷಾಣಮಯತ್ವಾತ್ ಕುಡ್ಯವತ್. ಈ ಎರಡು ಅನುಮಾನಗಳಲ್ಲಿರುವ ಹೇತುಗಳು (ಧೂಮಾತ್, ಪಾಷಾಣಮಯತ್ವಾತ್) ಪರಸ್ಪರ ಸಾಧ್ಯಾಭಾವಸಾಧಕಗಳಾಗಿರುವುದರಿಂದ ಇವುಗಳಿಗೆ ಅನ್ಯೋನ್ಯವಾಗಿ ಸತ್ಪ್ರತಿಪಕ್ಷತ್ವವು ಬರುತ್ತದೆ. ಇದು ಸಾಕ್ಷಾತ್ತಾಗಿ ಅನುಮಿತಿಗೆ ಪ್ರತಿಬಂಧಕವಾಗುತ್ತದೆ.

**ಅಸಿದ್ಧ** : ಪರಾಮರ್ಶಪ್ರತಿಬಂಧಕ ಜ್ಞಾನವಿಷಯಧರ್ಮಃ ಅಸಿದ್ಧಃ. ಇದನ್ನು ಉಳ್ಳಹೇತು ಅಸಿದ್ಧಹೇತು. ಅಸಿದ್ದಿಯು ಆಆಶ್ರಯಾಸಿದ್ಧಿ, ಸ್ವರೂಪಾಸಿದ್ಧಿ ಮತ್ತು ಸಾಧ್ಯಾಸಿದ್ಧಿ ಎಂಬುದಾಗಿ ಮೂರು ವಿಧ.

**ಆಶ್ರಯಾಸಿದ್ಧಿ** : ಸಾಧ್ಯಕ್ಕೆ ಆಶ್ರಯುವಿಲ್ಲದಿದಲ್ಲಿ (ಪಕ್ಷತಾವಚ್ಛೇದಕಾಭಾವವುಳ್ಳ ಪಕ್ಷವುಳ್ಳ ಹೇತು ಆಶ್ರಯಾಸಿದ್ಧ) ಅನುಮಾನಕ್ಕೆ ಆಶ್ರಯಾಸಿದ್ಧಿ ಎಂಬ ದೋಷವು ಬರುತ್ತದೆ. ಉದಾಃ : 'ಗಗನಾವಿಂದವು ಸುರಭಿಯಾದುದು, ಅರವಿಂದವಾದುದರಿಂದ' ಎನ್ನುವ ಅನುಮಾನದಲ್ಲಿ ಸಾಧ್ಯವಾದ ಸುರಭಿಗುಣಕ್ಕೆ ಆಶ್ರಯವಾದ ಗಗನಾರವಿಂದ ಎನ್ನುವುದೇ ಅಪ್ರಸಿದ್ಧವಾಗಿದೆ. ಇಲ್ಲಿ ಅರವಿಂದ ಎನ್ನುವ ಪಕ್ಷದಲ್ಲಿ ಗಗನೀಯತ್ವರೂಪ ಪಕ್ಷತಾವಚ್ಛೇದಕತ್ವ ಧರ್ಮವಿಲ್ಲ. ಆದುದರಿಂದ ಅರವಿಂದತ್ವ ಹೇತುವು ಆಶ್ರಯಾಸಿದ್ಧವಾಗಿದೆ. ಇದರಿಂದ ಅನುಮಿತಿಗೆ ಕಾರಣವಾದ ಪರಾಮರ್ಶವನ್ನು ಪ್ರತಿಬಂಧಿಸುತ್ತದೆ. ಇದರಿಂದ ಈ ಅನುಮಾನವು ಆಶ್ರಯಾಸಿದ್ಧಿ ಎಂಬ ದೋಷಯುಕ್ತವಾಗಿದೆ.

**ಸ್ವರೂಪಾಸಿದ್ಧಿ**: ಪಕ್ಷದಲ್ಲಿ ಹೇತುವಿಲ್ಲದಿರುವ ದೋಷಕ್ಕೆ (ಪಕ್ಷನಿಷ್ಠಾಭಾ**ವಪ್ರತಿಯೋಗಿ)** ಸ್ವರೂಪಾಸಿದ್ಧಿ ಎಂದು ಹೆಸರು. ಉದಾಃ 'ಶಬ್ದವು ನಿತ್ಯ, ಚಕ್ಷುಸ್ಸಿಗೆ ವಿಷಯುವಲ್ಲವಾದುದರಿಂದ' ಎಂಬ ಅನುವಾನದಲ್ಲಿ ಪಕ್ಷವಾದ ಶಬ್ದವು ಚಕ್ಷುಸ್ಸಿಗೆ ವಿಷಯುವಲ್ಲವಾದುದರಿಂದ ಸ್ವರೂಪಾಸಿದ್ಧಿ ದೋಷವುಂಟಾಗುತ್ತದೆ. ಇದು ಪರಾಮರ್ಶವನ್ನು ಪ್ರತಿಬಂಧಿಸುತ್ತದೆ.

**ಸಾಧ್ಯಾಸಿದ್ಧಿ** : ಸಾಧ್ಯವೇ ಪ್ರಸಿದ್ಧವಲ್ಲದಿದ್ದಲ್ಲಿ ದೋಷವು ಸಾಧ್ಯಾಪ್ರಸಿದ್ಧಿ ಎನ್ನಿಸಿಕೊಳ್ಳುತ್ತದೆ. ಉದಾ: 'ಪರ್ವತವು ಕಾಂಚನ ಮಯವಾದ ವಹ್ನಿಯುಳ್ಳದ್ದು, ಧೂಮವುಳ್ಳದ್ದಾದುದರಿಂದ' ಎಂಬ ಅನುಮಾನದಲ್ಲಿ ಕಾಂಚನಮಯವಹ್ನಿಯೇ ಅಪ್ರಸಿದ್ಧ ವಾದುದರಿಂದ ಸಾಧ್ಯಾಪ್ರಸಿದ್ಧಿ ದೋಷವು ಬರುತ್ತದೆ. ಈ ದೋಷವೂ ಪರಾಮರ್ಶೆಯನ್ನು ಪ್ರತಿಬಂಧಿಸುತ್ತದೆ.

**ಹೇತ್ವಪ್ರಸಿದ್ಧಿ** : ಹೇತುವೇ ಪ್ರಸಿದ್ಧವಲ್ಲದಿದ್ದರೆ ಹೇತ್ವಪ್ರಸಿದ್ಧಿ ಎಂಬ ದೋಷವುಂಟಾಗುತ್ತದೆ. ಉದಾ: 'ಪರ್ವತವು ವಹ್ನಿಯುಳ್ಳದ್ದು, ಕಾಂಚನಮಯಧೂಮವಿರುವುದರಿಂದ' ಎನ್ನುವ ಅನುಮಾನದಲ್ಲಿ, ಕಾಂಚನಮಯಧೂಮವೆಂಬ ಹೇತುವೇ ಪ್ರಸಿದ್ಧವಲ್ಲವಾದುದರಿಂದ "ಹೇತ್ವಪ್ರಸಿದ್ಧಿ" ಎಂಬ ದೋಷವು ಬರುತ್ತದೆ. ಇದೂ ಪರಾಮರ್ಶ ಪ್ರತಿಬಂಧಕ.

**ಬಾಧ** : ಪಕ್ಷದಲ್ಲಿ ಸಾಧ್ಯವಿಲ್ಲದಿದ್ದರೆ ಅನುಮಾನಕ್ಕೆ "ಬಾಧ"ವೆಂಬ ದೋಷವುಂಟಾಗುತ್ತದೆ. ಬಾಧವೆಂಬ ದೋಷವುಳ್ಳ ಹೇತುವು ಬಾಧಿತವಾಗುತ್ತದೆ. ಇದೂ ಅನುಮಿತಿಯನ್ನು ಪ್ರತಿಬಂಧಿಸುತ್ತದೆ. ಉದಾ: 'ಅಗ್ನಿಯು ಶೀತಲ, ದ್ರವ್ಯವಾದ್ದರಿಂದ, ಜಲದಂತೆ' ಎಂದು. ಅಗ್ನಿಯು ಶೀತವಲ್ಲವೆಂದು ಪ್ರತ್ಯಕ್ಷಸಿದ್ಧವಾಗಿರುವುದು. ಇದರಿಂದ ಅಗ್ನಿಯು ಶೀತಲವೆಂಬ ಅನುಮಾನವೇ ಹುಟ್ಟುವುದಿಲ್ಲ.

ಹೇತ್ವಾಭಾಸವೇ ಮೋದಲಾದ ದೋಷಗಳು ಅನೇಕ ಅವಾಂತರ ಭೇದಗಳನ್ನು ಹೊಂದಿದ್ದರೂ ಇವುಗಳ ಮೂಲ ವಿರೋಧ ಅಥವಾ ಅಸಂಗತಿಯಾಗಿರುತ್ತದೆ. ಈ ಕಾರಣದಿಂದ ಇವು "ವಿರೋಧ ಅಥವಾ ಅಸಂಗತಿ"ಯಲ್ಲಿಯೇ ಅಂತರ್ಭಾವ ಹೊಂದುತ್ತವೆ.

ವಿರೋಧವು ಸಮಯಬಂಧ ಮೊದಲಾದ ರೂಪವುಳ್ಳ ಕಥೆಯಲ್ಲಿ 'ಸರ್ವರೂಪ ಸಾಧಾರಣ ಮತ್ತು ಅಸಾಧಾರಣ' ಎಂದು ಎರಡು ವಿಧವಾಗಿರುತ್ತದೆ. ಹೀಗೆಯೇ ಅಸಾಧಾರಣವೂ 'ಪ್ರಮಾಣವಿರೋಧ ಮತ್ತು

ಸ್ವವಾಕ್ಯವಿರೋಧ'ವೆಂದು ಎರಡು ವಿಧವಾಗಿದೆ. ಪುನಃ ಸ್ವವಾಕ್ಯವಿರೋಧವು ಅಪಸಿದ್ಧಾಂತ ಮತ್ತು ಜಾತಿ' ಎಂದು ಎರಡು ವಿಧವಾಗಿದೆ. ತನ್ನಿಂದ ಅಂಗೀಕೃತವಾದ ಪೂರ್ವಾಚಾರ್ಯರ ವಚನಕ್ಕೆ ವಿರುದ್ಧವಾದ ಸ್ವವಾಕ್ಯವು ಅಪಸಿದ್ಧಾಂತ. ಸ್ವವ್ಯಾಹತಿಯು 'ಜಾತಿ'ಎನಿಸಿಕೊಳ್ಳುತ್ತದೆ. ನಾನು ಹೇಳುವುದಕ್ಕೆ ಪ್ರಮಾನವೇ ಬೇಡವೆ ನ್ನುವುದು ಸಮಯಬಂಧ ಮೊದಲಾದುದರ ವಿರೋಧ ಸಾಧಾರಣ. ಈ ಪ್ರಕರಣದಲ್ಲಿ "ಕಥಾ"ಎಂದರೆ ತತ್ತ್ವವಿಚಾರಾತ್ಮಕವಾದ ವಾದ.

ಪರೋಕ್ತವಾದುದಕ್ಕೆ ಮತ್ತೊಂದು ಅರ್ಥವನ್ನು ಕಲ್ಪಸಿ ಅದನ್ನು ದೂಷಿಸುವುದಕ್ಕೆ 'ಛಲ'ವೆಂದು ಹೆಸರು. ಪರೋಕ್ತವಾದುದರ ದೂಷಣವು ಸಂಗತವಾದರೂ ಬೇರೆ ಅರ್ಥವನ್ನು ಕಲ್ಪಸಿ ದೋಷಾರೋಪ ಮಾಡುವುದು ಅಸಂಗತ. ಆದ್ದರಿಂದ ಛಲ ಅಸಂಗತಿಯಲ್ಲೇ ಅಂತರ್ಭಾವ ಹೊಂದುತ್ತದೆ.

ಪ್ರಮಾಣ ವಿರುದ್ಧವಾದ ಅರ್ಥದ ಪ್ರತಿಜ್ಞೆಯು ಪ್ರತಿಜ್ಞಾವಿರೋಧ. 'ಸ್ವರೂಪಾಸಿದ್ಧಿ'ಎಂಬ ದೋಷದಿಂದ ಕೂಡಿದ್ದು ಮತ್ತು ವ್ಯಾಪ್ತಿ ರಹಿತವಾದದ್ದು 'ಹೇತುವಿರೋಧ'ವಾಗಿರುತ್ತದೆ. ವಾದಿಗೆ ವಿವಕ್ಷಿತವಾದ ಹೇತುವು ಪಕ್ಷದಲ್ಲಿಲ್ಲದಿರುವುದು 'ಸ್ವರೂಪಾಸಿದ್ಧಿ'. ಸಾಧ್ಯ ಅಥವಾ ಸಾಧನ ಅಥವಾ ಇವೆರಡೂ ದೃಷ್ಟಾಂತದಲ್ಲಿಲ್ಲದಿರುವುದು ದೃಷ್ಟಾಂತವಿರೋಧ.

ಪ್ರತಿಜ್ಞೆಗೆ 'ಪ್ರಬಲಪ್ರಮಾಣ ವಿರೋಧ' ಮತ್ತು 'ಸಮಬಲ ಪ್ರಮಾಣ ವಿರೋಧ' ಎಂದು ಎರಡು ವಿಧ ವಿರೋಧವಿದೆ.

ಅನುಮಾನಕ್ಕೆ ಪ್ರತ್ಯಕ್ಷ ವಿರೋಧ ಬರಲು ಅದು ಸಮಬಲ ಪ್ರಮಾಣವಿರೋಧ, ಮತ್ತೊಂದು ಅನುಮಾನದ ವಿರೋಧವು ಸಮಬಲ ಪ್ರಮಾಣವಿರೋಧವೆನ್ನಿಸಿಕೊಳ್ಳುತ್ತದೆ. ಇದನ್ನೇ "**ಉಪಾಧಿದೋಷ**"ವೆನ್ನುತ್ತಾರೆ.

**ಉಪಾಧಿಃ** ಪ್ರಕೃತವಾದ ಸಾಧ್ಯಕ್ಕೆ ವ್ಯಾಪಕವಾಗಿ ಪ್ರಕೃತವಾದ ಸಾಧನಕ್ಕೆ ಅವ್ಯಾಪಕವಾಗಿರುವುದೇ ಉಪಾಧಿ. ಇದು ವ್ಯಭಿಚಾರಜ್ಞಾನಪ್ರಯೋಜಕವಾಗಿ

ಇರುತ್ತದೆ. ಇದರ ಲಕ್ಷಣ "ಸಾಧ್ಯವ್ಯಾಪಕತ್ವೇ ಸತಿ ಸಾಧನಾವ್ಯಾಪಕತ್ವಂ"ಎಂದು. ಉಪಾಧಿಯು ಸಾಧನಕ್ಕೆ ವ್ಯಾಪಕವಲ್ಲವಾದ್ದರಿಂದ ಪಕ್ಷದಿಂದ ವ್ಯಾವೃತ್ತವಾಗಿ ತನಗೆ ವ್ಯಾಪ್ಯವಾದ ಸಾಧ್ಯವನ್ನು ಪಕ್ಷದಿಂದ ವ್ಯಾವೃತ್ತಿಮಾಡುತ್ತದೆ. ಪರ್ವತವು ಧೂಮವುಳ್ಳದ್ದು ಅಗ್ನಿಯುಳ್ಳದ್ದಾದುದರಿಂದ" ಎನ್ನುವ ಅನುಮಾನದಲ್ಲಿ 'ಹಸೀಕಟ್ಟಿಗೆಯ ಸಂಯೋಗ'ವೆಂಬ ಉಪಾಧಿಯುಳ್ಳದ್ದಾಗಿದೆ. ಹಸೀ ಕಟ್ಟಿಗೆಯ ಸಂಯೋಗವು ಸಾಧ್ಯವಾದ ಧೂಮಕ್ಕೆ ವ್ಯಾಪಕವಾಗಿರುತ್ತದೆ. ಏಕೆಂದರೆ ಹಸೀಕಟ್ಟಿಗೆಯ ಸಂಯೋಗವಿಲ್ಲದೆ ಧೂಮವಿರುದಿಲ್ಲ. ಆದರೆ ಹಸೀಕಟ್ಟಿಗೆಯ ಸಂಯೋಗವು ಅಗ್ನಿ ಇರುವ ಎಲ್ಲಾ ಕಡೆಯಲ್ಲಿಯೂ ಇರಬೇಕಾದುದಿಲ್ಲ. ಆದ್ದರಿಂದ ಹಸೀಕಟ್ಟಿಗೆಯ ಸಂಯೋಗವು ಸಾಧನವಾದ ಅಗ್ನಿಗೆ ಅವ್ಯಾಪಕವಾಗಿದೆ. ಸಾಧನಾವ್ಯಾಪಕವಾದ ಹಸೀಕಟ್ಟಿಗೆಯ ಸಂಯೋಗವು ಪಕ್ಷವಾದ ಪರ್ವತದಿಂದ ವ್ಯಾವೃತ್ತವಾಗಿ ತನಗೆ ವ್ಯಾಪ್ಯವಾದ ದೂಮವನ್ನು ವ್ಯಾವೃತ್ತಿಪಡಿಸುತ್ತದೆ. ಈ ಸನ್ನಿವೇಶವು ಅನುಮಾನಕ್ಕೆ ಸಮಬಲವಾದ ಅನುಮಾನವಿರೋಧವನ್ನು ಹುಟ್ಟಿಸುತ್ತದೆ. "ಅಗ್ನಿಯುಳ್ಳ ಪರ್ವತವು ಧೂಮವುಳ್ಳದ್ದಲ್ಲ, ಅಗ್ನಿಗೆ ಹಸೀಕಟ್ಟಿಗೆ ಸಂಯೋಗವಿಲ್ಲವಾದದ್ದರಿಂದ"ಎಂದು.

## ಅನುಪ್ರಮಾಣ – ಆಗಮ

ನಿರ್ದೋಷವಾದ ಶಬ್ದಕ್ಕೆ ಆಗಮವೆಂದು ಹೆಸರು. ನಿರ್ದೋಷವೆಂದರೆ ಅಜ್ಞಾನ, ಅನ್ಯಥಾಜ್ಞಾನ, ಸಂಶಯ, ಪ್ರಮಾದ, ವಿಪ್ರಲಂಬ ಮೊದಲಾದ ಪುರುಷ ದೋಷರಹಿತವಾದದು ಎಂದು ಅರ್ಥ. ಶಬ್ದವು ವಾಕ್ಯರೂಪವಾಗಿರುತ್ತದೆ. ವಿಭಕ್ತಿಯಲ್ಲಿರುವ ವರ್ಣಗಳಿಗೆ ಪದವೆಂದು ಹೆಸರು. ಆಕಾಂಕ್ಷಾ, ಯೋಗ್ಯತಾ ಮತ್ತು ಸನ್ನಿಧಿ ಇವುಗಳನ್ನೊಳ್ಳಯ ಪದಸಮೂಹಕ್ಕೆ ವಾಕ್ಯವೆಂದು ಹೆಸರು. ಕೇಳುವವನಿಗೆ ಆಕಾಂಕ್ಷಿತವಾದ ಅರ್ಥವನ್ನು ಹೇಳುವುದುಕ್ಕೂ ಮತ್ತು ಹಿಂದಿನ ಪದದಿಂದ ಹುಟ್ಟಿದ ಆಕಾಂಕ್ಷೆಯನ್ನು ಪೂರ್ತಿಮಾಡುವುದಕ್ಕೂ ಆಕಾಂಕ್ಷಾ ಎಂದು ಹೆಸರು. ವಿರಕ್ತನಿಗೆ ವಾಣಿಜ್ಯೋಪದೇಶಮಾಡಿದರೆ ಅವನಿಗೆ ಅದು ಆಕಾಂಕ್ಷಿತವಲ್ಲವಾದ್ದರಿಂದ ಆ ಉಪದೇಶವು ವಾಕ್ಯವಲ್ಲ.ವ್ಯಾಕರಣ ಮರ್ಯಾದೆಯಲ್ಲಿ ವಾಕ್ಯದಂತೆ ಕಂಡರೂ ಆಗಮವಲ್ಲದ್ಧರಿಂದ ವಾಕ್ಯವಲ್ಲ.

ಗೋ, ಅಶ್ವ, ಪುರುಷ, ಹಸ್ತಿ ಈ ಪದಗಳ ಸಮೂಹವೂ ಆಯಾ ಪದಗಳಿಂದ ಹುಟ್ಟಿದ ಆಕಾಂಕ್ಷೆಯನ್ನು ಪೂರ್ತಿಮಾಡುವುದಿಲ್ಲವಾದುದರಿಂದ ವಾಕ್ಯವಲ್ಲ. ಸನ್ನಿಹಿತವಾದ ಅರ್ಥವನ್ನು ಹೇಳುವುದಕ್ಕೂ ಪದಗಳ ಉಚ್ಚಾರಣೆಗೆ ವಿಲಂಬವಿಲ್ಲದಿರುವುದಕ್ಕೂ ಸನ್ನಿಧಿ ಎಂದು ಹೆಸರು. ಚೋಳದೇಶದಲ್ಲಿನ ನೀರುಕುಡಿಯಬೇಕೆಂಬ ಆಶೆಯುಳ್ಳ ಪುರುಷನಿಗೆ ಗಂಗಾನದಿಯಲ್ಲಿ ಶೀತಲವಾದ ಜಲವಿದೆ ಎಂದು ಹೇಳುವುದು ವಾಕ್ಯವಲ್ಲ. ವಿಲಂದಿಂದ ಪದಪ್ರಯೋಗಮಾಡಿದರೆ ಅದು ವಾಕ್ಯವಾಗುವುದಿಲ್ಲ. ಪರಸ್ಪರ ಹೊಂದಾಣಿಕೆಯಾಗುವ ಅರ್ಥವನ್ನು ಹೇಳುವುದಕ್ಕೆ ಯೋಗ್ಯತೆ ಎಂದು ಹೆಸರು. ಬೆಂಕಿಯಿಂದ ತೊಯ್ಯಿಸು ಎನ್ನುವುದು ಪರಸ್ಪರ ಹೊಂದುವುದಿಲ್ಲವಾದ್ದರಿಂದು ಇದು ವಾಕ್ಯವಾಗುವುದಿಲ್ಲ.

ಶಬ್ದವು ಪ್ರತ್ಯಕ್ಷ ಮತ್ತು ಅನುಮಾನದಲ್ಲಿ ಅಂತರ್ಭವಿಸುವುದಿಲ್ಲ. ಆಗಮ ಸರಿಯಾಗಿ ಜ್ಞಾತವಾದರೆ ಮಾತ್ರ ಅರ್ಥಕ್ಕೆ ಬೋಧಕವಾಗುವುದು. ನಿತ್ಯ ಮತ್ತು ಅನಿತ್ಯ ಎಂದು ಆಗಮ ಎರಡು ವಿಧ. ನಿತ್ಯವಾದುದು ವೇದ. ಅನಿತ್ಯವಾದುದು ಪುರಾಣ ಮೊದಲಾದುವು. ವರ್ಣಗಳು ನಿತ್ಯ ಆದರೆ ಪ್ರಬಂಧವು ಎಂದರೆ ವಾಕ್ಯವು ನಿತ್ಯವಾಗಬಹುದು ಅಥವಾ ಅನಿತ್ಯವಾಗಬಹುದು. ವರ್ಣಗಳು ಸರ್ವಗತವಾಗಿವೆ.

## *ಆಗಮಪ್ರಮಾಣದಲ್ಲಿನ ವಿಶೇಷಾಂಶಗಳು*

ಅಶೇಷವಿಶೇಷಗಳನ್ನು ತಿಳಿಸುವುದರಿಂದ ಆಗಮಪ್ರಮಾಣವು ಇತರ ಎಲ್ಲ ಪ್ರಮಾಣಗಳಿಗಿಂತ ಶ್ರೇಷ್ಠವಾದುದು. ಆಗಮವಿಲ್ಲದೆ ಅನುಮಾನ ಪ್ರಯೋಗಮಾಡಲು ಸಾಧ್ಯವಿಲ್ಲ. ಆಗಮವಿಲ್ಲದೆ ಸ್ವಾರ್ಥಾನುಮಾನವಾಗಲೀ ಪರಾರ್ಥಾನುಮಾನವಾಗಲೀ ಸಾಧ್ಯವಲ್ಲ. ಶಬ್ದದಿಂದ ನಿರ್ದೇಶ ಮಾಡಲಾಗದಿದ್ದರೆ ಜ್ಞಾನ, ಜ್ಞೇಯ ಎನ್ನುವ ರೂಪದಲ್ಲಿ ವಸ್ತುಗ್ರಹಣವೇ ಸಾಧ್ಯವಲ್ಲ. ಪ್ರತ್ಯಕ್ಷಜ್ಞಾನದಲ್ಲಿಯೂ ಇದು ಇಂತಹುದೆಂದು ನಿರ್ದೇಶಮಾಡಲು ಆಗಮವೆ ಕಾರಣ. ಆಗಮವೇ ಇಲ್ಲವೆಂದರೆ ಯಾವ ಪ್ರಮಾಣಕ್ಕೂ

ಪ್ರವೃತ್ತಿಯು ಇಲ್ಲವಾಗುತ್ತದೆ. ಆಗಮವಿಲ್ಲದೇ ಜೀವನವೆ ದುಃಸಾಧ್ಯವಾಗುತ್ತದೆ. ಈ ಕಾರಣಗಳಿಂದ ಪ್ರಮಾಣಪ್ರಪಂಚದಲ್ಲಿ ಆಗಮದ ಸ್ಥಾನ ಬಹು ಮುಖ್ಯವಾದುದು. ಅವೈದಿಕರಾದ ಬೌದ್ಧಾದಿಗಳ ಮತ್ತು ವೇದವನ್ನು ಒಂದು ಅವಧಿಯಲ್ಲಿ ಪ್ರಮಾಣವೆನ್ನುವ ನ್ಯಾಯವೈಶೇಷಿಕರೇ ಮೊದಲಾದವರ ವಾದಗಳು ಆಗಮ ಪ್ರಮಾಣದ ಈ ಮಹತ್ವವನ್ನು ಅರಿತಿಲ್ಲ. ಮತ್ತೂ ಆಗಮವು ಅನುಮಾನದಲ್ಲಿ ಅಂತರ್ಭಾವಹೊಂದುತ್ತದೆ ಎನ್ನುವುದಕ್ಕೂ ಈವಿಧವಾದ ಅಜ್ಞಾನವೇ ಕಾರಣವಾಗಿರುವುದು. ಆಗಮವು ಪ್ರಮಾವಲ್ಲ, ಅಪ್ರಧಾನ ಪ್ರಮಾಣ ಎಮದು ಮುಂತಾಗಿ ವಾದಿಸಿದರೂ ಆಯಾ ವಾದಿಗಳು ತಮ್ಮ ಉಪದೇಶದಿಂದಲೇ ಅದರ ಪ್ರಾಧಾನ್ಯವನ್ನು ಎತ್ತಿ ಹಿಡಿಯುವುದುರಿಂದ ಅಂತಹವರ ವಾದಗಳು ಸ್ವವ್ಯಾಹತವಾಗಿರುವುವು.

ಆಗಮವು ಶಬ್ದಾತ್ಮಕವಾದುದು. ಶಬ್ದವು ಅರ್ಥವನ್ನುಳ್ಳದ್ದು. ಶಬ್ದಾರ್ಥವಲ್ಲದ ವಸ್ತುವೇ ಅಸಂಭಾವಿತ. ಒಂದು ಹೊಸ ವಸ್ತುವನ್ನು ನೋಡಿದಾಗ ಅದನ್ನು ತಿಳಿಸುವ ಶಬ್ದ ನಮಗೆ ಗೊತ್ತಿಲ್ಲದಿರಬಹುದು. ಆದರೆ ಅದು ಆ ವಸ್ತುವಿಗೆ ಶಬ್ದವೇ ಇಲ್ಲ ಎನ್ನುವ ಭಾವಕ್ಕೆ ಅವಕಾಶ ಕೊಡುವುದಿಲ್ಲ. ಏಕೆಂದರೆ ನಮಗೆ ಗೊತ್ತಿಲ್ಲದ ಶಬ್ದಕ್ಕೆ ಅದು ವಿಷಯವಾಗಿದೆ ಎಂದು ಅದರ ಅರ್ಥವಾಗಿರುತ್ತದೆ.

ಶಬ್ದವು ಪದರೂಪವಾಗಿದೆ. ಪ್ರತಿವಸ್ತುವೂ ಅರ್ಥ. ಅರ್ಥವು ಶಬ್ದಾರ್ಥ ಅಥವಾ ಪದಾರ್ಥ. ಪ್ರಮೇಯ, ಪದಾರ್ಥ ಇವು ಸಮಾ ನಾರ್ಥಕಗಳು. ಪ್ರಮೇಯವಲ್ಲದ ಪದಾರ್ಥವಿಲ್ಲ. ಪದಾರ್ಥವಲ್ಲದ ಪ್ರಮೇಯವೂ ಇಲ್ಲ.

ಶಬ್ದಕ್ಕೂ ಅರ್ಥಕ್ಕೂ ಸಂಬಂಧವು ಹೇಗಾಯಿತೆಂಬುದು ಒಂದು ಪ್ರಶ್ನೆಯಾಗಿದೆ. ಇದು ಜ್ಞಾನಕ್ಕೂ ಜ್ಞೇಯಕ್ಕೂ ಸಂಬಂಧ ಹೇಗಾಯಿತು ಎಂಬ ಪ್ರಶ್ನೆಗೆ ಸದೃಶವಾಗಿದೆ. ಇವೆರಡೂ ಕೃತಕವಾದರೆ ವಸ್ತು ಜ್ಞೇಯವೂ ಅಲ್ಲ, ಅರ್ಥವೂ ಅಲ್ಲ. ಇದರ ಜೊತೆಯಲ್ಲಿ ಜ್ಞಾನವೂ ಪ್ರಮಾಣವಲ್ಲ; ಶಬ್ದವೂ ಪ್ರಮಾಣವಲ್ಲದೇ ಹೋಗುತ್ತದೆ. ಶಬ್ದಾರ್ಥಗಳ ಸಂಬಂಧವು ಕೃತಕವಾದರೆ ಮೊದಲು ಒಂದು ವಸ್ತುವನ್ನು ಶಬ್ದಕ್ಕೆ ಸಂಬಂಧ ಪಡಿಸುವ ಪ್ರವೃತ್ತಿಯು

ಉಂಟಾಗಲು ಕಾರಣವಿಲ್ಲ. ಅದು ಹೇಗೋ ಒಬ್ಬನಿಂದ ಕಲ್ಪಿತವಾಯಿತು ಎಂದು ಅಂಗೀಕರಿಸಿದರೆ, ಅದು ಇನ್ನೊಬ್ಬರಿಗೆ ತಿಳಿದುದಾದರೂ ಹೇಗೆ? ಅದು ಉಪದೇಶದಿಂದ ಎನ್ನಬೇಕು. ಆ ಉಪದೇಶದಲ್ಲಿನ ಶಬ್ದಕ್ಕೆ ಅರ್ಥ ಹೇಗೆ. ಅದಕ್ಕೆ ಅರ್ಥ ಇರುವುದು ಎಂಬ ಭಾವ ಬರುವುದು ಹೇಗೆ? ಇವನ್ನೆಲ್ಲಾ ಪರ್ಯಾಲೋಚಿಸಿದರೆ ಶಬ್ದಾರ್ಥ ಸಂಬಂಧವು ಜ್ಞಾನಜ್ಞೇಯ ಸಂಬಂಧದಂತೆ ಸ್ವಾಭಾವಿಕ, ಕೃತಕವಲ್ಲ ಎಂದು ತಿಳಿದುಬರುತ್ತದೆ. ಮೇಲೆ ಕಂಡ ವಿಚಾರಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ಮಾಯಾವಾದದ ಚೈತನ್ಯಾತ್ಮಕವಾದ ಜ್ಞಾನವು ಸವಿಷಯವಲ್ಲ, ಶಬ್ದವಾಚಕವಲ್ಲ ಎಂಬ ಕಲ್ಪನೆಯು ನಿರಾಧಾರವಾದುದೆಂದು ತಿಳಿಯುತ್ತದೆ.

ಶಬ್ದವು ವಾಕ್ಯರೂಪವಾಗಿ ವ್ಯಾಪಾರಮಾಡುತ್ತದೆ. ವಾಕ್ಯವಾದರೋ ಪರಸ್ಪರ ಅನ್ವಿತವಾದ ಅನೇಕ ಪದಗಳನ್ನು ಉಳ್ಳದ್ದು. ಶಬ್ದಾರ್ಥಗಳ ಮೂಲಸಂಬಂಧದ ದೃಷ್ಟಿಯಲ್ಲಿ ಒಂದು ಶಬ್ದಕ್ಕೆ ಒಂದೇ ಅರ್ಥ ಮತ್ತು ಒಂದು ಅರ್ಥಕ್ಕೆ ಒಂದೇ ಶಬ್ದವಾಗಿರುವುದು. ಒಂದೊಂದು ಪದದಲ್ಲಿಯೂ ಅನೇಕ ಅವಯುವಗಳಿರುತ್ತವೆ. ಒಂದೊಂದು ಅವಯುವವೂ ಒಂದೊಂದು ಅರ್ಥಕ್ಕೆ ಬೋಧಕವಾಗಿರುತ್ತದೆ.ಇದನ್ನು ತಿಳಿದು ಪದಕ್ಕೆ ಅರ್ಥಮಾಡುವುದಕ್ಕೆ ಯೋಗ ಎಂದು ಹೆಸರು. ಇದು ಈ ಪದವನ್ನು ಈ ಅರ್ಥದಲ್ಲಿ ಪ್ರಯೋಗಿಸಬೇಕು ಎಂಬ ರೂಢಿಯಲ್ಲಿ ಪರ್ಯವಸಾನ ಹೊಂದುತ್ತದೆ. ಇದು ನಿರ್ದೋಷವಾದ ಯೋಗದ ಜ್ಞಾನದಿಂದ ಬಂದುದರಿಂದ ಇದಕ್ಕೆ ವಿದ್ವದ್ರೂಢಿ ಎಂದು ಹೆಸರು. ಈ ನಿರ್ದೋಷವಾದ ಯೋಗಕ್ಕೆ ಮಹಾಯೋಗ ಎಂದು ಹೆಸರು. ಈ ಕ್ರಮದಿಂದ ಬಂದ ಶಬ್ದಾರ್ಥವೇ ಸಾಧುವಾಗಿರುವುದು.

ಮಹಾಯೋಗ ಮತ್ತು ವಿದ್ವದ್ರೂಢಿಯಿಂದ ಸಿದ್ಧವಾದ ಸಬ್ದಾರ್ಥವು ಪೂರ್ಣವಾದುದು. ಬಹುವಾದ ಪ್ರಮುಯೋಗಮಾತ್ರದಿಂದ ಸಿದ್ಧವಾದ ಅರ್ಥಕ್ಕೆ ರೂಢಿ ಎಂದು ಹೆಸರು. ಶಬ್ದಪ್ರವೃತ್ತಿನಿಮತ್ತದಿಂದ ಬಂದ ಅರ್ಥವು ಯೋಗಾರ್ಥ ಅಥವಾ ಪದದ ಅಖಂಡವೃತ್ತಿ ರೂಢಿ. ಅವಯುವವೃತ್ತಿ ಯೋಗ. ಗೌಣೀ ಅಥವಾ ಲಕ್ಷಣಾವೃತ್ತಿಯಿಂದ ಬಂದ ಅರ್ಥ ಅಮುಖ್ಯವಾದುದು.

ಮುಖ್ಯಾರ್ಥದಲ್ಲಿನ ಗುಣದಿಂದ ಕೂಡಿದ ಬೇರೆ ಅರ್ಥದಲ್ಲಿ ಶಬ್ದದ ವೃತ್ತಿಗೆ ಗೌಣೀ ಎಂದು ಹೆಸರು. ಮುಖ್ಯಾರ್ಥ ಸಂಬಂಧವುಳ್ಳ ಮತ್ತೊಂದು ಅರ್ಥದಲ್ಲಿ ಶಬ್ದವೃತ್ತಿಯನ್ನು ಲಕ್ಷಣಾ ಎನ್ನುತ್ತಾರೆ. ಶಬ್ದವೃತ್ತಿ ಎಂದರೆ ಶಬ್ದದ ಸಂಬಂಧ.

ಮಹಾಯೋಗ ಮತ್ತು ವಿದ್ವದ್ರೂಢಿಗೆ ಅನುಗುಣವಾದ ಅರ್ಥವನ್ನು ವೇದಗಳು ಕೊಡುತ್ತವೆ. ಇದಕ್ಕೆ ಅನುಗುಣವಾಗಿ ವೇದಗಳಿಗೆ ಅರ್ಥಮಾಡದಿದ್ದರೆ, ಅದು ಸರಿಯಾದ ಅರ್ಥವನ್ನು ತಿಳಿಸುವುದಿಲ್ಲವಾದ್ದರಿಂದ ಲೌಕಿಕವಾಕ್ಯಗಳಂತಾಗುತ್ತವೆ. ಇದನ್ನು ತಿಳಿಯದೇ ಮಾಡುವ ವೇದವ್ಯಾಖ್ಯಾನವೇ ತತ್ತ್ವಭೇದಕ್ಕೆ ಕಾರಣ.

## *ವೇದಾಪೌರುಷೇಯತ್ವ ಮತ್ತು ಸ್ವತಃ ಪ್ರಾಮಾಣ್ಯತ್ವ ಸಮರ್ಥನೆ*

ವೇದವು, ನಿತ್ಯವಾದ್ದರಿಂದ ಅದಕ್ಕೆ ಉತ್ಪತ್ತಿ ಮತ್ತು ನಾಶಗಳಿಲ್ಲ. "ವಾಚಾ ವಿರೂಪ ನಿತ್ಯಯಾ" ಎಂಬ ವೇದವಾಕ್ಯವೇ ತನ್ನ ನಿತ್ಯತ್ವವನ್ನು ಹೇಳುತ್ತದೆ. ವೇದ ಅಪೌರುಷೇಯ. ಅದು ಯಾರಿಂದಲಾದರೂ ರಚಿತವಾದುದು ಎನ್ನುವುದಕ್ಕೆ ಪ್ರಮಾಣವೇ ಇಲ್ಲ. ಇದು 'ಅದರ ಕರ್ತೃ ಪ್ರಸಿದ್ಧವಲ್ಲ' ಎನ್ನುವ ಹೇತುವಿನಿಂದಲೂ ಸಾಧಿತವಾಗುತ್ತದೆ. ಪ್ರಪಂಚದಲ್ಲಿ ಎಲ್ಲ ವಾಕ್ಯಗಳಿಗೂ ಕರ್ತೃವಿನ ಪ್ರಸಿದ್ಧಿ ಇರುವುದು ಆದರೆ ವೇದಕ್ಕೆ ಮಾತ್ರ ಅದರ ಕರ್ತೃವಿನ ಪ್ರಸಿದ್ಧಿಯಿಲ್ಲ. ಅತಿಪ್ರಾಚೀನವಾದ ಖಂಡನಮಂಡನಗಳಲ್ಲಿಯೂ ವೇದ ಕರ್ತೃರಹಿತ ಎಂಬ ಭಾವವನ್ನು ಅಧಿಕರಿಸಿ ವಾದವಿವಾದಗಳು ನೆಡೆದಿವೆ. ವೇದವು ಕರ್ತೃ ರಹಿತವಾದ್ದರಿಂದ ಅಪೌರುಷೇಯುವಾದುದು. ಈಶ್ವರನು ವೇದಕರ್ತೃವೆನ್ನುವ ನ್ಯಾಯವೈಶೇಷಿಕರ ಈಶ್ವರನೇ ಕಲ್ಪಿತನಾದ್ದರಿಂದ ಅವರ ವಾದದಲ್ಲಿ ಹುರುಳಿಲ್ಲ. ಪುರುಷ ರಚಿತವಾದ ವಾಕ್ಯಗಳಲ್ಲಿ, ಪುರುಷನ ಅಜ್ಞಾನ ಮತ್ತು ವಿಪರೀತಜ್ಞಾನವೇ ಮೊದಲಾದ ದೋಷಗಳು ಕಂಡುಬರುತ್ತವೆ. ಅಪೌರುಷೇಯುವಾದ ವೇದವು ನಿರ್ದೋಷವಾಗಿದೆ. ಈ ಕಾರಣದಿಂದ ವೇದಜನಿತ ಜ್ಞಾನವೂ ಸ್ವಭಾವಿಕವಾಗಿ ಪ್ರಮಾಣವಾಗಿದೆ. ವೇದದ ಪ್ರಮಾಣಸಾಧಕವಾಗಿ ಮತ್ತೊಂದು ಪ್ರಮಾಣದ ಅವಶ್ಯಕತಯೇ ಇರುವುದಿಲ್ಲ. ಒಟ್ಟಿನಲ್ಲಿ ತಿಳಿದು ಬರುವುದೇನೆಂದರೆ ವೇದವು ಅಪೌರುಷೇಯ, ನಿತ್ಯ,

ನಿರ್ದೋಷ ಮತ್ತು ಸ್ವತಃ ಪ್ರಮಾಣ ಎಂದು. ಈ ಅರ್ಥದಲ್ಲಿಯೇ ವೇದಕ್ಕೆ ಶ್ರುತಿ, ಆಮ್ನಾಯ ಮುಂತಾದ ಹೆಸರುಗಳಿವೆ.

## ವೇದಾರ್ಥಕ್ಕೆ ಅನುಕೂಲವಾದ ಪ್ರತ್ಯಕ್ಷ, ಅನುಮಾನಗಳು ಪ್ರಮಾಣ

ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳು ವೇದಾರ್ಥಕ್ಕೆ ಅನುಕೂಲವಾದರೆ ಮಾತ್ರ ಪ್ರಮಾಣವಾಗುತ್ತವೆ. ವೇದಾರ್ಥಕ್ಕೆ ಅನುಕೂಲವಾಗದಿದ್ದರೆ ಪ್ರಮಾಣವಾಗುವುದಿಲ್ಲ.

## ಪ್ರಮಾಣಾಭಾಸಗಳು – ಖ್ಯಾತಿವಾದ

ಪ್ರಮಾಣವನ್ನು ನಿರ್ಧರಿಸುವುದಕ್ಕೆ ಪ್ರಮಾಣಾಭಾಸದ ಜ್ಞಾನ ಅತ್ಯಾವಶ್ಯಕವಾಗಿದೆ. ಪ್ರಮಾಣಾಭಾಸವೆಂದರೆ ಪ್ರಮಾಣವಲ್ಲದಿದ್ದರೂ ಪ್ರಮಾಣದಂತೆ ತೋರುವುದು ಎಂದು ಅರ್ಥ. ಜ್ಞಾನವಲ್ಲದಿದ್ದರೂ ಜ್ಞಾನದಂತೆ ತೋರುವುದು ಕೇವಲ ಪ್ರಮಾಣಾಭಾಸ, ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳಲ್ಲದಿದ್ದರೂ ಅವುಗಳಂತೆ ತೂರವುದು ಅನುಪ್ರಮಾಣಾಭಾಸ. ರಾಗದ್ವೇಷಗಳೇ ಮೂಲವಾಗಿ ಜ್ಞಾನವಲ್ಲದ್ದು ಜ್ಞಾನದಂತೆ ತೋರುವುದು. ತತ್ತ್ವದ ಅಜ್ಞಾನವೇ ರಾಗದ್ವೇಷಗಳ ಮೂಲ. ದೋಷಸಹಿತವಾದ ಇಂದ್ರಿಯ, ಹೇತು ಮತ್ತು ಶಬ್ದ ಇವು ಅನುಪ್ರಮಾಣಾಭಾಸಗಳು.

ಯಥಾರ್ಥಜ್ಞಾನ ಹೇಗೆ ಪ್ರಮಾಣವೋ ಹಾಗೆಯೇ ಅಯಥಾರ್ಥ ಪ್ರಮಾಣಾಭಾಸ. "ಜಗತ್ಸತ್ಯತ್ವವನ್ನು ಪ್ರಮಾಣಜ್ಞಾನ ಸಾಕ್ಷಾತ್ತಾಗಿ ತಿಳಿಸಿಕೊಡುವಂತೆ ಭ್ರಾಂತಿಜ್ಞಾನವು ಅಸಾಕ್ಷಾತ್ತಾಗಿ ಜಗತ್ಸತ್ಯತ್ವವನ್ನು ತಿಳಿಸಿಕೊಡುತ್ತದೆ" ಇದರಿಂದ ಪ್ರಮಾಣಾಭಾಸದ ಜ್ಞಾನ ಅವಶ್ಯಕ ವಾಗಿರುವುದು. ಅಯಥಾರ್ಥವೆಂದರೆ ವಸ್ತುವನ್ನು ಅದಿಲ್ಲದಿರುವಂತೆ

ಗ್ರಹಿಸುವುದು. ಯಾವಾಗಲೂ ವಸ್ತು ಸತ್ ಅಥವಾ ಅಸತ್ತಾಗಿರು ತ್ತದೆ. ಸತ್ ಆದುದನ್ನು ಸತ್ತೆಂದೂ ಅಸತ್ತಾದುದನ್ನು ಅಸತ್ತೆಂದೂ ಗ್ರಹಿಸುವ ಜ್ಞಾನ ಅಥವಾ ಜ್ಞಾನಸಾಧನ ಯಥಾರ್ಥ. ಸತ್ ಆದುದನ್ನು ಅಸತ್ ಎಂದೂ ಅಸತ್ ಆದುದನ್ನು ಸತ್ ಎಂದೂ ಗ್ರಹಿಸುವುದು ಅಯಥಾರ್ಥ. ಅಯಥಾರ್ಥಜ್ಞಾನಕ್ಕೆ ಭ್ರಾಂತಿ, ವಿಪರ್ಯಯ, ಅನ್ಯಥಾಜ್ಞಾನ, ವಿಪರೀತಜ್ಞಾನ ಮುಂತಾದ ಹೆಸರುಗಳಿವೆ. ಉದಾಹರಣೆಗಾಗಿ ಶುಕ್ತಿಯನ್ನು ನೋಡಿ ರಜತವೆಂದು ತಿಳಿಯುವ ಜ್ಞಾನವನ್ನು ತೆಗೆದುಕೊಳ್ಳಬಹುದು. ಶುಕ್ತಿ ಸತ್ ಅದುದು. ರಜತ ಅಸತ್ ಆದುದು. ಈ ಜ್ಞಾನವು ಸತ್ ಆದ ಶುಕ್ತಿಯನ್ನು ಅಸತ್ ಆದ ರಜತವನ್ನಾಗಿ ತಿಳಿಯತ್ತದೆ. ಶುಕ್ತಿಯು ರಜತವಾಗಿ ಅಸತ್ ಅಗಿದೆ. ರಜತವು ಅಸತ್ ಎಂಬ ಆಕಾರದಲ್ಲಿ "ಸತ್" ಆಗಿರುವುದು. ಈ ಜ್ಞಾನವು ಒಂದು ಆಕಾರದಲ್ಲಿ ಅಸತ್ತಾದ ಶುಕ್ತಿಯನ್ನು ಒಂದು ಆಕಾರದಲ್ಲಿ ಸತ್ ಎಂದು ತಿಳಿಯುವುದು. ಈ ಕಾರಣದಿಂದ ಇದು ಭ್ರಾಂತಿ.

### ಭ್ರಾಂತಿ ಹುಟ್ಟುವ ಕ್ರಮ

ನೋಡುವ ಪುರುಷನ ಚಕ್ಷುರಿಂದರಿಯವು ದೋಷಗ್ರಸ್ತವಾಗಿವುದು. ಅವನು ಎದುರು ಇರುವ ಶುಕ್ತಿಯನ್ನು ನೋಡಿ ಅದನ್ನು ‘ಇದು’ಎಂದು ಮಾತ್ರ ಗ್ರಹಿಸಿ ಚಕ್ಷುರಿಂದ್ರಿಯದ ದೋಷದಿಂದ ಶುಕ್ತಿ ಎಂದು ಗ್ರಹಿಸುವುದಿಲ್ಲ. ಈ ಸಂದರ್ಭದಲ್ಲಿ ಶುಕ್ತಿಯಂತೆ ಬೆಳ್ಳಗಿರುವ ರಜತದ ಸಂಸ್ಕಾರವು ಉದ್ಬುದ್ಧವಾಗಿ. ಅದರ ಪ್ರಭಾವದಿಂದ ಪುರುಷನು ‘ಇದು ರಜತ’ಎಂದು ಗ್ರಹಿಸುತ್ತಾನೆ. ಇದೇ ಭ್ರಾಂತಿ. ಪುನಃ ವಿಶೇಷಪರೀಕ್ಷೆಯಿಂದ ಅವನೇ ಶುಕ್ತಿಯನ್ನು ನೋಡಲು ಅವನಿಗೆ ‘ಇದು ಶುಕ್ತಿ’ಎಂಬ ಜ್ಞಾನ ಹುಟ್ಟಿ ತನಗೆ ‘ಅಸತ್ ಆದ ರಜತವು ಪ್ರತಿಭಾತವಾಗಿತ್ತು, ಈ ರಜತಜ್ಞಾನ ಭ್ರಾಂತಿ’ಎಂದು ಗೊತ್ತಾಗುತ್ತದೆ. ‘ಅಸತ್ ಆದ ರಜತ ಪ್ರತಿಭಾತವಾಯಿತು’ ಎನ್ನುವುದೇ ಬಾಧಕಜ್ಞಾನ. ಇದಕ್ಕೇ ‘ಬಾಧ’ಎಂದು ಹೆಸರು. ಕೆಲವು ವೇಳೆ ಕಾರಣಾಂತರದಿಂದ ಬಾಧಜ್ಞಾನವಿದ್ದರೂ ಭ್ರಾಂತಿ ಪರಿಹಾರವಾಗುವುದಿಲ್ಲ. ಉದಾ : ‘ಚಂದ್ರನು ಎರಡು’ಎನ್ನುವ ಭ್ರಾಂತಿ. ಚಕ್ಷುರಿಂದ್ರಿಯ ಜನ್ಯವಾದ ಈ ಭ್ರಾಂತಿಯು ‘ಚಂದ್ರ ಒಂದು’ಎನ್ನುವ

ಪ್ರಾಮಾಣಿಕವಾದ ಜ್ಞಾನವಿದ್ದರೂ ಪರಿಹಾರವಾಗುವುದಿಲ್ಲ. ಇದಕ್ಕೆ 'ಸೋಪಾಧಿಕ ಭ್ರಾಂತಿ'ಎಂದು ಹೆಸರು.

## *ಸತ್ಯವಾದ ಎರಡು ವಸ್ತುಗಳಿಲ್ಲದೆ ಭ್ರಾಂತಿ ಇಲ್ಲ*

ತಪ್ಪಾದ ತಿಳಿವಳಿಕೆಗೆ ವಿಷಯವಾದ ವಸ್ತು ಅಧಿಷ್ಠಾನ. ಅದನ್ನು ಯಾವುದನ್ನಾಗಿ ತಿಳಿದುಕೊಳ್ಳುತ್ತೇವೆಯೋ ಅದು ಸದೃಶವಾದ ವಸ್ತು. ಈ ಎರಡು ಸತ್ಯವಾದ ವಸ್ತುಗಳು ಇಲ್ಲದೆ ಭ್ರಾಂತಿಯುಂಟಾಗುವುದಿಲ್ಲ. ಶುಕ್ತಿ ರಜತ ಭ್ರಾಂತಿಯಲ್ಲಿ ಸತ್ಯವಾದ ಶುಕ್ತಿ ಇರಬೇಕು. ರಜತ ಸಂಸ್ಕಾರಕ್ಕೆ ಕಾರಣವಾದ ರಜತವೂ ಸತ್ಯವಾಗಿರಬೇಕು. ಈ ರೀತಿಯಾಗಿ ಒಂದು ಭ್ರಾಂತಿಗೆ ಎರಡು ಸತ್ಯವಾದ ವಸ್ತುಗಳು ಇರಲೇಬೇಕು. 'ಅಧಿಷ್ಠಾನಂ ಚ ಸದೃಶಂ ತಥ್ಯವಸ್ತುದ್ವಯಂ ವಿನಾ ನ ಭ್ರಾಂತಿಃ' ಎಂದು ಶ್ರೀಮದಾಚಾರ್ಯರು ಹೇಳಿದ್ದಾರೆ. ವಿಚಾರವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡರೆ "ಜಗತ್ಸತ್ಯತ್ವವನ್ನು ಪ್ರಮಾಣಜ್ಞಾನವು ಸಾಕ್ಷಾತ್ತಾಗಿ ತಿಳಿಸಿಕೊಡುವಂತೆ ಭ್ರಾಂತಿಜ್ಞಾನವು ಅಸಾಕ್ಷಾತ್ತಾಗಿ ಜಗತ್ಸತ್ಯತ್ವ ಸಾಧಕವಾಗಿರುವುದು" ಎನ್ನುವ ಅಂಶ ಸ್ಪಷ್ಟಪಡುತ್ತದೆ.

## *ಭ್ರಾಂತಿ ಮೂರುವಿಧ*

ಇಂದ್ರಿಯದೋಷದಿಂದ ಪ್ರತ್ಯಕ್ಷರೂಪವಾದ ಭ್ರಾಂತಿ ಹುಟ್ಟುವಂತೆ ಹೇತುದೋಷದಿಂದ ಭ್ರಾಂತಿರೂಪವಾದ ಅನುಮಿತಿಯೂ ಮತ್ತು ಶಬ್ದದೋಷದಿಂದ ಶಬ್ದ ಜನ್ಯವಾದ ಭ್ರಾಂತಿಯೂ ಹುಟ್ಟುತ್ತವೆ. 'ಅಗ್ನಿ ಅನುಷ್ಣವಾದುದು, ನೀರಿನಂತೆ ಪದಾರ್ಥವಾದುದುರಿಂದ' ಎನ್ನುವುದು ಭ್ರಾಂತಿರೂಪವಾದ ಅನುಮಿತಿಗೆ ಉದಾಹರಣೆ. 'ನದೀತೀರದಲ್ಲಿ ಫಲವಿದೆ' ಎಂಬ ಜ್ಞಾನ ಮೋಸಗಾರನ ವಾಕ್ಯದಿಂದ ಜನ್ಯವಾದ ಭ್ರಾಂತಿಗೆ ಉದಾಹರಣೆ.

ಇದೇ ವಿಧವಾಗಿ ಪ್ರಮಾಣಗಳಲ್ಲಿ ಬಲಾಬಲ ಪ್ರಮಾಣಗಳಿವೆ. ಅನುಮಾನ ಮತ್ತು ಆಗಮಜನ್ಯವಾದ ಜ್ಞಾನಕ್ಕೆ ಪ್ರತ್ಯಕ್ಷದ ವಿರೋಧ ಉಂಟಾದರೆ ಆ ಜ್ಞಾನ ಭ್ರಾಂತಿಯಾಗುತ್ತದೆ. ಪ್ರತ್ಯಕ್ಷಕ್ಕೆ ಜಿಜ್ಞಾಸಿತವಾದ ಅರ್ಥವುಳ್ಳ ಶ್ರುತಿವಿರೋಧ ಉಂಟಾದರೆ ಆ ಜ್ಞಾನ ಭ್ರಾಂತಿಯಾಗುವುದು.

## ***ಇತರವಾದಿಗಳು ಮತ್ತು ಭ್ರಾಂತಿಸ್ವರೂಪ***

ದಾರ್ಶನಿಕರಾದ ವಾದಿಗಳೆಲ್ಲರೂ ತಮ್ಮ ತಮ್ಮ ದರ್ಶನದ ಪ್ರಕ್ರಿಯೆಗೆ ಅನುಸಾರವಾಗಿ ಭ್ರಾಂತಿ ಸ್ವರೂಪವನ್ನು ಚರ್ಚೆಮಾಡಿ ನಿರೂಪಿಸಿದ್ದಾರೆ. ಅವರ ಪರೀಕ್ಷೆ ಎಷ್ಟೇ ಗಹನವಾಗಿದ್ದರೂ ಅದು ತತ್ತ್ವದೃಷ್ಟಿಂದ ಬಂದಿರುವುದಲ್ಲ. ಏಕೆಂದರೆ ಅವರೇ ಕಲ್ಪನೆ ಮಾಡಿದ ಒಂದು ಅರ್ಥವನ್ನು ಸಾಧಿಸುವುದಕ್ಕಾಗಿ ಅವರು ಭ್ರಾಂತಿಯನ್ನು ಉಪಯೋಗಮಾಡಿಕೊಂಡ ರೀತಿಯಾಗಿರುತ್ತದೆ. ಅವರೆಲ್ಲರ ವಾದಗಳನ್ನೂ ಎರಡು ಗುಂಪಾಗಿ ವಿಂಗಡಿಸಬಹುದು. ಬೌದ್ಧ, ಜೈನ ಮತ್ತು ಅದ್ವೈತವು ಯಾವುದಾದರೂ ಒಂದು ಅರ್ಥದಲ್ಲಿ ಪ್ರಪಂಚವು ಸತ್ಯವಲ್ಲವೆಂದು ಸಾಧಿಸುವುದಕ್ಕೂ ಮತ್ತು ನ್ಯಾಯವೈಶೇಷಿಕ, ಸಾಂಖ್ಯಯೋಗ, ಪೂರ್ವಮೀಮಾಂಸಾ ಮತ್ತು ವಿಶಿಷ್ಟಾದ್ವೈತ ಇವರು ಯಾವುದಾದರೂ ಒಂದು ಅರ್ಥದಲ್ಲಿ ಜಗತ್ತಿನ ಸ್ವತಂತ್ರವಾದ ಸತ್ಯತ್ವವನ್ನು ಸಾಧಿಸಲೂ ಭ್ರಾಂತಿಜ್ಞಾನವನ್ನು ಉಪಯೋಗಮಾಡಿ ಕೊಂಡಿದ್ದಾರೆ. ಅವರುಗಳು ತಮ್ಮ ವಾದಕ್ಕೆ ಒಂದು ಪಾರಿಭಾಷಿಕವಾದ ಸಂಜ್ಞೆಯನ್ನೂ ಕೊಟ್ಟಿದ್ದಾರೆ. ಎಲ್ಲವಾದಿಗಳೂ ತಮ್ಮ ಕಲ್ಪನೆ ಸಾಧಿತವಾಗುವ ರೀತಿಯಲ್ಲಿ ಭ್ರಾಂತಿಯನ್ನು ತಿಳಿಯುತ್ತಾರಾಗಲಿ ಭ್ರಾಂತಿಯ ನಿಜವಾದ ಸ್ವರೂಪವನ್ನು ತಿಳಿಯುವುದಿಲ್ಲ. ಜಗತ್ಸತ್ಯವೆಂಬ ವಾದಿಗಳ ಮತದಂತೆ ಜಗತ್ತು ಸತ್ಯವೆಂದರೆ 'ಸ್ವತಂತ್ರ'ವೆಂದು ಅರ್ಥ. ಜಗತ್ತು ಯಾವಾಗಲೂ ಸರ್ವಥಾ ಪರತಂತ್ರವಾದುದು. ಜಗತ್ತನ್ನು ಯಾವ ವಿಧವಾಗಿ ನಿರೂಪಿಣೆಮಾಡಿದರೂ ಅದು ಪರತಂತ್ರವೆಂಬುದಕ್ಕೆ ಅನುಗುಣವಾಗಿರಬೇಕು. ಯಾವುದೇ ರೀತಿಯಿಂದ ವಾದಿಗಳು ಜಗತ್ತನ್ನು ಸತ್ಯವೆಂದರೆ, ಅದು ಅಸತ್ ಆಗುತ್ತದೆ. ಪ್ರಕೃತದಲ್ಲಿ ಜಗತ್ತನ್ನು

ಸತ್ಯವೆಂದರೂ, ಅಸತ್ ಎಂದರೂ ಮಿಥ್ಯ ಎಂದೇ ಪರ್ಯವಸಾನಗೊಳ್ಳುತ್ತದೆ. ಈ ಕಾರಣದಿಂದ ಜಗತ್ಸತ್ಯತ್ವ ವಾದಿಗಳೂ ಜಗನ್ಮಿಥ್ಯಾತ್ವವಾದಿಗಳೇ ಆಗುತ್ತಾರೆ.

## ಅಸತ್ ಖ್ಯಾತಿ

ವಿಜ್ಞಾನವಾದಿಗಳಲ್ಲದ ಬೌದ್ಧರು ಮೊದಲೇ ಎಲ್ಲವೂ ಶೂನ್ಯವೆಂಬ ಕಲ್ಪನೆಯನ್ನು ಮಾಡಿ ಅದನ್ನು ಸ್ಥಾಪಿಸುವುದಕ್ಕೆ 'ಅಸತ್ ಖ್ಯಾತಿ' ಎನ್ನುವ ಹೆಸರಿನಲ್ಲಿ ಶುಕ್ತಿರಜತ ಭ್ರಾಂತಿಯಲ್ಲಿ ತೋರುವ ರಜತದಂತೆ ಅದಕ್ಕೆ ಸಂಬಂಧಿಸಿದ ಶುಕ್ತಿಯೇ ಮೊದಲಾದ ಎಲ್ಲವೂ ಅಸತ್ ಎನ್ನುತಾರೆ. ಇದು 'ಶುಕ್ತಿಮಾತ್ರ ರಜತವಲ್ಲ'ಎಂಬ ಉತ್ತರಕಾಲದ ಜ್ಞಾನದಿಂದ ಬಾಧವಾಗಿರುತ್ತದೆ.

## ಆತ್ಮಖ್ಯಾತಿ

ವಿಜ್ಞಾನವಾದಿಗಳಾದ ಬೌದ್ದರು ಎಲ್ಲವೂ ವಿಜ್ಞಾನವೆಂದು ಸಾಧಿಸುವುದಕ್ಕಾಗಿ, ದೃಷ್ಟಾಂತವಾಗಿ 'ಆತ್ಮಖ್ಯಾತಿ' ಎನ್ನುವ ಹೆಸರಿನಲ್ಲಿ ಜ್ಞಾನವೇ ವಸ್ತುರೂಪವಾಗಿ ಪರಿಣಮಿಸುತ್ತದೆ ಎನ್ನುತ್ತಾರೆ. ಸರ್ವವೂ ಜ್ಞಾನವೇ ಆದರೆ 'ಇದು ವಸ್ತು'ಎಂದು ಜ್ಞಾನದಿಂದ ಭಿನ್ನವಾದ ಭಾವಕ್ಕೆ ಅವಕಾಶವೇ ಇಲ್ಲ ಎಂಬ ಯುಕ್ತಿ ಆತ್ಮಖ್ಯಾತಿಯನ್ನು ಬಾಧಿಸುತ್ತದೆ.

## ನಯಾಭಾಸ

ಜೈನರು ಸರ್ವವೂ ಸಾಪೇಕ್ಷ ಎಂದು ಸಾಧಿಸುವುದಕ್ಕಾಗಿ 'ನಿಷ್ಕೃಷ್ಟವಾದ ಒಂದು ಸ್ವರೂಪವನ್ನು ಉಳ್ಳದ್ದು' ಎಂಬ ಆಕಾರದಲ್ಲಿ ವಸ್ತುವಿನ ಜ್ಞಾನವು ಭ್ರಾಂತಿ ಎನ್ನುತ್ತಾರೆ. ಇದಕ್ಕೆ "ನಯಾಭಾಸ" ಎಂದು ಹೆಸರು. 'ಇದು ಸಾಪೇಕ್ಷ'ಎಂದು ಹೇಳುವಾಗ 'ಇದು' ಎಂಬುದು ನಿಷ್ಕೃಷ್ಟವಾದ ಒಂದು ಸ್ವರೂಪವುಳ್ಳದ್ದಾಗಬೇಕು. ಹಾಗಿಲ್ಲದಿದ್ದರೆ ಸಾಪೇಕ್ಷವೆಂದು ಹೇಳಲು

ಅವಕಾಶವೇ ಇರುವುದಿಲ್ಲ. ಈ ಯುಕ್ತಿಯಿಂದ ಅವರ ವಾದವು ಬಾಧಿತವಾಗಿದೆ.

## *ಅನಿರ್ವಚನೀಯಖ್ಯಾತಿ*

ಮಾಯಾವಾದಿಗಳು ಎಲ್ಲವೂ ಮಿಥ್ಯಾ ಎಂದು ಸಾಧಿಸುವುದಕ್ಕಾಗಿ ಅನಿರ್ವಚನೀಯಖ್ಯಾತಿ ಎನ್ನುವ ಹೆಸರಿನಲ್ಲಿ ಮಿಥ್ಯಾ ಎಂದರೆ ಸತ್ ಅಲ್ಲ, ಅಸತ್ ಅಲ್ಲ, ಸದಸತ್ ಅಲ್ಲ, ಅದು ಅನಿರ್ವಚನೀಯ ಎಂಬ ಕಲ್ಪನೆಯನ್ನು ಮಾಡಿದ್ದಾರೆ. ಶುಕ್ತಿ ರಜತ ಭ್ರಾಂತಿಯಲ್ಲಿ ರಜತವು 'ಇದು ರಜತವಲ್ಲ' ಎನ್ನುವ ಜ್ಞಾನದಿಂದ ಬಾಧಿತವಾಗಿರುವುದರಿಂದ ಸತ್ ಅಲ್ಲ, ಜ್ಞಾನಕ್ಕೆ ವಿಷಯವಾದುದರಿಂದ ಅಸತ್ ಅಲ್ಲ ಮತ್ತು ಒಂದೇ ವಸ್ತುವನ್ನು ಸತ್ ಮತ್ತು ಅಸತ್ ಎಂದು ಹೇಳಿದರೆ ಪರಸ್ಪರ ವಿರೋಧವುಂಟಾಗುವುದರಿಂದ ಅದಸತ್ ಅಲ್ಲ, ಅದು ಅನಿರ್ವಚನೀಯ ಎಂದು ಹೇಳುತ್ತಾರೆ. ಮಯಾವಾದಿಗಳ ಈ ಮಾತು ಒಂದು ವಸ್ತು ಪರಸ್ಪರ ವಿರುದ್ಧವಾದ ನಾನಾ ರೂಪಗಳನ್ನು ಹೊಂದುವುದಿಲ್ಲ ಎನ್ನುವ ಯುಕ್ತಿಯಿಂದಲೂ 'ಅಸತ್ ಆದ ರಜತವು ಪ್ರತಿಭಾತವಾಯಿತು' ಎಂಬ ಉತ್ತರಕಾಲದ ಅನುಭವದಿಂದಲೂ ಬಾಧಿತವಾಗಿದೆ.

## *ಅನ್ಯಥಾಖ್ಯಾತಿ*

ನ್ಯಾಯವೈಶೇಷಿಕರು ಅನ್ಯಥಾಖ್ಯಾತಿ ಎನ್ನುವ ಹೆಸರಿನಲ್ಲಿ ಇಂದ್ರಿಯ ದೋಷದಿಂದೊಡಗೂಡಿದ ರಜತ ಸಂಸ್ಕಾರದಿಂದ ಅಂಗಡಿಯಲ್ಲಿ ನೋಡಿದ ಬೆಳ್ಳಿಯೇ ಶುಕ್ತಿರಜತ ಭ್ರಾಂತಿಯಲ್ಲಿ ಕಾಣುತ್ತದೆ. ಬೆಳ್ಳಿ ಅಸತ್ ಅಲ್ಲ. ಅದು ಭ್ರಾಂತಿಕಾಲದಲ್ಲಿ ಯಾವ ದೇಶಕಾಲದಲ್ಲಿ ಕಾಣುತ್ತದೋ ಆ ಸಂಬಂಧ ಮಾತ್ರ ಅಸತ್. ಈ ಕಾರಣದಿಂದ ಪ್ರಕೃತವಾದ ರಜತವು ಸತ್ಯ ಎನ್ನುತ್ತಾರೆ. ಇದರಿಂದ

ಅಸತಖ್ಯಾತಿ ಮತ್ತು ಅನಿರ್ವಚನೀಯಖ್ಯಾತಿ ಖ್ಯಾತಿಗಳು ತಪ್ಪು ಎಂದು ವಾದಿಸುತ್ತಾರೆ. ನ್ಯಾಯುವೈಶೇಷಿಕರ ಈ ವಾದವು ದೋಷ ಪೂರ್ಣವಾಗಿದೆ. ರಜತವು ತೋರುವ ದೇಶಕಾಲಗಳು ಅಸತ್ ಆದಮೇಲೆ ಆ ದೇಶಕಾಲಗಳ ಸಂಬಂದವುಳ್ಳ ರಜತವೇಕೆ ಅಸತ್ ಆಗಬಾರದು? ಅಂಗಡಿಯಲ್ಲಿ ನೋಡಿದ ರಜತವೇ ಭ್ರಾಂತಿಯಲ್ಲಿ ತೋರುವ ರಜತ, 'ಅದೇ ಇದು' ಎಂದರೆ ಈ ರಜತ ಎನ್ನುವುದು ಒಂದು ದೊಡ್ಡ ಕಲ್ಪನೆ. ಈ ಕಲ್ಪನೆ 'ರಜತ ಅಸತ್' ಎಂಬ ಉತ್ತರಕಾಲದ ಅನುಭವದಿಂದ ಬಾಧಿತವಾಗಿರುವುದು.

## ಅವಿವೇಕಖ್ಯಾತಿ

ಸಾಂಖ್ಯಯೋಗ ದರ್ಶಗಳು ಜಗತ್ತಿನ ಸ್ವತಂತ್ರ ಸತ್ಯತ್ವವನ್ನು ಉಪಪಾದನೆ ಮಾಡಲು ಜಗತ್ತು ಪ್ರಕೃತಿ ಮತ್ತು ಪುರುಷ ಎಂಬ ಎರಡು ಸ್ವತಂತ್ರ ತತ್ತ್ವಗಳನ್ನುಳ್ಳದ್ದೆಂದು ಹೇಳುತ್ತಾರೆ. ಪ್ರಕೃತಿ ಪುರುಷರ ವಿವೇಕ ಎಂದರೆ ಭೇದದ ಜ್ಞಾನ ಪ್ರಮಾಣವೆಂದೂ, ಅವಿವೇಕ ಎಂದರೆ ಅಭೇದ ಜ್ಞಾನ ಭ್ರಾಂತಿ ಎಂದು ತಿಳಿಯುತ್ತಾರೆ. ಪ್ರಕೃತಿ ಪುರುಷರು ಸರ್ವಥಾ ಸ್ವತಂತ್ರವಾಗಿರಬಲ್ಲುವು ಎನ್ನುವುದೇ ಒಂದು ದೊಡ್ಡ ಕಲ್ಪನೆ. ಇದಕ್ಕೆ ಸಾಧಕವಾಗಿ ಜ್ಞಾನಜ್ಞೇಯಗಳನ್ನು ಜ್ಞೇಯವಿಲ್ಲದ ಜ್ಞಾನ, ಜ್ಞಾನವಿಲ್ಲದ ಜ್ಞೇಯ ಎನ್ನುವ ಸಾಂಖ್ಯ ಪರಿಕಲ್ಪನೆ ಅನುಭವಬಾಧಿತವಾಗಿದೆ. ಜ್ಞಾನ ಜ್ಞೇಯಗಳೆಂಬ ಪುರುಷ ಪ್ರಕೃತಿಗಳು ಪರಸ್ಪರ ಸಾಪೇಕ್ಷ ಎಂದರೆ ಪರತಂತ್ರ.

## ಅಖ್ಯಾತಿ

ಪ್ರಾಭಾಕರಮೀಮಾಂಸಕರು ಅಖ್ಯಾತಿ ಎನ್ನುವ ಹೆಸರಿನಲ್ಲಿ, ವಿಜ್ಞಾನವಾದಿಗಳಲ್ಲದ ಬೌದ್ಧರ ಅಸತ್‌ಖ್ಯಾತಿವಾದಕ್ಕೆ ಎದುರಾಗಿ ಜಗತ್ತಿನ ಸ್ವತಂತ್ರವಾದ ಸತ್ಯತ್ವವನ್ನು ಪ್ರತಿಷ್ಠಾಪಿಸಲು 'ಭ್ರಾಂತಿಜ್ಞಾನವೇ ಇಲ್ಲ, ಎಲ್ಲ ಜ್ಞಾನವೂ ಯಥಾರ್ಥ ಎಂದು ವಾದಿಸುತ್ತಾರೆ. ಜ್ಞಾನವು ಗ್ರಹಣ ಅಥವಾ

ಸ್ಮರಣರೂಪವಾಗಿತ್ತದೆ. ಶುಕ್ತಿರಜತಭ್ರಾಂತಿ ಮುಂತಾದ ವ್ಯವಹಾರದ ಪ್ರವೃತ್ತಿ ಹೇಗೆಂದರೆ 'ಸಾಮಾನ್ಯವಾಗಿ ಗ್ರಣವು ಗ್ರಣವಾಗಿಯೂ ಸ್ಮರಣವು ಸ್ಮರಣವಾಗಿಯೂ ಪ್ರತಿಭಾತವಾಗುತ್ತದೆ. ಗ್ರಣವೆಂದರೆ ಪ್ರಮಾಣಜನ್ಯವಾದ ಜ್ಞಾನ. ಸ್ಮರಣವೆಂದರೆ ಸಂಸ್ಕಾರಜನ್ಯವಾದ ಜ್ಞಾನ. ಶುಕ್ತಿರಜತ ಮುಂತಾದ ಪ್ರಕರಣದಲ್ಲಿ ಪುರುಷನು 'ಇದು' ಎನ್ನುವ ಆಕಾರದಲ್ಲಿ ಶುಕ್ತಿಯನ್ನು ಗ್ರಹಿಸತ್ತಾನೆ. ಇಂದ್ರಿಯ ದೋಷದಿಂದ ಸಹಕೃತವಾದ ರಜತಸಂಸ್ಕಾರದ ಮಹಿಮೆಯಿಂದ ರಜತವನ್ನು ಸ್ಮರಿಸುತ್ತಾನೆ. ಈ ದೋಷದಿಂದ ಗಹಣ ಮತ್ತು ಸ್ಮರಣಗಳ ಭೇದದ ಜ್ಞಾನವು ಅವನಿಗೆ ಆಗುವುದಿಲ್ಲ. ಈ ಅಗ್ರಹಣವೇ ಭ್ರಾಂತಿ ಎಂಬ ವ್ಯವಹಾರಕ್ಕೆ ಕಾರಣವಾಗುತ್ತದೆ' ಎಂದು ಹೇಳುತ್ತಾರೆ. ಭ್ರಾಂತಿಯು ಪ್ರಮಾಣಪ್ರಮಿತವಾಗಿರುವುದರಿಂದ ಪ್ರಾಭಾಕರರ ಈ ವಾದ ಸರಿಯಲ್ಲ. 'ಇದು ಶುಕ್ತಿ, ರಜತವಲ್ಲ', 'ನನಗೆ ರಜತಭ್ರಾಂತಿ ಇತ್ತು' ಎನ್ನುವ ಉತ್ತರಕಾಲೀನವಾದ ಅನುಭವವವು ಈ ಕಲ್ಪನೆಯನ್ನು ಬಾಧಿಸುತ್ತದೆ. ಗ್ರಹಣಸ್ಮರಣಗಳ ಭೇದವನ್ನು ಗ್ರಹಿಸುವುದಿಲ್ಲವೆಂದರೂ ಅವುಗಳ ಅಭೇದವನ್ನು ಗ್ರಹಿಸುತ್ತದೆ ಎಂದರೂ ಒಂದೇ ಆಗಿರುತ್ತದೆ. ಅವುಗಳ ಅಭೇಧಗ್ರಹಣವೇ ಭ್ರಾಂತಿ. ಇದು ಅಖ್ಯಾತಿವಾದವನ್ನು ಬಾಧಿಸುತ್ತದೆ.

### ***ಸತ್‌ಖ್ಯಾತಿ***

ವಿಶಿಷ್ಟಾದ್ವೈತಿಗಳ ಅಸತ್‌ಖ್ಯಾತಿವಾದವೂ ಕಲ್ಪನಾಮಯುವಾಗಿದೆ. ಅವರು ಜಗತ್ತಿನ ನಿರ್ವಾಹದಲ್ಲಿ ಜಗತ್ತಿಗೂ ಪಾತ್ರವಿರುವ ಅರ್ಥದಲ್ಲಿ ಜಗತ್ತಿನ ಸ್ವತಂತ್ರಸತ್ಯತ್ವವನ್ನು ಕಲ್ಪಿಸಿಕೊಂಡು ಅದನ್ನು ಸಾಧಿವುದಕ್ಕೆ ಸತ್‌ಖ್ಯಾತಿ ಎನ್ನುವ ಹೆಸರಿನಲ್ಲಿ ಜಗತ್ತಿನ ಸೃಷ್ಟಿವಾದದಲ್ಲಿ ಪಂಚೀಕರಣ ವೆಂಬ ಪಾರಿಭಾಷಿಕವಾದ ಪ್ರಕ್ರಿಯಯನ್ನು ಕಲ್ಪಸಿ, ಅದರ ಬಲದಿಂದ ಎಲ್ಲವೂ ಎಲ್ಲದರಲ್ಲಿರುವುದೆಂದೂ ಕಲ್ಪಸಿ, ಈ ಕಲ್ಪನಾಜಾಲದ ಬಲದಿಂದ ಶುಕ್ತಿಯಲ್ಲಿ ರಜತವಿರುವುದು ಎನ್ನುತ್ತಾರೆ. ಇಂದ್ರಿಯ ದೋಷದಿಂದಲೂ ರಜತಸಂಸ್ಕಾರದ ಬಲದಿಂದಲೂ ರಜತವನ್ನು ಮಾತ್ರ ಗ್ರಹಿಸುತ್ತಾನೆ, ಇದಕ್ಕೇ ರಜತಭ್ರಾಂತಿ ಎಂದು ವ್ಯವಹಾರ, ವಾಸ್ತವವಾಗಿ ಸರ್ವಜ್ಞಾನವೂ ಯಥಾರ್ಥವಾದುದೇ ಎಂದು ತಿಳಿಯುತ್ತಾರೆ.

ಇವರ ಈ ವಾದವು ಕಲ್ಪನಾಮಯವಾಗಿದೆ. ಸರ್ವವೂ ಸರ್ವದಲ್ಲಿರಲು ಜ್ಞಾನತತ್ತ್ವವೇ ಸಿದ್ಧಿಸುವುದಿಲ್ಲ ಏಕೆಂದರೆ ಜ್ಞಾನದ ಒಂದು ಪ್ರಧಾನವಾದ ಕಾರ್ಯ ವಸ್ತುಗಳಲ್ಲಿರುವ ಪರಸ್ಪರ ವೈಲಕ್ಷಣ್ಯವನ್ನು ತಿಳಿಸುವುದಾಗಿದೆ. ವಿಶಿಷ್ಟಾದ್ವೈತಿಗಳ ಸತ್‌ಖ್ಯಾತಿಯು ಜ್ಞಾನತತ್ತ್ವಕ್ಕೆ ಅನುಗುಣವಾಗಿಲ್ಲದಿರುವುದರಿಂದಲೂ, 'ಅಸತ್ತಾದ ರಜತವು ಪ್ರತಿಭಾತವಾಯಿತು' ಎಂಬ ಉತ್ತರಕಾಲದ ಅನುಭವದಿಂದಲೂ ಬಾಧಿತವಾಗಿದೆ.

ಶುದ್ಧವಾದ ಮನಸ್ಸಿನಿಂದ ಸೂಕ್ಷ್ಮರೀತಿಯಲ್ಲಿ ವಿಚಾರಮಾಡಿದರೆ ಮೇಲೆ ತಿಳಿಸಿದ ಎಲ್ಲವಾದಗಳ ವಿಚಾರಧಾರೆ ಏನೆಂದರೆ ಒಟ್ಟಿನಲ್ಲಿ ಅಸತ್ಖ್ಯಾತಿ ಮತ್ತು ಅನಿರ್ವಚನೀಯಖ್ಯಾತಿಗಳಿಗೆ ಅವಕಾಶಕೊಡಬಾರದು ಎನ್ನುವುದು ಈ ವಾದಗಳ ಹೃದಯ ಮತ್ತು ಸ್ವತಂತ್ರವಾದ ಜತ್ಸತ್ಯತ್ವವನ್ನು ಸಾಧಿಸುವುದು ಉದ್ದೇಶ ಎಂದು ತಿಳಿಯುತ್ತದೆ. ಈ ಎರಡೂ ಅಸಂಗತ.

## ಅಭಿನವಾನ್ಯಥಾಖ್ಯಾತಿ

ಪುನಃ ಪುನಃ ವಿಚಾರಮಾಡಲಾಗಿ ಎಲ್ಲವಾದಗಳೂ, 'ಸತ್ ಅದುದನ್ನು ಅಸತ್ ಎಂದೂ ಅಸತ್ ಆದುದನ್ನು ಸತ್ ಎಂದೂ ಗ್ರಹಿಸುವುದನ್ನು ಭ್ರಾಂತಿ'ಎನ್ನುವ ವಸ್ತುತತ್ತ್ವವನ್ನು ಎತ್ತಿಹಿಡಿಯುತ್ತವೆ. ವಿಜ್ಞಾನವಾದಿಗಳಲ್ಲದ ಬೌದ್ಧರ ಅಸತ್‌ಖ್ಯಾತಿಯಲ್ಲಿ ಅಸತ್ ಆದ ರಜತವು ಸತ್ ಆಗಿ ಗೃಹೀತವಾಗುತ್ತದೆ. ವಿಜ್ಞಾನವಾದಿಗಳಾದ ಬೌದ್ಧರ ಆತ್ಮಖ್ಯಾತಿಯಲ್ಲಿ ಜ್ಞಾನರೂಪವಾದ ರಜತವು ಜ್ಞೇಯವಾಗಿ ತಿಳಿಯಲ್ಪಡುತ್ತದೆ. ಜೈನರ ನಯಾಭಾಸದಲ್ಲಿ ಸಾಪೇಕ್ಷವಾದದ್ದು ನಿರಪೇಕ್ಷವಾಗಿ ಗ್ರಹಣವಾಗುತ್ತದೆ. ನ್ಯಾಯವೈಶೇಷಿಕರ ಅನ್ಯಥಾಖ್ಯಾತಿಯಲ್ಲಿ ಒಂದು ದೇಶಕಾಲ ಸಂಬಂಧ ಉಳ್ಳದ್ದು ಮತ್ತೊಂದು ದೇಶಕಾಲ ಸಂಬಂಧ ಉಳ್ಳದ್ದಾಗಿ ತೋರುತ್ತದೆ. ಸಾಂಖ್ಯರ ಅವಿವೇಕಖ್ಯಾತಿಯಲ್ಲಿ ವಿವೇಕ ಉಳ್ಳದ್ದು ಅವಿವೇಕ ಉಳ್ಳದ್ದಾಗಿ ಗೃಹೀತವಾಗುವುದು. ಪ್ರಭಾಕರರ ಅಖ್ಯಾತಿವಾದದಲ್ಲಿ ಭಿನ್ನವಾದ ಗ್ರಣಸ್ಮರಣಗಳು ಅಭಿನ್ನವಾಗಿ ಗೃಹೀತವಾಗುತ್ತವೆ. ಮಾಯಾವಾದಿಗಳ ಅನಿರ್ವಚನೀಯಖ್ಯಾತಿಯಲ್ಲಿ ಮಿಥ್ಯಾಭೂತವಾದ ವಸ್ತು

ಸತ್ತಾಗಿ ತೋರುತ್ತದೆ. ವಿಶಿಷ್ಟಾದ್ವೈತಿಗಳ ಸತ್‌ಖ್ಯಾತಿಯಲ್ಲಿ ಶುಕ್ತಿಯಲ್ಲಿ ಬಹುಭಾಗವುಳ್ಳ ಶುಕ್ತಿಯು ಶುಕ್ತಿಯಲ್ಲವಾಗಿ ಗೃಹೀತವಾಗುತ್ತದೆ ಒಟ್ಟಿನಲ್ಲಿ ಈ ಎಲ್ಲವಾದಗಳು ತಮ್ಮ ತಮ್ಮ ಪ್ರಕ್ರಿಯೆಗಳಿಂದಲೇ ಭ್ರಾಂತಿಯಲ್ಲಿ ಸತ್ ಆದ ವಸ್ತು ಅಸತ್ ಆಗಿಯೂ ಅಸತ್ ಆದ ವಸ್ತು ಸತ್ ಆಗಿಯೂ ಗೃಹೀತವಾಗುತ್ತದೆ ಎನ್ನುವುದನ್ನು ತಿಳಿಸುತ್ತವೆ. ಇನ್ನೊಂದು ವಿಚಾರವೇನೆಂದರೆ ಭ್ರಾಂತಿಯಲ್ಲಿನ ವಸ್ತು ಅಸತ್ ಎಂದ ಮಾತ್ರಕ್ಕೆ ಜಗತ್ತು ಅಸತ್ ಏಕೆ ಆಗಬೇಕು? ಅಸತ್ ಅಸದ್ರೂಪದಲ್ಲಿ ಸತ್ತಾಗಿರುವಾಗ ಅದೇ ಜಗತ್ತನ್ನು ಸತ್ ಎಂದು ಏಕೆ ಸಾಧಿಸಿ ಕೊಡಬಾರದು? ಈ ರೀತಿಯಾಗಿ ಎಲ್ಲ ವಾದಗಳು ಅನುಭವಕ್ಕೂ ವಿರುದ್ಧವಾಗಿವೆ, ಅವುಗಳ ಉದ್ದೇಶವೂ ಅಸಾಧುವಾಗಿ ಮತ್ತು ದುರಾಗ್ರಹಮೂಲಕವಾಗಿದೆ ಎನ್ನುವುದನ್ನು ತಿಳಿಸಿ, 'ಅಯಥಾರ್ಥಜ್ಞಾನವೇ ಭ್ರಾಂತಿ' ಎಂಬ ತತ್ತ್ವವನ್ನು ಎತ್ತಿಹಿಡಿದು ಶ್ರೀಮದಾಚಾರ್ಯರು 'ಆಭಿನವಾನ್ಯಥಾ ಖ್ಯಾತಿ' ಎಂದು ಪಾರಿಭಾಷಿಕವಾಗಿ ಶ್ರುತಪಡಿಸಿದ್ದಾರೆ. 'ಅಭಿನವಾನ್ಯಖ್ಯಾತಿ'ಎನ್ನುವುದು ಶ್ರೀಮದಾಚಾರ್ಯರ ಕಾಲದವರೆಗೆ ಪ್ರಸಿದ್ಧವಾಗಿದ್ದ ನ್ಯಾಯವೈಶೇಷಿಕರ ಅನ್ಯಥಾಖ್ಯಾತಿಯಿಂದ ಇದಕ್ಕೆ ಇರುವ ವೈಲಕ್ಷಣ್ಯವನ್ನೂ ಸೂಚಿಸುತ್ತದೆ ಎಂದೂ ತಿಳಿಯಬಹುದು.

ದೋಷಕ್ಕೆ ವಿಷಯವಾದ ವಸ್ತು ಕಂಡ ಸ್ಥಳದಲ್ಲಿ ಇಲ್ಲ. ಆದರೆ ಅದು ಉಂಟಾದ ವಸ್ತುವಿನ ಆಧಾರವನ್ನು ಪಡೆದಿದೆ. ಭ್ರಾಂತಿಜ್ಞಾನಕ್ಕೆ ಆಶ್ರಯುವಾದ ವಸ್ತುವಿನ ವಿಚಾರವನ್ನು ಪರೀಕ್ಷೆಯಿಂದ ಉಂಟಾಗುವ ಬಾಧಜ್ಞಾನದ ಬೆಳಕಿನಲ್ಲಿ ವಿಮರ್ಶೆಮಾಡಬೇಕು. ಶುಕ್ತಿರಜತದ ಭ್ರಾಂತಿಯಲ್ಲಿ 'ಶುಕ್ತಿಯಲ್ಲಿ ರಜತವಿಲ್ಲ' ಎನ್ನುವಲ್ಲಿ ಬಾಧಕಜ್ಞಾನದ ರೂಪ ಹೀಗಿದೆ – 'ಇಲ್ಲಿ ರಜತವಿಲ್ಲ, ಇಲ್ಲದಿರುವ ರಜತ ಇದ್ದಂತೆ ತೋರಿತು', ಈ ಕಾರಣದಿಂದ ಭ್ರಾಂತಿಜ್ಞಾನಕ್ಕೆ ಆಶ್ರಯುವಾದ (ರಜತ)ವಸ್ತು ಅಲ್ಲಿ ಇಲ್ಲದ ಕಾರಣದಿಂದ ಅದು ಅಸತ್ಯ (ಅತ್ಯಂತ ಅಸತ್). ಆದರೆ ಸತ್ಯವಾದ ರಜತದ ಜ್ಞಾನವು ಭ್ರಾಂತಿಯ ರಜತದ ಸಾದೃಶ್ಯವನ್ನು ಮಾತ್ರ ಹೊಂದಿದೆ. ಈ ಸಾದೃಶ್ಯವೇ ಸತ್ಯವಾದ ರಜತದ ಸ್ಮರಣೆಯನ್ನುಂಟುಮಾಡುತ್ತದೆ. ಶುಕ್ತಿಯಲ್ಲಿರುವ ಚಾಕಚಕ್ಯತೆ ರಜತದ ಭ್ರಾಂತಿಗೆ ಕಾರಣವಾಗಿರುತ್ತದೆ. ಭ್ರಾಂತಿಗೆ ಕಾರಣವಾದ ವಸ್ತು ಇಲ್ಲ ಆದರೆ

ಅಧಿಷ್ಠಾನವಿಲ್ಲದೆ ಭ್ರಾಂತಿಯು ಹುಟ್ಟಲಾರದು. ಏಕೆಂದರೆ ಅಧಿಷ್ಠಾನವೇ ಇಲ್ಲದಿದ್ದರೆ ಜ್ಞಾನದ ಉತ್ಪತ್ತಿಯೇ ಆಗುವುದಿಲ್ಲ. ಆದ್ದರಿಂದ ಭ್ರಾಂತಿ ಉಂಟಾಗುವ ಕಾಲದಲ್ಲಿ ನೇತ್ರೇಂದ್ರಿಯವು ಶುಕ್ತಿಯೊಡನೆ ಸಂಪರ್ಕ ಹೊಂದಿ, ದೋಷದ ಕಾರಣದಿಂದ ಶುಕ್ತಿಯನ್ನು ರಜತ ಎಂದು ಭ್ರಮಿಸುತ್ತದೆ. ಈ ಕಾರಣಗಳಿಂದ ದೃಷ್ಟಿಗೋಚರವಾದ ಅಧಿಷ್ಠಾನ(ಶುಕ್ತಿ)ವೂ, ಸಾದೃಶ್ಯ (ರಜತ)ವೂ ಭ್ರಾಂತಿಗೆ ಕಾರಣವಾದರೂ ಸತ್ಯವಾಗಿವೆ. ಭ್ರಾಂತಿಗೆ ಕಾರಣವಾದ ವಸ್ತು(ರಜತ) ಅಧಿಷ್ಠಾನ(ಶುಕ್ತಿ)ದಲ್ಲಿರುವುದು ಅಸತ್ಯ ವಾದರೂ, ಅಧಿಷ್ಠಾನ ಮತ್ತು ಸದೃಶ ವಸ್ತುಗಳಿಲ್ಲದಿದ್ದರೆ ಭ್ರಾಂತಿ ಉಂಟಾಗುವುದಿಲ್ಲ ಆದ್ದರಿಂದ ಅಧಿಷ್ಠಾನ ಮತ್ತು ಸಾದೃಶ್ಯ ಈ ಎರಡೂ ಸತ್ಯವಾಗಿರಲೇ ಬೇಕು. ಒಟ್ಟಿನಲ್ಲಿ ಶುಕ್ತಿಯಲ್ಲಿರುವ ರಜತದ ಸಾದೃಶ್ಯವೇ ರಜತದ ಭ್ರಾಂತಿಗೆ ಕಾರಣವಾಗಿರುತ್ತದೆ ಎನ್ನುವುದೇ 'ಅಭಿನವಾನ್ಯಥಾಖ್ಯಾತಿ'. 'ಸತ್ಯವಾಗಿಯೂ ವಸ್ತು ಇಲ್ಲದಿರುವ ಕಡೆ, ಅದು ಇರುವುದು' ಎಂಬ ನಿಶ್ಚಯವೇ ಭ್ರಾಂತಿ (ತದಭಾವವತ್ಯೇವ ತತ್ಪ್ರಕಾರಕ ಅವಧಾರಣರೂಪ ಜ್ಞಾನಂ ವಿಪರ್ಯಯಃ) ಎನ್ನುವುದೇ ಸಿದ್ಧಾಂತವಾಗಿರುವುದು.

ಭ್ರಾಂತಿಯ ವಿಚಾರವು ಬಹುವಿಸ್ತಾರವಾಗಿಯೂ ಗಂಭೀರವಾಗಿಯೂ ಗಹನವಾಗಿಯೂ ಇರುವುದು. ಇದರಲ್ಲಿ ವಾದ ವಿವಾದಗಳು ತುಂಬಿ ತುಳುಕಾಡುತ್ತಿವೆ. ಮೇಲೆ ಸಂಕ್ಷೇಪವಾಗಿ ವಿಷಯವು ಸಂಗ್ರಹೀತವಾಗಿದೆ.

ಪ್ರಮಾಣ ಮತ್ತು ಅಪ್ರಮಾಣಜ್ಞಾನ ಮತ್ತು ಅವುಗಳ ಸಾಧನದ ಸ್ವರೂಪವನ್ನು ತಿಳಿದರೆ ಮಾತ್ರ. ಜ್ಞಾನವು ಪ್ರತಿಷ್ಠಿತವಾಗಿ ಶ್ರೇಯಸ್ಸಾಧನವಾಗುತ್ತದೆ. ಈ ವಿಚಾರದ ಬೆಳಕಿನಲ್ಲಿಯೇ ಪ್ರಮೇಯದ ವಿಚಾರವು ಮಾಡಲ್ಪಟ್ಟರೆ ಮಾತ್ರ ಸಾಧುವಾಗಿರುವುದು. ಪ್ರಮಾಣ ವನ್ನು ವಿನಾಕರಿಸಿದ ಪ್ರಮೇಯಜ್ಞಾನವು ಕಲ್ಪನಾಮಯುವಾಗುತ್ತದೆ. ಇದನ್ನು ಚೆನ್ನಾಗಿ ಮನನಮಾಡಿಕೊಂಡು ಪ್ರಮೇಯ ಜ್ಞಾನವನ್ನು ಮಾಡಿಕೊಳ್ಳಬೇಕು.

ಶ್ರೀಕೃಷ್ಣಾರ್ಪಣಮಸ್ತು

# ಪ್ರಮೇಯ ಪ್ರಕರಣ

## *ಪ್ರಮೇಯದ ಸ್ವರೂಪ*

ಪ್ರಮೇಯವೆಂದರೆ ಪ್ರಮಾ ಎಂಬುವುದಕ್ಕೆ ವಿಷಯವಾದದ್ದು ಎಂದು ಅರ್ಥ. ಪ್ರಮಾ ಎಂದರೆ ಯಥಾರ್ಥ ಜ್ಞಾನ. ಪ್ರಮೇಯಕ್ಕೆ ತತ್ತ್ವವೆಂದೂ ಹೆಸರು. ಯಥಾರ್ಥಜ್ಞಾನಕ್ಕೆ ವಿಷಯವಾದದ್ದು ಪ್ರಮಾಣಗಳು ಮತ್ತು ಅವುಗಳಿಂದ ಗೃಹೀತವಾದ ವಿಷಯ ಪ್ರಪಂಚ. ನಾನಾಜಾತಿಯ ವಸ್ತುಗಳನ್ನುಳ್ಳ ಈ ಜಗತ್ತೇ ಪ್ರಮೇಯವಾಗಿರುವುದು.

## *ಜ್ಞಾನ ಮತ್ತು ಜ್ಞೇಯಗಳ ಸಂಬಂಧ*

ಜ್ಞಾನ ಮತ್ತು ಜ್ಞೇಯ ಇವುಗಳ ಡಂಬಂಧದ ವಿಷಯದಲ್ಲಿ ನಾನಾವಾದ ವಿವಾದಗಳಿವೆ. ವಿಜ್ಞಾನವಾದಿಬೌದ್ಧರು 'ಜ್ಞಾನ ಮತ್ತು ಜ್ಞೇಯ ಇವುಗಳಿಗೆ ಸಂಬಂಧವು ಸಾಧ್ಯವಲ್ಲ, ಅವು ಪರಸ್ಪರ ವಿರುದ್ಧ ಎಂದು ತಿಳಿದು ಜ್ಞೇಯವನ್ನು ನಿಷೇಧಿಸಿ ಎಲ್ಲವೂ ಜ್ಞಾನಾತ್ಮಕ ಎನ್ನುತ್ತಾರೆ. ವಿಜ್ಞಾನವಾದಿಗಳ ಈ ವಾದಕ್ಕೆ ಅನುಗಣವಾಗಿ ಸಾಂಖ್ಯ ಮತ್ತು ಯೋಗದರ್ಶಗಳು 'ಪುರುಷನು ಕೇವಲಚೈತನ್ಯ, ಅವನು ಚೈತನ್ಯಕ್ಕೆ ವಿರುದ್ಧವಾದ ಧರ್ಮವುಳ್ಳ ಪ್ರಕೃತಿ ಮತ್ತು ಅದರ ಕಾರ್ಯವನ್ನು ಗ್ರಹಿಸುವುದಿಲ್ಲ ಎಂದು ಸಿನ್ನುತ್ತಾರೆ. ಅದ್ವೈತಿಗಳು ಈ ವಾದವದನ್ನೇ ಮುಂದುವರೆಸಿ ಚೈತನ್ಯವು ಸ್ವಪ್ರಕಾಶವಾದದ್ದೆಂದೂ ಅದೇ ಬ್ರಹ್ಮ ಎಂದೂ ಅದರಿಂದ ಭಿನ್ನವಾಗಿ ತೋರುವ ಎಲ್ಲವೂ ಮಿಥ್ಯಾ ಎನ್ನುತ್ತಾರೆ. ಇವರೆಲ್ಲರ ವಾದಗಳಿಗೂ ಜ್ಞಾನಜ್ಞೇಯಗಳಿಗೆ ಸಂಬಂಧವು ಸಾಧ್ಯವಲ್ಲ ಎನ್ನುವುದೇ ಮೂಲಭೂತವಾದ ಭಾವವಾಗಿರುತ್ತದೆ.

ಮೇಲೆ ನಿರೂಪಿಸಲ್ಪಟ್ಟ ಎಲ್ಲ ವಾದಗಳೂ ಸ್ವವ್ಯಾಹತವಾಗಿವೆ. ಜ್ಞಾನವು ತನ್ನನ್ನು ತಾನು ಗ್ರಹಿಸದಿರಲು 'ಇದು ಜ್ಞಾನ'ಎಂದು ಅದನ್ನು ತಿಳಿಯುವುದಕ್ಕೆ ಅವಕಾಶವೇ ಇರುವುದಿಲ್ಲ. ಜ್ಞಾನ ತನ್ನನ್ನು ತಾನು ಗ್ರಹಿಸುವುದಾದರೆ ಅದು ಜ್ಞೇಯವೂ ಆಗುತ್ತದೆ. ಇದರಿಂದ ಜ್ಞೇಯುವೇ ಇಲ್ಲ ಎನ್ನುವುದು ಅಯುಕ್ತ. ಜ್ಞಾನವು ಸ್ವಪ್ರಕಾಶವೆಂದರೆ ಈ ಭಾವವೇ ಇರುವುದು. ಸ್ವಪ್ರಕಾಶ ಎಂದರೆ ತನ್ನನ್ನು ತಾನು ತಿಳಿಸಿಕೊಡುವುದು ಎಂದು ಅರ್ಥ.

ಅದ್ವೈತಿಗಳು ಈ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸ್ವಪ್ರಕಾಶವೆಂದರೆ ಇತರ ವಸ್ತುವಿನಿಂದ ಪ್ರಕಾಶಿತವಾಗದೆ ಪ್ರಕಾಶರೂಪವಾಗಿರುವುದು ಎನ್ನುತ್ತಾರೆ. ಹೀಗೆ ಹೇಳಿದರೆ 'ಜ್ಞಾನ ಸ್ವಪ್ರಕಾಶ' ಎನ್ನುವಷ್ಟಾದರೂ ಜ್ಞೇಯವಾಗಬೇಕು. ಜ್ಞಾನವು ತನ್ನನ್ನು ತಾನು ಹೇಗೆ ಗ್ರಹಿಸುವುದೋ ಹಾಗೆಯೇ ತನ್ನ ವಿಷಯವನ್ನೂ ಗ್ರಹಿಸುವುದು ಅದರ ಸ್ವಭಾವವಾಗಿದೆ. ಜ್ಞಾನವು ತನ್ನ ವಿಷಯವನ್ನು ತನ್ನಿಂದ ಭಿನ್ನ ಎನ್ನುವ ರೂಪದಲ್ಲಿ ಗ್ರಹಿಸಿದರೂ ಆ ಅಂಶವೂ ಜ್ಞಾನದಿಂದಲೇ ಗೃಹೀತವಾಯಿತು ಎನ್ನುವುದಕ್ಕೆ ಬಾಧಕವಿಲ್ಲ. ಇದು ಎಲ್ಲರ ಅನುಭವ ವೇದ್ಯವಾಗಿರುತ್ತದೆ.

ಈ ವಿಷಯದಲ್ಲಿ ವಾದಿಗಳಿಗೆ ಕಾಣುವ ತೊಂದರೆಯು ಭಿನ್ನ, ವಿರುದ್ಧ ಎಂಬ ಭಾವಗಳ ಸಾಂಕರ್ಯ ದಿಂದಾಗಿರುತ್ತದೆ. ಭಿನ್ನವಾದುದು ವಿರುದ್ಧವಾಗಿ ಇರಬೇಕಾದುದಿಲ್ಲ. ಆದರೆ ವಿರುದ್ಧವಾದದ್ದು ನಿಯಮವಾಗಿ ಭಿನ್ನವಾಗಿ ರುತ್ತದೆ. ಉದಾಹರಣೆಗಾಗಿ ಘಟಪಟಗಳು ಮತ್ತು ತಮಸ್ಸುಪ್ರಕಾಶಗಳನ್ನು ನೋಡೋಣ. ಘಟಪಟಗಳು ಭಿನ್ನ, ಆದರೆ ಅವು ಪರಸ್ಪರ ವಿರುದ್ಧವಲ್ಲ. ಘಟವಿರುವಲ್ಲಿ ಪಟವೂ ಇರಬಹುದು. ತಮಸ್ಸು ಪ್ರಕಾಶಗಳು ವಿರುದ್ಧ. ಇವು ಒಂದು ಇರುವ ಸ್ಥಳದಲ್ಲಿ ಮತ್ತೊಂದು ಇರಲು ಸಾಧ್ಯವೇ ಇಲ್ಲ. ಇವು ಭಿನ್ನವೂ ಆಗಿವೆ.

ಆದರೆ ಜ್ಞಾನಜ್ಞೇಯಗಳು ಭಿನ್ನವಾದರೂ ವಿರುದ್ಧಗಳಲ್ಲ. ಈ ವಿಷಯವೂ ಜ್ಞಾನದಿಂದಲೇ ಸಿದ್ಧವಾಗಿರುವುದು. ಈ ಕಾರಣಗಳಿಂದ ತಿಳಿದುಬರುವುದೇನೆಂದರೆ ಪ್ರಮೇಯದ ಪ್ರಪಂಚವು ಮಯಾವಾದಿಗಳೇ ಮೊದಲಾದ ವಾದಿಗಳು ನಿರೂಪಣೆ ಮಾಡುವುದಕ್ಕಿಂತಲೂ ಬಹು ದೊಡ್ಡದಾದುದು. ಈ ವಿಷಯಗಳನ್ನು ಮನನ ಮಾಡಿದರೆ ಪ್ರಮಾಕ್ಕೆ ಎಂದರೆ ಯಥಾರ್ಥಜ್ಞಾನಕ್ಕೆ ವಿಷಯವಾದುದು ಪ್ರಮೇಯ ಎಂದು ಪ್ರಮೇಯಸ್ವರೂಪ ಸಿದ್ಧವಾಗುತ್ತದೆ.

## *ಪ್ರಮೇಯ ವಿಭಾಗ*

-------------

ಪ್ರಮೇಯಪ್ರಪಂಚದ ವಿಭಾಗಾದಿ ವಿಷಯಗಳನ್ನು ಶ್ರೀಮದಾಚಾರ್ಯರು ತತ್ತ್ವಸಂಖ್ಯಾನ ಮತ್ತು ತತ್ತ್ವವಿವೇಕ ಎನ್ನುವ ಪ್ರಕರಣ ಗ್ರಂಥಗಳಲ್ಲಿ ಸಂಗ್ರಹವಾಗಿ "ಸ್ವತಂತ್ರಂ ಪರತಂತ್ರಂ ಚ ಪ್ರಮೇಯಂ ದ್ವಿವಿಧಂ ಮತಂ|ಸ್ವತಂತ್ರೋ ಭಗವಾನ್ ವಿಷ್ಣುಃ ಭಾವಾಭಾವೋದ್ವಿಧೇತರತ್||" (ಸ್ವತಂತ್ರ ಮತ್ತು ಪರತಂತ್ರ ಎಂದು ಪ್ರಮೇಯ ಎರಡು ವಿಧ. ಸ್ವತಂತ್ರವೇ ಪೂರ್ಣನಾದ ವಿಷ್ಣು. ಮತ್ತೊಂದು ಅಂದರೆ ಪರತಂತ್ರವು ಭಾವ ಮತ್ತು ಅಭಾವ ಎಂದು ಎರಡು ವಿಧ) ನಿರೂಪಣೆ ಮಾಡಿದ್ದಾರೆ. ಇಲ್ಲಿ ತತ್ತ್ವವಿಭಾಗವೇ ಮುಖ್ಯವಲ್ಲ, ಸ್ವತಂತ್ರತತ್ತ್ವದ ಸರ್ವೋತ್ತಮವಾದ ಪ್ರಾಧಾನ್ಯವನ್ನು ಅರ್ಥ ಮಾಡಿಕೊಳ್ಳುವುದೇ ಪ್ರಮೇಯಪ್ರಪಂಚ ವನ್ನು ನಿರೂಪಣೆ ಮಾಡುವುದರಲ್ಲಿನ ಮುಖ್ಯೋದ್ದೇಶ. ಈ ಪ್ರಕರಣದಲ್ಲಿ 'ದ್ವಿವಿಧ' ಎಂಬ ಪದಕ್ಕೆ ಲೋಕರೀತಿಯಂತೆ ತತ್ತ್ವ ದ್ವಿವಿಧ ಎಂದರೆ ತತ್ತ್ವಗಳುಎರಡು ಎಂದು ಅರ್ಥಮಾಡಬಾರದು. ಹೀಗೆ ಮಾಡಿದರೆ ಎರಡು ತತ್ತ್ವಗಳಿಗೂ ಸಮಾನವಾದ ಪ್ರಾಧಾನ್ಯವಿರುವಂತೆ ಭಾಸವಾಗುತ್ತದೆ. ಈ ಮೊದಲೇ ಉಕ್ತವಾಗಿರುವ ಸ್ವತಂತ್ರ ಮತ್ತು ಪರತಂತ್ರ ಎಂಬ ಪದಗಳ ಸ್ವಾರಸ್ಯ ದ್ಯೋತಕವಾಗುವಂತೆ ನಿರೂಪಿಸಬೇಕು. ಏಕೆಂದರೆ ತತ್ತ್ವವಿಚಾರವು ಸ್ವತಂತ್ರತತ್ತ್ವದ ನಿರರ್ಗಳವಾದ ಪ್ರಾಧಾನ್ಯವನ್ನು ನಿರೂಪಣೆಮಾಡುವುದಕ್ಕಾಗಿಯೇ ಪ್ರವೃತ್ತವಾಗಿದೆ. ತತ್ತ್ವವಿಚಾರಮಾಡುವಾಗ ನಿಯಮವಾಗಿ ಎಲ್ಲ ವಾಕ್, ಎಲ್ಲ ಭಾವಗಳೂ

ಪರಬ್ರಹ್ಮನ್ನೇ ಪ್ರತಿಪಾದಿಸಬೇಕು. ಇಲ್ಲಿಯೂ ಸ್ವತಂತ್ರ ಎನ್ನುವುದು ಬ್ರಹ್ಮನ ಪ್ರಾಧಾನ್ಯವನ್ನು ಹೇಳುತ್ತದೆ ಹೀಗೆ ಪರತಂತ್ರವೆಂದರೂ ಅರ್ಥಾತ್ ಬ್ರಹ್ಮನ ಪ್ರಾಧಾನ್ಯವನ್ನೇ ಉದ್ಘೋಷಿಸುತ್ತದೆ. ಈ ಭಾವಕ್ಕೆ ಅನುಗುಣವಾಗಿ ತತ್ತ್ವವು ಎರಡುವಿಧ ಎಂದರೆ ಒಂದೇ ಪರಬ್ರಹ್ಮತತ್ತ್ವವನ್ನು ಎರಡು ರೀತಿಯಾಗಿ ಹೇಳಲು ಬರುತ್ತದೆ ಎಂದು ಅರ್ಥಮಾಡಬೇಕು. ಬ್ರಹ್ಮನೇ ಸತ್ಯ, ಅವನೇ ಪ್ರಮೇಯ, ಅವನೇ ತತತ್ತ್ವ, ಅವನೇ ಜ್ಞೇಯ, ಅವನೇ ವಸ್ತು, ಅವನೇ ಗಮ್ಯ ಮುಂತಾಗಿ ಶ್ರೀಮದಾಚಾರ್ಯರು ತಮ್ಮ ಗ್ರಂಥಗಳಲ್ಲಿ ನಿರೂಪಣೆಮಾಡಿದ್ದಾರೆ. ಪ್ರಕೃತದಲ್ಲಿ ಸ್ವತಂತ್ರ ಎಂದರೆ ಬ್ರಹ್ಮನ ಮಾತೇ ಆಗುತ್ತದೆ, ಪರತಂತ್ರ ಎಂದರೂ ಪರ ಎನ್ನುವುದು ಬ್ರಹ್ಮನ ಮಾತೇ ಅಗಿದೆ. ವಿಚಾರಮಾಡಲಾಗಿ ತಂತ್ರ ಎನ್ನುವ ಪದವೂ ಬ್ರಹ್ಮನ ಕರ್ತೃತ್ವವೆಂಬ ಸ್ವಾತಂತ್ರವನ್ನು ಸಾರುವ ಮಾತಾಗಿರುವುದು. ಮಧ್ವಸಿದ್ಧಾಂತಗತವಾದ ಎಲ್ಲ ಪದಗಳ, ವಾಕ್ಯಗಳ ಅರ್ಥಮಾಡಿಕೊಳ್ಳುವುದಕ್ಕೆ ಶಾಸ್ತ್ರಪರಿಭಾಷಾ ಜ್ಞಾನವು ಅತ್ಯಾವಶ್ಯಕವಾಗಿರುತ್ತದೆ ಎನ್ನುವ ವಿಷಯುವು ಮೇಲೆ ತಿಳಿಸಿದ ವಿಚಾರದಿಂದ ವ್ಯಕ್ತವಾಗುತ್ತದೆ. ಈ ವಿಷಯುವನ್ನು ಶ್ರೀಮದಾಚಾರ್ಯರು ತಮ್ಮ ಗ್ರಂಥಗಳಲ್ಲಿ ಸೂಚಿಸಿದ್ದಾರೆ.

## ಸ್ವತಂತ್ರ ತತ್ತ್ವ

----------

ಯಾವುದಾದರೂ ಒಂದು ವಸ್ತು ಎಂದ ಮಾತ್ರಕ್ಕೆ ಅದಕ್ಕೆ ಸತ್ತಾ (ಇರುವಿಕೆ) ಇರುತ್ತದೆ. ಇರುವಿಕೆಗೆ ಸಂಸ್ಕೃತಭಾಷೆಯಲ್ಲಿ 'ಸತ್ತಾ' ಎನ್ನುತ್ತಾರೆ. ವಸ್ತುವಿಗೆ ಒಂದು ಅಸಾಧಾರಣ ರೂಪವೂ ಇರುತ್ತದೆ. ವಸ್ತುವಿನ ಈ ಅಸಾಧಾರಣ ರೂಪಕ್ಕೆ 'ಸ್ವರೂಪ' ಎಂದು ಹೆಸರು. ವಸ್ತು ಜ್ಞಾನಕ್ಕೆ ವಿಷಯವಾಗುವ ಭಾವವನ್ನು ಹೊಂದಿರುತ್ತದೆ. ಈ ಭಾವಕ್ಕೆ 'ಪ್ರತೀತಿ' ಎಂದು ಹೆಸರು. ವಸ್ತು ಒಂದು ವ್ಯಾಪಾರವದನ್ನು ಮಾಡುತ್ತದೆ. ಈ ವ್ಯಾಪಾರಕ್ಕೆ ಪ್ರವೃತ್ತಿ ಎಂದು ಹೆಸರು. ಯಾವ ವಸ್ತುವಿನ ಸತ್ತಾ, ಸ್ವರೂಪ, ಪ್ರತೀತಿ ಮತ್ತು ಪ್ರವೃತ್ತಿಗಳು ಅದರ ಅಧೀನವಾಗಿರುವವೋ ಅದು 'ಸ್ವತಂತ್ರ'. ಯಾವ ವಸ್ತುವಿನ ಸತ್ತಾ, ಸ್ವರೂಪ, ಪ್ರತೀತಿ ಮತ್ತು ಪ್ರವೃತ್ತಿಗಳು ಅದರಿಂದ ಬೇರೆ ಯಾದುದರ

ಅಧೀನವ್ೋ ಅದು ಅಸ್ವತಂತ್ರ ಅಥವಾ ಪರತಂತ್ರ. ಅಂದರೆ ಪರತಂತ್ರ ಸ್ವತಂತ್ರದ ಅಧೀನ. ಸ್ವತಂತ್ರ ಸ್ವನಿರ್ವಾಹಕ ಮತ್ತು ಪರತಂತ್ರಕ್ಕೂ ನಿರ್ವಾಹಕ. ಸ್ವತಂತ್ರ ಪರತಂತ್ರದ ಸರ್ವಸತ್ತಾ, ಸರ್ವಸ್ವರೂಪ, ಸರ್ವಪ್ರತೀತಿ ಮತ್ತು ಸರ್ವಪ್ರವೃತ್ತಿ ನಿಯಾಮಕ.

ಸ್ವತಂತ್ರ ಲೋಕಸಿದ್ಧವಲ್ಲ. ಈ ಕಾರಣದಿಂದ ಲೋಕಸಿದ್ಧವಾದ ಪ್ರಮಾಣಗಳು ಅದನ್ನು ತಿಳಿಸಿಕೊಡಲು ಸಮರ್ಥವಲ್ಲ. ಲೌಕಿಕಯುಕ್ತಿಗಳಿಂದಲೂ ಅದನ್ನು ತಿಳಿಯಲು ಸಾಧ್ಯವಿಲ್ಲ ಏಕೆಂದರೆ ಲೌಕಿಕಯುಕ್ತಿಗಳು ಎಷ್ಟೇ ಗಹನವಾಗಿ ಕಂಡುಬಂದರೂ ಅವಕ್ಕೆ ಲೌಕಿಕ ಪ್ರತ್ಯಕ್ಷವೇ ಮೂಲವಾಗಿರುವುದು. ಲೋಕದಲ್ಲಿ ಇರುವುವೆಲ್ಲವೂ ಪರತಂತ್ರವಾಗಿವೆ. ಇವೇ ಲೌಕಿಕ ಪ್ರತ್ಯಕ್ಷಕ್ಕೆ ವಿಷಯವಾಗಿರುತ್ತವೆ. ಇದರಿಂದ ಲೌಕಿಕಪ್ರತ್ಯಕ್ಷವನ್ನು ಆಧಾರವಾಗಿವುಳ್ಳ ಯುಕ್ತಿಗಳೆಲ್ಲವೂ ಪರತಂತ್ರ ವಾದ ವಸ್ತುಗಳನ್ನು ಮಾತ್ರವೇ ಗ್ರಹಿಸುತ್ತವಲ್ಲದೆ ಸ್ವ ತಂತ್ರತತ್ತ್ವವನ್ನು ಗ್ರಹಿಸಲು ಅಸಮರ್ಥವಾಗಿರುವುವು.

ಸ್ವತಂತ್ರದ ಸ್ವತಂತ್ರ ಎಂಬ ಭಾವಕ್ಕೆ ಮೂಲ ಪ್ರಮಾಣವಾಗಿರುವುದೇ ವೇದ. ವೇದವು ಅಲೌಕಿಕ ಪ್ರಮಾಣ. ಅದು ಅಪೌರುಷೇಯ. ಸ್ವತಂತ್ರವನ್ನೂ ಅದರ ಮಹಿಮೆಗಳನ್ನೂ ತಿಳಿಸುವುದೊಂದೇ ವೇದದ ಕಾರ್ಯ. ಸ್ವತಂತ್ರ ವೇದೈಕವೇದ್ಯ. ಇದನ್ನೇ 'ಶಾಸ್ತ್ರಯೋನಿ' ಎಂದು ಸಿದ್ಧಾಂತದಲ್ಲಿ ಕರೆಯಲಾಗಿದೆ.

***ಸ್ವತಂತ್ರೋ ಭಗವಾನ್ ವಿಷ್ಣುಃ***

--------------------

ಸ್ವತಂತ್ರ ಸ್ವನಿಯಾಮಕ ಮತ್ತು ಸ್ವೇತರ ಎಂದರೆ ತನ್ನಿಂದ ಬೇರೆಯಾದ ಸರ್ವಕ್ಕೂ ಸರ್ವನಿಯಾಮಕ. ಅವನೇ ಭಗವಾನ್ ಎಂದರೆ ಗುಣಪೂರ್ಣ. ಅವನೇ ವಿಷ್ಣು. ಒಟ್ಟಿನಲ್ಲಿ ವಿಷ್ಣು ಎಂದರೆ ಸ್ವತಂತ್ರ, ಗುಣಪೂರ್ಣ, ಅಲೌಕಿಕ ಮತ್ತು ಸರ್ವವಿಲಕ್ಷಣ ಮತ್ತು ಅವನು ಅಪೌರುಷೇಯುವಾದ ವೇದದಿಂದ ಮಾತ್ರ ತಿಳಿಯಲ್ಪಡತಕ್ಕವನು.

## ಸ್ವತಂತ್ರವೇ ಆತ್ಮಾ

------------

ಸ್ವತಂತ್ರ ತನ್ನನ್ನು ತಾನು ಮಾಡಿಕೊಳ್ಳುತ್ತದೆ. ತನ್ನ ಕಾರ್ಯ ತಾನೆ ಎಂದು ಸ್ವತಂತ್ರದ ಅರ್ಥ. ತನ್ನನ್ನು ತಾನು ಮಾಡಿಕೊಳ್ಳುತ್ತದೆ ಎಂದರೆ ಅದು ಹುಟ್ಟಿದ ವಸ್ತುವಲ್ಲ, ಯಾವಾಗಲೂ ಇರುವುದು ಎಂದು ತಿಳಿಯಬೇಕು. ಯಾವಾಗಲೂ ಇರುವುದು ಎಂದರೆ ಅದು ಎಲ್ಲ ಕಾಲದಲ್ಲಿಯೂ ಇರುವುದು ಎಂದು ಅರ್ಥವಾಗಿ ಅದಕ್ಕೆ ಕಾಲ ಆಶ್ರಯ ಎನ್ನುವ ಭಾವಕ್ಕೆ ಅವಕಾಶವಾಗಿ ಸ್ವತಂತ್ರ ಎನ್ನುವುದಕ್ಕೆ ಹೊಂದುವುದಿಲ್ಲ. ಏಕೆಂದರೆ ಸ್ವತಂತ್ರವು ಕಾಲಾಧೀನವಲ್ಲ. ಕಾಲಾಧೀನವಾಗದೆ ಸ್ವತಂತ್ರ ಇರಬೇಕು. ಸ್ವತಂತ್ರ ಅಲೌಕಿಕವಾದ್ದರಿಂದ ಲೌಕಿಕಾರ್ಥದಿಂದ ಬಾಧಿತವಾಗಬಾರದು. ಸ್ವತಂತ್ರ ಎಂದರೆ ಕಾಲಕ್ಕೆ ಅಧೀನವಾಗದೆ ತಾನೇ ತನಗೆ ನಿರ್ವಾಹಕವಾಗಿ ನಿತ್ಯವಾಗಿರುವುದು. ಇದನ್ನೇ 'ಕಾಲತಃ ಪೂರ್ಣ' ಎನ್ನುವ ಉಕ್ತಿಯು ಹೇಳುವುದು. ಈ ನ್ಯಾಯವನ್ನೇ ಅನುಸರಿಸಿ 'ದೇಶತಃ ಪೂರ್ಣ' ಹಾಗೂ 'ಗುಣತಃ ಪೂರ್ಣ' ಎನ್ನುವುದಕ್ಕೂ ಅರ್ಥಮಾಡಿಕೊಳ್ಳಬೇಕು. ಸ್ವತಂತ್ರ ಅನನ್ಯಾಧೀನ. ಯಾವ ಅರ್ಥಮಾಡಿದರೂ ಸ್ವತಂತ್ರದ ಸ್ವತಂತ್ರತ್ವಕ್ಕೆ ಯಾವ ವಿಧದಲ್ಲಿಯೂ ಕಿಂಚಿತ್ತು ನ್ಯೂನತೆಯನ್ನು ಉಂಟುಮಾಡಿದರೂ ಅದು ದೋಷವೇ ಆಗುತ್ತದೆ. ಸ್ವತಂತ್ರವು ನಿರ್ದೋಷ ಮತ್ತು ಸ್ವಮಹಿಮೆಯಿಂದಲೇ ಗುಣಪೂರ್ಣ. ಇದನ್ನೇ ಶ್ರುತಿಗಳನ್ನು ಅನುಸರಿಸಿ ಶಾಸ್ತ್ರದಲ್ಲಿ ದೇಶತಃಪೂರ್ಣ, ಕಾಲತಃಪೂರ್ಣ ಮತ್ತು ಗುಣತಃಪೂರ್ಣ ಎಂದು ಕರೆದಿದ್ದಾರೆ. ಈರೀತಿಯಾಗಿ ಪೂರ್ಣವಾದ ವಸ್ತುವನ್ನೇ 'ಆತ್ಮಾ' ಎಂದು ಶ್ರುತಿ ಕರೆಯುತ್ತದೆ. ಇದರಿಂದ ಸ್ವತಂತ್ರ ಎಂದರೆ ಆತ್ಮಾ, ಆತ್ಮಾ ಎಂದರೆ ಸ್ವತಂತ್ರ ಎಂದು ಅರ್ಥವಾಗುವುದು. ಈ ಕಾರಣದಿಂದ ಆತ್ಮಾ ಎಂದರೆ ಸ್ವಾಮೀ ಎಂದು ವೈದಿಕಸಂಪ್ರದಾಯದಲ್ಲಿ ಕರೆಯುತ್ತಾರೆ.

## ಸ್ವತಂತ್ರವೇ ಸರ್ವೋತ್ತಮ

----------------

ಸ್ವತಂತ್ರ ತಾನೇ ತಾನಾಗಿರುವುದು. ಅದರ ಜೊತೆಯಲ್ಲಿ ಮತ್ತೊಂದು ಇರುವುದಿಲ್ಲ. ಮತ್ತೊಂದು ಇರುವುದಾದರೆ ಅದೂ ಸ್ವತಂತ್ರವಾಗಬೇಕು. ಆದರೆ

ಎರಡು ಸ್ವತಂತ್ರಗಳು ಇದ್ದರೆ ಪರಸ್ಪರ ಬಾಧಿತವಾಗುತ್ತವೆ. ಹೀಗೆ ಸ್ವತಂತ್ರವು ಸರ್ವೋತ್ತಮ ಎನ್ನುವ ಅರ್ಥದಲ್ಲಿ ಅದನ್ನು ಅದ್ವೈತ ಎಂದು ಕರೆಯುವುದು. ಅದ್ವೈತ ಎಂದರೆ ಒಂದು. ಅದೇ ಸರ್ವೋತ್ತಮ ಮತ್ತು ಸರ್ವಕಾರಣ.

## *ಸ್ವತಂತ್ರ ಸರ್ವಥಾ ಅಸ್ವತಂತ್ರಕ್ಕೆ ಸಮವಲ್ಲ, ಅದರಿಂದ ವಿಲಕ್ಷಣ*

-----------------------------------------

ಸ್ವತಂತ್ರದ ಜೊತೆಯಲ್ಲಿ ಅಸ್ವತಂತ್ರ ಇರಬೇಕಾದ ನಿಯಮವಿದೆ. ಸ್ವತಂತ್ರ ಎಂದ ತಕ್ಷಣವೇ ಅಸ್ವತಂತ್ರ ಅದರ ಛಾಯಾರೂಪವಾಗಿ ತೋರುವುದು. ಅಸ್ವತಂತ್ರ ಸ್ವತಂತ್ರಕ್ಕೆ ಉಪಪಾದಕವಾದುದು. ಒಂದು ವೇಳೆ ಸ್ವತಂತ್ರದ ಜೊತೆಯಲ್ಲಿ ಅಸ್ವತಂತ್ರವನ್ನು ನಿಷೇಧ ಮಾಡಿದರೆ ಆಗ ಸ್ವತಂತ್ರ ಎನ್ನುವುದು ಅರ್ಥಹೀನವಾಗುತ್ತದೆ. ಸ್ವತಂತ್ರಕ್ಕೆ ಉಪಪಾದಕವಾದ ಅಸ್ವತಂತ್ರ ಸರ್ವಥಾ ಅಸ್ವತಂತ್ರವಾಗಿರಬೇಕು. ಅಸ್ವತಂತ್ರದಿಂದ ಪೂರ್ತಿಯಾಗಿ ವಿಲಕ್ಷಣನಾದವನೇ ವಿಷ್ಣು, ಭಗವಾನ್, ಆತ್ಮಾ.

## *ಸ್ವತಂತ್ರ ಪರತಂತ್ರಗಳ ವಿವೇಕ ಸರ್ವಥಾ ಅನಿವಾರ್ಯ*

---------------------------------

ಸ್ವತಂತ್ರ ಪರತಂತ್ರಗಳ ವಿವೇಕ ಸರ್ವರಿಗೂ ವಿಹಿತವಾದದ್ದು. ಪರತಂತ್ರವಾದ ಈ ಜಗತ್ತಿನಲ್ಲಿ ಇದನ್ನು ತಿಳಿಯುವುದರಲ್ಲಿ ಯಾರಿಗೂ ವಿನಾಯಿತಿ ಇಲ್ಲ. ಏಕೆಂದರೆ ಸ್ವತಂತ್ರವಾಗಿ ನಾನು ಕಾರ್ಯ ಮಾಡುತ್ತೇನೆ ಎಂದು ತಿಳಿದವನು ಭ್ರಾಂತ. ವಿಚಾರಮಾಡಿದರೆ ತಾನು ಎಷ್ಟು ಪರಾಧೀನ ಎನ್ನುವುದು ಅವನಿಗೇ ತಿಳಿಯುತ್ತದೆ. ತಾನು ಪರತಂತ್ರ ಎಂದು ತಿಳಿದವರ ಮಾತೇ ಬೇರೆ. ಪರತಂತ್ರ ಎನ್ನುವುದನ್ನು ಎರಡು ಬಗೆಯಾಗಿ ಅರ್ಥಮಾಡಿಕೊಳ್ಳಬಹುದು. ಮೊದಲು ಉಸಿರಾಡುವ ಕ್ರಿಯೆಯಿಂದ ಪ್ರಾರಂಭವಾದ ಅವನ ಕ್ರಿಯೆಯು ತನ್ನಿಂದ ಇತರವಾದ ವಸ್ತುಗಳ ಸಹಾಯದಿಂದಾಗುವುದನ್ನು ತಿಳಿಯುವುದರಿಂದ ತಾನು ಪ್ರತ್ಯಂಶದಲ್ಲಿಯೂ ಪರಾಧೀನ ಎನ್ನುವ ಅಂಶ ಗೋಚರವಾಗುತ್ತದೆ. ಎರಡನೆಯದಾಗಿ ತನಗೆ ಅನ್ವಯವಾದ ನ್ಯಾಯವೇ ತನ್ನಿಂದ ಇರತರರಾದವರಿಗೂ ಅನ್ವಯವಾಗುವುದು ಎಂದು ತಿಳಿದಾಗ ಈ ಜಗತ್ತೇ

ಪರಾಧೀನವೆಂಬ ಅರಿವು ಉಂಟಾಗಿ, ಈ ಎಲ್ಲಕ್ಕೂ ನಿಯಾಮಕವಾದುದೇ ಸ್ವತಂತ್ರ ಎಂದು ತಿಳಿಯುತ್ತಾನೆ.. ಈ ಸ್ವತಂತ್ರವೇ ತನಗೆ ಸಂಭವಿಸುವ ಪ್ರತಿ ಅನುಭವಕ್ಕೂ ಮತು ಕ್ರಿಯೆಗಳಿಗೂ ನಿಯಾಕವೆನ್ನುವುದನ್ನು ವಿಚಾರದಿಂದ ತಿಳಿದು, ತಾನು ಮತ್ತು ತಾನಿರುವ ಈ ಜಗತ್ತೆಲ್ಲವೂ ಸರ್ವಥಾ ಪರಾಧೀನ ಎಂದು ತಿಳಿಯುತ್ತದೆ. ಈ ರೀತಿಯಾಗಿ ತಿಳಿದವನಿಗೆ ಅಹಂಕಾರ ಮಮಕಾರಗಳು ಉಂಟಾಗುವುದಿಲ್ಲ.

***ಭೇದ***

----

ಸ್ವತಂತ್ರ ಪರತಂತ್ರಗಳ ವಿವೇಕ ಎಂದರೆ ಪರತಂತ್ರದಿಂದ ಸ್ವತಂತ್ರ ವಿಲಕ್ಷಣ ಎನ್ನುವ ಭಾವ. ಈ ವೈಲಕ್ಷಣ್ಯವನ್ನೇ ಭೇದ ಎಂದು ಶಾಸ್ತ್ರದಲ್ಲಿ ಕರೆಯುತ್ತಾರೆ. ಭೇದದ ವಿಷಯದಲ್ಲಿ ವಾದಿಗಳಲ್ಲಿ ಅಭಿಪ್ರಾಯ ಭೇದವಿರುತ್ತದೆ.

***ಭೇದದ ವಿಷಯದಲ್ಲಿ ವಿವಿಧ ದರ್ಶನಗಳು ಮತ್ತು ಅವುಗಳಲ್ಲಿರುವ ದೋಷ***

---------------------------------------------

ವಾದಿಗಳಲ್ಲಿ ಭೇಧ ಎಂಬ ಭಾವದಲ್ಲಿ ಅಭಿಪ್ರಾಯ ಭೇದವಿದೆ. ನ್ಯಾಯವೈಶೇಷಿಕರು ಭೇದವೆಂದರೆ 'ಇದು ಅದಲ್ಲ', 'ಅದು ಇದಲ್ಲ' ಎಂಬ ರೂಪದಲ್ಲಿ ಎರಡು ಸ್ವತಂತ್ರವಸ್ತುಗಳಲ್ಲಿಇರುವ ಪರಸ್ಪರ ಸ್ವರೂಪ ನಿಷೇಧ ಎನ್ನುತ್ತಾರೆ. ಇದಕ್ಕೇ ಅವರು ಅನ್ಯೋನ್ಯಾಭಾವ ಎಂದೂ ಕರೆಯುತ್ತಾರೆ. ಅವರ ಪ್ರಕ್ರಿಯೆ ಯಲ್ಲಿ ಭೇದವಿದ್ದರೂ ದ್ರವ್ಯಗುಣಗಳಂತೆ ಆಶ್ರಯ ಆಶ್ರಯಿಭಾವವಿರಬಹುದು. ಇದರಿಂದ ಅವರ ವಾದ ಸರಿಯಲ್ಲ. ಸಾಂಖ್ಯಯೋಗದಲ್ಲಿ ಪ್ರಕೃತಿಪುರುಷರ ಭೇದವು ವಿವೇಕ ಎಂದು ವ್ಯವಹೃತವಾಗಿದೆ. ಪೂರ್ವಮೀಮಾಂಸಾ ಮತ್ತು ವಿಶಿಷ್ಟಾದ್ವೈತಗಳಲ್ಲಿಯೂ ಪದಾರ್ಥಗಳಿಗೆ ಪರಸ್ಪರ ಭೇದವು ಅಂಗೀಕೃತ ವಾಗಿದೆ. ವಿಶಿಷ್ಟಾದ್ವೈತದಲ್ಲಿ ಭೇದವಿದ್ದರೂ ಪದಾರ್ಥಗಳು ದ್ರವ್ಯ ಮತ್ತು ಅದ್ರವ್ಯದಂತೆ ಶೇಷ ಶೇಷಿಭಾವವನ್ನು ಹೊಂದಬಹುದು ಎಂಬ ವಾದವಿದೆ. ಶೇಷಶೇಷಿಭಾವವಿದ್ದರೂ

ಭೇದವಿರುವ ವಸ್ತುಗಳು ಒಂದು ಅರ್ಥದಲ್ಲಿ ಸ್ವತಂತ್ರವಾಗಿ ಇರಬಹುದು. ವಿಶಿಷ್ಟಾದ್ವೈತಿಗಳು ಸೂಕ್ಷ್ಮಚಿದಚಿದ್ವಸ್ತುಗಳು

ಪರಮಾತ್ಮನ ಶರೀರದಂತಿದ್ದು ಜಗತ್ಕಾರಣವಾಗುವುದು ಎನ್ನುತ್ತಾರೆ. ಅದರೆ ಈ ಸೂಕ್ಷ್ಮಚಿದಚಿದ್ವಸ್ತುಗಳು ಪರಮಾತ್ಮನಿಂದ ನಿರ್ಮಿತವಲ್ಲ ಆದರೂ ಅವು ಪರಮಾತ್ಮನ ಶೇಷ. ಶೇಷ ಅಂದರೆ ಅಧೀನ. ಪರಮಾತ್ಮನಿಂದ ನಿರ್ಮಿತವಲ್ಲದಿದ್ದರೂ ಅವು ಅವನ ಅಧೀನ ಎಂದು ಇದರ ತಾತ್ಪರ್ಯ. ಈ ಪ್ರಕ್ರಿಯೆ ಯಲ್ಲಿ ಪರಮಾತ್ಮನಿಂದ ನಿರ್ಮಿತವಲ್ಲದೆ ಇರುವುದು ಎನ್ನುವುದರಿಂದಲೇ ಅದು ಇರುವಿಕೆಯಲ್ಲಿ ಸ್ವತಂತ್ರ ಎಂದು ಅರ್ಥವಾಗುತ್ತದೆ. ಅನೇಕ ಸ್ವತಂತ್ರ ವಸ್ತುಗಳು ಎನ್ನುವುದು ಅರ್ಥಹೀನವಾದ ಮಾತು. ಸಿದ್ಧಾಂತದಲ್ಲಿ ಸ್ವತಂತ್ರ ಒಂದು ಮಿಕ್ಕದ್ದೇಲ್ಲವೂ ಪರತಂತ್ರ. ಹಾಗೂ ಸ್ವತಂತ್ರ ಸರ್ವಥಾ ಸ್ವತಂತ್ರ ಮತ್ತು ಪರತಂತ್ರ ಸರ್ವಥಾ ಪರತಂತ್ರ. ಈ ವಿಧವಾದ ಸ್ವತಂತ್ರ ಪರತಂತ್ರ ಭಾವವು ವಿಶಿಷ್ಟಾದ್ವೈತದ ಶೇಷಶೇಷಿಭಾವದಂತೆ ಅಲ್ಲ. ಶೇಷಶೇಷಿಭಾವದಲ್ಲಿ ವಸ್ತುಗಳ ಸತ್ತಾ ಸ್ವತಂತ್ರ. ಆದರೆ ಸ್ವತಂತ್ರಪರತಂತ್ರಗಳ ಭಾವದಲ್ಲಿ ಸ್ವತಂತ್ರದ ಸತ್ತಾ ಸ್ವತಂತ್ರ, ಪರತಂತ್ರದ ಸತ್ತಾ ಪರತಂತ್ರ. ಸತ್ತಾ ಪರತಂತ್ರವೆಂದರೆ ಅದು ಸ್ವತಂತ್ರದಿಂದ ಉತ್ಪನ್ನ, ಸೃಷ್ಟ ಅಥವಾ ದತ್ತ ಎಂದು ಅರ್ಥ. ಈ ಭಾವವು ವಿಶಿಷ್ಟಾದ್ವೈತಕ್ಕೆ ತೀರಾ ಅಪರಿಚಿತ. ಅವರ ಶೇಷಶೇಷಿಭಾವದಲ್ಲಿ ಈ ವಿಧವಾದ ಭಾವವಿರುವುದಾದರೆ ಜಗತ್ತಿನ ಕಾರಣ ಸೂಕ್ಷ್ಮರೂಪದಲ್ಲಿ ಚಿದಚಿದ್ವಿಶಿಷ್ಟನಾದ ಪರಮಾತ್ಮ ಎನ್ನುವ ಉಕ್ತಿ ಅಯುಕ್ತವಾಗುತ್ತದೆ. ವಿಶಿಷ್ಟವೆಂದಲ್ಲಿ ವಿಶೇಷಣ ವಿಶೇಷ್ಯಗಳಿಗೆ ಸಮಭಾವ ಅಥವಾ ಸ್ವತಂತ್ರ ಭಾವವಿರುವುದು.

ಶ್ರೀಮದಾಚಾರ್ಯರ ಉಕ್ತಿಯಂತೆ ಒಂದು ವಸ್ತುವನ್ನು ಮೂರು ವಿಧವಾಗಿ ಇರುವುದನ್ನಾಗಿ ತಿಳಿಯಬಹುದು. ಈ ಇರುವಿಕೆಯೇ ಸತ್ತಾ, ಸ್ವರೂಪ, ಪ್ರಮಿತಿ ಮತ್ತು ಪ್ರವೃತ್ತಿ. ಸ್ವರೂಪ ಎಂದರೆ ವಸ್ತುವಿನ ಅಸಾಧಾರಣ ಭಾವ. ಅದು ವಸ್ತುವನ್ನು ಅದನ್ನಾಗಿ ಮಾಡುವ ಭಾವ. ಪ್ರಮಿತಿ ಎಂದರೆ ಅದು ಜ್ಞಾನಕ್ಕೆ ವಿಷಯ ಎನ್ನುವ ಭಾವ. ಪ್ರವೃತ್ತಿ ಎಂದರೆ ಅದರದೇ ಆದ ವ್ಯಾಪಾರ ಎಂದರೆ

ಕ್ರಿಯೆ. ಈ ಮೂರು ವಿಧವನ್ನು ಬಿಟ್ಟು ಬೇರೆ ರೂಪದಲ್ಲಿ ವಸ್ತುವನ್ನು ತಿಳಿಯಲು ಸಾಧ್ಯವೇ ಇಲ್ಲ. ಯಾವುದರ ಸ್ವರೂಪ, ಪ್ರಮಿತಿ, ಪ್ರವೃತ್ತಿ ಸತ್ತಾಗಳು ಅದರ ಸ್ವಾಧೀನವೋ ಅದು ಸ್ವತಂತ್ರ. ಯಾವುದರ ಸತ್ತಾ, ಪ್ರತೀತಿ, ಸ್ವರೂಪ ಮತ್ತು ಪ್ರಮಿತಿಗಳು ಪರಾಧೀನವೋ ಅದು ಪರತಂತ್ರ. ಇದೇ ಸ್ವತಂತ್ರ ಪರತಂತ್ರಗಳಿಗಿರುವ ಭೇದ ಅಥವಾ ಸ್ವತಂತ್ರ ಪರತಂತ್ರಗಳಿಗಿರುವ ವೈಲಕ್ಷಣ್ಯ. ಪರತಂತ್ರಗಳಲ್ಲಿ ಪರಸ್ಪರ ಭೇದವಿದ್ದರೂ ಅದು ಅವುಗಳ ಸ್ವಾತಂತ್ರಕ್ಕೆ ಸಾಧಕವಲ್ಲ ಏಕೆಂದರೆ ಅದೂ ಪರತಂತ್ರವೇ ಆಗಿರುವುದು.

## ಭೇದದ ವಿಷಯದಲ್ಲಿ ಅದ್ವೈತವಾದ

-----------------------

ಅದ್ವೈತಿಗಳು ಭೇದ ಸತ್ಯವಾದರೆ ನಿರ್ವಾಹ ಕಷ್ಟ ಆದ್ದರಿಂದ ಮಿಥ್ಯಾ ಎನ್ನುತ್ತಾರೆ. ಉದಾಹರಣೆಗಾಗಿ ಘಟಪಟಗಳ ಭೇದವನ್ನು ತೆಗೆದುಕೊಳ್ಳಬಹುದು. ಘಟದಿಂದ ಪಟದ ಭೇದವೇ ಬೇರೆ, ಪಟದಿಂದ ಘಟದ ಭೇದವೇ ಬೇರೆ. ಪಟದಿಂದ ಘಟಕ್ಕಿರುವ ಭೇದ ಘಟದ ಧರ್ಮ. ಘಟ ಧರ್ಮಿ. ಭೇದ ಧರ್ಮ. ಅದುದರಿಂದ ಅದು ಘಟದಿಂದ ಭಿನ್ನ ಎಂದರೆ ಘಟಕ್ಕೂ ಘಟದ ಭೇದಕ್ಕೂ ಭೇದವನ್ನು ಒಪ್ಪಬೇಕು. ಇದೇ ನ್ಯಾಯವೇ ಪಟಕ್ಕೂ ಅನ್ವಯಿಸುತ್ತದೆ. ಮತ್ತೆ ಇದೇ ನ್ಯಾಯದಿಂದ ಘಟಕ್ಕೂ ಅದರ ಭೇದದಿಂದ ಘಟಪಟಭೆದಕ್ಕೂ ಭೇದವನ್ನು ಒಪ್ಪಬೇಕು. ಹೀಗೆ ಒಂದು ಭೇದದ ನಿರ್ವಾಹಕ್ಕೆ ಅನಂತ ಭೇದಗಳನ್ನು ಒಪ್ಪಿದರೂ ಮೊದಲಿನ ಘಟಪಟಭೇದವು ಸಿದ್ಧವಾಗುವುದಿಲ್ಲ. ಈ ರೀತಿಯಾದ ಅನಂತ ಕಲ್ಪನೆಯಲ್ಲಿ ವಸ್ತುವೇ ನಾಶವಾಗುತ್ತದೆ. ಇದೂ ಅಲ್ಲದೆ ಭೇದದ ಜ್ಞಾನ ದುರ್ಲಭ. ಘಟಪಟ ಭೇದವನ್ನು ತಿಳಿಸಲು ಘಟಕ್ಕೂ ಭೇದಕ್ಕೂ ಇರುವ ಭೇದವನ್ನು ತಿಳಿಯಬೇಕು. ಅದನ್ನು ತಿಳಿಯಲು ಆ ಭೇದಕ್ಕೂ ಘಟಕ್ಕೂ ಇರುವ ಭೇದವನ್ನು ತಿಳಿಯಬೇಕು. ಹೀಗೆ ಅನಂತ ಭೇದಗಳನ್ನು ತಿಳಿದರೂ ಮೊದಲಿನ ಭೇದದ ಜ್ಞಾನವೇ ದುರ್ಲಭವಾಗಿರುವುದು. ಹೀಗೆ ವಸ್ತುವಿನ ಭೇದವೂ ಅದರ ಜ್ಞಾನವೂ ಅಯುಕ್ತವಾಗಿ ಭೇದಜ್ಞಾನವು ಭ್ರಾಂತಿ ಎನ್ನಿಸುತ್ತದೆ. ಈ

ಕಾರಣದಿಂದ ಸರ್ವಾಭೇದವೇ ವಸ್ತುತತ್ತ್ವ ಎನ್ನುತ್ತಾರೆ. ಈ ವಾದದ ಮುಂದೆ ಸ್ವತಂತ್ರ ಪರತಂತ್ರ ವಿವೇಕವು ಕಲ್ಪನಾಮಾತ್ರವಾಗುತ್ತದೆ.

## ***ಅದ್ವೈತದ ಭೇದವಾದದ ದೋಷ***

-------------------------

ಅದ್ವೈತದ ಈ ವಾದ ಪ್ರಮಾಣ ಪ್ರಮಿತವಲ್ಲ. ಏಕೆಂದರೆ ಭೇದವನ್ನು ಧಿಕ್ಕರಿಸುವ ಯುಕ್ತಿ ಅದಕ್ಕಿಂತ ಪ್ರಬಲ ಪ್ರಮಾಣವಾದ 'ಘಟ ಪಟಗಳು ಭಿನ್ನ' ಎಂಬ ಪ್ರತ್ಯಕ್ಷ ಪ್ರಮಾಣದಿಂದ ಬಾಧಿತವಾಗಿದೆ. ಈ ಪ್ರತ್ಯಕ್ಷವನ್ನು ಆಶ್ರಯಿಸಿದ 'ಘಟ ಪಟದಿಂದ ಭಿನ್ನ, ಪಟದಿಂದಾಗದ ಕಾರ್ಯ ಉಳ್ಳದ್ದಾದುದರಿಂದ' ಎಂಬ ಅನುಮಾನದಿಂದಲೂ ಬಾಧಿತವಾಗಿದೆ. ವೇದದಲ್ಲಿಯೂ 'ಸತ್ಯಂ ಜ್ಞಾನಮನಂತಂ ಬ್ರಹ್ಮ' (ಬ್ರಹ್ಮ ಸತ್ಯ ಜ್ಞಾನ ಮತ್ತು ಅನಂತ) ಎಂದು ಬ್ರಹ್ಮನ ಲಕ್ಷಣವನ್ನು ಹೇಳಿದೆ. ಇದು ಬ್ರಹ್ಮ ಸರ್ವವಿಲಕ್ಷಣ ಎಂದು ತೋರಿಸುತ್ತದೆ. ಇದನ್ನು ನಿರಾಕರಿಸಿದರೆ ಬ್ರಹ್ಮನ ಲಕ್ಷಣೋಕ್ತಿಯೇ ಅಯುಕ್ತವಾಗುತ್ತದೆ. 'ಸತ್ಯಂ ಭಿದಾ' (ಭೇದವು ಸತ್ಯ)ಎನ್ನುವ ಭೇದಸತ್ಯತ್ವವನ್ನು ಸ್ಥಾಪಿಸುವ ವೇದದಲ್ಲಿನ ಸ್ಪಷ್ಟವಾದ ಉಕ್ತಿಯು ಭೇದನಿರಾಕರಣದ ಪ್ರಯತ್ನವನ್ನೇ ಅಯುಕ್ತವನ್ನಾಗಿ ಮಾಡುತ್ತದೆ.

## ***ಭೇದ ವಸ್ತುಸ್ವರೂಪ***

---------------

ವಿಚಾರಮಾಡಿ ನೋಡಿದರೆ ಭೇದಕ್ಕೆ ವಿರುದ್ಧವಾದ ಅದ್ವೈತದ ಯುಕ್ತಿ ಕೇವಲ ಕಲ್ಪನಾಮಯ ಎನ್ನುವುದು ತಿಳಿಯುತ್ತದೆ. ಅದು ಸ್ವವ್ಯಾಹತವೂ ಆಗಿದೆ. ಭೇದವನ್ನು ಧಿಕ್ಕರಿಸಲು ಯುಕ್ತಿಯನ್ನು ಹುಡುಕುವ ಪ್ರಯತ್ನದಲ್ಲಿ ಭೇದದ ಅಂಗೀಕಾರವಿದೆ. ಏಕೆಂದರೆ ಇತರರ ವಾದಕ್ಕೂ ತಮ್ಮ ವಾದಕ್ಕೂ ಇರುವ ಭೇದವನ್ನು ಗ್ರಹಿಸಿ ಪ್ರಮಾಣಿಕವೆಂದು ಅಂಗೀಕರಿಸದಿದ್ದರೆ ಭೇದಕ್ಕೆ ಎದುರಾಗಿ ವಾದ ಹೂಡುವ ಸಂಭವವೇ ಇರುವುದಿಲ್ಲ. ಇದೂ ಅಲ್ಲದೆ ಭೇದಕ್ಕೂ ಭೇದವಿರುವ ವಸ್ತುವಿಗೂ ಭೇದವಿರುವುದು ಎಂದು ತಿಳಿಯುವ ಅವಶ್ಯಕತೆಯೇ ಇರುವುದಿಲ್ಲ. ವಸ್ತುಗ್ರಹಣದ ಜೊತೆಯಲ್ಲಿಯೇ ಬೇದಗ್ರಹಣವೂ ಇರುವುದು.

ವಸ್ತು ಗ್ರಹಣವೇ ಬೇರೆ ಭೇದಗ್ರಹಣವೇ ಬೇರೆ ಎಂಬುದಿಲ್ಲ. ಘಟಗ್ರಹಣದ ಜೊತೆಯಾಗಿಯೇ ಪಟದಿಂದ ಅದಕ್ಕೆ ಇರುವ ಭೇದದ

ಗ್ರಹಣವೂ ಇರುವುದು. ಘಟಗ್ರಹಣ ಎಂದರೆ ಇತರವಾದ ವಸ್ತುಗಳಿಂದ ಭಿನ್ನವಾದ ಘಟದ ಗ್ರಹಣವೆಂದೇ ಅರ್ಥ. ಭೇದವನ್ನು ವಸ್ತುವಿನ ಧರ್ಮ ಎಂದು ಭಾವಿಸಿದರೆ ಅದು ಧರ್ಮಿಯಾದ ವಸ್ತುವಿನ ಸ್ವರೂಪ. ವಸ್ತುವಿನ ಸ್ವರೂಪ ಗ್ರಹಣವೇ ಅದು ಇತರವಾದ ಸಮಸ್ತ ವಸ್ತುಗಳಿಂದ ಭಿನ್ನ ಎಂಬ ಭಾವದ ಗ್ರಹಣವೂ ಆಗಿರುವುದು.ಭೇದವು ಧರ್ಮಿಸ್ವರೂಪವಾದರೆ ಧರ್ಮಿಯು ಪ್ರಪಂಚದ ಎಲ್ಲ ವಸ್ತುಗಳಿಂದಲೂ ಭಿನ್ನ ಎಂದು ತಿಳಿಯುವುದರಲ್ಲಿ ಪ್ರಪಂಚದ ಎಲ್ಲ ವಸ್ತುಗಳ ಜ್ಞಾನವು ಅವಶ್ಯಕವಾಗುವುದು. ಇದು ಅಲ್ಪಜ್ಞಾನಿಗಳಿಗೆ ಹೇಗೆ ಸಾಧ್ಯ ಎಂದು ಶಂಕೆಯನ್ನು ಮಾಡಬಹುದು. ಆದರೆ ದೇಶಕಾಲ ಗಳನ್ನು ಗ್ರಹಿಸುವ ಸಾಕ್ಷಿಯೇ ಪ್ರಪಂಚದ ಸರ್ವವಸ್ತುಗಳನ್ನೂ ಸಾಮಾನ್ಯಾಕಾರವಾಗಿ ಗ್ರಹಿಸಿ 'ಇದು ಭಿನ್ನ' ಎಂದು ಒಂದು ವಸ್ತುವನ್ನು ಗ್ರಹಿಸುವುದನ್ನು ಸಾಧ್ಯವಾಗುವಂತೆ ಮಾಡುತ್ತದೆ. ವಸ್ತುಗ್ರಹಣವನ್ನು ಒಪ್ಪುವ ಎಲ್ಲ ವಾದಿಗಳೂ ಸಾಕ್ಷಿಯ ಈ ವ್ಯಾಪಾರವನ್ನು ಒಪ್ಪಲೇ ಬೇಕು. ಹೀಗೆ ಒಪ್ಪದಿರುವುದು ಉಪಪಾದನೆಯ ಅಪೂರ್ಣತೆಯ ದ್ಯೋತಕ. ಸಾಕ್ಷಿಯನ್ನು ಒಪ್ಪದಿದ್ದರೆ 'ಎಲ್ಲ' ಎನ್ನುವ ಜ್ಞಾನವೂ ಅದರಿಂದ ಉಂಟಾಗುವ ವ್ಯವಹಾರವೂ ಅಯುಕ್ತವಾಗುವುದು.

## ಭೇದ ಸ್ವತಂತ್ರ ತತ್ತ್ವಕ್ಕೆ ಉಪಪಾದಕ

------------------------------

ಮೇಲೆ ತಿಳಿಸಿದ ವಿಚಾರದ ಬೆಳಕಿನಲ್ಲಿ ಸ್ವತಂತ್ರಪರತಂತ್ರ ವಸ್ತುಗಳ ವಿವೇಕ ಅಥವಾ ಭೇದದ ಗ್ರಹಣವು ಪ್ರಾಮಾಣಿಕ ಎನ್ನುವುದು ಸಿದ್ಧವಾಗುತ್ತದೆ. ಸ್ವತಂತ್ರ ವಸ್ತುವು ಅದರಿಂದ ಭಿನ್ನವಾದ ಪರತಂತ್ರವುಳ್ಳದು ಎನ್ನುವುದು ಸ್ವಾತಂತ್ರಕ್ಕೆ ಭಂಗವನ್ನು ಉಂಟುಮಾಡುವುದಿಲ್ಲವಷ್ಟೇ ಅಲ್ಲ ಅದು ವಾಸ್ತವವಾಗಿ ಸ್ವತಂತ್ರಕ್ಕೆ ಭೂಷಣ ಆಗಿರುತ್ತದೆ. ಪರತಂತ್ರವಿಲ್ಲದ ಸ್ವತಂತ್ರ ಎನ್ನುವುದು ಕಲ್ಪನಾಮಾತ್ರವಾಗುತ್ತದೆ. ಸ್ವತಂತ್ರ ಸ್ವನಿರ್ವಾಹಕ

ಎನ್ನುವುದರಲ್ಲಿಯೇ ಅದು ಪರತಂತ್ರಕ್ಕೂ ಪರತಂತ್ರದಿಂದ ತನ್ನ ವೈಲಕ್ಷಣ್ಯಕ್ಕೂ ನಿರ್ವಾಹಕ ಎಂಬ ಭಾವ ಅಡಗಿರುವುದು.

***ಸ್ವತಂತ್ರ ಸರ್ವನಿಯಾಮಕ***

-----------------

ಉತ್ಪತ್ತಿ ಇಲ್ಲ ಎನ್ನುವ ಅರ್ಥದಲ್ಲಿ ಅನಾದಿವಸ್ತುಗಳನ್ನು ಜಗತ್ತಿನಲ್ಲಿ ಹೇಳುವ ವಾದದಲ್ಲಿ ಆ ವಸ್ತುಗಳನ್ನೇ ನಿಷೇಧಿಸಿದ ದೋಷವಿದೆ. ಅನಾದಿ ವಸ್ತುಗಳನ್ನು ಒಪ್ಪುವ ನ್ಯಾಯವೈಶೇಷಿಕ ಮೊದಲಾದ ದರ್ಶನಗಳು ಒಟ್ಟಿನಲ್ಲಿ ಜಗನ್ಮಿಥ್ಯಾತ್ವವನ್ನು ಸಿದ್ಧಾಂತಿಸುತ್ತವೆ. ಅವು ಜಗತ್ಸತ್ಯತ್ವವನ್ನು ಗ್ರಹಣ ಮಾಡುವ ಪ್ರಮಾಣಗಳಿಂದ ಬಾಧಿತವಾಗಿವೆ.

ಪರತಂತ್ರದ ಸತ್ತಾ, ಸ್ವರೂಪ, ಪ್ರಮಿತಿ ಮತ್ತು ಪ್ರವೃತ್ತಿ ಎಲ್ಲವೂ ಸ್ವತಂತ್ರದ ಕಾರ್ಯವಾಗಿರುವುದು. ಪರತಂತ್ರವಾದ ಈ ಜಗತ್ತು ಚೇತನಾಚೇತನಾತ್ಮಕ ವಾಗಿದೆ. ಅದು ಭಾವ ಅಥವಾ ಅಭಾವರೂಪದಲ್ಲಿ ಇರುವುದು. ಚೇತನ ಎಂದರೆ ಜ್ಞಾನವುಳ್ಳದ್ದು. ಅಚೇತನ ಎಂದರೆ ಜ್ಞಾನರಹಿತವಾದ ವಸ್ತು. ಭಾವ ಎಂದರೆ ಪ್ರಥಮ ಜ್ಞಾನದಲ್ಲಿಯೇ 'ಇದೆ' ಎಂದು ಸಿದ್ಧವಾಗುವ ವಸ್ತು. ಅಭಾವ ಎಂದರೆ ಪ್ರಥಮಗ್ರಹಣದಲ್ಲಿ 'ಇಲ್ಲ' ಎಂದು ತಿಳಿಯಲ್ಪಡುವ ವಸ್ತು.

ಕಾಲ, ಅಕಾಶ ಮೊದಲಾದುವುಗಳೂ ಜಗತ್ತಿನ ವಸ್ತುಗಳೇ. ಇವು ನಿತ್ಯವಾಗಿರಬಹುದು ಅಥವಾ ಅನಿತ್ಯಾಗಿರಬಹುದು. ನಿತ್ಯ ಎಂದರೆ ಕಾಲದಲ್ಲಿ ಇದು ಆದಿ ಇದು ಅಂತ್ಯ ಎಂಬ ಅವಧಿ ರಹಿತವಾದದ್ದು. ಅನಿತ್ಯವೆಂದರೆ ಕಾಲದಲ್ಲಿ ಇದು ಕಾಲದಲ್ಲಿ ಇದು ಆದಿ, ಇದು ಅಂತ್ಯ ಎಂಬ ಅವಧಿಯುಳ್ಳದ್ದು ಎಂದು ಅರ್ಥ. ಇದೇ ರೀತಿಯಾಗಿ ಪ್ರಪಂಚಗತವಾದ ವಸ್ತುಗಳಲ್ಲಿ ಕೆಲವು ಸರ್ವವ್ಯಾಪ್ತವಾಗಿಯೂ ಇರಬಹುದು ಅಥವ ಸರ್ವವ್ಯಾಪ್ತವಲ್ಲವಾಗಿರಬಹುದು. ಸರ್ವ ವ್ಯಾಪ್ತವೆಂದರೆ ಆಕಾಶದಲ್ಲಿ ಎಲ್ಲ ಕಡೆಯಲ್ಲಿಯೂ ಇರುವುದು. ಅವ್ಯಾಪ್ತವೆಂದರೆ ಅಕಾಶದ ಕೆಲವು ಭಾಗದಲ್ಲಿ ಮಾತ್ರವಿರುವುದು.

ನ್ಯಾಯವೈಶೇಷಿಕ ಮೊದಲಾದ ದರ್ಶನಗಳಲ್ಲಿ ನಿತ್ಯವಾದ ಮತ್ತು ಸರ್ವವ್ಯಾಪ್ತವಾದುದಕ್ಕೆ ಉತ್ಪತ್ತಿ ರಹಿತ ಮುಂತಾದ ಪ್ರಕ್ರಿಯೆ ಇರುವುದು. ಈ ಪ್ರಕ್ರಿಯೆ ವಿಮರ್ಶೆಯ ಅಭಾವದಿಂದ ಬಂದದ್ದು. ಜಗತ್ತಿನ ವಸ್ತು ಹೇಗೆ ಇದ್ದರೂ ಅದು ಒಂದಲ್ಲ ಒಂದು ವಿಧವಾದ ವಿಕಾರವುಳ್ಳದ್ದಾಗಿರುತ್ತದೆ. ಕಾಲದಲ್ಲಿ ನಾನಾ ವಸ್ತುಗಳ ಸಂಬಂಧವೆಂಬ ವಿಕಾರವಿದೆ ಮತ್ತು ಕ್ಷಣ, ಲವ ಮೊದಲಾದ ಅವಯುವಗಳ ಉತ್ಪತ್ತಿ ಇದೆ. ಇದರಂತೆ ದೇಶ ಎಂದರೆ ಆಕಾಶದಲ್ಲಿಯೂ ನಾನಾ ವಸ್ತುಗಳ ಸಂಬಂಧವೆನ್ನುವ ವಿಕಾರ ಮತ್ತು ಈ ಪ್ರದೇಶ, ಆಪ್ರದೇಶ ಎಂಬ ವಿಕಾರಗಳಿವೆ. ವಿಕಾರವೆಲ್ಲವೂ ಪರಾಧೀನವೇ ಆಗಿರುವುದು.

***ಪರಾಧೀನ ವಿಕಾರವೇ ವಸ್ತುಗಳ ಉತ್ಪತ್ತಿಯಲ್ಲಿ ಪ್ರಮಾಣ***

-----------------------------------

ಸರ್ವವಸ್ತುಗಳಿಗಳಿಗೂ ವಿಕಾರವಿಶೇಷ಼ಗಳು ಅನೇಕವಾಗಿವೆ. ಚೇತನನಿಗೂ ಇದ್ದಂತೆ ಇಲ್ಲದಿರುವುದೇ ಮೊದಲಾದ ಅನೇಕ ವಿಶೇಷಗಳು ಪರಾಧೀನವಾಗಿ ಕಂಡುಬರುತ್ತವೆ. ಈ ಪರಾಧೀನವಾದ ವಿಕಾರವೆಂಬ ವಿಶೇಷಗಳ ಅವಾಪ್ತಿ ಎಂದರೆ ಪ್ರಾಪ್ತಿ ಎಲ್ಲವೂ ಪರತಂತ್ರ ಎಂದು ಸಿದ್ಧಪಡಿಸುತ್ತದೆ. ನಿತ್ಯವಸ್ತುಗಳ ಸ್ಥಿತಿ ಹೀಗಿರುವಾಗ ಅನಿತ್ಯವಾದ ವಸ್ತುಗಳ ವಿಕಾರವಿಶೇಷಗಳನ್ನು ಹೇಳಬೇಕಾದುದಿಲ್ಲ. ಈ ವಿಧವಾದ ಪರಾಧೀನವಿಶೇಷಾವಾಪ್ತಿಯು ನಿರಂತರವಾಗಿ ಸರ್ವತ್ರವಾಗಿರುವುದು. ಇದೇ ಜಗತ್ತೆಲ್ಲವೂ ಪರತಂತ್ರ ಎನ್ನುವುದನ್ನು ಸಾಧಿಸುತ್ತದೆ. ಸರ್ವ ಜಗತ್ತೂ ಸರ್ವಾಂಶದಲ್ಲಿಯೂ ಸ್ವತಂತ್ರದ ಕಾರ್ಯವಾಗಿದೆ. ವಿಕಾರವೆಲ್ಲವೂ ಸ್ವತಂತ್ರದ ಸೃಷ್ಟಿಯಾಗಿದೆ. ಧರ್ಮ ಮತ್ತು ಧರ್ಮಿಗಳು ಅಭಿನ್ನ. ವಿಕಾರದ ಸೃಷ್ಟಿಯೇ ವಿಕಾರಿಯ ಸೃಷ್ಟಿಯಾಗಿರುವುದು ಎನ್ನುವುದು ಸರ್ವರ ಅನುಭವವೇದ್ಯ. ಪರಧೀನವಿಶೇಷಾವಾಪ್ತಿ ಎಂಬ ಭಾವವು ಜಗತ್ತು ಸರ್ವಾಂಶದಲ್ಲಿಯೂ ಪರಮಾತ್ಮನಿಂದ ಸೃಷ್ಟವಾದದ್ದು ಎನ್ನುವುದನ್ನು ಸೂಚಿಸುತ್ತದೆ.

## ಸರ್ವಕರ್ತೃವಾದ ಸ್ವತಂತ್ರ ವೇದೈಕವೇದ್ಯ

---------------------------

ಚೇತನಾಚೇತನಾತ್ಮಕವಾದ ಸಮಸ್ತ ಜಗತ್ತನ್ನು ದೃಷ್ಟಿಯಲ್ಲಿರಿಸಿಕೊಂಡು ಜಗತ್ತಿನ್ಲಿ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳೆಂಬ ಎಂಟು ಅವಸ್ಥೆಗಳನ್ನು ನಿರೂಪಿಸಬಹುದು. ಈ ಎಲ್ಲವೂ ಸ್ವತಂತ್ರದ ಕಾರ್ಯ. ನಿಯಮಕ್ಕೇ ಕಾರಣವಾದ ಸ್ವತಂತ್ರವನ್ನು ನಿಯಮನ ಮಾಡುವ ಮತ್ತೊಂದು ವಸ್ತುವಿಲ್ಲ ಎನ್ನುವುದು ಸಿದ್ಧವೇ ಆಗುತ್ತದೆ. ಸ್ವತಂತ್ರ ಯಾವಾಗಲೂ ನಿರುಪಾಧಿಕವಾಗಿ ಪ್ರತಿಷ್ಠವಾಗಿರುವುದೇ ಅದರ ಸ್ವಾತಂತ್ರ್ಯದ ಹೆಗ್ಗುರುತು. ಅದು ಸರ್ವಕರ್ತೃವಾದ್ದರಿಂದ ಅದರೆದುರಿಗೆ ಅನ್ಯ ಕರ್ತೃವಿಲ್ಲ. ಸರ್ವಕರ್ತೃವಾದ ಸ್ವತಂತ್ರ ಸರ್ವಶಕ್ತಿಯೂ ಆಗಿದೆ. ಅದರ 'ಕರ್ತೃಂ, ಅಕರ್ತೃಂ, ಅನ್ಯಥಾಕರ್ತೃಂ' ಎಂದರೆ, ಮಾಡುವ, ಮಾಡದಿರುವ ಮತ್ತು ಬೇರೆ ವಿಧವಾಗಿ ಮಾಡುವ ಸಾಮರ್ಥ್ಯವೇ ಅದನ್ನು ಸ್ವತಂತ್ರವೆಂದೂ, ಪೂರ್ಣ ವೆಂದೂ ಘೋಷಿಸುತ್ತದೆ. ಏಕೆಂದರೆ ಅಪೂರ್ಣವಾದದ್ದು ಸರ್ವಕರ್ತೃವಾಗಲು ಸಾಧ್ಯವಾಗಲಾರದು. ಈ ಸರ್ವಕರ್ತೃತ್ವ ಎಂಬ ಯುಕ್ತಿಯಿಂದ ಸಿದ್ಧವಾದ ಪೂರ್ಣಗುಣನೇ ವೇದದಿಂದ ಸಿದ್ಧವಾಗುವ ಸ್ವತಂತ್ರತತ್ತ್ವ. ವೇದದಲ್ಲಿ ಕೇವಲ, ನಿರ್ಗುಣ, ಏಕ, ಆತ್ಮಾ, ಅದ್ವೈತ, ಸರ್ವೋತ್ತಮ, ಸರ್ವಕರ್ತಾ, ಸರ್ವಶಕ್ತಿ ಮೊದಲಾದ ಶಬ್ದಗಳು ಸ್ವತಂತ್ರ ಎನ್ನುವುದರ ಪರ್ಯಾಯಗಳು. ಈ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವೇದದ ಅರ್ಥಮಾಡಿಕೊಳ್ಳ ಬೇಕು. ಹೀಗೆ ಮಾಡದಿರುವಾಗ ವೇದಕ್ಕೆ ಅನ್ಯಾರ್ಥವಾಗುತ್ತದೆ.

## ವೇದಪ್ರವರ್ತಕನಾದ ಸ್ವತಂತ್ರವೇ ಭಗವಾನ್

------------------------------

ಭಗ ಎಂದರೆ ಐಶ್ವರ್ಯ. ಐಶ್ವರ್ಯವನ್ನುಳ್ಳದ್ದು ಭಗವಾನ್. ಐಶ್ವರ್ಯವೆಂದರೆ ಶಕ್ತಿ. ಅಲ್ಪಶಕ್ತಿ ಶಕ್ತಿಯಲ್ಲವಾದ್ದರಿಂದ ಸರ್ವಶಕ್ತಿಯೇ ಶಕ್ತಿ. ಸರ್ವಶಕ್ತನಾದವನೇ ಭಗವಾನ್ ಅವನೇ ಗುಣಪೂರ್ಣ. ನ್ಯಾಯವೈಶೇಷಿಕರೂ ವಿಶಿಷ್ಟಾದ್ವೈತಿಗಳೂ ಗುಣಗುಣಿಗಳಿಗೆ ಭೇದವನ್ನು ಹೇಳುವರು. ಗುಣಗುಣಿಗಳ ಭೇದವಾದಿಗಳು ಗುಣರಹಿತವಾದ ಗುಣಿಯನ್ನೂ ಗುಣಿರಹಿತವಾದ ಗುಣವನ್ನೂ

ಒಪ್ಪಬೇಕಾಗುತ್ತದೆ. ಅದ್ವೈತಿಗಳು ಗುಣಗಣಿಭಾವವೇ ಮಿಥ್ಯಾ ಎಂದು ಸಿದ್ಧಾಂತಮಾಡಿ ಸತ್ಯವಾದದ್ದು ನಿರ್ಗುಣ, ನಿರ್ವಿಶೇಷ ಎನ್ನುವರು. ನಿರ್ಗುಣ, ನಿರ್ವಿಶೇಷ ಎಂಬ ಭಾವವೇ ಅದು ನಿರ್ಗುಣತ್ವ, ನಿರ್ವಿಶೇಷತ್ವವೆಂಬ ಗುಣಗಳುಳ್ಳದ್ದಾಗಿ ತಿಳಿಸುವುದರಿಂದ ಅವರ ಉಕ್ತಿ ಸ್ವವ್ಯಾಹತವೂ ಅನುಭವವಿರುದ್ಧವೂ ಆಗಿದೆ. ಭಗವತ್ತತ್ತ್ವಪ್ರತಿಪಾದನೆಗಾಗಿಯೇ ವೇದ ಪ್ರವೃತ್ತವಾಗಿರುವುದರಿಂದ ಒಂದುವೇಳೆ ಈ ವಾದಗಳು ಸತ್ಯವಾಗಿದ್ದರೆ ವಿಚಾರಕ್ಕಿಂತ ಮೊದಲೇ ತತ್ತ್ವನಿಶ್ಚಯವಾಗಿರುವುದರಿಂದ ತತ್ತ್ವಪ್ರತಿಪಾದನೆಗೆ ವೇದದ ಅವಶ್ಯಕತೆ ಇಲ್ಲದೆ ಹೋಗಬೇಕಾಗುತ್ತದೆ. ನಿರ್ದೋಷವಾದ ಗುಣಗುಣಿಗಳ ಸಂಬಂಧದ ಜ್ಞಾನವಿಲ್ಲದೆ ತತ್ತ್ವಪ್ರತಿಪಾದನೆ ಸಾಧ್ಯವಾಗುವುದಿಲ್ಲ.

***ಸವಿಶೇಷಾಭೇದ ಗುಣಗುಣಿಗಳ ಸಂಬಂಧ***

-----------------------------

ಗುಣವೆಂದರೆ ಧರ್ಮ. ಗುಣ ಉಳ್ಳದ್ದು ಗುಣಿ. ಇದನ್ನೇ ದ್ರವ್ಯವೆಂದು ಕೆಲವರು ವ್ಯವಹರಿಸುತ್ತಾರೆ. ಉದಾಹರಣೆಗೆ ಒಂದು ಬಿಳಿಯ ಬಟ್ಟೆಯನ್ನು ತೆಗೆದುಕೊಂಡು ಗುಣಗುಣಿಗಳ ಸಬಂಧವನ್ನು ವಿಚಾರಮಾಡಬಹುದು. ಇಲ್ಲಿ ಬಟ್ಟೆ ದ್ರವ್ಯ ಹಾಗೂ ಬಿಳುಪು ಧರ್ಮ. ಇವು ಎರಡೂ ಬೇರೆಬೇರೆಯಲ್ಲ. ಬೇರೆಯಾದರೆ ಎರಡು ಬಟ್ಟೆಗಳಂತೆ ಬೇರೆ ಬೇರೆಯಾಗಿ ತೋರಬೇಕಾಗಿತ್ತು. ನ್ಯಾಯವೈಶೆಷಿಕರು ಇವೆರಡನ್ನು ಬೇರೆ ಎನ್ನುತ್ತಾರೆ. ಅವು ಬೇರೆಯಾಗಿ ಕಾಣದಿರಲು ಗುಣವು ಗುಣಿಯನ್ನು ಆಶ್ರಯಿಸಿರುವುದೇ ಕಾರಣವೆನ್ನುತ್ತಾರೆ. ಅವರ ವಾದ ಸರಿಯಲ್ಲ. ಅವು ಬೇರೆಯಾದಮೇಲೆ ಬೆರೆಯಾಗಿ ತೋರಬೇಕಾ ಗಿತ್ತು. ಒಂದು ಬುಟ್ಟಿಯಲ್ಲಿ ಹಣ್ಣುಗಳನ್ನು ಹಾಕಿದಾಗ ಹಣ್ಣುಗಳು ಬುಟ್ಟಿಯನ್ನು ಆಶ್ರಯಿಸಿಕೊಂಡಿದ್ದರೂ ಬೇರೆಯಾಗಿಯೆ ಕಾಣಿಸುತ್ತವೆ. ಹೀಗೆಯೇ ಗುಣವೂ ಗುಣಿಯಿಂದ ಭಿನ್ನವಾಗಿಯೇ ಕಾಣಬೇಕಾಗುತ್ತದೆ. ಹೀಗೆ ಕಾಣುವುದಿಲ್ಲವಾದ್ದರಿಂದ ಅವು ಭಿನ್ನವಲ್ಲ ಎಂದು ಸಿದ್ಧವಾಯಿತು.ಗುಣಗುಣಿಗಳು ಭಿನ್ನವೆಂದು ಗ್ರಾಹ್ಯವಾಗದ ಮನಸ್ಸಿಗೆ ಬಿಳುಪೇ

ಬಟ್ಟೆಯಾಗಿ ಕಾಣಿಸುತ್ತದೆ. ಇದನ್ನು ನ್ಯಾಯವೈಶೇಷಿಕರು ಭ್ರಾಂತಿ ಎನ್ನುವರು. ಭ್ರಾಂತಿಯಾಗಿದ್ದಿದ್ದರೆ ಅದಕ್ಕೆ ಪರಿಹಾರಕವಾಗಿ ಎರಡೂ ಬೇರೆ ಬೇರೆಯಾಗಿ ಕಾಣುವಂತಹ ಅನುಭವವು ಬರಬೇಕಾಗಿತ್ತು. ವಸ್ತುಸ್ಥಿತಿಯು ಹಾಗಿಲ್ಲವಾದ್ದರಿಂದ ಭ್ರಾಂತಿಯಲ್ಲ.

ವಿಮರ್ಶೆಮಾಡಿ ನೋಡಿದರೆ ವಾದಿಗಳು ಅಭೇದದ ಸ್ವರೂಪವನ್ನೇ ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎನ್ನುವುದು ತಿಳಿಯುತ್ತದೆ. ಎಲ್ಲ ಭೇಧವು ಒಂದು ವಿಶೇಷದಿಂದ ಸಹಿತವಾದುದಾಗಿರುವುದು. ನಿರ್ವಿಶೇಷವಾದ ಭೇದವೇ ಇಲ್ಲ. ಯಾವಾಗಲೂ ಅಭೇದ ಎನ್ನುವುದೇ ಸವಿಶೇಷ. ಗುಣಗುಣಿಗಳು ಅಭಿನ್ನ ವಾದರೂ ಅವು ಭಿನ್ನವೋ ಎನ್ನುವಂತೆ ಭೇದವ್ಯವಹಾರಯೋಗ್ಯವಾಗಿರುವುದೇ ಇದಕ್ಕೆ ಕಾರಣ.

ಭೇದವ್ಯವಹಾರವಿರುವ ಕ್ರಮವನ್ನು ಪರಿಶೀಲಿಸೋಣ. ಬಿಳಿ ಧರ್ಮ. ಬಟ್ಟೆ ದ್ರವ್ಯ. ಬಿಳಿ ಮತ್ತು ಬಟ್ಟೆ ಪರ್ಯಾಯಪದಗಳಲ್ಲ. ಬಿಳಿ ಎಂದು ಕೇಳಿದಾಗ ಯಾರೂ ಬಟ್ಟೆ ಎಂದು ಅರ್ಥಮಾಡಿಕೊಳ್ಳುವುದಿಲ್ಲ. ಬಟ್ಟೆಯಿಂದಾಗುವ ಕಾರ್ಯ ಬಿಳಿಯಿಂದಾಗುವುದಿಲ್ಲ. ಬಟ್ಟೆ ತೆಗೆದುಕೊಂಡು ಬಾ ಎಂದಾಗ ನಿಯಮವಾಗಿ ಬಿಳಿಬಟ್ಟೆಯನ್ನು ತರಬೇಕಾಗಿಲ್ಲ. ಬಟ್ಟೆ ಬಟ್ಟೆಯಲ್ಲ ಎಂದರೆ ಸ್ವವಿರೋಧವಾಗುತ್ತದೆ. ಬಟ್ಟೆ ಬಿಳಿಯಲ್ಲ ಎಂದರೆ ವಿರೋಧವಿಲ್ಲ. ಕುರುಡನಿಗೆ ಬಟ್ಟೆಯ ಜ್ಞಾನವಾಗುವುದಾದರೂ ಬಿಳಿಯ ಜ್ಞಾನವಾಗುವುದಿಲ್ಲ. ಕತ್ತಲಿನಲ್ಲಿರುವ ಬಟ್ಟೆಯನ್ನು ಹುಡುಕಿ ತೋರಿಸಬಹುದಾದರೂ ಬಿಳಿಯನ್ನು ತೋರಿಸಲಾಗುವುದಿಲ್ಲ. ಈ ವ್ಯವಹಾರವೆಲ್ಲ ವಸ್ತುಸ್ಥಿತಿಯನ್ನು ಅನುಸರಿಸಿದ ಅನುಭವವೇ ಹೊರತು ಯಾವುದೂ ಸುಳ್ಳಲ್ಲ. ಈ ವಿಧವಾದ ಅನುಭವವನ್ನು ಸಮಾಧಾನದಿಂದ ಪರಿಶೀಲಿಸಿ ಎರಡಕ್ಕೂ ನ್ಯಾಯವನ್ನು ದೊರಕಿಸುವ ಭಾವವು ಸಿದ್ಧಾಂತವಾಗುವುದು.

ಇವೆರಡು ಅನುಭವಗಳಿಗೂ ನ್ಯಾಯದೊರಕಿಸಬೇಕೆಂದು ಪೂರ್ವ ಮೀಮಾಂಸಕರು ಗುಣಗುಣಿಗಳಿಗೆ ಭೇದಾಭೇದವನ್ನು ಒಪ್ಪುತ್ತಾರೆ. ಆದರೆ

ಇದು ಸ್ವವ್ಯಾಹತವಾಗಿರುವುದರಿಂದ ವಿರೋಧಪರಿಹಾರಕ್ಕೆ ಇರುವ ಒಂದೇ ಮಾರ್ಗವೆಂದರೆ, ಅವು ಅಭಿನ್ನವೆಂಬ ಪಕ್ಷವನ್ನು ಒಪ್ಪಿಕೊಂಡು ಭೇದವ್ಯವಹಾರವನ್ನು ನಿರ್ವಹಿಸಬೇಕು. ಏಕೆಂದರೆ ಅಭೇದವು ಪ್ರತ್ಯಕ್ಷಸಿದ್ಧವಾಗಿದೆ. ಯಾವಾಗಲೂ ಪ್ರತ್ಯಕ್ಷ ಪ್ರಬಲ. ಭೇದವ್ಯವಹಾರ ದುರ್ಬಲ ಆದ್ದರಿಂದ ಅದು ಪ್ರತ್ಯಕ್ಷವನ್ನು ಬಾಧಿಸುವುದಿಲ್ಲ.

***ವಿಶೇಷ***

-----

ಬಿಳಿ ಮತ್ತು ಬಟ್ಟೆ ಇವುಗಳಿಗೆ ಅಭೇದವಿದ್ದರೂ ಭೇದವ್ಯವಹಾರಕ್ಕೆ ಅವಕಾಶವಿರುವುದರಿಂದ ಅವುಗಳಲ್ಲಿ ಒಂದು ವಿಶೇಷ ಇರಬೇಕು. ಈ ವಿಶೇಷದ ಮಹಿಮೆಯಿಂದ ಈ ಎರಡೂ ಬೇರೆ ಎನ್ನುವಂತೆ ವ್ಯವಹಾರಮಾಡಲ್ಪಡುತ್ತವೆ. ವಸ್ತುಗಳಿಗೆ ಅಭೇದವಿದ್ದರೂ ಭೇದದ ಕಾರ್ಯವನ್ನು ನಿರ್ವಹಿಸುವುದೇ ವಿಶೇಷ.

***ನ್ಯಾಯವೈಶೇಷಿಕರಿಗೂ ವಿಶೇಷ ಅನಿವಾರ್ಯ***

-----------------------------

ಎಲ್ಲ ವಿಚಾರಶೀಲರೂ ವಿಶೇಷವನ್ನು ಒಪ್ಪಲೇಬೇಕಾಗಿರುವುದು. ನ್ಯಾಯವೈಶೇಷಿಕರು ಗೂನಗುಣಿಗಳಿಗೆ ಭೇದವನ್ನು ಹೇಳುತ್ತಾರೆ. ಗುಣಿಯನ್ನು ಬಿಟ್ಟು ಗುಣವು ಇಲ್ಲದಿರಲು ಕಾರಣವೇನೆಂದು ವಿಚಾರಿಸಲು ಗುಣವು ಗುಣಿಯನ್ನು ಹೊಂದಿರುವ ಸಂಬಂಧವೇ ಅಂತಹುದೆನ್ನುವರು. ಆಗ ಪ್ರಪಂಚದಲ್ಲಿ ಗುಣಕ್ಕೆ ಮಾತ್ರ ಈ ವಿಧವಾದ ಸಂಬಂಧವಿರಲು ಕಾರಣವೇನೆಂದು ಪ್ರಶ್ನಿಸಿದರೆ ಅವರು ಅದೇ ಗುಣದಲ್ಲಿರುವ ವಿಶೇಷ ಎನ್ನಬೇಕು. ಈ ರಿತಿಯಾಗಿ ಗುಣಗುಣಿಗಳಿಗೆ ಭೇದವನ್ನು ಹೇಳಿದರೂ ವಿಶೇಷವನ್ನು ಒಪ್ಪಲೇ ಬೇಕಾಗುವುದು. ಇದರಿಂದ ಮೊದಲೇ ವಿಶೇಷವನ್ನು ಒಪ್ಪಿಕೊಂಡು ಅನುಭವಕ್ಕೆ ಅನುಗಣವಗಿ ಗುಣಗುಣಿಗಳಿಗೆ ಅಭೇದವನ್ನು ಹೇಳುವುದರಲ್ಲಿ ಲಾಘವವಿರುದಲ್ಲದೇ ಅದೇ ಪ್ರಾಮಾಣಿಕವೂ ಆಗಿರುತ್ತದೆ.

## ವಿಶಿಷ್ಟಾದ್ವೈತಿಗಳೇ ಮೊದಲಾದವರಿಗೂ ವಿಶೇಷ ಅನಿವಾರ್ಯ
-----------------------------------------

ಮೇಲೇ ಹೇಳಿದ ನ್ಯಯುವೇ ದ್ರವ್ಯ ಮತ್ತು ಅದ್ರವ್ಯಗಳ ಭೇದವಾದಿಗಳಾದ ವಿಶಿಷ್ಟಾದ್ವೈತಿಗಳಿಗೂ ಅನ್ವಯುವಾಗುವುದು.ದ್ರವ್ಯ ಧರ್ಮಿ. ಅದ್ರವ್ಯ ಧರ್ಮ. ದ್ರವ್ಯ ಪ್ರಕಾರಿ. ಅದ್ರವ್ಯ ಪ್ರಕಾರ. ಇರಿಂದ ಇವು ಬೇರಬೇರೆಯಾಗಿ ಕಾಣುವುದಿಲ್ಲ ಎನ್ನುತ್ತಾರೆ. ಅದ್ರವ್ಯಮಾತ್ರ ಹೀಗೆ ಇರುವುದಕ್ಕೆ ಕಾರಣವೇನೆಂದು ಕೇಳಿದರೆ ಆಗ ಅದು ಅದರ ವಿಶೇಷ ಎಂದು ಉತ್ತರಿಸಬೇಕು. ಹೀಗೆ ಭೇದವನ್ನು ಒಪ್ಪಕೊಂಡು ಅದರ ನಿರ್ವಾಹಕ್ಕಾಗಿ ವಿಶೇಷವನ್ನು ಒಪ್ಪುವುದರ ಬದಲಾಗಿ ಅನುಭವದ ಅನುಸಾರವಾಗಿ ದ್ರವ್ಯಾದ್ರವ್ಯಗಳಿಗೆ ಅಭೇದವನ್ನು ಒಪ್ಪಿಕೊಂಡು ವಿಶೇಷದ ಮಹಿಮೆಯಿಂದ ಭೇದದ ಕಾರ್ಯವಾದ ಇದು ಧರ್ಮಿ, ಇದು ಧರ್ಮ ಮುಂತಾದ ವ್ಯವಹಾರವಿದೆ ಎಂದು ಹೇಳುವುದು ಯುಕ್ತವಾಗಿರುತ್ತದೆ. ಭೇದಾಭೇದವಾದಕ್ಕೂ ಈ ನ್ಯಾಯುವೇ ಅನ್ವಯವಾಗಿ ಭೇದಪಕ್ಷವನ್ನು ಬಿಟ್ಟು ಅಭೇದ ಪಕ್ಷವನ್ನು ಅಂಗೀಕರಿಸಬೇಕಾಗುವುದು. ಇಲ್ಲಿಯವರೆಗೆ ಗುಣಿ ಮತ್ತು ಗುಣಗಳ ಭೇದವಾದಿಗಳ ಪಕ್ಷದಲ್ಲಿರುವ ದೋಷವು ವಿವರಿಸಲ್ಪಟ್ಟಿತು.

## ಅದ್ವೈತಕ್ಕೂ ವಿಶೇಷ ಅನಿವಾರ್ಯ
--------------------

ನಿರ್ವಿಶೇಷ ತತ್ತ್ವವಾದಿಗಳಾದ ಅದ್ವೈತಿಗಳಿಗೂ ವಿಶೇಷವನ್ನು ಒಪ್ಪಿಕೊಳ್ಳಬೇಕು. ತತ್ತ್ವವು ನಿರ್ವಶೇಷವಾದರೆ ನಿರ್ವಿಶೇಷತ್ವ ಅದರ ಧರ್ಮವಾಗಿರುತ್ತದೆ.ಈ ನಿರ್ವಿಶೇಷತ್ವವು ನಿರ್ವಿಶೇಷತ್ವದಿಂದ ಆಭಿನ್ನವಾದರೂ ಅದು ಭಿನ್ನ ಎನ್ನುವಂತೆ ಕಾರಣವೇನೆಂದು ಪ್ರಶ್ನೆಮಾಡಲು ಅದೇ ಅದರ ವಿಶೇಷ ಎನ್ನಬೇಕು. ಇದು ಅದ್ವೈತಿಗಳಿಂದ ಭಿನ್ನವಾದವರ ದೃಷ್ಟಿಕೋಣದಿಂದ ಆಡಿದಮಾತು. ಅದ್ವೈತದ ದೃಷ್ಟಿಯಿಂದಲೂ ವಿಶೇಷದ ಅಂಗೀಕಾರ ಅನಿವಾರ್ಯ. ಅದ್ವೈತದಲ್ಲಿ ಜೀವಬ್ರಹ್ಮರ ಅಭೇದವು ಚೈತನ್ಯಯ ರೂಪವಾದುದು. ಚೈತನ್ಯಯುವು ಸ್ವಪ್ರಕಾಶ. ಆದರೆ ಅದು ಸಂಸಾರಾವಸ್ಥೆಯಲ್ಲಿ

ವ್ಯಕ್ತವಲ್ಲ ಎನ್ನುತ್ತಾರೆ. ಇದಕ್ಕೆ ಕಾರಣವೇನೆಂದು ಕೇಳಿದರೆ ಆಗ ಇದು ಚೈತನ್ನಯದ ವಿಶೇಷ ಎಂದು ಹೇಳಬೇಕು.

ಚೈತನ್ಯವು ಚೈತನ್ಯ ಎನ್ನುವ ಪದದಿಂದ ಹೇಗೆ ತಿಳಿಯಲ್ಪಡುವದೋ ಹಾಗೆ ಅದು ಬ್ರಹ್ಮ, ಆತ್ಮಾ ಮುಂತಾದ ಪದಗಳಿಂದಲೂ ತಿಳಿಯಲ್ಪಡುವುದು. ಈ ಎಲ್ಲ ಪದಗಳಿಗೂ ಅದರದರ ಅರ್ಥವಿಶೇಷವೂ ಇದೆ. ಹಾಗಿಲ್ಲದಿದ್ದರೆ ಆ ಪದಗಳೇ ನಿರರ್ಥಕವಾಗುತ್ತವೆ. ಆ ಪದಗಳ ಅರ್ಥದಲ್ಲಿ ವಿಶೇಷವಿರುದಾದರೆ ಈ ವಿಶೇಷವು ಚೈತನ್ಯಕ್ಕೆ ಇದೆ ಎಂದೆನ್ನಬೇಕು.

ಅದ್ವೈತವು ಚೈತನ್ಯದ ವಿಷಯದಲ್ಲಿ ನಾನಾ ಭಾವಗಳನ್ನು ಸಿದ್ಧಾಂತಮಾಡಿದೆ. 'ಚೈತನ್ಯವು ಸ್ವಪ್ರಕಾಶ. ಆದರೂ ಅದು ಅಜ್ಞಾನವಿರೋಧಿಯಲ್ಲ. ಅದು ಅಖಂಡ, ಅದು ಸತ್ಯ, ಜ್ಞಾನ, ಅನಂತ ಮತ್ತು ಆನಂದ' ಎನ್ನುವ ಈ ವಾದಗಳೆಲ್ಲವೂ ಚೈತನ್ನಯದಲ್ಲಿ ನಾನಾವಿಧವಾದ ವಿಶೇಷ ಗಳನ್ನು ಅಂಗೀಕಾರ ಮಾಡದಿದ್ದರೆ ಅರ್ಥ ರಹಿತವಾಗುತ್ತವೆ. ಇವೆಲ್ಲವೂ ಚೈತನ್ನಯದ ಧರ್ಮಗಳನ್ನು ಹೇಳುತ್ತವೆ. ಅದ್ವೈತವು ಚೈತನ್ಯಕ್ಕೂ ಅದರ ಧರ್ಮಗಳಿಗೂ ಅಭೇದವನ್ನೂ ಹೇಳುತ್ತದೆ. ಈ ಧರ್ಮಧರ್ಮಿಭಾವ ಮೊದಲಾದ ಭೇದಕಾರ್ಯಗಳು ಅಭಿನ್ನವಾದ ಚೈತನ್ಯದಲ್ಲಿ ಹೇಗೆ ಬಂದಿತು ಎಂದರೆ ಅದೇ ಅದರ ವಿಶೇಷ ಎಂದು ಒಪ್ಪಲೇಬೇಕಾಗುವುದು. ಈ ರೀತಿಯಾಗಿ ಅದ್ವೈತದ ನಿರ್ವಿಶೇಷಬ್ರಹ್ಮನು ಸವೀಶೇಷ ಆಗದ ಹೊರತು ಅದರ ನಿರ್ವಾಹ ಸಾಧ್ಯವಾಗುವುದಿಲ್ಲ. ಒಂದೇ ಚೈತನ್ಯವು ಬ್ರಹ್ಮ, ಜ್ಞಾನ, ಆನಂದ ಮೊದಲಾದ ಬೇರೆಬೇರೆ ಶಬ್ದಗಳಿಂದ ವ್ಯವಹಾರಮಾಡಲ್ಪಡುವುದೂ ವಿಶೇಷದ ಕಾರ್ಯವೇ ಆಗಿರುವುದು. ಹೀಗೆ ವಿಶೇಷವಿಲ್ಲದ ನಿರ್ವಿಶೇಷವಿಲ್ಲವಾಗುತ್ತದೆ.

***ವಿಶೇಷವು ವಸ್ತುತತ್ತ್ವಕ್ಕೆ ಮೂಲಭೂತವಾದ ನಿಯಮ***

-------------------------------------

ವಿಶೇಷವು ತತ್ತ್ವದ ಸ್ವರೂಪಕ್ಕೆ ಸಂಬಂಧಪಟ್ಟುದಾಗಿರುವುದು. ಪ್ರತಿ ವಸ್ತುವೂ ತನ್ನಂತೆ ಇರಲು ಅದಕ್ಕೆ ವಿಶೇಷವೇ ಕಾರಣವಾಗಿದೆ.ಒಂದೇ ವಸ್ತುವು ಬೇರೆಬೇ

ಧರ್ಮಗಳನ್ನುಳ್ಳದ್ದಾಗಿ ಕಾಣುವುದು ವಿಶೇಷದ ಮಹಿಮೆಯಿಂದ. ಒಂದೊಂದು ವಸ್ತುವಿನ ಧರ್ಮಗಳೂ ಅನಂತ. ಈ ಕಾರಣದಿಂದ ಅಯಾ ಧರ್ಮಗಳಿಗೆ ಉಪಪಾದಕವಾದ ವಿಶೇಷಗಳೂ ಅನಂತವಾಗಿರುವುವು. ಇದು ವಿಶೇಷ ಎನ್ನುವ ಒಂದು ಹೊಸಧರ್ಮ ವನ್ನು ವಸ್ತುಗಳಿಗೆ ಹೇಳುವ ಮಾತು ಅಲ್ಲ. ಭೇಧಸಾಧನೆಗೆ ಅವಕಾಶವಿಲ್ಲದಿದ್ದರೂ ವಸ್ತುವಿನಿಂದ ಬೇರೆಯಾಗಿ ಕಾಣುವ ಧರ್ಮಗಳನ್ನು ಅವು ವಸ್ತುವಿನಿಂದ ಅಭಿನ್ನ ಎಂದು ತೋರಿಸುವ ಕ್ರಮ. ಇದರಿಂದ ವಸ್ತುಗಳು ನಿಯಮವಾಗಿ ವಿಶಿಷ್ಟ ವಾದುವುಗಳೆಂದು ತಿಳಿಯುತ್ತದೆ. ಅವು ವಿಶೇಷ್ಯ ವಿಶೇಷಣಭಾವಗಳನ್ನು ಉಳ್ಳವುಗಳು ನಿರ್ವಿಶೇಷಗಳಲ್ಲ ಎಂದು ಸಿದ್ಧವಾಗುತ್ತದೆ. ಭೇದವಿಶಿಷ್ಟವಾದುದೆಂದು ತೋರಿಬರುವ ವಸ್ತುವಿನ್ಲಿ ತಾತ್ತ್ವಿಕವಾದ ಅಭೇದವನ್ನು ತೋರಿಸುವ ವಿಶೇಷವು ತನ್ನನ್ನು ತಾನೇ ನಿರ್ವಾಹಮಾಡಿಕೊಳ್ಳುತ್ತದೆ. ಅದನ್ನು ನಿರ್ವಾಹಮಾಡಲು ಮತ್ತೊಂದು ವಿಶೇಷವನ್ನು ಅಂಗೀಕರಿಸುವ ಕಾರಣವಿಲ್ಲ. ಇದೇ ವಿಶೇಷದ ಮಹಿಮೆ. ವಿಶೇಷದ ಮಹಿಮೆಯಿಂದಲೇ ಇದು ಸಿದ್ಧಿಸುತ್ತದೆ.ಒಂದೇ ವಸ್ತುಪರವಾದ ನಾನಾ ಶಬ್ದಗಳಿಗೂ ವಿಶೇಷವೇ ನಿಮಿತ್ತವಾಗಿರುತ್ತದೆ.

### *ವಿಶೇಷವಿಲ್ಲದೇ ಅಭೇದವಿಲ್ಲ*

-------------------

ಹಿಂದ ಮಾಡಲಾದ ವಿಚಾರಗಳ ಬೇಳಕಿನಲ್ಲಿ ಗುಣ ಮತ್ತು ಗುಣಿ, ದ್ರವ್ಯ ಮತ್ತು ಗುಣ, ದ್ರವ್ಯ ಮತ್ತು ಕ್ರಿಯೆ, ದ್ರವ್ಯ ಮತ್ತು ಅದ್ರವ್ಯ, ಧರ್ಮಿ ಮತ್ತು ಧರ್ಮ ಈ ರೀತಿಯುಗಿ ನಾನಾ ಭಾಷೆಯಲ್ಲಿ ವ್ಯವಹಾರಮಾಡಲ್ಪಡುವ ವಸ್ತುಗಳ ಸಂಬಂಧ ಏನೆಂದರೆ ಅದು ಅಭೇದ ಎಮುದು ಸಿದ್ಧವಾಗುತ್ತದೆ.ನಿರ್ವಿಶೇಷವಾದ ಅಭೇದವನ್ನು ಅದ್ವೈತವು ಹೇಳುತ್ತದೆ. ಇದು ಅನುಇಭವದಿಂದ ಬಾಧಿತವಾಗಿದೆ. ಅಭೇದವೆಂದರೆ ಎರಡು ವಸ್ತುಗಳ ಸಂಬಂಧವನ್ನು ಸೂಚಿಸುತ್ತದೆ. ಆ ವಸ್ತುಗಳು ಭಿನ್ನವೆನ್ನುವುದು ಅನುಭವಬಾಧಿತವಾಗಿದೆ. ಅವು ಅಭಿನ್ನ ಎಂದರೆ ಆ ಅಭೇದವು ಎರಡು ವಸ್ತುಗಳು ಎಂಬ ಭೇದವ್ಯವಹಾರಕ್ಕೂ ಅವಕಾಶಕೊಡುತ್ತದೆ. ಈ ಕಾರಣದಿಂದ ಅದು ನ ಇರ್ವಿಶೇಷವಾದ ಅಭೇದ ವಲ್ಲ. ಈ ಅಭೇದವು

ಸವಿಶೇಷ. ಪ್ರಸಕ್ತವಾದ ವಸ್ತುಗಳಿಗೆ ಅಭೇದವಿದ್ದರೂ ಈ ಅಭೇದವು ಭೇದಕಾರ್ಯನಿರ್ವಾಹಕ ಎಂದು ಇದರ ಅರ್ಥ. ಎಲ್ಲ ಅಭೇದವೂ ಈರೀತಿಯಾಗಿರುವುವೇ. ನಾನು ನಾನೇ ಎಂಬ ಅಭೇದವೂ ನಾನೇ ಎಂಬ ಪ್ರಕಾರ, ನಾನು ಎಂಬ ಪ್ರಕಾರಿ ಇವುಗಳ ಭೇದಕ್ಕೆ ಅವಕಾಶಕೊಟ್ಟು ಸವಿಶೇಷಾಭೇದವಾಗುವುದು. ಹೀಗೆ 'ಅಹಂ ಬ್ರಹ್ಮ' ಎನ್ನುವುದೂ ಸವಿಶೇಷಾಭೇದವಾಗಿದೆ. ಈ ವಿಚಾರವೆಲ್ಲವೂ ಭೇದದಲ್ಲೇ ಇರುವ ಅಭೇದವನ್ನು ಸ್ಥಾಪಿಸಿ ಪ್ರಸಕ್ತವಾದ ಭೇದವು ಅಭೇದದಲ್ಲಿನ ವಿಶೇಷದ ಕಾರ್ಯ ಅಥವಾ ಸವಿಶೇಷಾಭೇದದ ಕಾರ್ಯ ಎಂದು ಸ್ಥಾಪಿಸುತ್ತದೆ. ಇದೇ ವೈದಿಕವಾದ ನ್ಯಾಯ ಮತ್ತು ವೇದದಲ್ಲಿ ವಸ್ತುಸ್ವರೂಪವು ನಿರೂಪಿತವಾಗಿರುವ ಕ್ರಮ. ಬ್ರಹ್ಮನ ಸ್ಥಾಪನೆ ಗೋಸ್ಕರ ವೇದದಲ್ಲಿ ಬ್ರಹ್ಮನ ನಿರ್ಭೇದಭಾವವು ಸಮರ್ಥಿತವಾಗುವಸಂದರ್ಭದಲ್ಲಿ "ಏವಂ ಧರ್ಮಾನ್ ಪೃಥಕ್ ಪಶ್ಯನ್ ತಾನೇವಾನು ವಿಧಾವತಿ" (ಹೀಗೆ ಎಂದರೆ ಪರ್ವತದ ಶಿಖರದಮೇಲೆ ಬಿದ್ದ ನೀರು ಛಿದ್ರವಾಗಿ ಕೆಳಗೆ ಅಧೋಗತಿಯನ್ನು ರೀತಿಯಲ್ಲಿ ಪರಬ್ರಹ್ಮನಲ್ಲಿ ಎಂದರೆ ಸ್ವತಂತ್ರತತ್ತ್ವದಲ್ಲಿ ಗುಣಗುಣಿ ಭೇದವನ್ನು ಕಲ್ಪನೆಮಾಡಿದವನು ಅಧೋಗತಿಯನ್ನು ಹೊಂದುವನು ಎಂದು ಹೇಳಿರುವುದು). ವೇದನ್ಯಾಯಕ್ಕೆ ಅನುಗಣವಾಗಿ ಅದರ ಉಪಪಾದನೆಗಾಗಿ ಸ್ವತಂತ್ರತತ್ತ್ವದ ಜ್ಞಾನಕ್ಕೆ ಸಾಧನವಾಗುವ ಕ್ರಮದಲ್ಲಿ ಸ್ವತಂತ್ರದಿಂದ ಜಗತ್ತಿನ ಸೃಷ್ಟಿಯಿರುವುದು ಎಂದು "ವೇದಶಬ್ದೇಭ್ಯಃ ಏವಾದೌ ನಿರ್ಮಮೇ ಸ ಮಹೇಶ್ವರಃ" (ವೇದ ಶಬ್ದಗಳ ದೆಸೆಯಿಂದ ಎಂದರೆ ಅದಕ್ಕೆ ಪೋಷಕವಾಗಿ ಪರಮಾತ್ಮನು ಜಗತ್ತನ್ನು ಸೃಷ್ಟಿಸಿದನು) ಎನ್ನುವ ವೇದವಾಕ್ಯದ ಹಿಂದಿರುವ ಯುಕ್ತಿಯಾಗಿ ಮಧ್ವಸಿದ್ಧಾಂತವು ನಿರೂಪಿತವಾಗಿದೆ.

## ***ಸ್ವತಂತ್ರತತ್ತ್ವಸಿದ್ಧಿ***

------------

ಸ್ವತಂತ್ರ ಶುದ್ಧ. ಶುದ್ಧನೆಂದರೆ ಸ್ವತಂತ್ರತತ್ತ್ವದ ಎಲ್ಲಗುಣಗಳೂ ಸ್ವತಂತ್ರ ಎನ್ನುವುದನ್ನೇ ತಿಳಿಸುತ್ತವೆ.ಸ್ವತಂತ್ರತತ್ತ್ವದಲ್ಲಿ ಯಾವ ಒಂದು

ಅಸ್ವತಂತ್ರಭಾವವಿದ್ದರೂ ಅದು ಸ್ವತಂತ್ರತತ್ತ್ವವಾಗುವುದಿಲ್ಲ. ಈಶ್ವರ ಎನ್ನುವುದರ ಅರ್ಥವೇ ಸ್ವತಂತ್ರ. ಈ ತತ್ತ್ವವು ಸರ್ವಥಾ ಅಭಿನ್ನ.

ಅದರಲ್ಲಿ ಯಾವ ರೀತಿಯಾದ ಸ್ವಗತವಾದ ಭೇದವಿಲ್ಲ. ಯಾವ ರೀತಿಯಾದ ಪರಾಧೀನತೆಯೂ ಇಲ್ಲ. ಅದರ ಕಾರ್ಯವಾದ ಯಾವವಸ್ತುವೂ ಅದನ್ನು ನಿಯಮನ ಮಾಡಲಾರದು. ಸ್ವಗತಭೇದ ವಿವರ್ಜಿತನಾದ ಅನಂತಗುಣ ಪೂರ್ಣನಾದ ಸ್ವತಂತ್ರನಾದ ಅವನ್ನು ಅನಂತ ಆನಂದ, ಅನಂತ ಜ್ಞನ, ಅನಂತ ಬಲ, ಅನಂತ ಗುಣ ಎನ್ನುವ ರೂಪದಲ್ಲಿ ಧ್ಯಾನಮಾಡುವುದಕ್ಕಾಗಿ ಪ್ರಪಂಚದಲ್ಲಿ ಪರಸ್ಪರ ಭಿನ್ನವಾದ ಗುಣಗಳನ್ನು ಹೇಳುವ ರಿತಿಯಲ್ಲಿ ಪರಮಾತ್ಮನ ಅನಂತ ಗುಣಗಳನ್ನು ವರ್ಣಿಸುವ ಪದ್ಧತಿ ಇರುವುದು. ಈ ಕ್ರಮವನ್ನು ಬಿಟ್ಟು ಅವನ್ನು ಅನಂತನೇದು ತಿಳಿಯಲು ಬೇರೆ ಉಪಾಯವೇ ಇಲ್ಲ. ಇದೇ ವೇದದ ಸಂಪ್ರದಾಯ. ಇದನ್ನೇ ಶ್ರುತಿಯು "ಪರಾಸ್ಯ ಸಕ್ತಿಃ ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞನಬಲಕ್ರಿಯಾ ಚ" (ಇದರ ಶಕಿ ಸರ್ವೋತ್ತಮ, ಅದು ವಿವಿಧ, ಅದರ ಜ್ಞಾನ, ಬಲ ಮತ್ತು ಕ್ರಿಯಾ ಸ್ವಾಭಾವಿಕ, ಇದೇ ಶ್ರುತಿಸಿದ್ಧ) ಎಂದು ಅದರ ಸ್ವತಂತ್ರಭಾವವನ್ನು ನಿರೂಪಣೆಮಾಡುತ್ತದೆ. ಬ್ರಹ್ಮಸೂತ್ರವೂ "ಸರ್ವೋಪೇತಾ ಚ ತದ್ದರ್ಶನಾತ್ ಅದು ಸರ್ವಪೂರ್ಣ, ಅದೇ ಶ್ರುತಿ ಸಿದ್ಧವಾದ ಅರ್ಥವಾದುದರಿಂದ ಎಂದು ಹೇಳುತ್ತದೆ.

## ***ಸ್ವತಂತ್ರ ಪೂರ್ಣ***

-----------

ಸ್ವತಂತ್ರ ಅನಂತರೂಪದಲ್ಲಿ ವರ್ಣಿತವಾದರೂ ಅದು ಏಕ, ಅದ್ವಿತೀಯ, ನಿರ್ಭೇದ. ಅದರ ಒಂದು ಗುಣ ಇತರ ಗುಣಗಳಿಂದ ಅಭಿನ್ನ. ಅದರ ಒಂದೊಂದು ಗುಣವೂ ಇಡೀ ಜಗತ್ತಿಗೇ ಪ್ರವರ್ತಕವಾದುದು. ಅದರ ಜ್ಞಾನ ಆನಂದ, ಅದೇ ಪ್ರಕಾಶ, ಅದೇ ಬಲ. ಶ್ರೀಮದಾಚಾರ್ಯರು "ಸರ್ವೇ ಸರ್ವಗುಣಾತ್ಮಾನಃ ಸರ್ವಕರ್ತಾರ ಏವ ಚ" (ಸಮಸ್ತಗುಣಗಳೂ ಇತರ ಸಮಸ್ತ ಗುಣಾತ್ಮಕವಾದುವು, ಸರ್ವವೂ ಸರ್ವ ಕರ್ತೃ) ಎಂದು

ಉಪಪಾದಿಸಿದ್ದಾರೆ. ಈ ಪರಬ್ರಹ್ಮನೇ ಜಗತ್ತಿಗೆ ಮೂಲ ಎಮದರೆ ಜಗತ್ತಿನಲ್ಲಿ ಯಾವ ವಸ್ತುವಿನಲ್ಲಿ ಯಾವ ಗುಣವಿದೆಯೋ ಅದಕ್ಕೆ ಅವನೇ ಪ್ರವರ್ತಕ ಅಂದರೆ ವಸ್ತುವಿನ ಸ್ವರೂಪವನ್ನೇ ಮಾಡುತ್ತಾನೆ. ಚಾರ್ವಾಕರೂ ಸರ್ವವೂ ಸ್ವಭಾವದಿಂದ ಹುಟ್ಟುತ್ತದೆ ಎಂದರೆ ಆ ಸ್ವಭಾವಕ್ಕೂ ಕರ್ತೃ ಸ್ವತಂತ್ರನಾದ ಪರಬ್ರಹ್ಮನೇ. ಇದಕ್ಕೆ ಕಾರಣ ಸ್ವಭಾಕ್ಕೆ ಇರುವ ಪರಾಧೀನವಿಶೇಷಾವಾಪ್ತಿ.

## ***ಸ್ವತಂತ್ರವೇ ಸರ್ವಪ್ರವರ್ತಕ***

----------------

ಸ್ವತಂತ್ರವೇ ಸರ್ವಪ್ರವರ್ತಕ ಎಂದರೆ ಅಣುರೇಣು  ತೃಣಕಾಷ್ಟ ಕ್ರಿಮಿ ಕೀಟ ಮಾನವ ದೇವ ದೈತ್ಯ ದಾನವ ಸ್ಥಾವರ ಜಂಗಮಾ ತ್ಮಕವಾದ ಈ ಜಗತ್ತಿನ ಸರ್ವ ವಸ್ತುಗಳ ಸತ್ತಾ, ಸ್ವರೂಪ ಪ್ರಮಿತಿ ಪ್ರವೃತ್ತಿಗಳಿಗೆ ಸಂಬಂಧಿಸಿದ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಭಾವ, ಅಭಾವ, ಅದಕ್ಕೆ ಆಶ್ರಯುವಾದ ಕಾಲ, ಆಕಾಶ, ಅದಕ್ಕೆ ಪ್ರಯೋಜಕವಾದ ಅಭಿಮನಿದೇವತಾ, ಅದರ ಕಾರಣಸಾಮಗ್ರೀ ಮೊದಲಾದ ಅನಂತ ಭಾವಗಳಿಗೆ ಸಂಬಂಧವಾದ ಎಲ್ಲ ಧರ್ಮಕ್ಕೂ ಪ್ರವರ್ತಕ ಎಂದು ಅರ್ಥ. ಈ ಧರ್ಮವನ್ನೇ ಶಾಸ್ತ್ರ ಪರಿಭಾಷೆಯಲ್ಲಿ ಗುಣ ಎಂದು ಕರೆಯುತ್ತಾರೆ. ಈ ಪರಿಭಾಷೆಯಲ್ಲಿ ದ್ರವ್ಯವೆಂಬ ಭಾವವೂ ಗುಣವೇ ಆಗಿರುವುದು. ಅಂತಹ ಗುಣಕ್ಕೆ ಪ್ರವರ್ತಕ ಎಂದರೆ ಅದೇ ನಿಮಿತ್ತದಿಂದ ಆ ಗುಣವುಪೂರ್ಣ ಎಂದು ಅರ್ಥ. ಪ್ರರ್ತಕ ಎನ್ನುವುದು ಸ್ವತಂತ್ರ ಎಂಬುವುದರ ಅರ್ಥವಾದರೆ ಅದರಿಂದ ಸಿದ್ಧವಾದುದು ಗುಣಪೂರ್ಣ ಎನ್ನುವ ಭಾವ ಈರೀತಿಯಾಗಿ ಗುಣಪೂರ್ಣ ಎಂದರೆ ಗುಣಗಳಿಂದ ಪೂರ್ಣ ಎಂದು ಅರ್ಥಮಾಡುವುದು ವಿಶೇಷದ ಮಹಿಮೆಯಿಂದ ಸಾಧುವಾದರೂ ಗುಣವೇ ಪೂರ್ಣ ಎನ್ನುವ ಅರ್ಥವು ಜ್ಞಾನಸಾಧನವಾಗುತ್ತದೆ.

## ***ಸ್ವತಂತ್ರವೇ ಸರ್ವವ್ಯಾಪಕ***

-----------------

ಪ್ರಪಂಚದಲ್ಲಿ ಒಂದು ವಸ್ತು ಅನಾದಿಯಾಗಲು, ನಿತ್ಯವಾಗಲು, ಸತ್ಯವಾಗಲು, ಉತ್ತಮವಾಗಲು, ಕರ್ತೃತ್ವಾದಿ ಗುಣಸಂಪನ್ನವಾಗಲು, ಮಂಗಳಕರವಾಗಲು

ಸ್ವತಂತ್ರವಾದ ಆ ಪರಬ್ರಹ್ಮನೇ ಕಾರಣ. ಈ ಅರ್ಥದಲ್ಲಿಯೇ ಅದು ಸರ್ವಾಂತರ್ಯಾಮಿ ಎಂದು ರೂಪಿತವಾಗಿದೆ. ಇದನ್ನೇ ಶ್ರುತಿಯು " ಸರ್ವಂ ಖಲ್ವಿದಂ ಬ್ರಹ್ಮ" (ಈ ಎಲ್ಲವೂ ಬ್ರಹ್ಮನೇ) ಎಂದು ಹೇಳುತ್ತದೆ.

## *ಸ್ವತಂತ್ರತತ್ತ್ವ ಒಂದೇ ಶ್ರುತಿಸಿದ್ಧವಾದ ಪರಬ್ರಹ್ಮ*

------------------------------

"ಸರ್ವಂ ಖಲ್ವಿದಂ ಬ್ರಹ್ಮ" ಎನ್ನುವ ಶ್ರುತಿಗೆ ಆಪಾತತಃ ಎಲ್ಲಕ್ಕೂ ಬ್ರಹ್ಮಾಭೇದವಿರುವುದೆಮದು ಅರ್ಥಮಾಡುತ್ತಾರೆ ಆದರೆ ಇದು ಸ್ವತಂತ್ರ ಮತ್ತು ಗುಣಪೂರ್ಣ ಎಂಬ ತತ್ತ್ವಕ್ಕೆ ಹೊಂದುವುದಿಲ್ಲ. ಪರತಂತ್ರವೂ ಅಪೂರ್ಣವೂ ಆದ ಜಗತ್ತಿನ ಅಭೇದವು ಸ್ವತಂತ್ರಕ್ಕೆ ಸಂಗತವಲ್ಲ. ಈ ಕಾರಣದಿಂದ ಸರ್ವವೂ ಬ್ರಹ್ಮ ಎಂದರೆ ಸರ್ವವೂ ಬ್ರಹ್ಮನೇ ಅಂತರ್ಯಾಮಿಯಾಗಿ ಉಳ್ಳದ್ದು ಎಂದರೆ ಉಕ್ತ ರೂಪದಲ್ಲಿ ಬ್ರಹ್ಮನ ಕಾರ್ಯ ಎಂದು ಅರ್ಥಮಾಡಬೇಕು.

## *ಜೀವಬ್ರಹ್ಮರ ಅಭೇದ ಶ್ರುತಿಯಿಂದ ನಿರಾಕೃತ*

------------------------------

ಮಾಯಾವಾದಿಗಳು "ತತ್ತ್ವಮಸಿ" ಎನ್ನುವ ಛಾಂದೋಗ್ಯೋಪನಿಷತ್ತಿನ ವಾಕ್ಯವು ಜೀವಬ್ರಹ್ಮರ ಅಭೇದವನ್ನು ಹೇಳುವುದೆನ್ನುತ್ತಾರೆ. ಈ ವಾಕ್ಯವನ್ನು ಉದ್ದಾಲಕರು ತಮ್ಮ ಮಗನಾದ ಶ್ವೇತಕೇತುವನ್ನು ಕುರಿತು ಉಪದೇಶಿಸದರು. ಶ್ವೇತಕೇತುವು ಪೂರ್ಣವಿದ್ಯಾವಂತನೆಂದು ತಿಳಿದು ತಾನೇ ಕೇಶವ, ಶಿವ ಮುಂತಾದರೀತಿಯಲ್ಲಿ ಪರಬ್ರಹ್ಮಾಭೇದವನ್ನು ತಿಳಿದು ಅದಕ್ಕೆ ಅನುಗುಣವಾಗಿ ದರ್ಪದಿಂದ ನಡೆದನು. ಇದನ್ನು ಕಂಡ ತಂದೆಯಾದ ಉದ್ದಾಲಕರು ನಿನಗೆ ಸರ್ವೋತ್ತಮ ವಸ್ತುವಿನ ಜ್ಞಾನವಾಗಲಿಲ್ಲ. ಅದೇ ನಿನ್ನ ಈ ಅವಿನಯಕ್ಕೆ ಕಾರಣ ಎಂದು ಹೇಳಿದನು. ಶ್ವೇತಕೇತುವಿಗೆ ತಾನು ವಿದ್ಯಾವಂತನಾದರೂ ತತ್ತ್ವಜ್ಞಾನ ಹೊಂದಲಿಲ್ಲ ಎಂಬ ಜ್ಞಾನವಾಯಿತು. ಆಗ ಅವನು ತಂದೆಯನ್ನು ಪ್ರಾರ್ಥಿಸಿ ದನು. ತಂದೆಯು ಒಂಭತ್ತು ದೃಷ್ಟಾಂತಗಳಿಂದ ಸರ್ವೋತ್ತಮವಾದ ಪರಬ್ರಹ್ಮತತ್ತ್ವದ ಸ್ವತಂತ್ರ ಮತ್ತು ಗುಣಪೂರ್ಣತ್ವವನ್ನು ಉಪದೇಶಿಸಿ ಉಪಸಂಹಾರವಾಕ್ಯದಲ್ಲಿ ಆ ತತ್ತ್ವವೇ ಆತ್ಮನೆಂದೂ ಎಂದರೆ ಸ್ವತಂತ್ರ ಮತ್ತು

ಗುಣಪೂರ್ಣನೆಂದೂ ನಿನ್ನದೆಂದು ನೀನು ತಿಳಿದಿರುವುದೂ ಅವನ ಮಹಿಮೆ ಎಂದೂ ಅವನೇ ನಿನ್ನಲ್ಲಿ ಅಂತರ್ಯಾಮಿಯಾಗಿ ನೀನು ಸರ್ವಥಾ ಅದರ ಕಾರ್ಯ ಎಂದೂ ಹೇಳುವ "ಸ ಆತ್ಮಾ ತತ್ತ್ವಮಸಿ" ಎಂಬ ವಾಕ್ಯವನ್ನು ಉಪದೇಶಮಾಡಿದರು. ಈ ವಾಕ್ಯದ ಪದವಿಭಾಗವು ಎರಡು ವಿಧವಾಗಿ ಮಾಡಬಹುದು. "ಸಃ ಆತ್ಮಾ ಅತತ್ ತ್ವಂ ಅಸಿ" ಎಂದು ಒಂದು. ಇದಕ್ಕೆ "ಆ ಸರ್ವೋತ್ತಮ ತತ್ತ್ವವು ಆತ್ಮಾ; ನೀನು ಅದಲ್ಲ" ಎಂದು ಅರ್ಥ. ಇದು ಆ ಸರ್ವೋತ್ತಮ ವಸ್ತು ಮತ್ತು ಶ್ವೇತಕೇತುವಿನಿಂದ ವಿಲಕ್ಷಣ ಎಂದು ಬೋಧಿಸುತ್ತದೆ. "ಸಃ ಆತ್ಮಾ ತತ್ ತ್ವಂ ಅಸಿ" ಎಂದು ಇನ್ನೊಂದು ವಿಧವಾದ ಪದ ವಿಭಾಗ. ಇದರ ಅರ್ಥ ನೀನು ಆ ಸರ್ವೋತ್ತಮ ವಸ್ತುವಿನ ಕಾರ್ಯ ಎಂದು ಬೋಧಿಸುವ 'ಅದು ಆತ್ಮ'. ಅದು ನೀನು ಎಂದರೆ ಆ ಆತ್ಮನನ್ನು ಉಳ್ಳವನು ನೀನು' ಎಂಬ ಅರ್ಥವನ್ನು ಕೊಡುತ್ತದೆ. ಈ ವಾಕ್ಯದ ಸಂದರ್ಭವನ್ನೂ ಉಪನಿಷತ್ತಿನ ವಾಕ್ಯಕ್ಕೆ ಅರ್ಥ ಮಾಡುವ ಪ್ರಕ್ರಿಯೆಯನ್ನೂ ಮನಸ್ಸಿನಲ್ಲಿ ಇಟ್ಟುಕೊಂಡರೆ ಶ್ವೇತಕೇತುವಿನ ಅಭೇದವನ್ನು ಸರ್ವೋತ್ತಮನಾದ ಪರಬ್ರಹ್ಮನಿಗೆ ಹೇಳಲು ಸ್ವಲ್ಪವೂ ಅವಕಾಶ ವಿರುವುದಿಲ್ಲ. "ಸಃ ಆತ್ಮಾ" (ಅದು ಆತ್ಮಾ) ಎನ್ನುವ ವಾಕ್ಯ ಭಾಗವು ಸರ್ವೋತ್ತಮವಾದ ವಸ್ತು ಶ್ವೇತಕೇತುವಿನಿಂದ ವಿಲಕ್ಷಣ ಎಂದು ಸ್ಪಷ್ಟಪಡಿಸುತ್ತದೆ. ಶ್ವೇತಕೇತುವಿಗೂ ತಾನು ಅಲ್ಪ ಎಂಬ ಅವನ ಸಾಕ್ಷಿಗ್ರಣವೂ ಇದೆ. ಅವನು ಅಲ್ಪಜ್ಞನೆಂದು ತಿಳಿದು ಗುರೂಪದೇಶವನ್ನು ಅಪೇಕ್ಷಿದುದೇ ಇದಕ್ಕೆ ಸಾಕ್ಷಿ. ಮತ್ತೂ ಈ ಉಪದೇಶವು ಅವನ ಅಹಂಕಾರ ಖಂಡನೆಗೆ ಪ್ರವೃತ್ತವಾಗಿದೆ. 'ನೀನೇ ಸರ್ವೋತ್ತಮ' ಎಂದು ಉಪಸಂಹಾರ ಮಾಡಿದರೆ ಅಹಂಕಾರ ಖಂಡನೆಯಾಗುವುದಿಲ್ಲ. ಈ ಕಾರಣಗಳಿಂದ ವಾದಿಗಳ 'ಅಭೇದವೇ ಶ್ರುತ್ಯರ್ಥ' ಎನ್ನುವ ಉಕ್ತಿಯು ಯುಕ್ತವಲ್ಲ.

***ಜೀವ ಬ್ರಹ್ಮನ ಪ್ರತಿಬಿಂಬ***

----------------

ಜೀವಬ್ರಹ್ಮರ ಭೇದವು ನ್ಯಾಯವೈಶೇಷಿಕರು ಹೇಳುವ ಘಟಪಟಗಳೆಂಬ ಸ್ವತಂತ್ರ ವಸ್ತುಗಳಿಗಿರುವ ಅತ್ಯಂತಭೇದವಲ್ಲ. ಅಥವಾ ಸಾಂಖ್ಯರು ಸ್ವತಂತ್ರವಾದ

ಪ್ರಕೃತಿಪುರುಷರಿಗೆ ಹೇಳುವ ಭೇದವೂ ಅಲ್ಲ. ಈ ಭೇದವೂ ಅತ್ಯಂತಭೇದ. ಜೀವಬ್ರಹ್ಮರಿಗೆ ಭೇದವಿದ್ದರೂ ಅಭೇದವಿದ್ದರೂ ಜೀವನು ನಿಯಮ್ಯನೆಂದೂ ಬ್ರಹ್ಮನು ನಿಯಾಮಕನೆಂದೂ ಸಿದ್ಧಿಯಾಗುವುದಿಲ್ಲ. ಅವರಿಗೆ ಅತ್ಯಂತ ಭೇದವಿದ್ದರೆ ಬ್ರಹ್ಮನ್ನು ನಿರಾಕರಿಸಿ ಸ್ವತಂತ್ರ ನಾದ ಜೀವನು ಇರಬೇಕಾವುದು. ಜೀವ ನಿಯಮ್ಯ, ಬ್ರಹ್ಮ ನಿಯಾಮಕ ಎನ್ನುವುದೇ ಸರಿಯಾದ ಭಾವ. ಜೀವನು ಬ್ರಹ್ಮನ ಅಂಶ ಎಂದರೂ ಸ್ವರೂಪಾಂಶವಲ್ಲ. ಬ್ರಹ್ಮನ ಸ್ವರೂಪಾಂಶ ಎಂದರೆ ಬ್ರಹ್ಮನೇ ಆಗುತ್ತಾನೆ. ಬ್ರಹ್ಮನ ಅಂಶ ಜೀವ ಎಂದರೆ ಪ್ರತಿಬಿಂಬ ಅಂದರೆ ಬ್ರಹ್ಮನಿಂದ ದತ್ತವಾದ ಸತ್ತಾ ಉಳ್ಳವನು. ಜೀವನಿಂದ ಬ್ರಹ್ಮ ಅನ್ಯ. ಬ್ರಹ್ಮನಿಂದ ಜೀವನಾದರೋ ಅನನ್ಯ. ಈ ಅರ್ಥದಲ್ಲಿಯೇ ಜೀವನನ್ನು ಬ್ರಹ್ಮ ಸಮ ಎಂದೂ ಶಾಸ್ತ್ರದಲ್ಲಿ ಹೇಳುತ್ತಾರೆ.

## *ಪ್ರಚ್ಯುತೋ$ಶೇಷದೋಷೈಃ ಸದಾ ಪೂರ್ತಿತಃ*

-----------------------------

ಸ್ವತಂತ್ರ ಸರ್ವಾವಸ್ಥೆಯಲ್ಲಿಯೂ, ಸರ್ವರೂಪದಲ್ಲಿಯೂ ಸರ್ವಥಾ ಸ್ವತಂತ್ರ ಮತ್ತು ಗುಣಪೂರ್ಣ ಸರ್ವದಾ ಸರ್ವಪ್ರವರ್ತಕ. ವಿಶಿಷ್ಟಾದ್ವೈತ ಸೃಷ್ಟಿಕಾಲದಲ್ಲಿ ಮಾತ್ರ ಬ್ರಹ್ಮ ಸೃಷ್ಟಿಕರ್ತ ಎನ್ನುತ್ತದೆ. ಬ್ರಹ್ಮ ಸ್ವತಂತ್ರನಾದುದುರಿಂದ ತನ್ನ ಮಹಿಮೆಯಿಂದಲೇ ಸರ್ವಕಾಲದಲ್ಲಿಯೂ ಸರ್ವಕ್ಕೂ ಸರ್ವ ಪ್ರವರ್ತಕನಾದುದರಿಂದ ಸೃಷ್ಟಿಯು ನಿರಂತರವಾದುದು. ಹಾಗೆಯೇ ಯಾವಾಗಲೂ ಸ್ಥಿತಿ ಕರ್ತೃವೂ ಸಂಹಾರಕರ್ತೃವೂ ಆಗಿರುವನು. ಹೀಗೆಯೇ ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳು ನಿರಂತರವಾಗಿ ಸ್ವತಂತ್ರನಾದ ಬ್ರಹ್ಮನ ಕಾರ್ಯಗಳು. ಇದರಿಂದ ಅವನು ಯಾವಾಗಲೂ ಗುಣಪೂರ್ಣ ಮತ್ತು ನಿರ್ದೋಷ. ಇದನ್ನೇ ಶ್ರೀಮದಾಚಾರ್ಯರು ದ್ವಾದಶಸ್ತೋತ್ರದಲ್ಲಿ "ಪ್ರಚ್ಯುತೋ$ಅಶೇಷದೋಷೈಃ ಸದಾ ಪೂರ್ತಿತಃ" ಎಂದು ಹೇಳಿದ್ದಾರೆ.

## *ನಾರಾಯಣಂ ಮಹಾಜ್ಞೇಯಂ*

------------------

ಸ್ವತಂತ್ರನೂ ಗುಣಪೂರ್ಣನೂ ಆದ ಪರಬ್ರಹನು ಸರ್ವಾಂತರ್ಯಾಮಿ ಎಂದು ತಿಳಿದರೆ ಸರ್ವವೂ ಬ್ರಹ್ಮಮಯವಾಗಿ ಯಾವುದರ ಜ್ಞಾನಮಾಡಿಕೊಂಡರೂ ಸರ್ವಕ್ಕೂ ಪರಬ್ರಹ್ಮನೇ ಸರ್ವ ಪ್ರವರ್ತಕನಾದುದರಿಂದ ಅವನ್ನೇ ತಿಳಿದಂತಾಗುವುದು. ಧ್ವನ್ಯಾತ್ಮಕವಾದ ಮತ್ತು ಶಬ್ದಾತ್ಮಕವಾದ ಸರ್ವ ಶಬ್ದಗಳೂ ಪರಮಾತ್ಮವಾಚಕವೇ ಆಗುವುವು. ಯಾವ ಶಬ್ದದಿಂದ ಯಾವ ಭಾವವು ಜ್ಞಾಪಿತವಾಗುತ್ತದೋ ಅದೇ ಆ ಶಬ್ದದ ಅರ್ಥವಾಗಿರುವುದು. ಆ ಅರ್ಥಕ್ಕೆ ಸತ್ತಾ ಪ್ರದನೂ ಪ್ರವರ್ತನೂ ಆದವನು ಪರಬ್ರಹ್ಮನಾದ ನಾರಾಯಣನೇ. ಈ ರೀತಿಯಾಗಿ ಸರ್ವಜ್ಞನದಲ್ಲಿಯೂ ಜ್ಞೇಯವಾದ ವಿಷಯ ಗುಣಪೂರ್ಣನಾದ ನಾರಾಯಣನೇ. ಇದನ್ನೇ ಶ್ರುತಿಯು "ನಾರಾಯಣಂ ಮಹಾಜ್ಞೇಯಂ" ಎನ್ನುತ್ತದೆ.

## ಬ್ರಹ್ಮ ವೇದಾಂತ ವೇದ್ಯ

-----------------

ಯೋಗಶಾಸ್ತ್ರದಲ್ಲಿ ಪ್ರತಿಭೆಯಿಂದ ತತ್ತ್ವಗ್ರಹಣವಾಗುತ್ತದೆ ಎನ್ನುತಾರೆ. ಪ್ರತಿಭೆ ವೈಯಕ್ತಿಕ ವಿಷಯವಾದುದರಿಂದ ಅದನ್ನು ಪ್ರಮಾಣ ಎನ್ನಲಾಗುವುದಿಲ್ಲ ಮತ್ತೂ ಅದೇ ಪರತತ್ತ್ವವೇ ಇಲ್ಲ ಎನ್ನುವುದಕ್ಕೆ ಸಾಧನ ಎನ್ನುವ ಆಕ್ಷೇಪಕ್ಕೆ ಉತ್ತರವಿಲ್ಲ. ಎಲ್ಲ ಪರೀಕ್ಷೆಗಳಿಗೂ ಅವಕಾವನ್ನು ಕೊಟ್ಟು ತನ್ನ ಪ್ರಾಮಾಣ್ಯವನ್ನು ಸಮರ್ಥನೆಮಾಡಿಕೊಂಡು ಸಪರಿಕರಿಗಾವಿ ಪರತತ್ತ್ವವನ್ನು ತಿಳಿಸುವ ವೇದ ಒಂದೇ ಪ್ರಮಾಣ. ನಿರ್ದೋಷನೂ, ಸಕಲ ಗುಣಪೂರ್ಣನೂ, ವೇದಾಂತವೇದ್ಯನೂ ಆದವನೇ ಪರಬ್ರಹ್ಮ.

## ಬ್ರಹ್ಮನೇ ಗಮ್ಯ

-----------

ಗಮ್ಯ ಎಂದರೆ ಶಾಸ್ತ್ರಜನ್ಯ ಜ್ಞಾನಿದಿಂದ ಪ್ರಾಪ್ಯ ಎಂದು ಅರ್ಥ. ಈ ಪ್ರಾಪ್ತಿಯೇ ಜೀವನ ಅಂತಿಮಗುರಿ, ಇದೇ ಆನಂದ. ಸಂಸಾರಾವಸ್ಥೆ ಯಲ್ಲಿಯೂ ಅಲೌಕಿಕನಾದ ಪರಬ್ರಹ್ಮನ ಜ್ಞಾನವನ್ನು ಜೀವನು ಎಷ್ಟು ಮಾಡಿಕೊಳ್ಳುತ್ತಾನೋ ಅಷ್ಟು ಆನಂದವನ್ನು ಅನುಭವಿಸುತ್ತಾನೆ.

ಲೌಕಿಕವಾದ ವಿಷಯಸುಖವನ್ನು ಅನುಭವಿಸುವುದು ದುಃಖಗರ್ಭಿತವಾಗಿರುವುದು. ತಪಸ್ಸಿನಿಂದ ಸರ್ವತ್ರದಲ್ಲಿಯೂ ಬ್ರಹ್ಮದರ್ಶನವಾದರೆ ಸರ್ವದಾ ಸ್ವತಂತ್ರನೂ, ಗುಣಪೂರ್ಣನೂ, ನಿರ್ದೋಷನೂ ಆದ ಪರಬ್ರಹ್ಮನ ಅನುಭವವಾಗಿ ಅದೇ ಆನಂದವಾಗುತ್ತದೆ. ವೈಷಯಿಕ ಸುಖಾಪೇಕ್ಷೆಯು ನಾಶವಾಗಿ ಜ್ಞಾನವು ವೃದ್ಧಿಹೊಂದುತ್ತಾ ಪರಿಪಕ್ವವಾಗಿ ಪರಬ್ರಹ್ಮಪ್ರಾಪ್ತಿಯಾಗುವುದೇ ಮುಕ್ತಿ.

### *ಪರಬ್ರಹ್ಮನೇ ಗುರು*

-------------

ಮೇಲೆ ತಿಳಿಸಿದಂತಹ ಜ್ಞಾನವು ಸ್ವತಂತ್ರ, ಗುಣಪೂರ್ಣ, ನಿರ್ದೋಷ, ಜ್ಞೇಯ ಮತ್ತು ಗಂಯನಾದ ಪರಬ್ರಹ್ಮನ ಪ್ರಸಾದದಿಂದ ಮಾತ್ರ ಲಭ್ಯವಾಗುತ್ತದೆ. ಬ್ರಹ್ಮನ ಪ್ರಸಾದವೆಂದರೆ ಅವನ ಇಚ್ಛಾ ವಿಶೇಷ. ಇದನ್ನು ಜೀವನು ತನ್ನ ಪ್ರಯತ್ನದಿಂದ ಸಾಧಿಸಲಾರ. ಜೀವನ ಸ್ವಪ್ರಯತ್ನದಲ್ಲಿ ಕರ್ತೃತ್ವಾರೋಪವೂ, ಸ್ವತಂತ್ರನಾದ ಪರಬ್ರಹ್ಮಣ ನಿರಾಕರಣೆಯೂ ಇರುವುದು. ಸ್ವಾಭಾವಿಕವಾದ ಸಾಧುತನ, ವಿಷಯವೈರಾಗ್ಯ,ಪರಮಾತ್ಮನಲ್ಲಿ ಭಕ್ತಿ, ಸಚ್ಛಾಸ್ತ್ರದ ಶ್ರವಣ, ಮನ್ನ, ನಿಧಿಧ್ಯಾಸನಗಳು ಪ್ರಬ್ರಹ್ಮನ ಪ್ರಸಾದದ ಗುರುತಾಗಿರುತ್ತದೆ. ಜೀವನ ಪ್ರಯತ್ನಲಭ್ಯವಲ್ಲವೆಂದರೆ ಆಕಸ್ಮಿಕವಾಗಿ ಪ್ರಾಪ್ತವಾಗುವುದು ಎಂದು ತಿಳಿಯಬಾರದು. ಅದು ಪರಬ್ರಹ್ಮನಿಂದ ಸಪರಿಕರಿವಾಗಿ ದತ್ತವಾದುದು. ಹೀಗೆ ಸಪರಿಕರವಾಗಿ ಜೀವನಿಗೆ ಸ್ವಯೋಗ್ಯವಾದ ತನ್ನಜ್ಞಾನಪ್ರದನಾದ ಪರಬ್ರಹ್ಮ ಗುರುವೂ ಆಗಿದ್ದಾನೆ. ಇವನೇ ಶಾಸ್ತ್ರಪ್ರವರ್ತಕ. ಅವನ ಉಪದೇಶವೇ ಶಾಸ್ತ್ರ. ಶಾಸ್ತ್ರವೆಂದರೆ ಸರ್ವವೇದಾರ್ಥ ನಿರ್ಣಾಯಕಗಳಾದ ಬ್ರಹ್ಮಸೂತ್ರಗಳು. ಬ್ರಹ್ಮಸೂತ್ರಗಳಿಂದ ನಿರ್ಣೀತವಾದ ಅರ್ಥವುಳ್ಳ ವೇದವೇ ವೇದ. ಅದೇ ಶಾಸ್ತ್ರ. ಈ ಶಾಸ್ತ್ರವನ್ನು ಜಗತ್ತಿಗೆ ಉಪದೇಶಿಸುವ ಪರಬ್ರಹ್ಮನೇ ಜಗತ್ತಿಗೆ ಗುರು. ಈ ಪರಬ್ರಹ್ಮನ ಸನ್ನಿಧಾನವಿಶೇಷವುಳ್ಳವನೇ ಲೋಕದಲ್ಲಿ ಗುರುವೆನ್ನಿಸಿಕೊಳ್ಳಲು ಅರ್ಹನಾಗುತ್ತಾನೆ. ಗುರುವಿನ ಮುಖ್ಯವಾದ ಲಕ್ಷಣ ಶ್ರೋತ್ರಿಯತ್ವ ಮತ್ತು ಬ್ರಹ್ಮನಿಷ್ಠೆ.

ಸ್ವತಂತ್ರನಾದ ಪರಬ್ರಹ್ಮ ಗುಣಪೂರ್ಣ, ನಿರ್ದೋಷ, ಜ್ಞೇಯ, ಗಮ್ಯ ಮತ್ತು ಗುರು. ಇವನು ಅಚಿಂತ್ಯ ಶಕ್ತನಾದ್ದರಿಂದ ಇವನ ವಿಷಯದಲ್ಲಿ ಯಾವುದೂ ಉಪಚಾರೋಕ್ತಿಯಲ್ಲ. ಎಲ್ಲವೂ ಅವನ ಗುಣಪೂರ್ಣತ್ವವನ್ನು ಉಪಪಾದನೆ ಮಾಡುತ್ತವೆ. ಇದೇ ಅವನ ಮಹಾಮಹಿಮೆ.

## *ಬ್ರಹ್ಮಶಬ್ದಶ್ಚ ವಿಷ್ಣಾ ವೇವ*

----------------

ಬ್ರಹ್ಮಶಬ್ದವಾಚ್ಯನಾದವನೇ ವಿಷ್ಣು. ಸೂತ್ರಕಾರರಾದ ಬಾದರಾಯಣ ವೇದವ್ಯಾಸದೇವರು ಬ್ರಹ್ಮಸೂತ್ರಗಳನ್ನು ರಚನೆಗಿಂತಲೂ ಮೊದಲು ತಮ್ಮ ಶಿಷ್ಯರಾದ ಶೇಷಪೈಲರಿಂದ ರಚಿತವಾದ ದೈವೀಮೀಮಾಂಸಾ ಸೂತ್ರಗಳ ಉಪಸಂಹಾರದಲ್ಲಿ "ಸ ವಿಷ್ಣುರಾಹ ಹಿ ತಂ ಬ್ರಹ್ಮೇತ್ಯಾಚಕ್ಷತೇ" ಎಂದು ಶ್ರುತಿಗಳಲ್ಲಿ ಸಿದ್ಧನಾದ ವಿಷ್ಣುವನ್ನು ಪ್ರಸ್ತಾಪನೆಮಾಡಿ, ಅದರ ನಂತರವೇ "ಅಥಾತೋ ಬ್ರಹ್ಮಜಿಜ್ಞಾಸಾ" ಮೊದಲಾದ ಬ್ರಹ್ಮಸೂತ್ರಗಳನ್ನು ರಚನೆಮಾಡಿದರೆಂದು ಶಾಸ್ತ್ರಸಂಪ್ರದಾಯವಿದೆ. ಇದರಿಂದ ಬ್ರಹ್ಮ ಎಂದು ಸೂತ್ರದಲ್ಲಿರುವ ಪದವು ವಿಷ್ಣು ಎಂದು ಶ್ರುತಿಸಿದ್ಧವಾದ ಬ್ರಹ್ಮತತ್ತ್ವವನ್ನು ತಿಳಿಸುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಶ್ರೀಮದಾಚಾರ್ಯರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ "ಬ್ರಹ್ಮ ಶಬ್ದಶ್ಚ ವಿಷ್ಣಾವೇವ" (ಬ್ರಹ್ಮಶಬ್ದವು ವಿಷ್ಣು ಎಂಬ ಒಂದೇ ಅರ್ಥವುಳ್ಳದ್ದು) ಎಂದು ಸಿದ್ಧಾಂತಗೈದಿದ್ದಾರೆ.

## *ತದ್ವಿಜಿಜ್ಞಾಸಸ್ವ ತದ್ಬ್ರಹ್ಮ*

---------------

ಶ್ರುತಿಯಲ್ಲಿ "ಅಥ ಕಸ್ಮಾದುಚ್ಯತೇ ಬ್ರಹ್ಮೇತಿ ಬೃಹಂತೋಹ್ಯಸ್ಮಿನ್ ಗುಣಾಃ" (ಈ ಸರ್ವೋತ್ತಮವಾದ ತತ್ತ್ವವು ಏಕೆ ಬ್ರಹ್ಮ ಎಂದು ಕರೆಯಲ್ಪಡುತ್ತದೆ ಎಂದರೆ ಇದು ಗುಣಪೂರ್ಣವಾದ್ದರಿಂದ ಎಂದು ಉತ್ತರ) ಎಂದು ಗುಣಪೂರ್ಣತ್ವವೇ ಬ್ರಹ್ಮಶಬ್ದದ ಅವಯವಾರ್ಥ ಎಂದು ಹೇಳಿದೆ. ಗುಣಪೂರ್ಣ ಎಂದರೆ ಸ್ವತಂತ್ರ ಎನ್ನುವ ಭಾವವೂ ಅದರಲ್ಲಿಯೇ ಇರುವುದು. ಹೀಗೆ ಸ್ವತಂತ್ರವೂ ಗುಣಪೂರ್ಣವೂ ಆದದ್ದು ಬ್ರಹ್ಮ. ಇದಕ್ಕೆ ಅನುಸಾರವಾಗಿ ಶ್ರುತಿಯು "ಯತೋ ವಾ ಇಮಾನಿ ಭೂತನಿ ಜಾಯಂತೆ,

ಯೇನ ಜಾತಾನಿ ಜೀವಂತಿ, ಯತ್ ಪ್ರಯತ್ಯಭಿಸಂವಿಶಂತಿ, ತದ್ವಿಜಿಜ್ಞಾಸಸ್ವ, ತದ್ಬ್ರಹ್ಮ" (ಯಾವುದರಿಂದ ಈ ಪ್ರತ್ಯಕ್ಷಾದಿ ಪ್ರಮಾಣ ಸಿದ್ಧವಾದ ಚೇತನಾ ಚೇತನಾತ್ಮಕವಾದ ವಸ್ತುಗಳು ಅಂದರೆ ಸರ್ವಭೂತಗಳು ಹುಟ್ಟುತ್ತವೆಯೋ, ಯಾವುದರಿಂದ ಜೀವಿಸುತ್ತವೆಯೋ, ಯಾವುದರಲ್ಲಿ ಲಯವನ್ನು ಹೊಂದುತ್ತವೋ, ಯಾವುದನ್ನು ಹೊಂದಿ ಮುಕ್ತವಾಗುವುವೋ ಅದನ್ನು ಜಿಜ್ಞಾಸೆ ಮಾಡು. ಅದು ಬ್ರಹ್ಮ) ಎಂದು ಈ ಜಗತ್ತಿನ ಸೃಷ್ಟ್ಯಾದ್ಯಷ್ಟಕರ್ತೃವೋ ಅದನ್ನು ಜಿಜ್ಞಾಸೆಮಾಡು ಅಂದರೆ ಅದರ ವಿಷಯದಲ್ಲಿ ಶ್ರವಣ, ಮನನ, ನಿದಿಧ್ಯಾಸನಮಾಡು ಎಂದರೆ ಗುಣಪೂರ್ಣನಾದ ಪರಬ್ರಹ್ಮನ್ನು ಪ್ರತಿಪಾದಿಸುವ ಶಾಸ್ತ್ರವನ್ನು ಕ್ರಮಾವಾಗಿ ಪರಂಪರಾಗತರಾದ ಗುರುಗಳಿಂದ ಅಭ್ಯಾಸಮಾಡಿ ಅರ್ಥಮಾಡಿಕೋ ಎಂದು ಹೇಳುತ್ತದೆ. ಬ್ರಹ್ಮತತ್ತ್ವವು ಈ ಮೇಲೆಹೇಳಿದ ಶ್ರುತಿಯಲ್ಲಿ ಹೇಳಲ್ಪಟ್ಟಿರುವುದರಿಂದ ಅದು ಶ್ರುತ್ಯುಕ್ತ ಬ್ರಹ್ಮ. ಅದರ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ಶ್ರುತಿಯೇ ಗತಿ. ಶ್ರುತ್ಯರ್ಥವನ್ನು ಮಾಡಿಕೋ ಎಂದರೆ ಅದರ ನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನು ಅಧ್ಯಯನಮಾಡು ಎಂದರೆ ಸೂತ್ರನ್ಯಾಯಗಳಿಂದ ಪ್ರತಿಷ್ಠಿತವಾದ ಶ್ರುತ್ಯರ್ಥವನ್ನು ಮಾಡಿಕೋ ಎಂದು ಶ್ರಣಮಾಡು ಎನ್ನುವುದರ ಅರ್ಥ. ಮನನಮಡು ಎಂದರೆ ಶ್ರುತಿಯ ಅರ್ಥವು ಯುಕ್ತಾಯುಕ್ತವೇ ಎಂದು ಚಿಂತನೆಮಾಡಿ ಶ್ರವಣದಿಂದ ಬಂದ ಜ್ಞಾನವನ್ನು ಸುಪ್ರತಿಷ್ಠಿತವನ್ನಾಗಿ ಮಾಡಿಕೊ ಎಂದು ಅರ್ಥ. ನಿದಿಧ್ಯಾಸನವೆಂದರೆ ಪ್ರತಿಷ್ಠಿತವಾದ ಜ್ಞಾನದ ಬೆಳಕಿನಲ್ಲಿ ಶ್ರುತ್ಯುಕ್ತನಾದ ಪರಬ್ರಹ್ಮನ್ನು ಸರ್ವದಾ ಚಿಂತಿಸು ಎಂದು ಅರ್ಥ. ಇಂತಹ ಅಧಿಕಾರಿಯು ಪರಬ್ರಹ್ಮನ ಪ್ರಸಾದದಿಂದ ಅವನ ಅಪರೋಕ್ಷವನ್ನು ಹೊಂದಿ ಮುಕ್ತನಾಗುತ್ತಾನೆ. ಇದೇ ಪರಬ್ರಹ್ಮನ ಪ್ರಾಪ್ತಿ.

### ***ಜಿಜ್ಞಾಸಾ ಸ್ವರೂಪ***

\-\-\-\-\-\-\-\-\-\-\-\-

ಶ್ರವಣ ಮನನ ನಿದಿಧ್ಯಾಸನಗಳು ಸೇರಿ ಜಿಜ್ಞಾಸಾ ಎನಿಸುತ್ತದೆ. ಜಿಜ್ಞಾಸಾ ಎನ್ನುವುದು ಶಾಸ್ತ್ರೀಯವಾದ ಶಬ್ದ. ಶಾಸ್ತ್ರಗತ ವಾದ ಶಬ್ದಗಳಿಗೆ ಲೌಕಿಕ

ಶಬ್ದಗಳಂತೆ ಅರ್ಥ ಮಾಡಬಾರದು. ಬೇರೆ ಬೇರೆ ಶ್ರುತಿವಾಕ್ಯಗಳ ದೃಷ್ಟಿಯಿಂದ ಜಿಜ್ಞಾಸಾ ಎಂದರೆ ತಪಸ್, ಧ್ಯಾನ, ಉಪಾಸನಾ, ಯೋಗ ಮೊದಲಾದ ಅರ್ಥಗಳಾಗುತ್ತವೆ. ಶಾಸ್ತ್ರಾರ್ಥವನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ಲೌಕಿಕಾರ್ಥಗಳ ಕಡೆ ಗಮನ ಕೊಡದೆ ಶಾಸ್ತ್ರೀಯವಾದ ಅರ್ಥಗಹಣಮಾಡುವುದು ಜ್ಞಾನ ವೃದ್ಧಿಗೆ ಕಾರಣವಾವುದು. ಶ್ರವಣದಿಂದ ಪಡೆದ ಜ್ಞಾನ ಮನನದಿಂದ ವೃದ್ಧಿಹೊಂದಿ ನಿದಿಧ್ಯಾಸನದಿಂದ ಪಕ್ವಸ್ಥಿತಿಯನ್ನು ತಲುಪಿ ಅಲ್ಲಿಗೆ ನಿಲ್ಲದೇ ಮನುಷ್ಯನನ್ನು ಪುನಃ ಆವೃತ್ತಿಮಾಡಲು ಅಧಿಕಾರಿಯಾಗಿ ಮಾಡುತ್ತದೆ. ಪುನಃ ಪುನಃ ಶ್ರವಣ, ಮನನ ಮತ್ತು ನಿದಿಧ್ಯಾಸನದ ಪುನರಾವೃತ್ತಿಯಾದಂತೆಲ್ಲಾ ಜ್ಞಾನ ವೃದ್ಧಿಯಾಗುವುದು. ಬ್ರಹ್ಮ ಜಿಜ್ಞಾಸಗೆ ನ್ಯಾಯವಾದ ಅಧಿಕಾರಿಗಳು ಮುಕ್ತರೇ ಅಗಿರುತ್ತಾರೆ ಎಂದು ಶ್ರೀಮದಾಚಾರ್ಯರು ಹೇಳಿದ್ದಾರೆ. ಈ ವಿಧವಾದ ಜಿಜ್ಞಾಸಾರೂಪವಾದ "ಭಗವದಾರಾಧನಮೇವ ಪರಮೋ ಧರ್ಮಃ ತದ್ವಿರುದ್ಧಃ ಸರ್ವೋ$ಪಿ ಅಧರ್ಮಃ" (ಭಗವದಾರಾಧನೆಯೇ ಶ್ರೇಷ್ಠವಾದ ಧರ್ಮ, ಉಳಿದ ಎಲ್ಲವೂ ಅಧರ್ಮ) ಎಂದು ಗೀತಾಭಾಷ್ಯದ ಉಕ್ತಿಯಿರುವುದು. ಬ್ರಹ್ಮ ಜಿಜ್ಞಾಸೆಯನ್ನು ಬಿಟ್ಟು ಬೇರೆ ಎಲ್ಲಮಾರ್ಗಗಳೂ ದೋಷಯುಕ್ತವೆಂದು ತಿಳಿಯಬೇಕು. ಜಿಜ್ಞಾಸಾ ವಿರೋಧಿಯಾದ ಇತರ ಎಲ್ಲ ಮಾರ್ಗಗಳೂ ಅನ್ಯಧರ್ಮಗಳಾದ್ದರಿಂದ ಅವು ಬ್ರಹ್ಮಜ್ಞಾನಾಪೇಕ್ಷಿಯಿಂದ ತ್ಯಾಜ್ಯಗಳಾಗಿವೆ.

ಶಾಸ್ತ್ರೈಕಸಮಧಿಗಮ್ಯನಾದ ಪರಬ್ರಹ್ಮನ್ನು ಶಾಸ್ತ್ರದಿಂದ ಭಜಿಸುವುದೇ ಎಂದರೆ ಶ್ರವಣಮನನನಿದಿಧ್ಯಾಸನಗಳಿಂದ ಭಜಿಸುವು ದೊಂದೇ ಮಾರ್ಗವೆಂದು "ಸ್ವಾಧ್ಯಾಯ ಪ್ರವಚನ ಏವೇತಿ ನಾಕೋ ಮೌದ್ಗಲ್ಯಃ ತದ್ಧಿತಪಸ್ತದ್ಧಿತಪಃ" ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ.

### *ವಿನಿಂದ್ಯ ಚೇತರಾನ್ ಮಾರ್ಗಾನ್*

---------------------

ಬ್ರಹ್ಮಜಿಜ್ಞಾ ಹೊರತು ಇತರ ಮಾರ್ಗಗಳನ್ನು ವಿನಿಂದ್ಯ ಎಂದರೆ ದೋಷಯುಕ್ತಗಳೆಂದು ತಿಳಿದು ಸರ್ವದಾ ಶ್ರವಣಮನನ ನಿದಿಧ್ಯಾಸನಾ

ತತ್ಪರನಾಗಬೇಕು. ಪರಮಾತ್ಮನ ಅನುಗ್ರಹಾಪೇಕ್ಷೆಯುಳ್ಳ ಅಧಿಕಾರಿಯು ಮೊದಲು ಸತ್ಸಂಪ್ರದಾಯಾನುಸಾರ ವಾಗಿ ಗುರುಗಳಿಂದ ಅಧ್ಯಯನಮಾಡಿ ತನ್ನ ವೈಯಕ್ತಿಕ ಅಭಿಪ್ರಾಯಗಳಿಗೆ ಅವಕಾಕೊಡದೆ, ಶಾಸ್ತ್ರದ ಹೃದಯವನ್ನು ತಿಳಿದು, ಆ ಜ್ಞಾನಕ್ಕೆ ಪಕ್ವತೆಯನ್ನು ಸಂಪಾದಿಸುವುದಕ್ಕಾಗಿ ಅರ್ಹರಾದ ಶಿಷ್ಯರಿಗೆ ಪ್ರವಚನ ಮಾಡಬೇಕು.

ಅಧ್ಯಯನವೆಂದರೆ ಕೇವಲ ಸಿದ್ಧಾಂತದ ಅಧ್ಯಯನಮಾಡಿದರೆ ಪೂರ್ವಪಕ್ಷದ ನಿರಾಕರಣೆಗೆ ಅವಕಾಶವಿಲ್ಲದೇ ಜ್ಞಾನ ಪರಿಪಕ್ವವಾಗುವುದಿಲ್ಲ. ಆದ್ದರಿಂದ ಪೂರ್ವಪಕ್ಷಗಳಿಗೆ ಬಲಪ್ರದವಾದ ಸರ್ವಶಾಸ್ತ್ರಗಳನ್ನೂ ಅಧ್ಯನಮಾಡಿ, ಆಯಾ ಸಂಪ್ರದಾಯಗಳನ್ನು ಪರೀಕ್ಷಿಸಿ, ತದ್ಗತದೋಷಗಳ ಪರಿಶೀಲನೆಮಾಡಿ ಸಿದ್ಧಾಂತದ ತತ್ತ್ವಗಳ ಗುಣಗ್ರಹಣಮಾಡಿಕೊಳ್ಳ ಬೇಕು. ಆಗ ಆಧ್ಯಯನವು ಅಧಿಕಾರಿಯ ಯೋಗ್ಯತಾನುಗುಣವಾಗಿ ಜ್ಞಾನವು ಪೂರ್ಣಾವಸ್ಥೆಯನ್ನು ತಲುಪುತ್ತದೆ.

ನ್ಯಾಯವೈಶೇಷಿಕದರ್ಶನದಲ್ಲಿ ಪ್ರಪಂಚವು ಕಾರ್ಯ, ಇದಕ್ಕೆ ಕಾರಣ ಒಂದಿರಬೇಕು. ಈ ಕಾರಣವೇ ಈಶ್ವರ. ಅವನಲ್ಲಿ ಸೃಷ್ಟಿಗೆ ಅವಶ್ಯಕವಾದ ಎಂಟುಗುಣಗಳಿವೆ ಎನ್ನುತ್ತಾರೆ. ಕುಂಬಾರನು ಮಣ್ಣಿನಿಂದ ಮಡಿಕೆಯನ್ನು ಮಾಡುವಹಾಗೆ, ಈಶ್ವರ ತನ್ನಿಂದ ರಚಿತವಲ್ಲದ ಪರಮಾಣು ಮೊದಲಾದ ನಿತ್ಯಪದಾರ್ಥಗಳನ್ನು ಉಪಯೋಗಿಸಿಕೊಂಡು ಕಾರ್ಯರೂಪವಾದ ಜಗತ್ತನ್ನು ಸೃಷ್ಟಿಸುತ್ತಾನೆ ಎಂದು ಹೇಳುತ್ತಾರೆ. ನ್ಯಾಯವೈಶೇಷಿಕರ ಈಶ್ವರ ಸ್ವತಂತ್ರನಲ್ಲ, ಗುಣಪೂರ್ಣನೂ ನಿರ್ದೋಷನೂ ಅಲ್ಲ ಮತ್ತು ವೇದವೇದ್ಯನಲ್ಲ. ಇಂತಹ ಭಾವವನ್ನು ಒಳಗೊಂಡಿರುವ ಮನಸ್ಸು ಪರಬ್ರಹ್ಮನ್ನು ಗ್ರಹಿಸಲು ಸಮರ್ಥವಾಗದೆ ನಿರೀಶ್ವರವಾದದಲ್ಲಿ ಪರ್ಯವಸಾನಗೊಳ್ಳುತ್ತದೆ.

ಸಾಂಖ್ಯರು ‘ಈಶ್ವರನು ಸೃಷ್ಟಿಯಿಂದ ಪ್ರಯೋಜನ ಹೊಂದಿದರೆ ಅವನು ಅಪೂರ್ಣ, ಈಶ್ವರನಾಗಲಾರ. ಸೃಷ್ಟಿ ಪ್ರಯೋಜನರಹಿತವಾದರೆ ನಿರರ್ಥಕವಾಗುತ್ತದೆ. ಅಂತಹ ವ್ಯಾಪಾರವನ್ನು ಮಾಡುವ ಈಶ್ವರ ವಿವೇಕಿ

ಎನ್ನಿಸಿಕೊಳ್ಳಲಾರ. ಈಶ್ವರ ನಾನಾ ಜೀವರನ್ನು ನಾನಾ ಸ್ಥಿತಿಯಲ್ಲಿಡಲು ಕಾರಣ ನಿಮಿತ್ತರಹಿತವಾಗಬೇಕು ಅಥವಾ ಆಯಾ ಜೀವರ ಕರ್ಮವಾಗಬೇಕು. ಅದು ನಿಮಿತ್ತರಹಿತವಾದರೆ ಈಶ್ವರ ವಿವೇಕಿಯಲ್ಲ. ಜಗತ್ತಿನಲ್ಲಿ ಕಾಣುವ ನಿಯಮವು ಕಾರಣರಹಿತವಾಗುವುದು. ಅದು ಜೀವರ ಕರ್ಮವೆಂದಾದರೆ ಸೃಷ್ಟಿಯ ಪೂರ್ವದಲ್ಲಿ ಜೀವರ ಕರ್ಮಕ್ಕೆ ಅವಕಾಶವಿಲ್ಲವಾದ್ದರಿಂದ ಕರ್ಮ ಸೃಷ್ಟಿಗೆ ಕಾರಣವಲ್ಲ' ಎಂದು ಹೇಳುತ್ತಾರೆ. ಇದರಿಂದ ಸಾಂಖ್ಯವಾದವೂ ದೋಷಪೂರ್ಣವಾಗಿದೆ.

ಯೋಗದರ್ಶನವು ಸಂಪೂರ್ಣವಾಗಿ ಯೋಗಸಿದ್ಧಿಯನ್ನು ಹೊಂದಿದವನು ಈಶ್ವರನೆನ್ನುತ್ತದೆ. ಈ ವಿಧವಾದ ಕಲ್ಪನೆಯಲ್ಲಿ ಅನೇಕ ಸಿದ್ಧಪುರುಷರಲ್ಲಿ ಈಶ್ವರನೂ ಒಬ್ಬನು. ಅವನು ಸ್ವತಂತ್ರನಲ್ಲ, ಗುಣಪೂರ್ಣನಲ್ಲ, ಸರ್ವನಿಯಾಮಕನೂ ಅಲ್ಲ, ಬುದ್ಧೀಯಿಂದ ಕಲ್ಪಿತನಾದ ಇವನು ವೇದವೇದ್ಯನೂ ಅನಂತನೂ ಅಲ್ಲವಾದ್ದರಿಂದ ಜಿಜ್ಞಾಸಾ ಯೋಗ್ಯನಲ್ಲ. ಪೂರ್ವ ಮೀಮಾಂಸಾದಲ್ಲಿ ಕರ್ಮವೇ ಜಗತ್ತಿಗೆ ಕಾರಣವಾಗಿರುವುದು. ಕರ್ಮ ಜಡವಾದ್ದರಿಂದ ಅದು ಚೇತನದ ಅಧೀನವಾದ್ದರಿಂದ ಜಗತ್ಕಾರಣವಾಗಲಾರದು. ಇದರ ಜಿಜ್ಞಾಸೆಮಾಡುವುದು ಯೋಗ್ಯವಲ್ಲ.

ಅದ್ವೈತಮತದಲ್ಲಿ ಮಯಾವೃತವಾದ ಚೈತನ್ಯವೇ ಈಶ್ವರನೆನಿಸಿಕೊಂಡು ಜಗತ್ಕಾರಣ ವಾಗಿರುವುದು. ಮಾಯೆಯಿಂದ ಆವೃತನಾದ ನಿರ್ಗುಣ ಮತ್ತು ಮಾಯಾವೃತನು ಸ್ವತಂತ್ರವಲ್ಲ, ಗುಣಪೂರ್ಣವಲ್ಲ. ಮಾಯಾವೃತ ಎನ್ನುವುದು ಮಿಥ್ಯಾ ಎಂದರೆ ಜಗತ್ಕಾರಣ ಎನ್ನುವದೂ ಮಿಥ್ಯಾ ಎಂದಹಾಗಾಗುವುದು. ತನ್ನಿಂದ ನಿಯಮಿಸಲ್ಪಡದ ಮಿಥ್ಯಾಜ್ಞಾನಕ್ಕೆ ವಿಷಯವಾಗುವುದು ಪಾರತಂತ್ರಯದ ಲಕ್ಷಣ. ಅದ್ವೈತದ ನಿರ್ಗುವಾದದಲ್ಲಿ ಈ ದೋಷವು ಅದನ್ನು ತ್ಯಾಗಕ್ಕೆ ಅರ್ಹವನ್ನಾಗಿ ಮಾಡುತ್ತದೆ.

ವಿಶಿಷ್ಟಾದ್ವೈತದಲ್ಲಿ ಸೂಕ್ಷ್ಮ ಚಿದಚಿದ್ವಿಶಿಷ್ಟನಾದ ಬ್ರಹ್ಮನೇ ಜಗತ್ಕಾರಣ ಎಂದು ಹೇಳುತ್ತಾರೆ. ವಿಶಿಷ್ಟನಾದ ಬ್ರಹ್ಮ ಸ್ವತಂತ್ರನಲ್ಲ, ಗುಣಪೂರ್ಣನಲ್ಲ. ಒಂದು ವೇಳೆ ಅವನು ಸ್ವತಂತ್ರನಾದರೆ ವಿಶಿಷ್ಟನಾಗಬೇಕಾದುದಿಲ್ಲ. ವಿಶಿಷ್ಟನಾಗುವುದು

ವಿಕಾರದ ಗುರುತು. ಈ ರೀತಿಯಾದ ಬ್ರಹ್ಮ ವಿಕಾರವುಳ್ಳವನಾದ್ದರಿಂದ ಈ ವಾದವು "ನಿರ್ವಿಕಾರೋ ಅಕ್ಷರಶ್ಶುದ್ಧಃ"(ಬ್ರಹ್ಮ ನಿರ್ವಿಕಾರ, ಅವಿನಾಶಿ ಮತ್ತು ಶುದ್ಧ ಎಂದರೆ ಸ್ವತಂತ್ರ) ಎಂಬ ಶ್ರುತಿಯಿಂದ ಬಾಧಿತವಾದ್ದರಿಂದ ಸಜ್ಜನರಿಂದ ತ್ಯಾಗಾರ್ಹವಾಗಿದೆ.

ಈ ವಿಧವಾಗಿ ಬ್ರಹ್ಮ ಜಿಜ್ಞಾಸೆಗೆ ಪ್ರತಿಬಂಧಕವಾದ ನಾನಾ ಮಾರ್ಗಗಳು ಇರುವುವು. ಇವುಗಳ ದೋಷವನ್ನು ತಿಳಿದು ಅವುಗಳನ್ನು ತ್ಯಾಗಮಾಡಿ ಸ್ವತಂತ್ರನೂ, ಗುಣಪೂರ್ಣನೂ, ನಿರ್ದೋಷನೂ ಮತ್ತು ಜಗತ್ಕಾರಣನೂ ಆದ ಪರಬ್ರಹ್ಮನ ಜಿಜ್ಞಾಸೆಯೇ ಶ್ರೇಯಸ್ಸಾಧನವಾಗಿರುತ್ತದೆ.

## *ವೈರಾಗ್ಯ ವಿಷ್ಣುಭಕ್ತಿ*

--------------

ವೈರಾಗ್ಯವೆಂದರೆ ಜೀವನದಲ್ಲಿ ಕೆಲವು ವಸ್ತುಗಳನ್ನು ತ್ಯಾಗಮಾಡುವುದಷ್ಟೇ ಅಲ್ಲ. ಅದು ಜ್ಞಾನರೂಪವಾಗಿರಬೇಕು ಅಂದರೆ ನಿರ್ದೋಷವಾದ ಸ್ನೇಹದಿಂದೊಡಗೂಡಿದ ವಿಷ್ಣುಭಕ್ತಿರೂಪವಾಗಿರಬೇಕು. ಅಂದರೆ ಭಕ್ತಿಯು ವಿಷ್ಣುವಿನ ಸ್ವಾತಂತ್ರ್ಯಾದಿ ಮಹಾಮಹಿಗಳ ಜ್ಞಾನದಿಂದ ಕೂಡಿದ್ದಾಗಿರಬೇಕು. ಈ ವಿಧವಾದ ಜ್ಞಾನ ತನ್ನ ಸಾಧನೆಗೆ ಅನುಕೂಲವಾದ ಪತ್ನೀ, ಪುತ್ರ, ವಿತ್ತ ಮೊದಲಾದೆಲ್ಲಕ್ಕಿಂತಲೂ ವಿಷ್ಣುವೇ ಶ್ರೇಷ್ಠ ಎನ್ನುವ ಭಾವದಿಂದ ಕೂಡಿದ್ದಾಗಿ ಸಹಸ್ರಾರು ಎಡರುತೊಡರುಗಳು ಬಂದರೂ ಅವುಗಳಿಂದ ಪ್ರತಿಬದ್ಧವಾಗದೆ ಇರುವ ಸ್ನೇಹರೂಪ ವಾಗಿರಬೇಕು. ಉಪನಿಷತ್ತು"ಭಾರ್ಯಾಪತ್ಯಧನಾದಯಃ। ಯತ್ಸಂಪರ್ಕಾತ್ ಪ್ರಿಯಾ ಆಸನ್ ತತಃ ಕೋನು ಅಪರಃ ಪ್ರಿಯಃ॥" (ಹೆಂಡತಿ, ಮಕ್ಕಳು, ಧನ ಮೊದಲಾದುವು ಯಾವ ವಿಷ್ಟುವಿನ ಸಂಪರ್ಕ ಎಂದರೆ ವಿಷ್ಣುವಿನಿಂದ ಸೃಷ್ಟರಾಗಿ ಅವನ ಸನ್ನಿಧನ ನಿಮಿತ್ತದಿಂದ ಪ್ರಿಯುವಾದುವೋ ಆ ವಿಷ್ಣುವಿ ಗಿಂತ ಪ್ರಿಯುವಾದದ್ದು ಯಾವುದು?) ಎನ್ನುತ್ತದೆ. ಶ್ರೀಮನ್ಮಧ್ವಾಚಾರ್ಯರು "ಭಕ್ತಿ ಎಂದರೆ ಮಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ ಸ್ನೇಹ" ಎಂದು ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ವೈರಾಗ್ಯವಿಲ್ಲದೇ ಈ ವಿಧವಾದ ಭಕ್ತಿ ಹುಟ್ಟುವುದಿಲ್ಲ.

ಭಕ್ತಿಯಿಂದ ವೈರಾಗ್ಯ ದೃಢವಾಗಿ ಮತ್ತೂ ಹೆಚ್ಚಿನ ಜ್ಞಾನಕ್ಕೂ ಅದರಿಂದ ವೈರಾಗ್ಯ ಕ್ಕೂ ಕಾರಣವಾಗುತ್ತದೆ. ವೈರಾಗ್ಯ ವಿಷ್ಣುಭಕ್ತಿಗಳೇ ಶಾಸ್ತ್ರಾಧ್ಯಯನಕ್ಕೆ ಅಧಿಕಾರ. ಇವಿಲ್ಲದೇ ಮಾಡುವ ಅಧ್ಯಯನ ನ್ಯಾಯಾಧ್ಯಯನವಲ್ಲ. ಅಧ್ಯಯನದಿಂದ ಜ್ಞಾನವೃದ್ಧಿ, ಜ್ಞಾನವೃದ್ಧಿಯಿಂದ ಅರ್ಥಸಿದ್ಧಿ ಎಂದರೆ ಪರಮಾತ್ಮನ ಅಪರೋಕ್ಷ. ಆಲೋಡ್ಯಸರ್ವಶಾಸ್ತ್ರಾಣಿ ವಿಚಾರ್ಯಚ ಪುನಃಪುನಃ। ಇದಮೇಕಂ ಸುನಿಷ್ಪನ್ನಂ ಧ್ಯೇಯೋನಾರಾಯಣಸ್ಸದಾ॥ ಸಮಸ್ತ ಶಾಸ್ತ್ರ ಗಳನ್ನು ಪುನಃಪುನಃ ವಿಚಾರಮಾಡಿ ಸ್ಪಷ್ಟವಾಗಿ ಬಂದ ಫಲ ಇದೊಂದೇ, ನಾರಾಯಣನೇ ಯಾವಾಗಲೂ ಧ್ಯಾನಕ್ಕೆ ವಿಷಯನಾಗಬೇಕು. ನಾರಾಯಣನು ಈ ವಿಧವಾಗಿ ಧ್ಯಾನವಿಷಯನಾಗಬೇಕಾರೆ "ವಿಷ್ಣ್ವಾಧಿಕ್ಯ ವಿರೋಧೀನಿ ಯಾನಿ ವೇದ ವಚಾಂಸ್ಯಪಿ। ತಾನಿಯೋಜ್ಯಾನ್ಯಾನುಕೂಲ್ಯಾತ್ ವಿಷ್ಣ್ವಾಧಿಕ್ಯಸ್ಯ ಸರ್ವತಃ॥" (ವಿಷ್ಣುವಿನ ಸರ್ವೋತ್ತಮತ್ವವನ್ನು ವಿರೋಧಿಸುವಂತೆ ಕಾಣುವ ವೇದವಾಕ್ಯಗಳನ್ನು ಎಲ್ಲ ವಿಧವಾಗಿಯೂ ವಿಷ್ಣುವಿನ ಸರ್ವೋತ್ತಮತ್ವಕ್ಕೆ ಅನುಕೂಲವಾಗುವ ಹಾಗೆ ವ್ಯಾಖ್ಯಾನ ಮಾಡಬೇಕು) ಎನ್ನುವ ನಿಯಮವನ್ನು ತಿಳಿದುಕೊಂಡು ಸರ್ವದಾ ಬ್ರಹ್ಮಜಿಜ್ಞಾಸಾ ತತ್ಪರನಾಗಿರಬೇಕು. ಇದೇ ನಿಜವಾದ ವೈರಾಗ್ಯ ಮತ್ತು ವಿಷ್ಣುಭಕ್ತಿ ಎನ್ನಿಸಿಕೊಳ್ಳುತ್ತದೆ.

ಇಲ್ಲಿಯವರಗೆ ಕಿಂಚಿತ್ತಾಗಿ ಸ್ವತಂತ್ರತತ್ತ್ವವಾದ ಪರಬ್ರಹ್ಮನ ವಿಚಾರತಿಳಿದಂತಾಯಿತು. ಇನ್ನು ಮುಂದೆ ಅವನ ಅಧೀನವಾದ ಪರತಂತ್ರದ ವಿಚಾರವನ್ನು ನೋಡೋಣ.

## *ಪರತಂತ್ರ ತತ್ತ್ವ*

-----------

### *ಪರತಂತ್ರದ ಸ್ವರೂಪ – ಪರತಂತ್ರ ಸ್ವತಂತ್ರದಲ್ಲಿ ಪ್ರತಿಷ್ಠಿತ*

-------------------------------------

ಪರತಂತ್ರ ಎಂದರೆ ಪರ = ತನ್ನಿಂದ ವಿಲಕ್ಷಣನಾದ ಮತ್ತು ಸರ್ವೋತ್ತಮನಾದ ಸ್ವತಂತ್ರನ ತಂತ್ರ ಅಂದರೆ ಕಾರ್ಯ ಎಂದು ಅರ್ಥ. ಈ

ಜಗತ್ತೇ ಪರತಂತ್ರ. ಸ್ವತಂತ್ರನಾದ ಶ್ರೀಹರಿಯೇ ಈ ಜಗತ್ತಿಗೆ ಕಾರಣ. ಅವನು ಅಸಹಾಯಕರ್ತಾ ಮತ್ತು ಅಸಹಾಯಕಾರಯಿತಾ. ವೇದಗಳಲ್ಲಿ ಕಾರಣವಾಚಕಗಳಾದ ಸರ್ವಶಬ್ದಗಳೂ ಸ್ವತಂತ್ರನಾದ ಪರಬ್ರಹ್ಮನ್ನೇ ಹೇಳುತ್ತವೆ. ಛಾಂದೋಗ್ಯೋಪನಿಷತ್ತು "ಸನ್ಮೂಲಾಃ ಸೋಮ್ಯ ಇಮಾಃ ಪ್ರಜಾಃ" (ವೈರಾಗ್ಯ ವಿಷ್ಣುಭಕ್ತಿವಂತನಾದ ಅಧಿಕಾರಿಯೇ ಈ ಸಮಸ್ತ ಭೂತಗಳೂ ಸ್ವತಂತ್ರನೇ ಮೂಲಕಾರಣವಾಗಿ ಉಳ್ಳವುಗಳು) ಎನ್ನುತ್ತದೆ. ಆವನನ್ನು "ಏಕಮೇವಾದ್ವಿತೀಯಂ" ಎನ್ನುತ್ತದೆ. ಇಲ್ಲಿ ಏಕ ಎಂದರೆ ಅಸಹಾಯಕರ್ತಾ ಮತ್ತು ಅಸಹಾಯ ಕಾರಯಿತಾ ಎಂದು ಅರ್ಥ. ಕರ್ಮ ಮೊದಲಾದ ಯಾವ ಸಹಾಯರಹಿತನಾಗಿಯೇ ಸರ್ವವನ್ನೂ ಮಾಡುವುದು ಮತ್ತು ಮಾಡಿಸುವುದು ಪೂರ್ಣಕಾರಣ ಎನ್ನುವುದರ ಭಾವ.

ಚಾರ್ವಾಕರು ಸ್ವಭಾವವೇ ಜಗತ್ಕಾರಣ ಎನ್ನುತ್ತಾರೆ. ಸ್ವಭಾವವು ಜಡವಾದ್ದರಿಂದ ಅದು ಚೇತನವಸ್ತುವಿಗೆ ಕಾರಣವಾಗು ವುದು ಅಸಂಭವ. ಬೌದ್ಧರು ಶೂನ್ಯವೇ ಜಗತ್ಕಾರಣವೆನ್ನುತ್ತಾರೆ. ಅಸದ್ರೂಪವಾದ ಶೂನ್ಯವು ಸತ್ ಎಂದು ಪ್ರತೀತವಾಗುವ ಜಗತ್ತಿಗೆ ಕಾರಣವಾಗಲು ಅಸಮರ್ಥ. ಜೈನರೂ ಸರ್ವವೂ ಸಾಪೇಕ್ಷವೆನ್ನುತ್ತಾರೆ. ನಿರಪೇಕ್ಷವೇ ಇಲ್ಲದಿದ್ದಾಗ ವಸ್ತು ಸಾಪೇಕ್ಷವಾಗುವ ಸಂಭವವಿಲ್ಲ. ನ್ಯಾಯವೈಶೇಷಿಕರು ಈಶ್ವರ ಮತ್ತು ಪರಮಾಣು ಮೊದಲಾದ ಜಗತ್ಕಾರಣಗಳು ಅಸ್ವತಂತ್ರಗಳು ಅವು ಪರಸ್ಪರ ಒಂದನ್ನೊಂದು ಅಪೇಕ್ಷಿಸುವುದೇ ಇದಕ್ಕೆ ಕಾರಣ.

ಸಾಂಖ್ಯ, ಯೋಗ ಮತ್ತು ಮೀಮಾಂಸಾ ವಾದಗಳು ಸ್ವಭಾವವಾದದಲ್ಲಿ ಮುಳುಗಿಹೋಗಿವೆ. ಸಾಂಖ್ಯರ ಪ್ರಕೃತಿ ಮತ್ತು ಪುರುಷರು ಸಂಸಾರಾವಸ್ಥೆಯಲ್ಲಿ ಒಂದನ್ನು ಇನ್ನೊಂದು ನಿಯಮಿಸುವುದರಿಂದ ಅವು ಸ್ವತಂತ್ರಗಳಲ್ಲವಾದ್ದರಿಂದ ಜಗತ್ಕಾರಣ ವಾಗಲಾರರು. ಯೋಗದ ಈಶ್ವರ ಒಬ್ಬ ಸಿದ್ಧಪುರುಷನಾದ್ದರಿಂದ ಅವನೂ ಜಗತ್ಕಾರಣನಲ್ಲ. ಪೂರ್ವಮೀಮಾಂಸಕರ ಜಡ ವಾದ ಕರ್ಮ ಜಗತ್ತನ್ನು ಆಳುವುದು ಎನ್ನುವುದು ಅರ್ಥಹೀನವಾದ ಮಾತು ಏಕೆಂದರೆ ಕರ್ಮವು ತನಗಿಂತ ಮೊದಲು ಜಗತ್ತನ್ನು ಅಪೇಕ್ಷಿಸುವುದು, ಅದಕ್ಕೆ ಇಚ್ಛೆ,

ಜ್ಞಾನ ಮೊದಲಾದುವುಗಳಿಲ್ಲವಾದ್ದರಿಂದ ಜಗತ್ಕಾರಣವಾಗಲು ಸಾಧ್ಯವಲ್ಲ. ವಸ್ತುಸ್ಥಿತಿ ಹೀಗಿದ್ದರೂ ಅದು ಜಗತ್ಕಾರಣವಾಗುವ ಸ್ವಭಾವವನ್ನು ಹೊಂದಿದೆ ಎಂದರೆ ಅದು ಸ್ವಭಾವವಾದವೇ ಆಗುತ್ತದೆ. ಅದ್ವೈತದಲ್ಲಿ ಬ್ರಹ್ಮ ಮತ್ತು ಮಾಯಾ ಎರಡೂ ಸೇರಿ ಜಗತ್ಕಾರಣ ವೆಂದು ಹೇಳುತ್ತಾರೆ. ಈ ವಾದದಲ್ಲಿ ಬ್ರಹ್ಮ ಮತ್ತು
ಮಾಯಾ ಇವೆರಡನ್ನು ಸೇರಿಸುವ ಸಮಸ್ಯೆಗೆ ಪರಿಹಾರವಿಲ್ಲ. ಇವೆರಡನ್ನೂ ಸೇರಿಸುವ ಸ್ವತಂತ್ರಕಾರಣ ಇದ್ದರೆ ಮಾತ್ರ ಈ ವಾದ ಸಾಧುವಾಗುತ್ತದೆ. ವಿಶಿಷ್ಟಾದ್ವೈತದಲ್ಲಿ ಚಿತ್, ಅಚಿತ್, ಈಶ್ವರ ಈ ಮೂರೂ ಸೇರಿ ಜಗತ್ಕಾರಣ ಎನ್ನುವುದರಿಂದ ಈ ಮೂರನ್ನು ಸೇರಿಸುವ ಸಮಸ್ಯೆಗೆ ಪರಿಹಾರವಿಲ್ಲವಾಗಿದೆ. ಈ ವಾದಗಳೆಲ್ಲವೂ ತಮ್ಮ ತಮ್ಮ ವಿಚಾರದಲ್ಲಿ ಮುಳುಗಿ ಜಗತ್ತಿನ ಸ್ವತಂತ್ರ ಅಥವಾ ಪೂರ್ಣಕಾರಣನ ಜ್ಞಾನಮಾಡಿಕೊಳ್ಳಲು ಸಮರ್ಥವಾಗಲಿಲ್ಲ

ಈ ಪರತಂತ್ರವಾದ ಜಗತ್ತು ಆನಂದಮಯ, ಸ್ವತಂತ್ರ ಮತ್ತು ಗುಣಪೂರ್ಣನಾದ ವಿಷ್ಣುವಿನ ಮಾಹಾಮಹಿಮೆ ಮತ್ತು ಅವನ ಪರಮೈಶ್ವರ್ಯವನ್ನು ಎತ್ತಿಹಿಡಿಯುವ ಧ್ವಜದಂತೆ ಇರುವುದೆಂದು ಶ್ರೀಮದಾಚಾರ್ಯರು ತೋರಿಸಿಕೊಟ್ಟರು.

***ಪರತಂತ್ರವು ಸರ್ವಥಾ ಪರತಂತ್ರ***

---------------------

ಪರತಂತ್ರದ ಎಲ್ಲವೂ ಪರತಂತ್ರವೇ. ಅದರ ಸತ್ತಾ, ಸ್ವರೂಪ, ಪ್ರತೀತಿ ಮತ್ತು ಪ್ರವೃತ್ತಿ ಎಲ್ಲವೂ ಪರತಂತ್ರ. ಪ್ರಮಾಣ ಸಿದ್ಧ ಅಥವಾ ಅರ್ಥಕ್ರಿಯಾಕಾರಿ ಎಂಬ ಅರ್ಥದಲ್ಲಿ ಮಾತ್ರ ಪರತಂತ್ರ ಸತ್ಯ. ಆ ಸತ್ಯತ್ವವೂ ಬ್ರಹ್ಮ ನಿರ್ಮಿತ ಮತ್ತು ಪರತಂತ್ರವೇ. ಅದಕ್ಕೆ ವಾಚಕವಾದ ಶಬ್ದ ಪರತಂತ್ರ, ಅವೆರಡರ ಸಂಬಂಧ ಪರತಂತ್ರ. ಅದರಲ್ಲಿ ಯಾವುದೂ ಪರತಂತ್ರ ವಲ್ಲದೇ ಇಲ್ಲ. ಶ್ರೀಹರಿಯೇ ಇಚ್ಛಾಮಾತ್ರದಿಂದ ಅದನ್ನು ಸೃಷ್ಟಿಮಾಡುತ್ತಾನೆ. ಪೂರ್ಣನಾದ ಅವನ ಇಚ್ಛೆಗೆ ನಿಯಾಮಕ ವಾದುದಿಲ್ಲ. ಅದು ಸರ್ವನಿಯಮಕ್ಕೂ ಪ್ರವರ್ತಕ. ಅದು ಕರ್ತೃಂ ಅಕರ್ತೃಂ ಅನ್ಯಥಾಕರ್ತೃಂ ಚ ಸಮರ್ಥ. ವಿಷ್ಣು ಕೆಲವು ವಸ್ತುಗಳನ್ನು

ನಿರಂತರವಾಗಿ ಸೃಷ್ಟಿಸುತ್ತಾನೆ. ಅವು ನಿತ್ಯ ಎನ್ನಿಸಿಕೊಳ್ಳುತ್ತವೆ. ಕೆಲವು ವಸ್ತುಗಳನ್ನು ಕೆಲವು ಕಾಲಗಳಲ್ಲಿ ಮಾತ್ರ ಸೃಷ್ಟಿಮಾಡುತ್ತಾನೆ. ಅವು ಅನಿತ್ಯ ಎನ್ನಿಸಿಕೊಳ್ಳುತ್ತವೆ. ಮತ್ತೆ ಕೆಲವು ವಸ್ತುಗಳಲ್ಲಿ ನಿತ್ಯ ಮತ್ತು ಅನಿತ್ಯಭಾಗಗಳು ಇರುತ್ತವೆ. ಶ್ರೀಹರಿಯ ಈ ಮಹಿಮೆಯನ್ನು ಅರಿಯುದ ಕೆಲವು ವಾದಿಗಳು ಅವನು ನಿರಂತರ ಸೃಷ್ಟಿಸುವ ನಿಮಿತ್ತದಿಂದ ವಸ್ತು ನಿತ್ಯವಾಗಿರುವುದನ್ನು ತಿಳಿಯುದೆ ಜೀವ ಮೊದಲಾದುವುಗಳನ್ನು ಉತ್ಪತ್ತಿ ನಾಶಗಳಿಲ್ಲ ಎನ್ನುವ ಅರ್ಥದಲ್ಲಿ ನಿತ್ಯ

ಎಂದು ತಿಳಿಯುತ್ತಾ ನಿತ್ಯವಾದುದಕ್ಕೆ ಸೃಷ್ಟಿ ಹೇಗೆ ಆಗುವುದು ಎಂದು ಕೇಳುತ್ತಾರೆ. ಇದಕ್ಕೆ ಶ್ರೀಮದಾಚಾರ್ಯರ ಉತ್ತರ "ತಾದೃಶತ್ವಾಚ್ಚ ತಚ್ಛಕ್ತೇಃ" (ವಿಷ್ಣುವಿನ ಶಕ್ತಿ ಅಂತಹುದು) ಎಂದು ಉತ್ತರವನ್ನು ಕೊಟ್ಟು ಅನಾದಿ ಎನ್ನಿಸುವ ವಸ್ತುವನ್ನೂ ಸೃಷ್ಟಿಮಾಡುವ ಅಚಿಂತ್ಯಶಕ್ತ  ವಿಷ್ಣು ಎಂದು ಸಿದ್ಧಾಂತಮಾಡಿದ್ದಾರೆ. "ದ್ರವ್ಯಂ ಕರ್ಮಚ ಕಾಲಶ್ಚ ಸ್ವಭಾವೋ ಜೀವ ಏವ ಚ। ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ" (ದ್ರವ್ಯ, ಕರ್ಮ, ಕಾಲ, ಸ್ವಭಾವ, ರಮಾ ಬ್ರಹ್ಮಾದಿ ಚೇತನರು, ಪ್ರಕೃತಿ ಎಲ್ಲವೂ ಅವನ ಅನುಗ್ರದಿಂದ ಇರುವುವು. ಅವನು ಉಪೇಕ್ಷಿಸಿದರೆ ಇರುವುದಿಲ್ಲ) ಅಷ್ಟೇ ಅಲ್ಲ ಪರಮಾತ್ಮನಿಂದ ವ್ಯತಿರಿಕ್ತವಾದ ಎಲ್ಲವೂ ಅವನಿಂದಲೇ ಸೃಷ್ಟವಾದುವುಗಳು ಮತ್ತು ಪ್ರಪಂಚದಲ್ಲಿ ನಿತ್ಯತ್ವ ಅಥವಾ ಅನಿತ್ಯತ್ವ ಅವ ನಿಂದಲೇ ವಸ್ತುಗಳಿಗೆ ಉಂಟಾಗುತ್ತದೆ. ಒಟ್ಟಿನಲ್ಲಿ ಪರತಂತ್ರದ ಸರ್ವಾವಸ್ಥೆಗಳೂ ಅವನಿಂದಲೇ ಆಗುತ್ತವೆ ಎನ್ನುವುದೇ ಸಿದ್ಧಾಂತ.

### *ಪರತಂತ್ರದ ವಿಭಾಗ*

--------------

ಪರತಂತ್ರ ಭಾವ ಮತ್ತು ಅಭಾವ ಎಂದು ಎರಡು ವಿಧ. ಭಾವ ಎಂದರೆ ಮೊದಲನೆಯ ಗ್ರಹಣದಲ್ಲಿ 'ಇದೆ' ಎನ್ನುವ

ಜ್ಞಾನಕ್ಕೆ ವಿಷಯ. ಅಭಾವ ಎಂದರೆ ಮೊದಲನೆಯ ಗ್ರಹಣದಲ್ಲಿ 'ಇಲ್ಲ' ಎನ್ನುವ ಜ್ಞಾನಕ್ಕೆ ವಿಷಯುವೆಂದು ತಿಳಿಯಬೇಕು.

***ಅಭಾವ***

-----

ಅಭಾವವು ಪೂರ್ವಾಭಾವ, ಅಪರಾಭಾವ ಮತ್ತು ಸದಾಭಾವ ಎಂದು ಮೂರುವಿಧ. ಪೂರ್ವಾಭಾವ (ಪ್ರಾಗಭಾವ) ವಸ್ತುವಿನ ಉತ್ಪತ್ತಿಗೆ ಮೊದಲು ಇರುವ ಅಭಾವ. ಇದು ಅನಾದಿ ಮತ್ತು ಸಾಂತ ಅಂದರೆ ಇದಕ್ಕೆ ಕಾಲದಲ್ಲಿ ಮೊದಲು ಎನ್ನುವುದಿಲ್ಲ ಆದರೆ ಅಂತ್ಯ ಇರುವುದು. ವಸ್ತು ಉತ್ಪತ್ತಿಯಾದಕೂಡಲೆ ಅದರ ಪ್ರಾಗಭಾವವು ನಾಶವಾಗುತ್ತದೆ. ಅಪರಾಭಾವ (ಪ್ರಧ್ವಂಸಾಭಾವ)ವು ವಸ್ತುವಿನ ನಾಶವಾದಮೇಲೆ ಉಂಟಾಗುವ ಅಭಾವ. ಇದು ವಸ್ತುವಿನ ನಾಶದ ಜೊತೆಯಲ್ಲಿ ಉತ್ಪತ್ತಿಯಾಗುವುದು ಮತ್ತು ಅಂತ್ಯ ಇರುವುದಿಲ್ಲ. ಸದಾಭಾವ (ಅತ್ಯಂತಾಭಾವ)ವು ಸರ್ವದಾ ಎಂದರೆ ವರ್ತಮಾನ, ಭೂತ ಮತ್ತು ಭವಿಷ್ಯತ್ ಎಂಬ ಮೂರು ಕಾಲಗಳಲ್ಲಿರುವುದು. ಇದಕ್ಕೆ ಉದಾಹರಣೆ ಶಶವಿಷಾಣ. ನೈಯಾಯಿಕರು ಅನ್ಯೋನ್ಯಾಭಾವ ಎನ್ನುವ ನಾಲ್ಕನೆಯ ಅಭಾವನ್ನು ಹೇಳುತ್ತಾರೆ. ಇದಕ್ಕೆ ಭೇದ ಎಂದು ಸಿದ್ಧಾಂತದಲ್ಲಿ ಹೆಸರು ಭೇದವು ವಸ್ತುಸ್ವರೂಪವಾಗಿರುವುದು. ಭಾವದಿಂದ ಅಭಾವಕ್ಕೆ ಇರುವ ಭೇದ ಅಭಾವರೂಪವಾದದ್ದು. ಅಭಾವ ದಿಂದ ಭಾವಕ್ಕೆ ಇರುವ ಭೇದ ಭಾವರೂಪವಾಗಿರುತ್ತದೆ. ಹೀಗೆ ಅದು ಭಾವ ಅಥವಾ ಅಭಾವದಲ್ಲಿ ಅಂತರ್ಭಾವ ಗೊಳ್ಳುತ್ತದೆ. ಹೀಗೆ ಅಭಾವವು ಮೂರುವಿಧ. ಭಾವವು ಎಷ್ಟು ಸತ್ಯವಾಗಿರುವದೋ ಅಭಾವವೂ ಅಷ್ಟೇ ಸತ್ಯವಾಗಿರುತ್ತದೆ.
ಎರಡೂ ಪರತಂತ್ರವಾದುವು.

***ಭಾವ***

-----

ಭಾವವು ಚೇತನ ಮತ್ತು ಅಚೇತನ ಎಂದು ಎರಡು ವಿಧ. ಚೇತನ ಎಂದರೆ ತಿಳಿವಳಿಕೆ ಇರುವ ವಸ್ತು. ಅಚೇತನ ಎಂದರೆ ತಿಳಿವಳಿಕೆ ಇಲ್ಲದ ವಸ್ತು

***ಚೇತನ***

-----

ಚೇತನವೂ ಸರ್ವಥಾ ಪರತಂತ್ರವೇ. ಅದು ನಿತ್ಯಮುಕ್ತ ಮತ್ತು ಸಂಸಾರಿ ಎಂದು ಎರಡುವಿಧ. ಶ್ರೀ ಎನ್ನುವ ಚೇತನವು ನಿತ್ಯಮುಕ್ತ. ಅದಕ್ಕೆ ಯಾವಾಗಲೂ ಸಂಸಾರ ಬಂಧವೇ ಇಲ್ಲ. ಚಿದಚಿದ್ರೂಪವಾದ ಜಗತ್ತಿಗೆ ಇದು ಅಭಿಮಾನಿ. ಸಂಸಾರಿ ಯಾದ ಚೇತನವು ಎರಡುವಿಧ – ಮುಕ್ತ ಮತ್ತು ಅಮುಕ್ತ ಎಂದು.

## *ಮುಕ್ತಚೇತನ*

---------

ಮುಕ್ತ ಚೇತನವು ತಾರತಮ್ಯವುಳ್ಳದ್ದು. ಮೇಲೆಮೇಲಿನ ಮುಕ್ತಚೇತನ ಕೆಳಕೆಳಗಿನ ಮುಕ್ತಚೇತನಕ್ಕಿಂತ ಒಂದುನೂರು ಗಣಗಳಿಂದ ಅಧಿಕವಾದದ್ದು. ಶ್ರೀತತ್ತ್ವವು ಇತರ ಎಲ್ಲ ಚೇತನಗಳಿಗಿಂತ ಬಹುಗುಣಗಳಿಂದ ಶ್ರೇಷ್ಠವಾಗಿರುವುದು. ಪರ ಮಾತ್ಮನ ವಿಷಯವಾಗಿ ಅಯಾ ಚೇತನಗಳಿಗಿರುವ ಜ್ಞಾನ ತಾರತಮ್ಯವೇ ಮುಕ್ತಜೀವರ ತಾರತಮ್ಯಕ್ಕೆನಿಮಿತ್ತವಾಗಿದೆ. ಅಮುಕ್ತಾವಸ್ಥೆಯಲ್ಲಿನ ಜ್ಞಾನದಂತೆ ಸಾಧನ, ಸಾಧನದಂತೆ ಮುಕ್ತಿ. ಇದೇ ಮುಕ್ತರ ತಾರತಮ್ಯಕ್ಕೆ ಕಾರಣ.

ಚೇತನರ ವಿಚಿತ್ರವಾದ ತಾರತಮ್ಯ ವಿಷ್ಣುವಿನ ಅಪರಿಮಿತವಾದ ಸೃಷ್ಟಿಸಾಮರ್ಥ್ಯದ ದ್ಯೋತಕ. ಪರಮಾತ್ಮನ ಸೃಷ್ಟಿಸಾಮ ರ್ಥ್ಯಕ್ಕೆ ಪರಮೈಶ್ವರ್ಯವೆಂದು ಹೆಸರು. ಇದನ್ನು ತಿಳಿಯುವುದಕ್ಕೆ ಜಗತ್ತಿನ ಜ್ಞಾನ ಅತ್ಯವಶ್ಯಕವಾಗಿರುವುದು.

## *ಅಮುಕ್ತಚೇತನ*

----------

ಅಮುಕ್ತ ಚೇತನವು ನೀಚ, ಮಧ್ಯ ಮತ್ತು ಉತ್ತಮ ಎಂದು ಮೂರುವಿಧವಾಗಿದೆ. ಮುಕ್ತಿಯನ್ನು ಹೊಂದಲು ಯೋಗ್ಯ ವಾದ ಅರ್ಹತೆಯುಳ್ಳದ್ದು ಉತ್ತಮಚೇತನ. ಅದನ್ನು ಮುಕ್ತಿಯೋಗ್ಯ ಎಂದು ವ್ಯವಹಾರಮಾಡುತ್ತಾರೆ. ಮಧ್ಯಮ ಚೇತನವು ನಿರಂತರವಾಗಿ

ಸಂಸಾರಬಂಧವನ್ನು ಹೊಂದಿರುವುದು. ನೀಚವಾದ ಚೇತನ ತಮಸ್ಸಿಗೆ ಯೋಗ್ಯವಾದುದು. ತಮಸ್ಸು ನಿತ್ಯ ಮತ್ತು ನಿತ್ಯದುಃಖರೂಪವಾದುದು. ಅದರಿಂದ ಉತ್ಥಿತಿ ಇಲ್ಲ.

ಚೇತನದ ಈ ಭೇದವು ಅವರ ಜ್ಞಾನಸ್ವಭಾವವನ್ನು ಅನುಸರಿಸಿ ಉಂಟಾದುದು. ಉಚ್ಚವಾದ ಚೇತವು ಶಾಸ್ತ್ರಾರ್ಥ ಮಾಡಿ ಕೊಳ್ಳಲು ಸಾಮರ್ಥ್ಯ ಹೊಂದಿರುವುದು. ಉಳಿದವರು ಶಾಸ್ತ್ರದ್ವೇಷವನ್ನು ಮಾಡುವ ಸ್ವಭಾವದಿಂದ ಕೂಡಿರುತ್ತಾರೆ. ಎಲ್ಲ ಚೇತನರೂ ನಿತ್ಯರು ಹಾಗು ಅನಾದಿಯಾದ ಸಂಸ್ಕಾರಕ್ಕೆ ಅಧೀನವಾಗಿ ವಿಷಯಗ್ರಹಣಮಾಡುವ ಸ್ವಭಾವವುಳ್ಳವರು.

ತಮಸ್ಸಿಗೆ ಯೋಗ್ಯವಾದವರು ದೈತ್ಯರು, ರಾಕ್ಷರು, ಪಿಶಾಚಿಗಳು ಮತ್ತು ಮನುಷ್ಯಾಧಮರು. ಇವರು ತಮಸ್ಸನ್ನು ಹೊಂದಿರುವವರು ಮತ್ತು ಇನ್ನೂ ಸಂಸಾರದಲ್ಲಿ ಇರುವವರು ಎಂದು ಎರಡು ವಿಧ. ಇದಕ್ಕೆ ಎದುರಾಗಿ ಮುಕ್ತರಲ್ಲಿ ದೇವ, ಋಷಿ, ಪಿತೃ, ಚಕ್ರವರ್ತಿ ಮತ್ತು ಮನುಷ್ಯೋತ್ತಮ ಎಂದು ಐದು ವಿಧ. ಇದು ಜೀವರ ತಾರತಮ್ಯ. ದೇವತೆ ಗಳೆಂದರೆ ಶರೀರತತ್ತ್ವಾಭಿಮಾನಿಗಳು. ಇವರಲ್ಲಿಯೂ ತಾರತಮ್ಯವಿದೆ. ಮುಖ್ಯವಾಯು ಜೀವೋತ್ತಮನಾಗಿ ಶ್ರೀತತ್ತ್ವನ್ನು ಹೊರತು ಉಳಿದ ಎಲ್ಲವನ್ನೂ ನಿಯಮನಮಾಡುತ್ತಾನೆ. ಇವನೇ ಲೋಕಗುರು. ಈ ವಿಧವಾಗಿ ವಿಚಿತ್ರವಾದ ಸೃಷ್ಟಿ ಪರಮಾತ್ಮನ ಪೂರ್ಣತ್ವಕ್ಕೆ ಉಪಪಾದಕವಾಗಿರುವುದು.

ತಾತಮ್ಯದಿಂದೊಡಗೂಡಿದ ಮುಖ್ಯವಾಯುವೇ ಮೊದಲಾದ ಎಲ್ಲ ಜೀವರೂ ನಿಯಮವಾಗಿ ಸಂಪೂರ್ಣವಾಗಿ ಪರತಂತ್ರರು.
ಯಾರಿಗೂ ಕಿಂಚಿತ್ತಾದರೂ ಸ್ವಾತಂತ್ರವಿಲ್ಲ. ಸ್ವತಂತ್ರನಾದ ವಿಷ್ಣು ಯಾವಾಗಲೂ ಯಾವ ಜೀವನಿಗೂ ಸ್ವಾತಂತ್ರವನ್ನು ಕೊಡುವುದಿಲ್ಲ. ಅಂದರೆ ಎಲ್ಲ ಸನ್ನಿವೇಶದಲ್ಲಿಯೂ ತಾನೆ ಪ್ರವೃತ್ತಿಮಾಡಿಸುತ್ತಾನೆ. ಇದರಿಂದ ಸರ್ವ ಕಾರ್ಯಗಳಿಗೂ ಪರಮಾತ್ಮನೇ ಸಾಕ್ಷಾತ್ಕಾರಣ ಎಂದು ಸಿದ್ಧವಾಗುತ್ತದೆ.

ಸ್ವಾತಂತ್ರ್ಯವೆಂದರೆ ಕರ್ತೃತ್ವ. ಪರತಂತ್ರರಾದ ಜೀವರಿಗೆ ಇದು ಅಸಂಭಾವಿತ. ಆಯಾ ಜೀವರ ಶಾಸ್ತ್ರಜನ್ಯ ಜ್ಞಾನವೇ ಅವರ ತಾರತಮ್ಯಕ್ಕೆ ಕಾರಣ. ಜ್ಞಾನ ಅಧಿಕವಾದಂತೆ ಅನುಗ್ರಹವೂ ಅಧಿಕವಾಗುವುದು, ಆನಂದವೂ ಅಧಿಕವಾಗುವುದು. ತಾರತಮ್ಯದಲ್ಲಿ ಮೇಲೆಮೇಲಿನ ಜೀವರು ಕೆಳಕೆಳಗಿನ ಜೀವರಿಗೆ ಜ್ಞಾನಪ್ರದರಾಗಿ ಗುರುಗಳಾಗುತ್ತಾರೆ.

ಅಧಿಕಾರಿಯೂ ವಿವೇಕಿಯೂ ಆದ ಜೀವನು ಇದನ್ನು ತಿಳಿದುಕೊಂಡು ಭಗವದನುಗ್ರಕ್ಕೆ ಪಾತ್ರನಾಗಿ ಬ್ರಹ್ಮವಿಚಾರದಲ್ಲಿ ಆಸಕ್ತನಾದರೆ ಅದೇ ಅವನಿಗೆ ಶ್ರೇಯಸ್ಸಾಧನ.

***ಅಚೇತನ***

------

ಅಚೇತನವು ನಿತ್ಯ, ಅನಿತ್ಯ ಮತ್ತು ನಿತ್ಯಾನಿತ್ಯ ಎಂದು ಮೂರು ವಿಧ. ನಿತ್ಯವಾದುದು ವೇದ, ಪುರಾಣಮುಂತಾದುವುಗಳು. ಕಾಲ ಮತ್ತು ಪ್ರಕೃತಿ ಇವು ನಿತ್ಯಾನಿತ್ಯಗಳು. ಇವುಗಳಲ್ಲಿ ನಿತ್ಯ ಮತ್ತು ಅನಿತ್ಯಭಾಗಗಳಿವೆ. ಪುರಾಣಗಳಲ್ಲಿ ಪ್ರತಿಕಲ್ಪದಲ್ಲಿಯೂ ಕ್ರಮಭೇದವಿರುವುದು. ಕಾಲಪ್ರವಾಹ ನಿತ್ಯವಾದುದು. ಕ್ಷಣ, ಲವ ಮೊದಲಾದ ಅದರ ವಿಭಾಗ ಅನಿತ್ಯ. ಪ್ರಕೃತಿ ಮೂಲರೂಪದಲ್ಲಿ ನಿತ್ಯವಾದರೂ ಕಾರ್ಯವಾಗಿ ಅನಿತ್ಯ. ಅನಿತ್ಯ ಅಸಂಸೃಷ್ಟ ಮತ್ತು ಸಂಸೃಷ್ಟವೆಂದು ಎರಡು ವಿಧ. ಮಹತ್, ಅಹಂಕಾರ, ಬುದ್ಧಿ, ಮನಸ್, ಹತ್ತು ಇಂದ್ರಿಯಗಳು(ಪಂಚಕರ್ಮೇಂದ್ರಿಯಗಳು ಮತ್ತು ಪಂಚಜ್ಞಾನೇಂದ್ರಿಯಗಳು), ಪಂಚ ತನ್ಮಾತ್ರಗಳು ಮತ್ತು ಪಂಚಭೂತಗಳು ಅಸಂಸ್ಸೃಷ್ಟ. ಬ್ರಹ್ಮಾಂಡವೂ ಅದರೋಗಳಗಿನ ವಸ್ತುಗಳೂ ಸಂಸ್ಸೃಷ್ಟ. ಆಕಾಶ ನಿತ್ಯಾನಿತ್ಯವಾಗಿದೆ. ಅಖಂಡ ಆಕಾಶ ನಿತ್ಯ. ಅದರ ಪ್ರದೇಶದ ಭೇದ ಅನಿತ್ಯ. ಅದು ಅವಕಾಶ ಮತ್ತು ಭೂತಾಕಾಶ ಎಂದು ಎರಡು ವಿಧ. ಅವಕಾಶ ಸರ್ವಕ್ಕೂ ಅವಕಾವನ್ನು ಕೊಡುವುದು. ಭೂತಾಕಾಶ ಪಂಚಭೂತಗಳಲ್ಲಿ ಒಂದು. ಈ ವಿಧವಾಗಿ ಪರತಂತ್ರ ಪ್ರಮೇಯದ ವಿಭಾಗ ಇರುವುದು.

ಪರತಂತ್ರದ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ, ಸುಖ, ದುಃಖ, ಆವೃತಿ ಮತ್ತು ಪ್ರಕಾಶ ಎಲ್ಲವೂ ವಿಷ್ಣುವಿನಿಂದಲೇ ಉಂಟಾಗುತ್ತವೆ. ಜ್ಞಾನಿಯಾದವನು ಎಲ್ಲದರಲ್ಲಿಯೂ ಎಲ್ಲಕ್ಕೂ ಪ್ರವರ್ತಕನಾದ, ಎಲ್ಲದರ ಸತ್ತಾಪ್ರದನಾದ, ಸರ್ವನಿಯಾಮಕನಾದ ವಿಷ್ಣುವನ್ನು ನೋಡುತ್ತಾನೆ.

## *ಸ್ವತಂತ್ರಪರತಂತ್ರಗಳ ವಿವೇಕ – ಪಂಚಭೇದ*

----------------------------------

ಸ್ವತಂತ್ರ ಪರತಂತ್ರಗಳ ವಿವೇಕವೆಂದರೆ ಅವು ಪರಸ್ಪರಭಿನ್ನ ಎಂಬ ಜ್ಞಾನ. ಇದು ಐದು ರೂಪದಲ್ಲಿ ಉಂಟಾಗುತ್ತದೆ. (೧) ಚೇನದಿಂದ ಚೇತನಕ್ಕೆ ಇರುವ ಭೇದ, (೨) ಜಡದಿಂದ ಜಡಕ್ಕೆ ಇರುವ ಭೇದ, (೩) ಚೇತನದಿಂದ ಜಡಕ್ಕೆ ಇರುವ ಭೇದ, (೪) ಚೇತನದಿಂದ ಬ್ರಹ್ಮನಿಗೆ ಇರುವ ಭೇದ, ಮತ್ತು (೫) ಜಡದಿಂದ ಬ್ರಹ್ಮನಿಗೆ ಇರುವ ಭೇದ. ಈ ಭೇದ ಜ್ಞಾನವು ಪ್ರಪಂಚದಲ್ಲಿನ ನಿಯಮಬದ್ಧವಾದ ಸ್ಥಿತಿಯನ್ನೂ ಸರ್ವನಿಯಾಮಕನಾದ ವಿಷ್ಣುವಿನ ಸ್ವಾತಂತ್ರ್ಯರೂಪವಾದ ವೈಲಕ್ಷಣ್ಯವನ್ನೂ ತಿಳಿಸುತ್ತದೆ. ಈ ವಿಧವಾಗಿ ಸ್ವತಂತ್ರ ಪರತಂತ್ರಗಳ ವಿವೇಕವಿರುವವನು ತನ್ನ ಎಲ್ಲ ಅನುಭವಗಳನ್ನೂ ಸ್ವತಂತ್ರತತ್ತ್ವಕ್ಕೆ ಸಾಧಕವಾಗುವಂತೆ ರೂಪಿಸಬೇಕು. ಯೋಗ್ಯವಾದ ವಿದ್ಯೆಯಿಂದ ಸರಿಯಾಗಿ ತಿಳಿದ ಸರ್ವಾಂಶಗಳನ್ನೂ ಪರಮಾತ್ಮನ ಸ್ವಾತಂತ್ರ್ಯಕ್ಕೆ ಉಪಪಾದಕವಾಗುವ ರೀತಿಯಲ್ಲಿ ಅರ್ಥಮಾಡಿಕೊಂಡರೆ ಅದೇ ತಪಸ್ಸಾಗುತ್ತದೆ.

## *ಭೇದಜ್ಞಾನಕ್ಕೆ ಶಾಸ್ತ್ರಾಧ್ಯಯನ ಒಂದೇ ಸಾಧನ*

------------------------------------

ಸ್ವತಂತ್ರಪರತಂತ್ರಗಳ ಜ್ಞಾನ ಶಾಸ್ತ್ರಾಧ್ಯಯನವಿಲ್ಲದೇ ಯುಕ್ತಿಗಳಿಂದಲಾಗಲೀ ಉಪದೇಶಾದಿಗಳಿಂದಲಾಗಲೀ ಬರುವುದಿಲ್ಲ. ಬ್ರಹ್ಮಸೂತ್ರಭಾಷ್ಯದಲ್ಲಿ ಶ್ರೀಮದಾಚಾರ್ಯರು "ಶಾಂತೋ ದಾಂತಃ ಉಪರತಃ ತಿತಿಕ್ಷುಃ ಸಮಾಹಿತೋಭೂತ್ವಾ ಆತ್ಮನ್ಯೇವಾತ್ಮಾನಂ ಪಶ್ಯೇತ್। ಪರೀಕ್ಷ್ಯ ಲೋಕಾನ್ ಕರ್ಮಚಿತಾನ್।ಬ್ರಾಹ್ಮಣೋ ನಿರ್ವೇದಮಾಯಾತ್॥", "ಆ ಬ್ರಹ್ಮ ಸ್ತಂಬಪರ್ಯಂತಂ ಅಸಾರಂ ಚಾಪ್ಯನಿತ್ಯಕಂ।ವಿಜ್ಞಾಯ ಜಾತವೈರಾಗ್ಯೋ

ವಿಷ್ಣುಪಾದ್ಯೈಕ ಸಂಶ್ರಯಃ॥", "ತದ್ವಿಜ್ಞಾನಾರ್ಥಂ ಸ ಗುರುಮೇವಾಭಿ ಗಚ್ಛೇತ್ ಸಮಿತ್ ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ॥" ಎಂದು ಹೇಳಿರುವಂತೆ ಮುಮುಕ್ಷುವು ಶಾಂತ, ದಾಂತ, ತಿತಿಕ್ಷು, ಉಪರತ, ಸಮಾಹಿತನಾಗಿ ವಸ್ತುತತ್ತ್ವವನ್ನು ತಿಳಿದುಕೊಳ್ಳಲು ಗುರುಗಳನ್ನಾಶ್ರಯಿಸಬೇಕು. ಶಾಂತ ಎಂದರೆ ಭಗವನ್ನಿಷ್ಠ (ಸರ್ವದಾ ವಿಷ್ಣುಚಿಂತನ ತತ್ಪರ), ದಾಂತ ಎಂದರೆ ಇಂದ್ರಿಯನಿಗ್ರಹ ಮತ್ತ ತನ್ನ ಆತ್ಮ ನಿಗ್ರಹವುಳ್ಳವ, ತಿತಿಕ್ಷುವೆಂದರೆ ಸಹನಶೀಲ ಮತ್ತು ತನ್ನನ್ನು ದುಃಖಗೊಳಿಸುವ ವಸ್ತುಗಳನ್ನು ತಿರಸ್ಕಾರ ಬುದ್ಧಿಯಿಂದ ನೋಡುವವನು, ಉಪರತನೆಂದರೆ ಪ್ರಪಂಚದ ಸುಖ ಸಾಕು ಎಂಬ ತೃಪ್ತಿಯುಳ್ಳವ, ಸಮಾಹಿತನೆಂದರೆ ವಿಷ್ಣುವಿನಲ್ಲಿಯೇ ತನ್ನ ದೃಷ್ಟಿಯನ್ನು ಇಟ್ಟವನಾಗಿರ ಬೇಕು ಎಂದು ಅರ್ಥ. ಇಂತಹವನು ತನ್ನಲ್ಲಿಯೇ ಪರಮಾತ್ಮನ ವ್ಯಾಪಾರವನ್ನು ನೋಡಲು ಸಮರ್ಥನಾಗಿ ಜ್ಞಾನವಿಲ್ಲದ ಕರ್ಮವು ಮೋಕ್ಷಕ್ಕೆ ವಿರೋಧಿ ಎಂದು ತಿಳಿದು, ಚತುರ್ಮುಖಬ್ರಹ್ಮನೇ ಮೊದಲಾದ ಪ್ರಪಂಚದಲ್ಲಿರುವ ಅತಿಹೀನವಾದ ವಸ್ತುಗಳೆಲ್ಲವೂ ಅಸಾರ ಮತ್ತು ಅನಿತ್ಯ ಎಂದು ತಿಳಿದು ಅವುಗಳಲ್ಲಿ ವೈರಾಗ್ಯ ಹೊಂದಿ ಪರಬ್ರಹ್ಮನಾದ ವಿಷ್ಣುವೇ ತನಗೆ ಆಶ್ರಯನೆಂಬ ದಾರ್ಢ್ಯವನ್ನು ಹೊಂದಬೇಕು. ಇಂತಹ ಅಧಿಕಾರಿಯು ವಿಷ್ಣುವಿನ ಜ್ಞಾನ ಸಂಪಾದನೆಗಾಗಿ ಶ್ರೋತ್ರಿಯನೂ ಮತ್ತು ಬ್ರಹ್ಮನಿಷ್ಠನೂ ಆದ ಗುರುವನ್ನು ಆಶ್ರಯಿಸಬೇಕು. ಇದು ವೇದದಲ್ಲಿ ಉಕ್ತವಾದ ಸಂಪ್ರದಾಯ. ಇದನ್ನು ಬಿಟ್ಟು ಬೇರೆ ಯಾವ ಮಾರ್ಗಾವಲಂಬಿಯಾದರೂ ಅದು ವೃಥಾ ಶ್ರಮವಲ್ಲದೆ ಬ್ರಹ್ಮಜ್ಞಾನವಾಗುವುದಿಲ್ಲ. ಬ್ರಹ್ಮಜ್ಞಾನವಿಲ್ಲದೆ ಮೋಕ್ಷವಿಲ್ಲ.

### ***ಶಾಸ್ತ್ರಾಧ್ಯಯನ ಸ್ವರೂಪ***

-----------------

ಸ್ವತಂತ್ರ ಪರತಂತ್ರವಸ್ತುಗಳ ವಿವೇಕಕ್ಕೆ ಸಪರಿಕರವಾದ ಶಾಸ್ತ್ರಾಧ್ಯಯನ ಒಂದೇ ಮಾರ್ಗ. ಹಿಂದೆ ತಿಳಿಸಿರುವಂತೆ ಆಧ್ಯಯನವು ಶ್ರವಣ, ಮನನ, ನಿದಿಧ್ಯಾಸನ ರೂಪವಾಗಿರುವುದು. ಆಧ್ಯಯನವು ಪ್ರವಚನವನ್ನೂ ಒಳಗೊಂಡಿದೆ. ವಿಷ್ಣುವಿನ ಪ್ರೀತಿಸಾಧನವಾದುದು ಪ್ರವಚನ ಒಂದೇ. ಆಧ್ಯಯನದಲ್ಲಿಯೂ ಮೊದಲು ಪ್ರಮಾಣದ ಸ್ವರೂಪವನ್ನು ಸಪರಿಕರವಾಗಿ ತಿಳಿದನಂತರ ಪ್ರಮೇಯಗಳ

ಅಧ್ಯಯನ ತತ್ತ್ವಗ್ರಹಣಕ್ಕೆ ಸಾಧನವಾಗುತ್ತದೆ. ಜ್ಞಾನರಹಿತವಾದ ನಿತ್ಯನೈಮಿತ್ತಿಕ ಕರ್ಮಗಳೂ ಸಫಲವಾಗುವುದಿಲ್ಲ. ಶಾಸ್ತ್ರಾಧ್ಯಯನವನ್ನು ಒಂದು ಸಲ ಮಾಡಿದರೆ ಸಾಲದು. ಅದನ್ನು ಮತ್ತೆ ಮತ್ತೆ ಮಾಡುತ್ತಲೇ ಇರಬೇಕು. ಅದರಿಂದ ಶಾಸ್ತ್ರದ ಗಾಂಭೀರ್ಯ ಹೆಚ್ಚು ಹೆಚ್ಚು ವ್ಯಕ್ತವಾಗುವುದು. ಹೀಗೆ ಆಧ್ಯಯನಕ್ಕೆ ಅಂತ್ಯವೇ ಇಲ್ಲ. ಶಾಸ್ತ್ರಾಧ್ಯಯನವೇ ತಪಸ್ಸು. ಶ್ರೀಮದಾಚಾರ್ಯರು "ಅತ್ಯಶಕ್ಯೇ ತು ನಿದ್ರಾದೌ ಪುನರೇವ ಸಮಾಚರೇತ್" (ನಿದ್ರಾದಿಗಳಿಂದ ಬಹಳ ಅಶಕ್ಯವಾದರೆ ಮತ್ತೆ ಅಧ್ಯಯನವನ್ನು ಮಾಡಬೇಕು) ಎಂದು ಹೇಳಿದ್ದಾರೆ. ಅಂದರೆ ಸರ್ವದಾ ವಿಷ್ಣುಚಿಂತನ ತತ್ಪರನಾಗಿರಬೇಕು

## ಸ್ವತಂತ್ರಪರತಂತ್ರಗಳ ಜ್ಞಾನದ ಫಲ – ಮುಕ್ತಿ

-----------------------------------

ಶಾಸ್ತ್ರಜಿಜ್ಞಾಸೆಯಿಂದ ಪರಮಾತ್ಮನ ಸರ್ವಕರ್ತೃತ್ವವನ್ನು ತನ್ನ ಎಲ್ಲ ಅನುಭವಗಳಲ್ಲಿಯೂ ತಿಳಿಯುವುದೇ ಆನಂದ. ಇದೇ ಪರಮಾತ್ಮನ ಪೂಜಾ. ಇಂತಹ ಪೂಜೆಯಿಂದ ಪರಮಾತ್ಮನ ಅಪರೋಕ್ಷವಾಗಿ ಜೀವನ್ಮುಕ್ತನಾಗುತ್ತಾನೆ. ಅನಂತರ ಬಂಧನಾಶವಾಗಿ ಮುಕ್ತನಾಗುತ್ತಾನೆ.

ಅದ್ವೈತ ಮೊದಲಾದ ಸಂಪ್ರದಾಯುಗಳ ಜೀವನ್ಮುಕ್ತಿಗೂ ಮಧ್ವಸಿದ್ಧಾಂತದ ಜೀವನ್ಮುಕ್ತಿಗೂ ಬಹಳ ವ್ಯತ್ಯಾಸವಿದೆ. ಅದ್ವೈತದಲ್ಲಿ ಜೀವನ ಪರವಾಗಿ ಕರ್ತೃತ್ವದ ತ್ಯಾಗಕ್ಕೆ ಅವಕಾಶವಿಲ್ಲ. ಇದರಿಂದ ಜೀವ ಪರಮಾತ್ಮನ ಆನಂದಮಯುತ್ವವನ್ನು ತಿಳಿಯುವ ಸಂಭವವಿಲ್ಲ. ಪರಮಾತ್ಮ ಸರ್ವಕರ್ತೃವೆಂದು ತಿಳಿದರೆ ಅವನು ಆನಂದಮಯನೆಂದು ಗೋಚರವಾಗುತ್ತದೆ. ಅಂತಹ ಆನಂದಮಯನ ಪ್ರತಿಬಿಂಬ ಜೀವ ಎನ್ನುವ ಜ್ಞಾನವಾದರೆ ಜೀವನಿಗೂ ಆನಂದಾನುಭವ ಆಗುವುದು.

### *ಭಗವತ್ಪ್ರಾಪ್ತಿಯೇ ಮುಕ್ತಿ*

-----------------

ಬ್ರಹ್ಮಜ್ಞಾನದ ಫಲ ಮುಕ್ತಿ. ಇದನ್ನು ಉಪನಿಷತ್ತುಗಳು "ಬ್ರಹ್ಮವಿದಾಪ್ನೋತಿ ಪರಂ" (ಬ್ರಹ್ಮಜ್ಞಾನಿಯಾದವನು ಪರಬ್ರಹ್ಮನನ್ನು ಹೊಂದುತ್ತಾನೆ) ಎಂದು ಹೇಳುತ್ತವೆ.

ಬ್ರಹ್ಮಾಭೇದವೇ ಮುಕ್ತಿ ಎಂದು ಅದ್ವೈತಿಗಳ ವಾದ. ಸಂಸಾರಿಯಾದ ಜೀವನಿಗೆ ಬ್ರಹ್ಮಾಭೇದ ಹೇಗೆ ಸಾಧ್ಯ. ಬ್ರಹ್ಮ ಸರ್ವಶಕ್ತ ಮತ್ತು ಪ್ರಕಾಶರೂಪ ಅವನಿಗೆ ಅಜ್ಞಾನದ ಆವರಣ ಮತ್ತು ಅದರ ಕಾರ್ಯವಾದ ಸಂಸಾರ ಅಸಂಭಾವಿತ. ಧ್ಯಾನದಿಂದ ಈ ಅಸಂಭಾವನಾಬುದ್ಧಿ ಹೋಗುತ್ತದೆ ಎಂದು ಅದ್ವೈತಿಗಳ ಉಕ್ತಿ. ಅವರಂತೆ ಧ್ಯಾನವೆಂದರೆ ಶ್ರುತವಾದ ತತ್ತ್ವದ ಸ್ಮರಣೆಮಾತ್ರ. ಬುದ್ಧಿಯನ್ನು ಸರಿಯಾಗಿ ವ್ಯಾಪಾರಮಾಡಿಸುವುದೇ ಶಾಸ್ತ್ರಾಧ್ಯಯನದ ಕಾರ್ಯ. ಇದರಿಂದ ಹೋಗದ ಅಸಂಭಾವನಾ ಬುದ್ಧಿಯು ಜ್ಞಾನದ ವ್ಯಾಪಾರಕ್ಕೆ ಅವಕಾಶಕೊಡದ ಕೇವಲ ಧ್ಯಾನದಿಂದ ಹೋಗುತ್ತದೆ ಎನ್ನುವುದು ವಿಶ್ವಾಸಾರ್ಹವಲ್ಲ. ಇದರಿಂದ ಮೋಕ್ಷದ ಆಶೆ ದೂರೋತ್ಸಾರಿತವಾಗುತ್ತದೆ. ಈ ಕಾರಣದಿಂದ "ಬ್ರಹ್ಮವಿದ್ ಬ್ರಹ್ಮೈವ ಭವತಿ" (ಬ್ರಹ್ಮಜ್ಞಾನಿಯಾದವನು ಬ್ರಹ್ಮನೇ ಆಗುತ್ತಾನೆ) ಈ ರೀತಿಯಾದ ವಾಕ್ಯಗಳ ಅಪಾತಾತತಃ ತೋರುವ ಅರ್ಥವನ್ನು ನಿರಾಕರಿಸಿ ಸರಿಯಾದ ಅರ್ಥವನ್ನು ಶಾಸ್ತ್ರದ ಮಾರ್ಗದಲ್ಲಿ ಶೋಧಿಸಿ ತೀಳಿಯುವುದೇ ಅಧ್ಯಯನದ ಕಾರ್ಯ.

### *ಪರತಂತ್ರಭಾವದ ಶುದ್ಧಿಯೇ ಭಗವತ್ಪ್ರಾಪ್ತಿಯ ಸಾಧನ*

-----------------------------------

ಶಾಸ್ತ್ರಾಧ್ಯಯನದಿಂದ ಪರಬ್ರಹ್ಮನಾದ ಶ್ರೀಹರಿ ಸ್ವತಂತ್ರ ಮತ್ತು ಗುಣಪೂರ್ಣನೆಂದು ತಿಳಿದರೆ ಜೀವಬ್ರಹ್ಮಾಭೇದದವು ಮನಸ್ಸಿಗೆ ಬರುವುದೇ ಇಲ್ಲ. ಸ್ವತಂತ್ರನಾದ ವಿಷ್ಣು ಅಹೇಯ ಎಂದರೆ ಅಸ್ವತಂತ್ರನಾದ ಜೀವನಿಂದ ತ್ಯಾಗಕ್ಕೆ ಅರ್ಹನಲ್ಲ. ಅವನು ಎಲ್ಲ ವಿಧದಿಂದಲೂ ಸ್ವಪ್ರತಿಷ್ಠಾಪಕ ಮತ್ತು ಅವನು ತನ್ನಿಂದ ಭಿನ್ನವಾದ ಸರ್ವಕ್ಕೂ ಪ್ರವರ್ತಕ. ಈ ರೀತಿಯಾಗಿ

ವಿಷ್ಣುವಿನಿಂದ ಭಿನ್ನವಾದೆಲ್ಲವೂ ಸರ್ವಥಾ ಪರತಂತ್ರವೆಂಬ ಅಂಶ ಅಧಿಕಾರಿಯು ತಾನೂ ಪರತಂತ್ರ ಎನ್ನುವ ಭಾವದಲ್ಲಿ ಸ್ಪಷ್ಟವಾಗಿರಬೇಕು. ಇದೇ ಪರತಂತ್ರ ಎಂಬ ಭಾವದ ಶುದ್ಧಿ. ಈ ಭಾವವೇ ಭಗವತ್ಪ್ರಾಪ್ತಿಗೆ ಸಾಧನ.

ಅದ್ವೈತದಲ್ಲಿ ಎಲ್ಲಿಯುವರೆಗೆ ಮಾಯೆ ಬ್ರಹ್ಮನಿಂದ ಸೃಷ್ಟವಲ್ಲ ಎಂಬ ವಾದವಿದೆಯೋ, ವಿಷ್ಟಾದ್ವೈತದಲ್ಲಿ ಸೂಕ್ಷ್ಮಚಿದಚಿದ್ವಸ್ತುಗಳು ಬ್ರಹ್ಮನಿಂದ ಸೃಷ್ಟವಲ್ಲ ಎಂಬ ಭಾವವಿರುವುದೋ ಅಲ್ಲಿಯುವರೆಗೆ ಪಾರತಂತ್ರ್ಯಭಾವದ ಶುದ್ಧಿಯಿಲ್ಲ ಮತ್ತು ಪರಬ್ರಹ್ಮನ ಸ್ವಾತಂತ್ರ್ಯದ ಸಿದ್ಧಿಯೂ ಇಲ್ಲ. ಜೀವನ ಪರತಂತ್ರಭಾವದ ಶುದ್ಧಿ ಇಲ್ಲದೇ ಮತ್ತು ಬ್ರಹ್ಮನ ಸ್ವಾತಂತ್ರದ ಶುದ್ಧಿ ಇಲ್ಲದಿದ್ದರೆ ಮೋಕ್ಷ ದೂರವಾಗುವುದು.

ವಿಷ್ಣು ಒಬ್ಬನೇ ಸ್ವತಂತ್ರ ಜೀವರೆಲ್ಲರೂ ಪರತಂತ್ರರೆಂಬ ಶುದ್ಧವಾದ ಜ್ಞಾನ ಒಂದೇ ಮುಕ್ತಿಸಾಧನವಾದುದು. ಈ ಜ್ಞಾನದ ತಾರತಮ್ಯವೇ ಜೀವರ ತಾರತಮ್ಯಕ್ಕೆ ಕಾರಣ. ಸ್ವತಂತ್ರನೂ ಗುಣಪೂರ್ಣನೂ ಆದ ವಿಷ್ಣುವೇ ಜೀವನ ಬಿಂಬ. ಈ ಕಾರಣದಿಂದ ಪ್ರತಿಬಿಂಬನಾದ ಜೀವನ ಸ್ವರೂಪಕ್ಕೆ ಯಾವ ವಿಧವಾದ ನಾಶವಿಲ್ಲ. ಬಿಂಬನಾದ ಪರಮಾತ್ಮ ಪ್ರತಿಬಿಂಬನಾದ ಜೀವನಿಗೆ ಅಭಿವ್ಯಕ್ತನಾಗುವುದೇ ಅಪರೋಕ್ಷ. ಬಿಂಬನ ಅಭಿವ್ಯಕ್ತಿಯಲ್ಲಿರುವ ತಾರತಮ್ಯವೇ ಮುಕ್ತರ ಆನಂದತಾರತಮ್ಯಕ್ಕೆ ಕಾರಣ. ಈ ವಿಧವಾದ ತಾತರತಮ್ಯವನ್ನು ತಿಳಿದ ಜೀವನು ಅದಕ್ಕೆ ನಿಯಮಕನಾದ ಪರಮಾತ್ಮನ ಮಹಿಮೆಯುನ್ನು ಆಶ್ಚರ್ಯದಿಂದ ಸರ್ವದಾ ನೋಡುತ್ತಾ ಭಗವನ್ಮಯನಾಗುತ್ತಾನೆ."ಯ ಏತತ್ ಪರತಂತ್ರಂ ತು ಸರ್ವಮೇವ ಹರೇಸ್ಸದಾ।ವಶಮಿತ್ಯೇವ ಜಾನಾತಿ ಸಂಸಾರಾನ್ಮುಚ್ಯತೇ ಹಿ ಸಃ॥ ಯಾರು ಈ ಸರ್ವವನ್ನೂ ಸದಾ ಹರಿಯ ತಂತ್ರವನ್ನಾಗಿ, ಅವನ ವಶ ಎಂದು ಶುದ್ಧವಾದ ರೀತಿಯಲ್ಲಿ ತಿಳಿಯುತ್ತಾನೋ ಅವನು ಸಂಸಾರದಿಂದ ಮುಕ್ತನಾಗುತ್ತಾನೆ ಎಂದು ಶ್ರೀಮನ್ಮಧ್ವಾಚಾರ್ಯರು ತತ್ತ್ವವಿವೇಕದಲ್ಲಿ ಹೇಳಿದ್ದಾರೆ.

## ಉಪಸಂಹಾರ

---------

ಶ್ರೀಮನ್ ಮಧ್ವಶಾಸ್ತ್ರದಲ್ಲಿ ಶಾಸ್ತ್ರಾನುಚಿಂತನವೇ ಉಪಸಂಹಾರ

-------------------------------------------

ಪೆರಿಪೂರ್ಣವೂ ಹಾಗೂ ಅನಂತವಾದ ಅರ್ಥಗರ್ಭಿತವಾದ ಶ್ರೀಮನ್ಮಧ್ವಶಾಸ್ತ್ರದ ಸರ್ವದಾ ಆನುಚಿಂತನವು ಮುಮುಕ್ಷುಗಳಾದ ಎಲ್ಲ ಜಿಜ್ಞಾಸುಗಳ ಆದ್ಯಕರ್ತವ್ಯ. ಈ ವಿಷಯುವನ್ನು ಶ್ರೀಮದಾಚಾರ್ಯರು ತಮ್ಮ ಗ್ರಂಥಗಳಲ್ಲಿ ವಿಸ್ತಾರವಾಗಿ ನಿರೂಪಿಸಿದ್ದಾರೆ. ಆದರೆ ಇದು ಸರ್ವರಿಗೂ ಸುಲಭಸಾಧ್ಯವಲ್ಲ. ಹಾಗೆಂದು ಶಾಸ್ತ್ರಗತವಾದ ಪ್ರಮೇಯಗಳನ್ನು ಮನನ ಮಾಡದೇ ಇರುವುದು ಸಾಧುವಲ್ಲ. ಅನುವ್ಯಾಖ್ಯಾನದ ಕೆಲವು ವಾಕ್ಯಗಳನ್ನಾದರೂ ಪುನಃ ಪುನಃ ಮನನಮಾಡುವುದು ಜಿಜ್ಞಾಸುಗಳಿಗೆ ಶ್ರೇಯಸ್ಸಾಧನವಾದ ಕರ್ತವ್ಯವಾಗಿರುತ್ತದೆ. ಶ್ರೀಮದಾಚಾರ್ಯರ ಮಾತುಗಳು ಅನಂತವಾದ ಅರ್ಥಗಾಂಭೀರ್ಯವನ್ನು ಹೊಂದಿವೆಯಾದ್ದರಿಂದ ಎಲ್ಲ ಅರ್ಥಗಳನ್ನೂ ತಿಳಿಸುವುದು ಸಾಧ್ಯವಲ್ಲ. ಆದರೂ ಅರ್ಥ ಗ್ರಹಣದ ಸೌಕರ್ಯಕ್ಕಾಗಿ ಅತಿ ಸ್ಥೂಲವಾದ ಭಾವಾನುವಾದವನ್ನು ಮಾಡಲಾಗಿದೆ. ಜಿಜ್ಞಾಸುಗಳು ಇದರ ಉಪಯೋಗ ಪಡೆದು ಶ್ರೀಹರಿವಾಯುಗಳ ಅನುಗ್ರಕ್ಕೆ ಪಾತ್ರರಾಗತಕ್ಕದ್ದು.

ಪರಬ್ರಹ್ಮನಾದ ಶ್ರೀಮನ್ನಾರಾಯಣನ ಸ್ವತಂತ್ರತತ್ತ್ವ ಸಿದ್ಧಿ, ಅವನ ಮೋಕ್ಷಪ್ರದತ್ವವೆಂಬ ಮಹಾಮಹಿಮೆ ಮತ್ತು ಇದನ್ನು ತಿಳಿದ ಮುಮುಕ್ಷು ಜೀವರ ಕರ್ತವ್ಯ ಎಂಬ ಮೂರು ವಿಷಯಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಅನುವ್ಯಾಖ್ಯಾನದ ವಾಕ್ಯಗಳ ಸಂಗ್ರಹಮಾಡಲಾಗಿದೆ.

## *೧. ಶ್ರೀಹರಿಯ ಸ್ವತಂತ್ರ ತತ್ತ್ವಸಿದ್ಧಿ*

---------------------

ತತ ಆಭಾಸತೇ ನಿತ್ಯಂ ತದ್ವದಾಭಾಸತೇ$ಪಿ ಚ। ಭಾನಮಸ್ತಿತ್ವಮಪಿ ಚೈವಾಸಮಂತಾದ್ಯತಃ ಜೀವ ಆಭಾಸ ಉದ್ದಿಷ್ಟಃ ಸದೈವಪರಮಾತ್ಮನಃ ॥೧॥
ಅಶೇಷದೋಷರಾಹಿತ್ಯಂ ಸರ್ವಶಕ್ತಿತ್ವತೋ ಹರೇಃ।
ಸರ್ವೋಪೇತೇತಿ ಕಥಿತಂ ಅತ ಐಕ್ಯಂ ಕ್ವ ದೋಷಿಣಾ ॥೨॥

ಜೀವನು ಯಾವ ಪರಮಾತ್ಮನ ದಶೆಯಿಂದ ಒಂದು ವಸ್ತುವಿದೆ ಎಂಬ ರೂಪದಲ್ಲಿ ನಿತ್ಯನಾಗಿ ಮತ್ತುಪರಮಾತ್ಮನ ಸದೃಶನೆನ್ನುವ ಹಾಗೆ (ಪ್ರತಿಬಿಂಬನಾಗಿ) ಪ್ರಕಾಶನಾಗಿದ್ದಾನೋ ಈ ಕಾರಣದಿಂದ ಜೀವನು ಜ್ಞಾನಕ್ಕೆ ವಿಷಯನಾಗಿರುವನು. ಜೀವನ ಅಸ್ತಿತ್ವವು ಸಂಪೂರ್ಣವಾಗಿ ಯಾವ ಪರಮಾತ್ಮನಿಂದಲೋ ಈ ಕಾರಣದಿಂದ ಜೀವನು ಎಲ್ಲ ಸನ್ನಿವೇಶದಲ್ಲೂ ಪರಮಾತ್ಮನ ಆಭಾಸ ಪ್ರತಿಬಿಂಬ)ನಾಗಿದ್ದಾನೆ (ಎಂದರೆ ಪರಮಾತ್ಮನಿಂದ ಕೊಡಲ್ಪಟ್ಟ ಸತ್ತಾವುಳ್ಳವನು)

ಹೀಗೆ ಸರ್ವಸತ್ತಾಪ್ರದನಾದ ಶ್ರೀಹರಿ ಸರ್ವಶಕ್ತ. ಈ ಕಾರಣದಿಂದ ಅವನು ಸರ್ವದೋಷದೂರ, ಸರ್ವಶಕ್ತ ಎನ್ನುವುದನ್ನು ಶ್ರೀವೇದವ್ಯಾಸ ದೇವರು ಓಂ ಸರ್ವೋಪೇತಾ ಚ ತದ್ದರ್ಶನಾತ್ ಓಂ ಎಂಬ ಸೂತ್ರದಲ್ಲಿ ಸಿದ್ಧಾಂತ ಮಾಡಿದ್ದಾರೆ. ತತ್ತ್ವವು ಹೀಗಿರುವಾಗ ನಿರ್ದೋಷನೂ, ಗುಣಪೂರ್ಣನೂ ಆದ ಶ್ರೀಹರಿಗೆ ದೋಷ ಪೂರ್ಣನಾದ ಜೀವನಿಂದ ಐಕ್ಯವು ಹೇಗೆಕೂಡುತ್ತದೆ? ಅಂದರೆ ಜೀವ ಮತ್ತು ಪರಮಾತ್ಮರಿಗೆ ಐಕ್ಯವಿಲ್ಲ. ಭೇದವೇ ಇದೆ ಎಂದು ಶಾಸ್ತ್ರವು ತಳಿಸುತ್ತದೆ.

ಅತೋ ಅಶೇಷಗುಣೋನ್ನದ್ಧಂ ನಿರ್ದೋಷಂ
ಯಾವದೇವ ಹಿ ತಾವದೇವೇಶ್ವರೋನಾಮು ॥ ೩ ॥
ತತ್ರ ಭೇದೋ$ಪಿ ನ ಕ್ವಚಿತ್
ನೇಹ ನಾನಾಸ್ತಿ ಇತ್ಯಾದಿ ಶ್ರುತಿಮಾನೇನ ॥ ೪ ॥
ಈಶಸ್ಯ ಅಚಿಂತ್ಯ ಶಕ್ತಿತ್ವಾತ್ ನಾಶಕ್ಯಂ ಕ್ವಾಪಿ ವಿದ್ಯತೇ ॥ ೫ ॥
ಈಶತ್ವೇ ಅನೀಶಭೇದೇನ ಶ್ರುತ್ಯಾ ಸಮ್ಯಕ್ ಪ್ರಕಾಶಿತೇ
ಅಯುಕ್ತಮಪಿ ಚಾನ್ಯತ್ರ ಯುಕ್ತಂ ಭವತಿ ತದ್ಬಲಾತ್ ॥೬॥
ಅತೋ ಅನ್ಯತ್ರಾಪಿ ಯದ್ದೃಷ್ಟಂ ತದೀಶೇನೈವ ಕಲ್ಪ್ಯತೇ॥೭॥
ಶ್ರುತ್ಯಾಭಾಸಾಪ್ತಮಪಿ ನ ಹೀಶತ್ವಪರಿಪಂಥಿ ಯತ್ ॥೮॥
ಸ ಚಾಪ್ರಾಕೃತರೂಪತ್ವಾತ್ ಅರೂಪಃ ಸ್ವಗುಣಾತ್ಮಕಂ ॥೯॥

ಹಿಂದೆ ಹೇಳಿದ ಕಾರಣಗಳಿಂದ ಎಲ್ಲಿಯವರಿವಿಗೆ ಪರಮಾತ್ಮನ ಗುಣಪೂರ್ಣತ್ವವೂ, ನಿರ್ದೋಷತ್ವವೂ ರಕ್ಷಿತವಾಗಿರುವವೋ ಅಲ್ಲಿಯವರೆಗೆ ಅವನಿಗೆ 'ಈಶ್ವರ'ನೆಂಬ ಹೆಸರು ಅದಿಲ್ಲದಿರಲು ಅವನು ಈಶ್ವರನಲ್ಲ. ಅವನು ಸ್ವಗತಭೇದವಿವರ್ಜಿತ ಅಂದರೆ ಅವನಿಗೂ ಅವನ ಗುಣಗಳಿಗೂ ರೂಪಗಳಿಗೂ ಭೇದವಿಲ್ಲ, ಅವನಿಗೂ ಅವನ ಅವಯವಗಳಿಗೂ ಪರಸ್ಪರ ಭೇದವಿಲ್ಲ. 'ನೇಹ ನಾನಾಸ್ತಿ ಕಿಂಚನ' (ಬ್ರಹ್ಮ ಸ್ವಗತಭೇದ ವಿವರ್ಜಿತ) ಮೊದಲಾದ ಶ್ರುತಿಗಳ ಪ್ರಮಾಣದಿಂದ ಇದು ಸಿದ್ಧವಾಗಿದೆ. (ಜಗತ್ತಿನಲ್ಲಿ ಅಪೂರ್ಣವಾದ್ದು ತನ್ನಲ್ಲಿಯೇ ಭೇದವುಳ್ಳದ್ದು ಶ್ರೀಹರಿಯಾದರೋ ಪೂರ್ಣನಾದ್ದರಿಂದ ಅವನು ಸ್ವಗತಭೇದ ವಿವರ್ಜಿತ ನಾಗಿದ್ದಾನೆ).

ಪರಮಾತ್ಮನು ಅಚಿಂತ್ಯವಾದ ಶಕ್ತಿಯುಳ್ಳವನಾದ್ದರಿಂದ ಅವನಿಗೆ ಅಶಕ್ಯವಾದ್ದು ಯಾವುದೂ ಇಲ್ಲ. ಅಂದರೆ ಶ್ರೀಹರಿ ಕರ್ತುಂ, ಅಕರ್ತುಂ ಮತ್ತು ಅನ್ಯಥಾಕರ್ತುಂ ಶಕ್ತ.

ಸರ್ವಸಮರ್ಥನಾದ ಶ್ರೀಹರಿ ಪರತಂತ್ರವಾದ ಜಗತ್ತಿನಿಂದ ಭಿನ್ನನಾದವನೆಂದು ಸಂದೇಹಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಶ್ರುತಿಗಳು ಹೇಳುತ್ತಿರುವುದರಿಂದ ಪರತಂತ್ರವಾದ ಈ ಜಗತ್ತಿನಲ್ಲಿ ಅಯುಕ್ತವಾದದ್ದೂ ಶ್ರೀಹರಿಯ ವಿಷಯದಲ್ಲಿ ಯುಕ್ತವಾಗಿರುತ್ತದೆ. ಶ್ರೀಹರಿಯಲ್ಲಿ ವೈಷಮ್ಯ, ನೈರ್ಘೃಣ್ಯ ಮೊದಲಾದ ದೋಷ ಗಳಿಲ್ಲ. ಶ್ರೀಹರಿ ಸ್ವತಂತ್ರನಾದ್ದರಿಂದ ಅವನ ಸ್ವಾತಂತ್ರ್ಯಕ್ಕೆ ಉಪಪಾದಕವಾದದ್ದು ಸತ್ಯ ಮತ್ತು ಸಾಧುವೆಂದು ತಿಳಿಯಬೇಕು.

ಜಗತ್ತಿಲ್ಲಿ ಯಾವುದು ಪ್ರಮಾಣಪ್ರಮಿತವೋ ಅದು ಪರಮಾತ್ಮನಿಂದಲೇ ಕೃತವಾದದ್ದೆಂದು ಸಿದ್ಧವಾಗುತ್ತದೆ ಅದಕ್ಕೆ ಬೇರೆ ಕಾರಣವಿಲ್ಲ.

ಒಂದುವೇಳೆ ಯಾರಾದರೂ ಶ್ರುತಿಗೆ ಅಯುಕ್ತವಾದ ಅರ್ಥವನ್ನು ಕಲ್ಪಿಸಿದರೂ ಅದು ಪರಮಾತ್ಮನ ಸರ್ವೋತ್ತಮತ್ತ್ವವನ್ನು ತಿಳಿಯಲು

ಪ್ರತಿಬಂಧಕವಾಗುವುದಿಲ್ಲ, ಏಕೆಂದರೆ ಸಾತ್ವಿಕಸ್ವಭಾವವುಳ್ಳ ಜೀವನು ಅದೇ ಶ್ರುತಿಯಿಂದ ಅವನ ಸರ್ವೋತ್ತಮತ್ತ್ವವನ್ನು ತಿಳಿಯುಬಹುದು.

ಶ್ರೀಹರಿಯು ಅಪ್ರಾಕೃತ ಅಂದರೆ ಪ್ರಕೃತಿ ಸಂಬಂಧ ಅವನಿಗಿಲ್ಲ. ಈ ಕಾರಣದಿಂದ ಅವನು ಪ್ರಾಕೃತವಾದರೂಪ ಮತ್ತು ಗುಣಗಳಿಲ್ಲದವನು. ಅವನು ಸ್ವತಂತ್ರ ಮತ್ತು ಪೂರ್ಣಗಳಾದ ಗುಣಗಳೇ ಅವನ ರೂಪ.

## *ಸ್ವತಂತ್ರತತ್ತ್ವವಾದ ಶ್ರೀಹರಿಯ ಮೋಕ್ಷಪ್ರದತ್ವವೆಂಬ ಮಹಾಮಹಿಮೆ*

*======================================*

ಶ್ರೀಹರಿಯ ಮೋಕ್ಷಪ್ರದತ್ವವೆಂಬ ಮಹಿಮೆಯಲ್ಲಿಯೇ ಅವನ ಎಲ್ಲಮಹಿಮೆಗಳೂ ಹಾಸುಹೊಕ್ಕಾಗಿವೆ. ಏಕೆಂದರೆ ಮೋಕ್ಷಕರ್ತೃವಾದವನೇ ಬಂಧಕರ್ತೃವೂ ಆಗಿರಬೇಕು. ಹಾಗಿಲ್ಲದಿದ್ದರೆ ಅವನು ಮೋಕ್ಷಪ್ರದ ನಾಗಲಾರ. ಅದ್ವೈತಮತದಲ್ಲಿ 'ಅಜ್ಞಾನದಿಂದ ಬಂಧ ಜ್ಞಾನದಿಂದ ಮೋಕ್ಷ' ಎಂದು ಹೇಳಲಾಗಿದೆ. ಇದು ಅಸಂಗತ. ಏಕೆಂದರೆ ಅಜ್ಞಾನವು ಜಡವಾಗಿದೆ. ಜಡಕ್ಕೆ ಬಂಧಕರ್ತೃತ್ವವು ಕೂಡುವುದಿಲ್ಲ. ಈ ಪ್ರಕರಣದಲ್ಲಿ ಜ್ಞಾನವೆಂದರೆ ವೃತ್ತಿಜ್ಞಾನವೆಂದು ಅರ್ಥ. ವೃತ್ತಿಜ್ಞಾನವು ಜಡವಾದ್ದರಿಂದ ಅದಕ್ಕೆ ಮೋಕ್ಷಕರ್ತೃತ್ವವು ಕೂಡುವುದಿಲ್ಲ. ಅದ್ವೈತದಂತೆ ಚೈತನ್ಯವು ನಿರ್ವಿಶೇಷವಾದದ್ದು. ಇದರಿಂದಾಗಿ ನಿರ್ವಿಶೇಷವೂ ಮೋಕ್ಷ ಕರ್ತೃವಾಗಲಾರದು. ಇಷ್ಟೇ ಅಲ್ಲದೆ ಬಂಧಕವಾದ ಅಜ್ಞಾನವನ್ನು ಜ್ಞಾನವು ನಾಶಮಾಡುತ್ತದೆ ಎನ್ನುವುದು ಸಂಭಾವಿತವಲ್ಲ. ಅಜ್ಞಾನದಿಂದ ಬಂಧ, ಜ್ಞಾನದಿಂದ ಮೋಕ್ಷವೆಂದು ವಿಭಾಗಮಾಡುವುದಕ್ಕೆ ಪ್ರಮಾಣವಿಲ್ಲ. ಅದೂ ಅಲ್ಲದೆ ಜ್ಞಾನ ಅಜ್ಞಾನ ಎರಡೂ ಸಂಸಾರಾವಸ್ಥೆಯಲ್ಲಿರುವವು. ಜ್ಞಾನ, ಅಜ್ಞಾನಗಳೆರಡೂ ಪರಮಾತ್ಮಕೃತಗಳು ಹಾಗೂ ಪರತಂತ್ರ, ಇದರಿಂದ ಇವು ಬಂಧಕಗಳೂ ಅಲ್ಲ ಮೋಚಕಗಳೂ ಅಲ್ಲ. ಈ ವಿಧವಾದ ದೋಷಗಳೇ ವಿಶಿಷ್ಟಾದ್ವೈತಮತದ ಭಕ್ತಿ, ಪ್ರಪತ್ತಿಗಳಿಂದ ಮೋಕ್ಷವೆನ್ನುವ ವಾದದಲ್ಲಿಯೂ ಇವೆ. ಭಕ್ತಿಪ್ರಪತ್ತಿಗಳಿರುವುದರಿಂದಲೇ ಮೋಕ್ಷವಾಗಬೇಕೆಂಬ ನಿಯಮ

ಕಲ್ಪನಾಮಾತ್ರ. ಅದ್ವೈತ ಮತ್ತು ವಿಶಿಷ್ಟಾದ್ವೈತಗಳಲ್ಲಿರುವಂತಹ ದೋಷಗಳನ್ನು ಪರಿಹರಿಸುವುದಕ್ಕಾಗಿ ಬಂಧ ಮತ್ತು ಮೋಕ್ಷಗಳೆರಡಕ್ಕೂ ಕರ್ತೃ ಒಬ್ಬನೇ ಎಂದು ಹೇಳಬೇಕು. ಇವೆರಡರ ಕರ್ತೃವೇ ಸ್ವತಂತ್ರನಾದ ಶ್ರೀಹರಿ. ಬಂಧವೆಂದರೆ ಬಂಧಕ್ಕೆ ಸಂಬಂಧಪಟ್ಟ ಸರ್ವಕ್ಕೂ ಹಾಗೆಯೇ ಮೋಕ್ಷಕರ್ತೃವೆಂದರೆ ಮೋಕ್ಷಕ್ಕೆ ಸಂಬಂಧಪಟ್ಟ ಸರ್ವಕ್ಕೂ ಅವನೇ ಕರ್ತೃವೆಂದು ತಿಳಿಯಬೇಕು.

ಯುಕ್ತಿತೋಜ್ಞಾತವೇದಾರ್ಥಃ ನಿರಸ್ಯ ಸಮಯಾನ್ ಪರಾನ್ ಪರಸ್ಪರವಿರೋಧಂಚ ಪ್ರಣುದ್ಯ ಅಶೇಷವಾಕ್ಯಗಂ ಅಧ್ಯಾತ್ಮ ಪ್ರವಣೋ ಭೂತ್ವಾ॥೧॥

ಪರಿಹೃತ್ಯ ವಿರೋಧಾಂಶ್ಚ ತತ್ಪ್ರಸಾದಾನುರಂಜಿತಃ ದೇಹಕರ್ತೃತ್ವಮೀಶಸ್ಯ ಜ್ಞಾತ್ವಾ ತತ್ಪ್ರೀತೃತಾ ಸ್ಮೃತೇಃ ವಿಶೇಷಸ್ನೇಹಮಾಪಾದ್ಯ ಸರ್ವಕರ್ತೃತ್ವತೋ$ಧಿಕಂ ನಿಷ್ಪಾದ್ಯ ಬಹುಮಾನಂಚ ॥೨॥

ತದನ್ಯತ್ರ ಅತಿದುಃಖತಃ ಉತ್ಪಾದ್ಯ ಅಧಿಕವೈರಾಗ್ಯಂ ॥೩॥

ತದ್ಗುಣಾಧಿಕ್ಯವೇದನಾತ್ ಸರ್ವಸ್ಯ ತದ್ವಶತ್ವಾಚ್ಚ ದಾರ್ಢ್ಯಂ ಭಕ್ತೇರವಾಪ್ಯ ಚ॥೪॥

ಯತತೋ ಪಾಸನಾಯೈವ ವಿಶಿಷ್ಟಾಚಾರ್ಯ ಸಂಪದಾ ಕರ್ತವ್ಯಾ ಬ್ರಹ್ಮಜಿಜ್ಞಾಸಾ ॥೫॥

ಸೃಷ್ಟಿಬಂಧನಮೋಕ್ಷಾದಿ ಕರ್ತೃತ್ವಸ್ಯ ಶ್ರುತತ್ವತಃ ಯತೋ ಮೋಕ್ಷಾದಿದಾತಾಸೌ ಅತೋ ಜಿಜ್ಞಾಸ್ಯ ಏವ ವಃ ॥೬॥

ಇತ್ಯಾಹ ತತ್ಪರಂ ಬ್ರಹ್ಮ ವ್ಯಾಸಾಖ್ಯಂ ಜ್ಞಾನರಶ್ಮಿಮತ್ ॥೭॥

ಯುಕ್ತಿಗಳಿಂದ ವಿಚಾರಮಾಡಿ ವೇದಾರ್ಥಗಳನ್ನು ತಿಳಿದವನು ತನ್ನ ಜ್ಞಾನಶುದ್ಧಿಗಾಗಿ ಇತರ ಎಲ್ಲ ದರ್ಶನ ಗಳನ್ನೂ ನಿರಾಸಮಾಡಬೇಕು. ಮತ್ತು ವಿರೋಧತೋರುವ ವೇದವಾಕ್ಯಗಳ ವಿರೋಧವನ್ನು ಪರಿಹರಿಸಿ ಕೊಳ್ಳಬೇಕು. ಇದರಿಂದ ತನಗೆ ಸತ್ತಾಪ್ರದನಾದ ಶ್ರೀಹರಿಯ ಶ್ರವಣ ಮನನ, ನಿಧಿಧ್ಯಾಸನರೂಪವಾದ ಮನಃ ಪ್ರವಣತೆಯನ್ನು ಹೊಂದಿ, ತತ್ತ್ವ ವಿಷಯದಲ್ಲಿ

ಎಲ್ಲ ವಿರೋಧಗಳನ್ನೂ ಪರಿಹರಿಸಿಕೊಂಡು, ಅಂದರೆ ಶ್ರೀಹರಿಯೇ ತನಗೆ ಕರ್ತೃವೆಂದು ತಿಳಿದು, ಅವನೇ ಪಿತೃವೆಂದು ಅನುಸಂಧಾನ ಮಾಡುತ್ತಾ, ಸರ್ವಕರ್ತೃವಾದ ಅವನಲ್ಲಿ ಅಧಿಕವಾದ ಭಕ್ತಿಯನ್ನು ಮಾಡಬೇಕು.

ಪರಮಾತ್ಮನಿಂದ ಅತಿರಿಕ್ತವಾದ ಸರ್ವವಸ್ತುಗಳೂ ದುಃಖಪ್ರದವಾದ್ದರಿಂದ ಅವುಗಳಲ್ಲಿ ವೈರಾಗ್ಯನ್ನು ಹೊಂದಬೇಕು.
ಪರಮಾತ್ಮನ ಗುಣವೇ ಸರ್ವಪ್ರವರ್ತಕವಾದುದರಿಂದ ಸರ್ವವೂ ಅವನ ವಶವೆಂದು ತಿಳಿದು ಭಕ್ತಿಯಲ್ಲಿ ದಾರ್ಢ್ಯವನ್ನು ಹೊಂದಬೇಕು.

ಈ ವಿಧವಾದ ಭಕ್ತಿಯುಕ್ತನಾಗಿ ಪರಮಾತ್ಮನ ಉಪಾಸನೆ ಎಂದರೆ ಶ್ರವಣ, ಮನನ, ನಿಧಿಧ್ಯಾಸನಗಳನ್ನು ಮಾಡಲು ಪ್ರಯತ್ನ ಮಾಡುತ್ತಾ, ಶ್ರುತ್ಯುಕ್ತ ಬ್ರಹ್ಮನಿಷ್ಠನಾದ ಆಚಾರ್ಯರನ್ನು ಹೊಂದಿ ಬ್ರಹ್ಮಜಿಜ್ಞಾಸೆಯನ್ನು ಮಾಡತಕ್ಕದ್ದು. ಬ್ರಹ್ಮ ಜಿಜ್ಞಾಸೆಯೇ ಕರ್ತವ್ಯ. ಇದನ್ನು ಬಿಟ್ಟು ಬೇರೆ ಯಾವ ಕಾರ್ಯವೂ ಸಂಭಾವಿತವಲ್ಲ.

ಪರಮಾತ್ಮನೇ ಸೃಷ್ಟಿ, ಸ್ಥಿತಿ,ಬಂಧ,ಮೋಕ್ಷ ಮುಂತಾದ ಎಲ್ಲಕ್ಕೂ ಕರ್ತೃವೆಂದು ಶ್ರುತಿಸಿದ್ಧವಾಗಿರುವುದರಿಂದ, ಅವನೇ ಅಧಿಕಾರಿಗಳಿಂದ ಜಿಜ್ಞಾಸ್ಯ ಮತ್ತು ಜಿಜ್ಞಾಸಾ ಒಂದರಿಂದಲೇ ತಿಳಿಯಲ್ಪಡತಕ್ಕವನು. ಹೀಗೆಂದು ವೇದವ್ಯಾಸದೇವರು ನಿರ್ಣಯಮಾಡಿದ್ದಾರೆ.

ಯೇನೈವ ಬಂಧಮೋಕ್ಷಃ ಸ್ಯಾತ್ ಸ ಚ ಜಿಜ್ಞಾಸಯಾ ಗತಃ।
ಸುಪ್ರಸನ್ನೋ ಭವೇದೀಶೋ ಜಿಜ್ಞಾಸಾ ತೋ$ಸ್ಯ ಮುಕ್ತಿದಾ ॥೮॥
ಮೋಕ್ಷಾದಿದತ್ವಮೀಶಸ್ಯ ಕಥಮೇವಾವಗಮ್ಯತೇ।
ಇತಿ ಚೇತ್ ಶಾಸ್ತ್ರಯೋನಿತ್ವಾತ್ ಶಾಸ್ತ್ರಗಮ್ಯೋ ಹಿ ಮೋಕ್ಷದಃ ॥೯॥
ಪ್ರತ್ಯಕ್ಷಾವಸಿತೇಭ್ಯಃ ಸ್ಯಾತ್ ಯದಿ ಮೋಕ್ಷಃ ಕಥಂಚನ।
ಕಿಮಿತ್ಯನಾದಿ ಸಂಸಾರಮಗ್ನಾಃ ಸರ್ವಾ ಇಮಾಃ ಪ್ರಜಾಃ ॥
ಅನುಮಾನಗಮ್ಯತೋ ಮೋಕ್ಷೋ ಯದಿ ಸ್ಯಾತ್ ।

ಅನುಮೈವ ಹಿ ದೃಷ್ಟಪೂರುಷವನ್ಮೋಕ್ಷದಾತೃತಾಂ ವಿನಿವಾರಯೇತ್॥೧೦॥
ತಸ್ಮಾತ್ ಶಾಸ್ತ್ರಗಮ್ಯ ಏವೈಕೋ ಮೋಕ್ಷದೋ ಭವತಿ ಧ್ರುವಮ್ ॥೧೧॥

ಯಾವ ಪರಮಾತ್ಮನ ಅನುಗ್ರಹದಿಂದ ಈಸಂಸಾರಬಂಧನದಿಂದ ಮೋಕ್ಷವಾಗುತ್ತದೋ, ಆ ಪರಮಾತ್ಮನು ಜಿಜ್ಞಾಸಾ ಒಂದರಿಂದಲೇ ತಿಳಿಯಲ್ಪಟ್ಟು ಪ್ರಸನ್ನನಾಗುತ್ತಾನೆ. ಇದರಿಂದ ಅವನ ಜಿಜ್ಞಾಸಾ ಒಂದೇ ಅಧಿಕಾರಿಗೆ ಮುಕ್ತಿಸಾಧನವಾದುದು ಎಂದು ತಿಳಿದು ಬರುತ್ತದೆ..

ಮೋಕ್ಷಾದಿಗಳನ್ನು ಕೊಡಲು ಸಮರ್ಥನಾದವನು ಶ್ರೀಹರಿಯೊಬ್ಬನೇ ಎಂದು ಓಂ ಶಾಸ್ತ್ರಯೋನಿತ್ವಾತ್ ಓಂ ಎಂಬ ಸೂತ್ರವು ಹೇಳುತ್ತದೆ. ಶಾಸ್ತ್ರಯೋನಿ ಅಂದರೆ ಅವನನ್ನು ಶಾಸ್ತ್ರ ಒಂದೇ ತಿಳಿಸುವುದು ಎಂದು ಅರ್ಥ. ಇದರಿಂದ ಮೋಕ್ಷಪ್ರದನಾದ ಶ್ರೀಹರಿಯು ಶಾಸ್ತ್ರದಿಂದ ಮಾತ್ರವೇ ತಿಳಿಯಲ್ಪಡತಕ್ಕವನು ಎನ್ನುವುದು ಪ್ರಮಾಣಸಿದ್ಧವಾಗಿದೆ.

ಪ್ರತ್ಯಕ್ಷದಿಂದ ಸಿದ್ಧವಾದುವುಗಳಿಂದ ಯಾವರೀತಿಯಿಂದಲಾದರೂ ಮೋಕ್ಷವು ದೊರಕುವುದಾದರೆ, ಈ ಎಲ್ಲ ಪ್ರಜೆಗಳೂ ಅನಾದಿಕಾಲದಿಂದಲೂ ಸಂಸಾರದಲ್ಲಿ ಮಗ್ನರಾಗಿರಲು ಕಾರಣವೇನು? ಪ್ರತ್ಯಕ್ಷದಿಂದ ಸಿದ್ಧವಾದು ದರಿಂದ ನಿಯಮವಾಗಿ ದುಃಖವು ಪರಿಹಾರವಾಗುವುದಾದರೆ ಅಂತಹ ರಾಜನೇ ಮೊದಲಾದವರನ್ನು ಕುರಿತು ಎಲ್ಲ ಪ್ರಜೆಗಳೂ ಹೋಗುತ್ತಾರೆ. ಒಂದುವೇಳೆ ಅನುಮಾನದಿಂದ ಸಿದ್ಧವಾದ ವಸ್ತುವಿನಿಂದ ಮೋಕ್ಷ ಆಗುವುದಾದರೆ, ಅನುಮಾನವೇ ಅವನಿಗೆ ಮೋಕ್ಷವನ್ನು ಕೊಡುವ ಸಾಮರ್ಥ್ಯವನ್ನು ನಿಷೇಧಿಸುತ್ತದೆ. ಪ್ರತ್ಯಕ್ಷನಾದ ಪುರುಷನಿಗೆ ಮೋಕ್ಷ ಕೊಡುವ ಸಾಮರ್ಥ್ಯವಿಲ್ಲದಿರುವುದೇ ಈ ವಿಷಯದಲ್ಲಿ ದೃಷ್ಟಾಂತ ವಾಗಿರತ್ತದೆ. ಏಕೆಂದರೆ ಅನುಮಾನಕ್ಕೆ ಪ್ರತ್ಯಕ್ಷವೇ ಆಧಾರವಾದ್ದರಿಂದ ಪ್ರತ್ಯಕ್ಷದಲ್ಲಿರುವ ಎಲ್ಲ ದೋಷ ಗಳೂ ಅನುಮಾನಕ್ಕೂ ಉಂಟಾಗುತ್ತವೆ.

ಈ ಕಾರಣಗಳಿಂದಾಗಿ ಮೋಕ್ಷವನ್ನು ಕೊಡಲು ಸಮರ್ಥನಾದವನು ನಿಜವಾಗಿಯೂ ಶಾಸ್ತ್ರ ಒಂದರಿಂದಲೇ ತಿಳಿಯಲ್ಪಡತಕ್ಕವನು ಅಂದರೆ ಶಾಸ್ತ್ರಜನ್ಯಜ್ಞಾನಕ್ಕೆ ಮಾತ್ರ ಗೋಚರನಾಗುತ್ತಾನೆ. ಮತ್ತು ಅವನೇ ಸ್ವತಂತ್ರ ನೆಂದು ನಿಶ್ಚಿತವಾಗಿರುತ್ತದೆ.

ಶಾಸ್ತ್ರಗಮ್ಯಶ್ಚ ನಾನ್ಯೋಸ್ತಿ ಮೋಕ್ಷದತ್ವೇನ ಕೇಶವಾತ್ ॥೧೨॥
ಮೋಕ್ಷದೋ ಹಿ ಸ್ವತಂತ್ರಃ ಸ್ಯಾತ್ ॥೧೩॥
ಪರತಂತ್ರಃ ಸ್ವಯಂ ಸೃತೌ ವರ್ತಮಾನಃ
ಕಥಂ ಶಕ್ತಃ ಪರಮೋಕ್ಷಾಯ ಕೇವಲಮ್ ॥೧೪॥
ಅನ್ಯಾಶ್ರಯೇಣ ಯದ್ಯೇಷಃ ದದ್ಯಾನ್ಮೋಕ್ಷಸ್ಸ ಏವ ಹಿ।
ತೇನ ನಾನುಸೃತೋ ಮೋಕ್ಷಂ ನ ದದ್ಯಾದನ್ಯವಾಕ್ಯತಃ ॥೧೫॥
ಅತಃ ತದರ್ಥಮಪಿ ಸ ಜ್ಞೇಯೋ ವಿಷ್ಣುಃ ಮುಮುಕ್ಷುಭಿಃ ॥೧೬॥
ಯಮೇವೈಷ ಇತಿ ಶ್ರುತ್ಯಾ ತಮೇವೇತಿ ಚ ಸಾದರಂ
ಶಾಸ್ತ್ರಯೋನಿತ್ವಮಸ್ಯೈವ ಜ್ಞಾಯತೇ ವೇದವಾದಿಭಿಃ।
ಯ ಏನಂ ವಿದುಃ ಅಮೃತಾ ಇತ್ಯುಕ್ತಸ್ತು
ಸಮುದ್ರಗಃ ತದೇವ ಬ್ರಹ್ಮ ಪರಮಮಿತಿ ॥
ಶ್ರುತ್ಯಾವಧಾರಿತಃ ಯತಃ ಪ್ರಸೂತೇತಿ ತತಃ ಸೃಷ್ಟಿಮಾಹ ॥೧೮॥

ಮೋಕ್ಷವನ್ನು ಕೊಡತಕ್ಕವನೆಂದು ಶಾಸ್ತ್ರದಿಂದ ಸಿದ್ಧನಾದವನು ಬ್ರಹ್ಮರುದ್ರಾದಿ ದೇವತೆಗಳ ಪ್ರವರ್ತಕನಾದ ಕೇಶವನಲ್ಲದೇ ಬೇರೊಬ್ಬನಿಲ್ಲ.

ಮೋಕ್ಷಪ್ರದನು ಸ್ವತಂತ್ರನೇ ಹೊರತು ಪರತಂತ್ರನಲ್ಲವೆಂದು ಪ್ರಮಾಣಸಿದ್ಧವಾಗಿದೆ. ಪರತಂತ್ರನೆಂದರೆ ಸಂಸಾರದಲ್ಲಿರುವವನು ಬೇರೆಯವನಿಗೆ ಮೋಕ್ಷಕೊಡಲು ಹೇಗೆ ಶಕ್ತನಾಗುವನು. ಒಂದುವೇಳೆ ಪರತಂತ್ರನು ಸ್ವತಂತ್ರನನ್ನು ಆಶ್ರಮಾಡಿಕೊಂಡು ಮೋಕ್ಷವನ್ನು ಕೊಡುವುದಾದರೆ, ಸ್ವತಂತ್ರನು ಮೋಕ್ಷಪಡೆಯುವವನಿಂದ ಸೇವಿತನಾಗಲಿಲ್ಲವಾದ್ದರಿಂದ, ಅನ್ಯರ ಮಾತನ್ನು

ಕೇಳಿ ಅವನು ಮೋಕ್ಷ ಕೊಡುವುದಿಲ್ಲ. ಈ ಕಾರಣದಿಂದಲೂ ಶ್ರೀಹರಿಯೇ ಮೊಕ್ಷಾರ್ಥಿಯಿಂದ ತಿಳಿಯಲ್ಪಡಬೇಕು.

'ಯಮೇವೈಷ ವೃಣುತೇ ತೇನ ಲಭ್ಯಃ' (ಪರಮಾತ್ಮನು ಯಾರನ್ನು ತನ್ನ ಭಕ್ತನೆಂದು ಸ್ವೀಕರಿಸುತ್ತಾನೋ ಅವನಿಗೆ ತನ್ನ ಸ್ವರೂಪವನ್ನು ತೋರಿಸುತ್ತಾನೆ ಎಂದರೆ ಮೋಕ್ಷವನ್ನು ಕೊಡುತ್ತಾನೆ) ಎಂಬ ಶ್ರುತಿಯಿಂದ ಮತ್ತು 'ತಮೇವಂ ವಿದ್ವಾನ್ ಅಮೃತ ಇಹ ಭವತಿ' (ಅಧಿಕಾರಿವರ್ಗದಲ್ಲಿ ಅವನ್ನು ಈ ರೀತಿಯಾಗಿ ತಿಳಿದವನೇ ಮುಕ್ತನಾಗುತ್ತಾನೆ) ಎನ್ನುವ ಶ್ರುತಿಯಿಂದ ವೇದವಾದಿಗಳಿಂದ ಮೋಕ್ಷಪ್ರದನಾದ ವಿಷ್ಣುವೇ ಶಾಸ್ತ್ರಯೋನಿಯೆಂದು ಚೆನ್ನಾಗಿ ವಿಚಾರಮಾಡಲ್ಪಟ್ಟು ಸಿದ್ಧಾಂತಿಸಲ್ಪಟ್ಟಿದ್ದಾನೆ. 'ಯ ಏನಂ ವಿದುಃ ಅಮೃತಾಃ' (ಯಾರು ಇವನನ್ನು ತಿಳಿಯುತ್ತಾರೋ ಅವರು ಮೊಕ್ಷವನ್ನು ಹೊಂದುತ್ತಾರೆ). ಹೀಗೆ ಮೋಕ್ಷಸಾಧನವಾದ ಜ್ಞಾನಕ್ಕೆ ವಿಷಯವಾದವನು "ಸಮುದ್ರಗಃ" (ಸಮುದ್ರದ ಮಧ್ಯದಲ್ಲಿರುವವನು) ಎಂದರೆ ವಿಷ್ಣುವೆಂದು ಶ್ರೌತವಾದ ಅರ್ಥವೆಂದು "ತದೇವ ಬ್ರಹ್ಮ ಪರಮಂ" (ಅವನೇ ಪರಬ್ರಹ್ಮ) ಎಂಬ ಶ್ರುತಿಯಿಂದ ನಿಶ್ಚಿತನಾಗಿದ್ದಾನೆ. "ಯತಃ ಪ್ರಸೂತಾ ಜಗತಃ ಪ್ರಸೂತೀ" (ಯಾರಿಂದ ಜಗದುಪಾದನಕಾರಣವಾದ ಪ್ರಕೃತಿ ಎಂದರೆ ಚಿದಚಿದ್ವಸ್ತುಗಳ ಅಭಿಮಾನಿಯಾದ ಶ್ರೀತತ್ತ್ವವು ಹುಟ್ಟಿರುವುದೋ) ಎನ್ನುವ ಶ್ರುತಿಯೂ ಶ್ರೀಹರಿಯೇ ಸೃಷ್ಟಿಕರ್ತನೆಂದು ಹೇಳುತ್ತದೆ.

ತತೋ ಹರಿಃ ಶಾಸ್ತ್ರಯೋನಿಃ ನ ಚಾನ್ಯೋಽಸ್ತಿ ಮುಖ್ಯತಸ್ತು ಇತಿ ಗಮ್ಯತೇ॥೧೯॥<br>
ಶಾಸ್ತ್ರಯೋನಿತ್ವಮೇತಸ್ಯ ಜ್ಞಾಯತೇ ಹಿ ಸಮನ್ವಯಾತ್॥೨೦॥<br>
ಏವಂ ಪರಮಮುಖ್ಯಾರ್ಥೋ ನಾರಾಯಣ ಇತಿ ಶ್ರುತೇಃ।<br>
ನಿರ್ಧಾರಣಾಯ ನಾಶಬ್ದಮಿತಿ ವೇದಪತಿರ್ಜಗೌ ॥೨೦॥

ಶ್ರೀಹರಿಯು ಶಾಸ್ತ್ರಯೋನಿಯೆಂದರೆ ಶಾಸ್ತ್ರದಿದಂದಲೇ ಹುಟ್ಟುವ ಜ್ಞಾನಕ್ಕೆ ವಿಷಯನೆಂದು ಅರ್ಥ. ಇದರಿಂದಲೇ ಶ್ರೀಹರಿಯನ್ನು ಬಿಟ್ಟು ಬೇರೆ ಯಾರೂ ಶಾಸ್ತ್ರಕ್ಕೆ ಮುಖ್ಯಾರ್ಥರಲ್ಲವೆಂದು ತಿಳಿಯುತ್ತದೆ. ಶಾಸ್ತ್ರದ ಮುಖ್ಯಾರ್ಥನಾದ

ಇವನಿಗೇ ಶಾಸ್ತ್ರಯೋನಿತ್ವವೆಂದರೆ ಇವನೇ ಶಾಸ್ತ್ರದಿಂದ ಜನ್ಯವಾದ ಜ್ಞಾನಕ್ಕೆ ವಿಷಯನೆಂದು ಸಮನ್ವಯದಿಂದ ತಿಳಿದುಬರುತ್ತದೆ.

ಈ ರೀತಿಯಾಗಿ ವಿಷ್ಣುವೇ ಶಾಸ್ತ್ರದ ಎಂದರೆ ಬ್ರಹ್ಮಮೀಮಾಂಸಾ ಸಹಿತವಾದ ವೇದಗಳ ಪರಮ ಮುಖ್ಯಾರ್ಥನೆಂದು "ನಾರಾಯಣಂ ಮಹಾಜ್ಞೇಯಂ" ಇವೇ ಮೊದಲಾದ ಶ್ರುತಿಗಳಿಂದ ತಿಳಿದುಬರುತ್ತದೆ. ಇದರ ನಿರ್ಧಾರಕ್ಕಾಗಿಯೇ ವೇದಪತಿಗಳೂ, ಬ್ರಹ್ಮಸೂತ್ರಗಳ ಕರ್ತೃಗಳೂ ಆದ ಶ್ರೀವೇದವ್ಯಾಸದೇವರು "ಓಂ ಈಕ್ಷತೇರ್ನಾಶಬ್ದಂ ಓಂ" (ಪರಬ್ರಹ್ಮನು ಶಬ್ದವಾಚ್ಯನಲ್ಲದವನಲ್ಲ, ಎಂದರೆ ಕೇವಲ ಶಬ್ದವಾಚ್ಯ) ಎಂದು ಸಿದ್ಧಾಂತ ಮಾಡಿದ್ದಾರೆ.

ಸ್ವತಂತ್ರತತ್ತ್ವವಾದ ಶ್ರೀಹರಿಯನ್ನು ತಿಳಿದ ಮಾನವನ ಕರ್ತವ್ಯ
========================================

ಸಮನ್ವಯ ವಿರೋಧಾಭ್ಯಾಂ ಸಂಜಾತೇ ವಸ್ತುನಿರ್ಣಯೇ ಕಿಂ ಮಯಾಕಾರ್ಯಮಿತ್ಯೇವಸ್ಯಾದ್ಬುದ್ಧಿರಧಿ ಕಾರಿಣಃ ತತ್ರ ಭಕ್ತಿವಿಧಾನಾರ್ಥಂ ಉಪಾಸನಾ ನಿತ್ಯಂ ಕರ್ತವ್ಯಾ ॥೧॥
ಶ್ರವಣಾದಿವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್ ಅತ್ಯಶಕ್ಯೇತು ನಿದ್ರಾದೌ ಪುನರೇವ ಸಮಾಚರೇತ್॥೨॥
ಅಭಾವೇ ನಿರ್ಣಯಜ್ಞಸ್ಯ ಸಚ್ಛಾಸ್ತ್ರಾಣ್ಯೇವ ಸರ್ವದಾ ಶ್ರುಣುಯಾದ್ಯದಿ ಸದ್‌ಜ್ಞಾನ ಪ್ರಾಚುರ್ಯ ಮುಪಲಭ್ಯತೇ ॥೩॥
ಮಹದ್ಭ್ಯೋ ವಿಷ್ಣುಭಕ್ತೇಭ್ಯೋ ಯಥಾಶಕ್ತಿ ಚ ಸಂಶಯಾನ್ ಛಿಂದ್ಯಾತ್॥೪॥
ಸ್ವತೋ$ಧಿಕಾಭಾವೇ ಸ್ವಯಮೇವ ಸಮಭ್ಯಸೇತ್॥೫॥
ಬ್ರೂಯಾದಪಿ ಶಿಷ್ಯೇಭ್ಯಃ ಸತ್ಸಿದ್ಧಾಂತಮಹಾಪಯನ್॥೬॥
ಅಶೇಷಗುಣಪೂರ್ಣತ್ವಂ ಸರ್ವದೋಷಸಮುಜ್ಝಿತಿಃ
ವಿಷ್ಣೋರನ್ಯಚ್ಚ ತತ್ತಂತ್ರಂ ಇತಿ ಸಮ್ಯಕ್ ವಿನಿರ್ಣಯಃ ॥೭॥
ಸ್ವತಂತ್ರತ್ವಂ ಸದಾ ತಸ್ಯ, ತಸ್ಯ ಭೇದಶ್ಚ ಸರ್ವತಃ
ಅದೋಷಚತ್ವಸ್ಯ ಸಿದ್ಧ್ಯರ್ಥಂ ಯದಭೇದೇ ತದನ್ವಯಃ ॥೮॥
ತತ್ತಂತ್ರತ್ವಂ ಚ ಮುಕ್ತಾನಾಂ ಅಪಿ ತದ್ಗುಣಪೂರ್ತಯೇ ॥೯॥

ಅಸಂಶಯೇನ ತತ್ತ್ವಸ್ಯ ನಿರ್ಣಯೋ ಬ್ರಹ್ಮದರ್ಶನಮ್ ॥೧೦॥

ಸಮನ್ವಯ ಮತ್ತು ಅವಿರೋಧಗಳಿಂದ ವಸ್ತು ನಿರ್ಣಯವಾದಮೇಲೆ ಅಧಿಕಾರಿಗೆ ತಾನು ಮಾಡಬೇಕಾದ ಕಾರ್ಯ ಯಾವುದು ಎನ್ನುವ ಪ್ರಶ್ನೆ ಹುಟ್ಟಲು ನಿರ್ಣೀತವಾದ ತತ್ತ್ವದಲ್ಲಿ ಭಕ್ತಿಎಂದರೆ ಸ್ನೇಹರೂಪವಾದ ಜ್ಞಾನ ಪಡೆಯಲು ನಿರಂತರವಾಗಿ ಉಪಾಸನೆಯನ್ನು ಮಾಡಬೇಕು ಎಂಬುದೇ ಉತ್ತರವಾಗಿರುತ್ತದೆ.

ಶ್ರವಣ, ಮನನಾದಿಗಳಿಲ್ಲದೆ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯಬಾರದು. ನಿದ್ರಾದಿಗಳಿಂದ ಶ್ರವಣ ಮನನ ನಿಧಿಧ್ಯಾಸನಗಳನ್ನು ಮಾಡಲು ಅಸಾಧ್ಯವಾದರೆ, ಅವುಗಳ ಅಂದರೆ ನಿದ್ರೆ ಆಲಸ್ಯಾದಿಗಳು ಪರಿಹಾರವದಮೇಲೆ ಮತ್ತೆ ಶ್ರವಣಾದಿಗಳನ್ನು ಮಾಡಬೇಕು.

ತತ್ತ್ವನಿಶ್ಚಯವಿರುವ ಗುರುಗಳ ಸಹಾಯವು ದೊರಕದಿದ್ದರೆ, ಸಚ್ಛಾಸ್ತ್ರವನ್ನು ಸರ್ವದಾ ಶ್ರವಣಮಾಡುತ್ತಿದ್ದರೆ, ಶ್ರಿಹರಿಯ ಅನುಗ್ರಹದಿಂದ ನಿರ್ದೋಷವಾದ ಜ್ಞಾನದ ಪ್ರಾಚುರ್ಯವುಂಟಾಗುತ್ತದೆ. ಆಗ ಶಾಸ್ತ್ರನಿಷ್ಠರಾದ ವಿಷ್ಣುಭಕ್ತರಿಂದ ಯಥಾಶಕ್ತಿ ಸಂಶಯಗಳನ್ನು ಪರಿಹರಿಸಿಕೊಳ್ಳಬೇಕು. ಆದರೆ ಶ್ರುತ್ಯುಕ್ತವಾದಂಥ ಬ್ರಹ್ಮಜ್ಞಾನನಿಷ್ಠರಲ್ಲದವರೂ, ಅಭಕ್ತರೂ ಆದವರಿಂದ ಶಾಸ್ತ್ರಶ್ರವಣ ಮಾಡುವುದು ಜ್ಞಾನಕ್ಕೆ ಸಾಧನವಾಗುವುದಿಲ್ಲ ಮತ್ತು ಅನರ್ಥಕ್ಕೆ ಕಾರಣವಾಗುತ್ತದೆ..

ಒಂದು ವೇಳೆ ತನಗಿಂತ ಜ್ಞಾನಿಗಳಾದವರ ಸಹಾಯ ದೊರೆಕದಿದ್ದರೆ ತಾನೇ ಯಥಾಶಕ್ತಿ ಶಾಸ್ತ್ರಾಭ್ಯಾಸವನ್ನು ಮಾಡಬೇಕು. ಒಟ್ಟನಲ್ಲಿ ಯಾವ ಪರಿಸ್ಥಿತಿಯಲ್ಲೂ ಶಾಸ್ತ್ರಭ್ಯಾಸವಿಲ್ಲದೇ ವ್ಯರ್ಥವಾಗಿ ಕಾಲವನ್ನು ಕಳೆಯಬಾರದು.

ನಿರ್ದೋಷವಾದ ಶಾಸ್ತ್ರಪ್ರಕ್ರಿಯೆಗಳನ್ನು ಅತಿಕ್ರಮಿಸದೆ ಶಿಷ್ಯರಿಗೂ ಯಥಾಶಕ್ತಿ ಪ್ರವಚನಮಾಡಬೇಕು ಅಂದರೆ ಅಧ್ಯಯನ ಅಧ್ಯಾಪನಗಳನ್ನು ಎಲ್ಲ ಪರಿಸ್ಥಿತಿಗಳಲ್ಲೂ ಬಿಡದೇ ಮಾಡಲೇಬೇಕು.
ಅಶೇಷಗುಣಪೂರ್ಣನೂ, ಸರ್ವದೋಷದೂರನೂ ಆದವನು ವಿಷ್ಣುವೇ. ಅವನಿಂದ ಬೇರೆಯಾದದ್ದೆಲ್ಲ ಅವನ ಕಾರ್ಯವಾಗಿವೆ. ಇದು ಶಾಸ್ತ್ರ ನಿರ್ಣಯವಾಗಿದೆ ಎಂದು ತಿಳಿದು ಯಾವಾಗಲೂ ಈ ಭಾವಕ್ಕೆ ಲೋಪ ಬರಬಾರದು. ಶ್ರೀಹರಿ ಸರ್ವಕಾಲದಲ್ಲಿಯೂ ಸ್ವತಂತ್ರನೂ, ಸರ್ವದರಿಂದಲೂ ವಿಲಕ್ಷಣನಾಗಿದ್ದಾನೆ. ಇವೇ ಅವನ ನಿರ್ದೋಷತ್ವವನ್ನು ನಿಶ್ಚಯಿಸುವ ಸಾಧನಗಳು. ಅವನಿಗೆ ಇತರ ಎಲ್ಲವಸ್ತುಗಳಿಂದಲೂ ಭೇದವಿರುವಾಗ ಅವನಿಗೆ ದೋಷವುಂಟಾಗುವುದೆಂದರೆ ಅವನ ವಿಷಯಕವಾದ ಜ್ಞಾನ ದುಷ್ಟವಾಗುತ್ತದೆ.

ಮುಕ್ತರೂ ಶ್ರೀಹರಿಯಿಂದ ನಿಯಮ್ಯರು. ಇದರಿಂದಲೂ ಅವನ ಗುಣಪೂರ್ಣತ್ವವು ಸಾಧಿತವಾಗುತ್ತದೆ.

ಸಂಶಯಕ್ಕೆ ಅವಕಾಶವಿಲ್ಲದ ಹಾಗೆ ಪರಮಾತ್ಮತತ್ತ್ವದ ನಿರ್ಣಯವಾದಾಗ ಬ್ರಹ್ಮನ ಅಪರೋಕ್ಷವಾಗುತ್ತದೆ. ಈ ವಿಧವಾದ ತತ್ತ್ವನಿರ್ಣಯಕ್ಕೇ ಭಕ್ತಿಯದಾರ್ಢ್ಯವೆಂದೂ ಹೆಸರು.

ಶ್ರೀಮದಾಚಾರ್ಯರ ಮಾತುಗಳು ಅನಂತವಾದ ಅರ್ಥಗಾಂಭೀರ್ಯವನ್ನು ಹೊಂದಿವೆ. ಆಚಾರ್ಯರಉಕ್ತಿಗಳ ಅಭಿಃ ಪ್ರಾಯಗಳನ್ನು ಲೌಕಿಕಭಾಷೆಯಲ್ಲಿ ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ ಎಂದರೆ ಅತಿ ಶಯೋಕ್ತಿಯಲ್ಲ. "ಕಲುಷ ವಚನ ಗಳಾದರಿವು ಬಾಂಬೊಳೆಯುಪೆತ್ತನ ಪಾದಮಹಿಮಾಜಲಧಿ ಪೊಕ್ಕುದರಿಂದ ಮಾಣ್ದಪರೇ ಬುಧಜನರು" ಯೆಂಬ ಶ್ರೀಮಜ್ಜಗನ್ನಾಥದಾಸರ ಉಕ್ತಿಯಂತೆ ಲೋಪದೋಷ ಗಳನ್ನುಮನ್ನಿಸಿ ಶ್ರೀಮದಾಚಾರ್ಯರ ವಾಕ್ಯಗಳ ಅಭಿಃಪ್ರಾಯ ವನ್ನು ಮಾತ್ರ ಗ್ರಹಿಸಬೇಕೆಂದು ಸಜ್ಜನರಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀಮದಾನಂದತೀರ್ಥಸ್ಯ ಯೇ ಭಾಷ್ಯಭಾವಂ ಮನೋವಾಗ್ಭಿರಾವರ್ತಯಂತೇ ಸ್ವಶಕ್ತ್ಯಾ। ಸುರಾದ್ಯಾ ನರಾಂತಾಃ ಮುಕುಂದಪ್ರಸಾದಾದಿಮಂ ಮೋಕ್ಷಮೇತೇ ಭಜಂತೇ ಸದೇತಿ॥

ನ ವೈದುಷ್ಯ ಭ್ರಾಂತ್ಯಾ ನ ಚ ವಚನಚಾತುರ್ಯಕುಧಿಯಾ
ನ ಮಾತ್ಸರ್ಯಾದೇಶಾನ್ನ ಚ ಚಪಲತಾದೋಷವಶತಃ।
ಪರಂ ಶ್ರದ್ಧಾಜಾಡ್ಯಾದಕೃಷಿ ಕೃತಿಮಾಚಾರ್ಯವಚನೇ
ಸ್ಖಲನ್ನಪ್ಯೇತಸ್ಮಾಜ್ಜಗತಿ ನ ಹಿ ನಿಂದ್ಯೋಽಸ್ಮಿ ವಿದುಷಾಮ್॥

ಮದಾರ್ಯ ಸುಮನೋಧಾಮ ಮಧ್ವಮಾನಸಮಂಚಕೇ।
ಶಯಾನಃ ಕರಿಗಿರೀಶಃ ಪ್ರೀಯತಾಂ ಸೇವಯಾಽನಯಾ॥

## ಬ್ರಹ್ಮಾಂಡದ ಸೃಷ್ಟಿ

===========

ಸರ್ವಜ್ಞನೂ ಸರ್ವಸ್ವತಂತನೂ ಆದ ಶ್ರೀಹರಿಯು ಈ ಜಗತ್ತನು ಸೃಷ್ಟಿಮಾಡುವುದಕ್ಕೂ ಅದಕ್ಕೆ ಬೇಕಾದ ಸಾಧನಗಳನ್ನು ನಿರ್ಮಿಸಿಕೊಳ್ಳುವುದಕ್ಕೂ ತಾನು ಪೂರ್ಣಶಕ್ತನಾದರೂ, ತಾನೇ ಕೆಲವು ನಿಯಮಗಳನ್ನು ಇಟ್ಟುಕೊಂಡು ಅವುಗಳನ್ನು ಅನುಸರಿಸಿ ಈ ಜಗತ್ತಿನ ಸೃಷ್ಟಿ ಮೊದಲಾದ ವ್ಯಾಪಾರಗಳನ್ನು ಮಾಡುತ್ತಾನೆ.

ಶ್ರೀಹರಿಯು ತಾನು ಸರ್ವಾಧ್ಯಕ್ಷನಾಗಿ ಮೊದಲು ತನ್ನ ಪ್ರಕೃತಿಯೇ ಆದ ಲಕ್ಷ್ಮೀದೇವಿಯನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡು ಆ ಲೋಕಮಾತೆಯ ಮೂಲಕವಾಗಿ ಈ ಜಗತ್ತನ್ನು ಸೃಷ್ಟಿಮಾಡುತ್ತಾನೆ. ವಿಶ್ವಪ್ರಸುತಿಯಾದ ಲಕ್ಷ್ಮೀದೇವಿಗೂ ಸಹ ಅವನೇ ಕಾರಣ.

ನಮ್ಮ ಸಿದ್ಧಾಂತದಲ್ಲಿ ಮಾಯೆ ಎಂದರೆ ಪರಮಾತ್ಮನ ಇಚ್ಛೆ ಎಂದು ತಿಳಿದುಕೊಳ್ಳಬೇಕು. ಶ್ರೀಹರಿಯು ತನ್ನ ಇಚ್ಛೆಯಿಂದಲೇ ಈ ಜಗತನ್ನು

ಸೃಷ್ಟಿಮಾಡುತ್ತಾನೆ. ಈ ವಿಶ್ವದ ಸೃಷ್ಟಿಗೆಕಾರಣವಾದ ಮೂಲಪ್ರಕೃತಿಯಾದ ಲಕ್ಷ್ಮೀದೇವಿಗೂ ಅವನೇ ಕಾರಣನು. ಶ್ರೀ ಪರಮಾತ್ಮನು ಮೂಲಪ್ರಕೃತಿಯಲ್ಲಿ ಪ್ರವೇಶಮಾಡಿ, ತನ್ನನ್ನು ಬಹುವಿಧವಾಗಿ ಮಾಡಿಕೊಳ್ಳುತ್ತಾನೆ. ಮಾಯಾ, ಪ್ರಕೃತಿ, ಮಹಾಮಾಯಾ, ಅವಿದ್ಯಾ, ವಾಸನಾ ಈ ಎಲ್ಲವೂ ಅವನ ಇಚ್ಛೆಯ ಹೆಸರುಗಳೇ.

ನಾವು ವಾಸಮಾಡುವ ಈ ಬ್ರಹ್ಮಾಂಡದಲ್ಲಿ ಹದಿನಾಲ್ಕುಲೋಕಗಳಿವೆ. ಅವು ಭೂ, ಭುವಃ, ಸ್ವಃ (ಸ್ವರ್ಗಲೋಕ), ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ ಈ ಲೋಕಗಳೆಲ್ಲ ಪೃಥ್ವೀಲೋಕದ ಮೇಲ್ಗಡೆ ಇರುವಲೋಕಗಳು. ಇವಲ್ಲದೆ ಪೃಥ್ವಿಯ ಕೆಳಗಡೆ ತಳ, ಅತಳ, ವಿತಳ, ಸುತಳ, ತಳಾತಳ, ರಸಾತಳ ಮತ್ತಿ ಪಾತಾಳ ಲೋಕಗಳಿವೆ. ಈ ಹದಿನಾಲ್ಕುಲೋಕಗಳಿಂದ ಕೂಡಿದ ಬ್ರಹ್ಮಾಂಡವು ಐವತ್ತುಕೋಟಿಯೋಜನ ವಿಸ್ತಾರವುಳ್ಳದ್ದಾಗಿದೆ. ಇಷ್ಟುವಿಸ್ತಾರವಾದ ಈ ಬ್ರಹ್ಮಾಂಡವೇ ಸರ್ವ ಪ್ರಾಣಿಗಳಿಗೂ ವಾಸಸ್ಥಾನವೂ ಸಾಧನಸ್ಥಾನವೂ ಆಗಿದೆ. ಇಂತಹ ಅನಂತಕೋಟಿಬ್ರಹ್ಮಾಂಡಗಳಿಗೆ ನಾಯಕನಾದವನು ಶ್ರೀಹರಿ ಎಂದು ಶಾಸ್ತ್ರಗಳಲ್ಲಿ ಹೇಳಿದೆ.

***ಸ್ಥೂಲಸೃಷ್ಟಿ***

***========***

ಈ ಬ್ರಹ್ಮಾಂಡವನ್ನು ಪರಮಾತ್ಮನು ಒಮ್ಮೆಯೇ ಸೃಷ್ಟಿಮಾಡಲಿಲ್ಲ. ಮೊದಲು ಸೂಕ್ಷ್ಮ ಸೃಷ್ಟಿಯನ್ನು ಮಾಡಿ ಅದರಲ್ಲಿ ಇಪ್ಪತ್ತುನಾಲ್ಕು ತತ್ತ್ವಗಳನ್ನು ಅಂದರೆ ಪದಾರ್ಥಗಳನ್ನು ಸೃಷ್ಟಿಮಾಡಿದನು. ಅಷ್ಟೇ ಅಲ್ಲ ಅವುಗಳೊಳಗೆ ತಾನೆ ಪ್ರವೇಶಮಾಡಿ ಅವುಗಲಿಗೆ ಚಾಲನೆಯುನ್ನು ಕೊಟ್ಟು ಬ್ರಹ್ಮಾಂಡವನ್ನು ಸೃಷ್ಟಿಸಿದನು. ಹೀಗೆ ಮೂರು ಘಟ್ಟಗಳಿಂದ ಕೂಡಿ ಈ ಬ್ರಹ್ಮಾಂಡವು ಸೃಷ್ಟಿಯಾಗಿದೆ. ಇದಕ್ಕೇ ಸ್ಥೂಲಸೃಷ್ಟಿಯನ್ನುತ್ತಾರೆ.

**ಮೊದಲನೆಯ ಸೂಕ್ಷ್ಮಸೃಷ್ಟಿ**

==================

**ಸ**ೃಷ್ಟಿಗಿಂತ ಮೊದಲು ಶ್ರೀಪರಮಾತ್ಮ ಒಬ್ಬನೇ ಇದ್ದನು. ಅಂದರೆ ಜಗತ್ತೆಲ್ಲ ಅಂದರೆ ಜಡ ಮತ್ತು ಜೀವರುಗಳು ಇರಲಿಲ್ಲವೆಂದಲ್ಲ. ಈ ಎಲ್ಲವೂ ಅವನ ಉದರದಲ್ಲಿ ಇದ್ದೇ ಇದ್ದವು. ಆದರೆ ಎಲ್ಲವೂ ಸುಪ್ತ ಸ್ಥಿತಿಯಲ್ಲಿದ್ದವು. ಶ್ರೀಹರಿಯೂ ಯೋಗನಿದ್ರೆಯಲ್ಲಿಯೇ ಇದ್ದನು. ಯೋಗನಿದ್ರೆ ಎಂದರೆ ಪೂರ್ಣಜಾಗ್ರತಾವಸ್ಥೆಯುಳ್ಳ ನಿದ್ರೆ ಎಂದು ಅರ್ಥ. ಪೂರ್ಣ ಸಕ್ತನಾದ ಭಗವಂತನು ತನ್ನ ಶಕ್ತಿಗಳನ್ನು ಕಾರ್ಯೋನ್ಮುಖವನ್ನಾಗಿ ಮಾಡಿರಲಿಲ್ಲ. ತನ್ನಲ್ಲಿಯೇ ತಾನು ರಮಮಾಣನಾಗಿದ್ದನು ಅಂದರೆ ತನ್ನಷ್ಟಕ್ಕೆ ತಾನೇ ಆನಂದಪಡುತ್ತಿದ್ದನು. ಅವನ ರಮಮಾಣತ್ವವೇ ರಮಾದೇವಿ. ಅವನಿಗೆ ಸೃಷ್ಟಿಮಾಡಬೇಕೆಂಬ ಇಚ್ಛೆಯಾಯಿತು. ಕೂಡಲೇ ಸೃಷ್ಟಿಮಾಡಲು ಕಾರ್ಯಪವೃತ್ತನಾದನು ಅಂದರೆ ತನ್ನ ಇಚ್ಛಾವಿಶೇಷವನ್ನು ಪ್ರಕಟಮಾಡಿದನು. ಈ ವಿಧವಾದ ಸೃಷ್ಟಿಮಾಡುವುದರ ಮುಖ್ಯ ಉದ್ದೇಶವೇನೆಂದರೆ ಪರಮಾತ್ಮನನ್ನು ಸಅನಾದಿಕಾಲದಿಂದಲೂ ಆಶ್ರಯಮಾಡಿಕೊಂಡಿರುವ ಜೀವರುಗಳಲ್ಲಿರುವ ಸುಪ್ತವಾದ ಶಕ್ತಿಗಳನ್ನು ಉದ್ಬೋಧಮಾಡಿ ಅವನ್ನು ಕಾರ್ಯೋನ್ಮುಖವನ್ನಾಗಿಮಾಡಿ ಅವು ತಮ್ಮ ತಮ್ಮಯ ಪೂರ್ಣವಿಕಾಸವನ್ನು ಪಡೆದುಕೊಂಡು ಆನಂದಪಡಬೇಕು ಎನ್ನುವುದೇ ಆಗಿದೆ. ಸ್ವತಂತ್ರನೂ ಆನಂದಪೂರ್ಣನೂ ಆದ ಶ್ರೀಹರಿಗೆ ಈ ಜಗತ್ತನ್ನು ಸೃಷ್ಟಿಮಾಡುವುದರಿಂದ ಯಾವಪ್ರಯೋಜನವೂ ಇಲ್ಲ. ಇದು ಕೇವಲ ಅವನ ಲೀಲೆಮಾತ್ರ.

ಈ ವಿಧವಾದ ಮೊದಲನೆಯ ಸೃಷ್ಟಿಮಾಡಲು ನಾರಾಯಣನು ನಾಲ್ಕು ಪ್ರಕಾರವಾಗಿ ವ್ಯೂಹವನ್ನು ಹೊಂದಿದನು. ಇದು ಅವನ ಕ್ರೀಡೆ. ಸಂಸಾರಗತರಾದ ಜೀವರಿಗೆ ಅವರವರ ಸ್ವರೂಪದ ಅನುಭವವು ಚೆನ್ನಾಗಿ ಬರುವುದಕ್ಕಾಗಿಯೂ, ಜಡಪ್ರಕೃತಿ ಬಹುವಿಧವಾಗಿ ರೂಪುಗೊಂಡು ತನ್ನ ವೈಭವವನ್ನು ಪಡೆಯುವುದಕ್ಕಾಗಿಯೂ ಇದೊಂದು ಸಾಧನಮಾತ್ರ. ಈವಿಧವಾದ ಸೂಕ್ಷ್ಮಸೃಷ್ಟಿಯು ನಾಲಕ್ಕು ವಿಧವಾಗಿದೆ:

(೧) ಶುದ್ಧಸೃಷ್ಟಿ, ಇದರಲ್ಲಿ ಪರಮಾತ್ಮನು ತನ್ನ ದೇಹ, ಇಂದ್ರಿಯ, ಅಂತಃಕರಣಾದಿಗಳಿಗೆ ಸ್ವಲ್ಪವೂ ವಿಕಾರವಿಲ್ಲದಿದ್ದರೂ, ಕೇವಲ ಲೀಲೆಯಿಂದಲೇ ಜಗತ್ತಿನ ಉಪಕಾರಕ್ಕಾಗಿ ತನ್ನ ಮೂಲರೂಪದಿಂದ
ಹೊರಗೆ ಬರುವುದು.

(೨) ಪರಾಧೀನ ವಿಶೇಷಾವಾಪ್ತಿರೂಪವಾದ ಸೃಷ್ಟಿ ಅಂದರೆ ಲಕ್ಷ್ಮೀದೇವಿ ಮುಂತಾದವರಿಗೆ ತನ್ನ ಅಧಿ ಕಾರದಲ್ಲಿಯ ಕೆಲವು ಭಾಗಗಳನ್ನು ಅಂದರೆ ಜಡಪ್ರಕೃತಿಯ ಸ್ವಾಮಿತ್ವ ಮೊದಲಾದುವುಗಳನ್ನು ಕೊಡುವುದು

(೩) ಮಿಶ್ರ ಸೃಷ್ಟಿ

(೪) ಕೇವಲಸೃಷ್ಟಿ ಅಂದರೆ ಚೈತನ್ಯರೂಪದಿಂದ ನಿತ್ಯರಾದ ಜೀವರಿಗೆ ಕೇವಲ ಬಾಹ್ಯ ಶರೀರದಿಂದ ಉತ್ಪತ್ತಿ.

ಮೂಲಪ್ರಕೃತಿಯಿಂದ ೨೪ ತತ್ವಗಳನ್ನು ಸೃಷ್ಟಿಮಾಡಿದನು. ಎಲ್ಲಕ್ಕೂ ಮೊದಲಯ ಸತ್ವ ರಜಸ್, ತಮಸ್ಸುಗಳೆಂಬ ತ್ರಿಗುಣಗಳ ರಾಶಿಗಳು ಸೃಷ್ಟವಾದುವು. ನಂತರದಲ್ಲಿ ಮಹತ್ ತತ್ವ, ಅಹಂಕಾರತತ್ವ, ಬುದ್ಧಿತತ್ವ, ಮನಸ್‌ತತ್ವ ದಶೇಂದ್ರಿಯುಗಳು, ಶಬ್ದ, ಸ್ಪರ್ಶ ಮೊದಲಾದ ತನ್ಮಾತ್ರಗಳು ಮತ್ತು ಪಂಚಭೂತಗಳು ಅಂದರೆ ಪೃಥ್ವೀ, ಅಪ್, ತೇಜ, ವಾಯು ಮತ್ತು ಆಕಾಶ ಮುಂತಾಗಿ ೨೪ ತತ್ವಗಳು ಸೃಷ್ಟವಾದವು. (೧)ಮಹತ್,
(೨) ಅಹಂಕಾರ (೩) ಬುದ್ಧಿ (೪) ಮನಸ್ಸು (೫) ಪಂಚಕರ್ಮೇಂದ್ರಿಗಳು,
(೬) ಪಂಚಜ್ಞಾನೇಂದ್ರಿಯುಗಳು, (೭) ಪಂಚತನ್ಮಾತ್ರಗಳು,
(೮) ಪಂಚಮಹಾಭೂತಗಳು ಇವೇ ೨೪ ತತ್ವಗಳು.
ಇದೇ ಮೊದಲನೆಯ ಸೂಕ್ಷ್ಮಸೃಷ್ಟಿ. ಈ ಸೃಷ್ಟಿಯಾಗುವಾಗ ಬ್ರಹ್ಮಾಂಡವು ಇನ್ನೂ ಸೃಷ್ಟವಾಗಿರಲಿಲ್ಲ. ಆದಕಾರಣದಿಂದ ಇವೆಲ್ಲವೂ ಬ್ರಹ್ಮಾಂಡದ ಹೊರಗಿನ ಪದಾರ್ಥಗಳು. ಬ್ರಹ್ಮಾಂಡಕ್ಕೆ ಆವರಣಗಳಾಗಿ ಇರುವುವು ಅಂದರೆ ಬ್ರಹ್ಮಾಂಡದ ಸುತ್ತಲೂ ವ್ಯಾಪಿಸಿಕೊಂಡಿರತಕ್ಕವು. ಇವುಗಳ ವಿವರಣೆಗಳನ್ನು ಮುಂದೆ ಕೊಟ್ಟಿದೆ.

***ಎರಡನೆಯ ಸೃಷ್ಟಿ***

=============

ಎರಡನೆಯ ಸೃಷ್ಟಿಯಲ್ಲಿ ಬ್ರಹ್ಮಾಂಡದ ಉತ್ಪತ್ತಿ ಇರುವುದು. ೨೪ ತತ್ವಗಳನ್ನು ಒಟ್ಟುಗೂಡಿಸಿ, ಅವುಗಳಲ್ಲಿ ಪರಮಾತ್ಮನು ಪ್ರವೇಶಮಾಡಿ ಬ್ರಹ್ಮಾಂಡವನ್ನು ಸೃಷ್ಟಿಮಾಡಿದನು. ಈ ತತ್ವಗಳು ಮೊದಲು ಬಿಡಿಬಿಡಿಯಾಗಿದ್ದುವು. ಈ ಬ್ರಹ್ಮಾಂಡವು ೫೦ಕೋಟಿಯೋಜನ ವಿಸ್ತಾರವುಳ್ಳದ್ದಾಗಿರುವುದು.

***ಮೂರನೆಯ ಸೃಷ್ಟಿ***

=============

ಸೃಷ್ಟವಾದ ಬ್ರಹ್ಮಾಂಡದ ಒಳಗೆ ಶ್ರೀಪರಮಾತ್ಮನು ಪ್ರವೇಶಮಾಡಿದನು. ಆಗ ಪರಮಾತ್ಮನು ತಾಳಿದರೂಪವೇ ಪದ್ಮನಾಭರೂಪ. ಈ ಪದ್ಮನಾಭರೂಪಿ ನಾರಾಯಣನ ನಾಭಿಕಮಲದಿಂದ ಹದಿನಾಲ್ಕುಲೋಕಗಳು ಮತ್ತು ಸಮಸ್ತ ಚೇತನಾಚೇತಗಳ ಸೃಷ್ಟಿಯಾಯಿತು. ಜಡಪರ್ದಾಗಳಿಂದ ಜಡಪದಾರ್ಥಗಳು ಸೃಷ್ಟವಾದುವು. ಚಿತ್ಪ್ರಕೃತಿಯಿಂದ ಚತುರ್ಮುಖಬ್ರಹ್ಮದೇವರೇಮೊದಲಾಗಿ ಕಲಿಪರ್ಯಂತವಾದ ಸಮಸ್ತ ಚೇತನರೂ ಸೃಷ್ಟವಾದರು.

***ಜಡಪ್ರಕೃತಿಯ ವಿಸ್ತಾರ***

===============

ಜಡಪ್ರಕೃತಿಯಿಂದ ಗುಣತ್ರಯಗಳ ರಾಶಿಗಳು ಸೃಷ್ಟವಾದುವು.

**ಮಹತ್ ತತ್ವ** – ಆ ಗುಣತ್ರಯಗಳ ಸಮುದಾಯದೊಳಗಿರುವ ತಮೋಭಾಗದಿಂದ ಮಹತ್ ತತ್ವದ ಉತ್ಪತ್ತಿಯಾಯಿತು. ಇದರಲ್ಲಿ 1 ಭಾಗತಮ + 2 ಭಾಗರಜ + 4 ಭಾಗಸತ್ವ ಇರುವುದು.

**ಅಹಂಕಾರ ತತ್ವ** – ಮಹತ್ ತತ್ವದಲ್ಲಿರುವ ತಮೋಭಾಗದಿಂದ ಅಹಂಕಾರತತ್ವದ ಸೃಷ್ಟಿಯಾಯಿತು. ಇದರಲ್ಲಿ ೧೦ ಭಾಗಸತ್ವ + ೧ ಭಾಗರಜ + ೧/೧೦ ಭಾಗತಮಸ್ ಇರುವುದ. ಈ ಅಹಂಕಾರತತ್ವವು (೧)

ತೈಜಸಾಹಂಕಾರ, (೨) ವೈಕಾರಿಕಾಹಂಕಾರ ಮತ್ತು (೩) ತಾಮಸಾಹಂಕಾರ ಎಂದು ಮೂರುವಿಧವಾಗಿರುವುದು.

**ಬುದ್ಧಿ ತತ್ವ** – ತೈಜಸಾಹಂಕಾರದಿಂದ ಹುಟ್ಟಿದುದು ಬುದ್ಧಿತತ್ವ. ಇದು ಎರಡು ವಿಧವಾಗಿದೆ.

(೧) ತತ್ವ ಎಂದರೆ ದ್ರವರೂಪವಾದದ್ದು

(೨) ಜ್ಞಾನರೂಪವಾದದ್ದು. ಜ್ಞಾನರೂಪವಾದ ಬುದ್ಧಿಯು 'ಜ್ಞಾನ'ದಲ್ಲಿ ಸೇರುತ್ತದೆ. ತತ್ವರೂಪವಾದ ಬುದ್ಧಿಗೆ ಬುದ್ಧಿತತ್ವ ಎಂದು ಹೆಸರು.

**ಜಡಪ್ರಕೃತಿ** – ಜಡಪ್ರಕೃತಿಯಿಂದ ಕಾಲ ಮತ್ತು ಗುಣತ್ರಯಗಳು ಸೃಷ್ಟವಾದುವು. ಗುಣತ್ರಯಗಳೆಂದರೆ ಸತ್ವ, ರಜ ಮತ್ತು ತಮಸ್ಸು ಇವುಗಳ ಸಮುದಾಯ. ಈ ಮೂರುಗುಣಗಳರಾಶಿಯಲ್ಲಿ ಸತ್ವಗುಣದ ರಾಸಿ ಶುದ್ಧ ಸತ್ತ್ವೇ ಆಗಿರುತ್ತದೆ. ರಜದ ರಾಶಿಯಲ್ಲಿಯೂ ಸಹ ಸತ್ವ ಭಾಗ ರಜಸ್ಸಿನ ಭಾಗಕ್ಕಿಂತ ೧೦೦ ಪಟ್ಟು ಹೆಚ್ಚಾಗಿರುತ್ತದೆ. ತಮೋಭಾಗವು ರಜೋಭಾಗಕ್ಕಿಂತ ೧೦೦ ಪಟ್ಟು ಕಡಿಮೆ ಇರುತ್ತದೆ. ಯಾವಾಗಲೂ ಸೃಷ್ಟಿ ರಜೋಭಾಗದಿಂದ ಮಾತ್ರವೇ ಅಗುತ್ತದೆ. ತಮೋಭಾಗ ಹೆಚ್ಚಾದಾಗ ಲಯವಾಗುತ್ತದೆ. ಜಗತ್ತಿನ ಸ್ಥಿತಿ ಎಂದರೆ ಪಾಲನವು ಸತ್ವಗುಣದಿಂದ ಆಗುತ್ತದೆ.

***ಮೂರು ವಿಧವಾದ ಅಹಂಕಾರಗಳ ವಿಸ್ತಾರ***

==========================

ವೈಕಾರಿಕ, ತೈಜಸ ಮತ್ತು ತಾಮಸಾಹಂಕಾರಗಳ ವಿಸ್ತಾರ ಈ ಕೆಳಗೆ ಕಂಡಂತೆ ಇರುವುದು.

**ವೈಕಾರಿಕ ಅಹಂಕಾರ** – ಇದರಿಂದ ಮನಸ್ಸು ಸೃಷ್ಟವಾಯಿತು. ಮನಸ್ಸು (೧) ತತ್ವರೂಪ ಮತ್ತು (೨) ಇಂದ್ರಿಯರೂಪ ಎಂದು ಎರಡು ವಿಧವಾಗಿರುವುದು. ತತ್ವರೂಪವಾದ ಮನಸ್ಸು ವೈಕಾರಿಕ ಅಹಂಕಾರದಿಂದ ಹುಟ್ಟುತ್ತದೆ. ಇಂದ್ರಿಯರೂಪ

ಮನಸ್ಸು, ನಿತ್ಯಮನಸ್ಸು ಮತ್ತು ಅನಿತ್ಯಮನಸ್ಸೆಂಬ ಇಂದ್ರಿಯ ಎಂದು ಎರಡು ಪ್ರಕಾರವಾಗಿರುತ್ತದೆ. ನಿತ್ಯಮನಸ್ಸು ಸಂಸಾರಿಗಳಲ್ಲಿ ಅಭಿವ್ಯಕ್ತವಾಗಿರುವುದಿಲ್ಲ ಆದರೆ ಮುಕ್ತಿಯಲ್ಲಿ ಮಾತ್ರವೇ ಅಭಿವ್ಯಕ್ತವಾಗುತ್ತದೆ. ಅನಿತ್ಯಮನಸ್ಸೆಂಬ ಇಂದ್ರಿಯವು ಎಲ್ಲ ಜೀವರುಗಳಲ್ಲಿಯೂ ಇರುವುದು. ಅದು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಮತ್ತು ಚೇತನ ಎಂದು ಐದು ಪ್ರಕಾರವಾಗಿದೆ. ಇವುಗಳಲ್ಲಿ ಮನಸ್ಸು ಸಂಕಲ್ಪ ವಿಕಲ್ಪಾತ್ಮಕ ಅಂದರೆ ಚಂಚಲವಾಗಿರುತ್ತದೆ. ಯಾವುದಾದರೂ ಕಾರ್ಯಮಾಡಬೇಕಾದಾಗ ಅದನ್ನು ಮಾಡಲೋ ಬಿಡಲೋ ಎಂದು ಡೋಲಾಯಮಾನವಾಗಿರುತ್ತದೆ. ಬುದ್ಧಿ ಎನ್ನುವುದು ನಿಶ್ಚಯಾತ್ಮಕವಾದದ್ದು. ಅಹಂಕಾರವೆಂದರೆ ಯಾವುದು ನಿಜವಾಗಿ ತನ್ನದಲ್ಲವೋ ಅದನ್ನು ತನ್ನದೆಂದು ತಪ್ಪಾಗಿ ಭಾವಿಸುವಿಕೆ. ಅಂದರೆ ತನ್ನ ಸ್ವರೂಪವಲ್ಲದ್ದನ್ನು ತನ್ನ ಸ್ವರೂಪವೇ ಎಂದು ತಪ್ಪಾಗಿ ತಿಳಿದುಕೊಳ್ಳುವುದು. ಉದಾ – ನಾನು ಸ್ಥೂಲನಾಗಿದ್ದೇನೆ, ನಾನು ಕೆಂಪಗಿದ್ದೇನೆ, ಇವೇ ಮೊದಲಾದುವುಗಳು. ಇವೆಲ್ಲವೂ ಭ್ರಮೆ. ಏಕೆಂದರೆ ಸ್ಥೂಲ, ತೆಳ್ಳಗೆ, ಕೆಂಪು ಇರುವುದು ತಾನಲ್ಲ, ಅಂದರೆ ಜೀವವಲ್ಲ, ಶರೀರ ಮಾತ್ರ. ತನ್ನಿಂದ ಭಿನ್ನವಾದ ಶರೀರವನ್ನು ತನ್ನದೆಂಬ ಭಾವನೆ. ಚಿತ್ತ ಎಂದರೆ ಸ್ಮೃತಿ, ಹಿಂದೆ ಅನುಭವಿಸಿದ್ದನ್ನು ಸ್ಮರಣೆಗೆ ತರುವುದು. ಚೇತನವೆಂದರೆ ಬಹು ಪದಾರ್ಥಗಳನ್ನು ಏಕಕಾಲದಲ್ಲಿ ಗ್ರಹಿಸುವ ಶಕ್ತಿ

## ತೈಜಸಾಹಂಕಾರ

===========

ತೈಜಸಾಹಂಕಾರದಿಂದ ಇಂದ್ರಿಯಗಳು ಉತ್ಪತ್ತಿಯಾಗುತ್ತವೆ. ಪಂಚಜ್ಞಾನೇಂದ್ರಿಯಗಳು ಮೂಗು, ನಾಲಿಗೆ, ಕಣ್ಣು, ಕಿವಿ, ಚರ್ಮ. ಪಂಚ ಕರ್ಮೇಂದ್ರಿಯಗಳು– ವಾಕ್, ಕೈ, ಕಾಲು, ಗುದ, ಉಪಸ್ಥ. ಇವು ತಮ್ಮ ತಮ್ಮ ವಿಷಯಗಳನ್ನು ಗ್ರಹಣಮಾಡುವುದಕ್ಕಾಗಿ ವಿಷಯಗಳಕಡೆ ಓಡುವುದರಿಂದ ಇವಕ್ಕೆ ಇಂದ್ರಿಯಗಳೆಂದು ಹೆಸರು. ಈ ಹತ್ತು ಇಂದ್ರಿಯಗಳಲ್ಲಿ

(೧) ನಿತ್ಯ (೨) ಅನಿತ್ಯ ತತ್ವರೂಪವಾದ ದಶೇಂದ್ರಿಯಗಳು ತೈಜಸಾಹಂಕಾರದಿಂದ ಹುಟ್ಟಿರುವುದರಿಂದ ಇವು ಅನಿತ್ಯಗಳು. ತತ್ವಭಿನ್ನವಾದ ಜ್ಞಾನ ಮತ್ತು ಕರ್ಮೇಂದ್ರಿಯಗಳು ಸ್ವರೂಪಭೂತಗಳು ಮತ್ತು ಬಾಹ್ಯಗಳು ಎಂದು ಎರಡು ವಿಧವಾಗಿ ರುವುವು. ಇವುಗಳಲ್ಲಿ ಸ್ವರೂಪಭೂತವಾದ ಇಂದ್ರಿಯಗಳು ಸರ್ವಜೀವರಲ್ಲಿಯೂ ಇರುವುವು. ಇವು ನಿತ್ಯಗಳಾಗಿರುತ್ತವೆ. ಈ ಸ್ವರೂಪೇಂದ್ರಿಗಳಿಗೇ **ಸಾಕ್ಷೀ** ಎಂದು ಹೆಸರು.

## ತಾಮಸಾಹಂಕಾರ

============

ತಾಮಸಾಹಂಕಾರದಿಂದ ತತ್ವರೂಪವಾದ ಪಂಚತನ್ಮಾತ್ರ(ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ)ಗಳು ಹುಟ್ಟುತ್ತವೆ. ತತ್ವಭಿನ್ನವಾದುವು ಗುಣಗಳಲ್ಲಿ ಸೇರುತ್ತವೆ. ಪಂಚಭೂತಗಳು – ಪೃಥ್ವಿ, ಅಪ್, ತೇಜ, ವಾಯು ಮತ್ತು ಆಕಾಶಗಳು.
ಈ ಎಲ್ಲವೂ ಸೃಷ್ಟಿಯವಿಸ್ತಾರವೇ ಆಗಿದೆ.

## *ಮುಖ್ಯಪ್ರಾಣ ತತ್ವ*

*============*

ಶ್ರೀಹರಿಯು ತನ್ನ ಪ್ರಕೃತಿಯಾದ ಲಕ್ಷ್ಮೀದೇವಿಯಿಂದ ಸೃ

## *ಸಾಕ್ಷೀಂದ್ರಿಯ/ಸಾಕ್ಷಿ ಪ್ರತ್ಯಕ್ಷ*

==================

ನರಸಿಂಹೋ$ಖಿಲಾಜ್ಞಾನಮತಧ್ವಾಂತ ದಿವಾಕರಃ।
ಜಯತ್ಯಮಿತಸದ್ಜ್ಞಾನ ಸುಖಶಕ್ತಿ ಪಯೋನಿಧಿಃ॥
ಅಭ್ರಮಂ ಭಂಗರಹಿತಮಜಡಂ ವಿಮಲಂ ಸದಾ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್॥
ಚಿತ್ರೈಃ ಪದೈಶ್ಚ ಗಂಭೀರೈರ್ವಾಕ್ಯೈರ್ಮಾನೈರಖಂಡಿತೈಃ।
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್॥
*****************

ಶ್ರೀಮದಾಚಾರ್ಯರು ಭಾಗವತತಾತ್ಪರ್ಯದಲ್ಲಿ "ಸಂಕ್ಷೇಪವಿಸ್ತರಾಭ್ಯಾಂ ಪ್ರವದಂತಿ ಮನೀಷಿಣಃ। ಬಹುವಾರಶ್ರುತೇಃ ಫಲಬಾಹುಳ್ಯಕಾರಣಾತ್" ಎಂದು ಹೇಳಿದ್ದಾರೆ ಈ ಉಕ್ತಿಯನ್ನು ಅನುಸರಿಸಿ, ಮೊದಲು ಸಾಕ್ಷೀಂದ್ರಿಯದ ವಿಷಯವನ್ನು ಸಂಕ್ಷೇಪವಾಗಿ ಪ್ರಸ್ತಾಪಮಾಡಿ ನಂತರದಲ್ಲಿ ಸ್ವಲ್ಪ ವಿಸ್ತಾರವಾಗಿ ವಿವೇಚನೆಯನ್ನು ಮಾಡಲಾಗಿದೆ.

## ***ಜ್ಞಾನವು ಹುಟ್ಟುವ ಕ್ರಮ***

--------------

ಸಾಕ್ಷೀಂದ್ರಿಯದ ವಿಷಯವನ್ನು ಪ್ರಸ್ತಾಪಮಾಡುವುದಕ್ಕಿಂತ ಮೊದಲು ನಮ್ಮ ಸಿದ್ಧಾಂತದಲ್ಲಿ ಉಕ್ತವಾಗಿರುವಂತ ಜ್ಞಾನದ ಉತ್ಪತ್ತಿಯ ಕ್ರಮವನ್ನು ನೋಡೋಣ. ಆತ್ಮನಿಗೆ ಯಾವುದಾದರೂ ಜ್ಞಾನವುಂಟಾಗಬೇಕಾರೆ ಆತ್ಮನಿಗೂ ಮನಸ್ಸಿಗೂ ಸಂಯೋಗವಾಗಬೇಕು. ಏಕೆಂದರೆ ಕೇವಲ ಇಂದ್ರಿಯಗಳಿಗೂ ಬಾಹ್ಯ ಪದಾರ್ಥಗಳಿಗೂ ಸನ್ನಿಕರ್ಷವಾದಮಾತ್ರಕ್ಕೆ ಜ್ಞಾನವಾಗುವುದಿಲ್ಲ. ಒಂದುವೇಳೆ ಸನ್ನಿಕರ್ಷಮಾತ್ರವೆ ಸಾಕಾಗಿದ್ದರೆ, ನಾವು ಮಲಗಿರುವಾಗ ನಮ್ಮ

ದೇಹಕ್ಕೂ ಹಾಸಿಗೆಗೂ ಸನ್ನಿಕರ್ಷವಿದ್ದರೂ ಅದರ ಜ್ಞಾನ ನಮಗಾಗುವುದಿಲ್ಲ. ಇದು ಎಲ್ಲರ ಅನುಭವ ವಿಷಯವಾಗಿರುತ್ತದೆ.
ಮತ್ತೂ ನಾವು ಒಂದು ಪದಾರ್ಥವನ್ನು ಕಣ್ಣಿನಿಂದ ನೋಡುತ್ತಿದ್ದರೂ ಮನಸ್ಸು ಅಲ್ಲಿರದಿರುವಾಗ ಆ ವಸ್ತುವಿನ ಜ್ಞಾನ ನಮಗಾಗುವುದಿಲ್ಲ. ಇದೂ ನಮ್ಮೆಲ್ಲರ ಅನುಭವವಾಗಿದೆ.

ಮನಸ್ಸಿಗೂ ಇಂದ್ರಿಯಕ್ಕೂ ಸನ್ನಿಕರ್ಷವಾಗಬೇಕು. ಯಾವ ಇಂದ್ರಿಯವು ಜ್ಞಾನಜನಕವಾಗುವುದೋ, ಆ ಇಂದ್ರಿಯಕ್ಕೂ ಅದಕ್ಕೆ ವಿಷಯವಾಗುವ ಪದಾರ್ಥಕ್ಕೂ ಸನ್ನಿಕರ್ಷವಾಗಬೇಕು. ಆಗ ಜ್ಞಾನವು ಹುಟ್ಟುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಪದಾರ್ಥಕ್ಕೂ ಇಂದ್ರಿಯಕ್ಕೂ ಸನ್ನಿಕರ್ಷವಾಗಬೇಕು, ಇಂದ್ರಿಯಕ್ಕೂ ಮನಸ್ಸಿಗೂ ಸನ್ನಿಕರ್ಷವಾಗುಬೇಕು, ಮನಸ್ಸಿಗೂ ಆತ್ಮನಿಗೂ (ಜೀವನಿಗೂ) ಸನ್ನಿಕರ್ಷವಾಗಬೇಕು. ಆಗ ಮಾತ್ರ ಜ್ಞಾನವುಂಟಾಗುತ್ತದೆ.

ಈ ಜ್ಞಾನವು ಮನಸ್ಸಿನಲ್ಲಿ ಅಂದರೆ ಅಂತಃಕರಣದಲ್ಲಿ ಹುಟ್ಟುವುದು. ಆತ್ಮನು ನಿರ್ವಿಕಾರನೂ, ಶುದ್ಧ ಚೈತನ್ಯ ಸ್ವರೂಪನೂ ಆಗಿರುವುದರಿಂದ ಮನಸ್ಸೇ ಜ್ಞಾನರೂಪವಾಗಿ ಪರಿಣಾವನ್ನು ಹೊಂದುತ್ತದೆ. ಮನಸ್ಸು ಆತ್ಮನ ಅಧೀನದಲ್ಲಿರುವುದರಿಂದ, ಅವನಿಗೆ ಜ್ಞಾನದ ಅನುಭವವು ಉಂಟಾಗುತ್ತದೆ.

## *ಬಾಹ್ಯೇಂದ್ರಿಯಜನ್ಯವಾದ ಜ್ಞಾನವೆಲ್ಲವೂ ಪ್ರಮಾಣವಲ್ಲ*

---

ಮನಸ್ಸಿನಿಂದ ಉಂಟಾದ ಜ್ಞಾನವೆಲ್ಲವೂ ಪ್ರಮಾಣವಾಗಿರುವುದಿಲ್ಲ. ಯಥಾರ್ಥವಾದ ಜ್ಞಾನವೇ ಪ್ರಮಾಣವಾಗಿರುತ್ತದೆ. ಯಥಾರ್ಥಜ್ಞಾನವನ್ನು ತಂದುಕೊಡುವುದಕ್ಕೆ ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳು ಸಹಾಯಕಗಳಾಗಿರುವುದರಿಂದ, ಇವುಗಳನ್ನು ಅನುಪ್ರಮಾಣಗಳೆನ್ನುತ್ತಾರೆ. ಇವು ಕರಣಗಳು ಅಂದರೆ ಜ್ಞಾನಸಾಧನಗಳು ಮಾತ್ರವಾಗಿರುವುವು. ಕರಣಗಳು ವಸ್ತುವನ್ನು ವಿಷಯೀಕರಿಸದೆ ಜ್ಞಾನಜನಕವಾಗುವುದಿಲ್ಲ.

ಯಥಾರ್ಥಜ್ಞಾನವನ್ನು ಕೇವಲಪ್ರಮಾಣವೆನ್ನುತ್ತಾರೆ. ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳು ಯಥಾರ್ಥಜ್ಞಾನ ಸಾಧನವಾಗಿರುವುದರಿಂದ ಇವುಗಳು ಅನುಪ್ರಮಾಣಗಳು. ಕೇವಲ ಜ್ಞಾನವು ಚೈತನ್ಯಜ್ಞಾನ ಮತ್ತು ವೃತ್ತಿಜ್ಞಾನವೆಂದು ಎರಡುವಿಧ. ಚೈತನ್ಯ ಜ್ಞಾನವೂ ಉತ್ತಮ, ಮಧ್ಯಮ ಮತ್ತು ಅಧಮವೆಂದು ಮೂರು ಪ್ರಕಾರವಾಗಿದೆ. ಉತ್ತಮವು ಯಥಾರ್ಥವಾಗಿರುತ್ತದೆ. ಮಧ್ಯಮವು ಯಥಾರ್ಥಾಯಥಾರ್ಥ ರೂಪವಾಗಿರುತ್ತದೆ. ಅಧಮವು ಅಯಥಾರ್ಥವಾಗಿರುತ್ತದೆ ಎಂದು ಅನುವ್ಯಾಖ್ಯಾನದಲ್ಲಿ(೨.೧.೨.೨೪) ಉಕ್ತವಾಗಿದೆ.

ವೃತ್ತಿಜ್ಞಾನರೂಪವಾದ ಕೇವಲ ಪ್ರಮಾಣವೂ ಪ್ರತ್ಯಕ್ಷ, ಅನುಮಾನ ಮತ್ತು ಆಗಮವೆಂದು ಮೂರುವಿಧವಾಗಿದೆ. ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳು ಜ್ಞಾನ ಉಂಟಾಗವುದಕ್ಕೆ ಮುಖ್ಯ ಸಾಧನಗಳಾಗಿರುವುದರಿಂದ ಇವುಗಳು ಕರಣಗಳಾಗಿವೆ. ಪ್ರತ್ಯಕ್ಷವೆಂದರೆ ಅಕ್ಷ್ಯಾದಿ ಇಂದ್ರಿಯ ಜನ್ಯವಾದ ಜ್ಞಾನ. ಅನುಮಾನ ಜನ್ಯವಾದ ಜ್ಞಾನವು ಅನುಮಿತಿ. ಆಗಮವು ಶಬ್ದಜನ್ಯಜ್ಞಾನವಾಗಿರುತ್ತದೆ. ಪ್ರತ್ಯಕ್ಷವು ಪ್ರಾಯಿಕವಾಗಿ ಸನ್ನಿಧಾನದಲ್ಲಿರುವ ಮರೆಯಿಲ್ಲದ, ವರ್ತಮಾನಕಾಲದ ಕೆಲವು ಅರ್ಥಗಳನ್ನು ಗ್ರಹಿಸುತ್ತದೆ. ಅನುಮಾನವು ಸನ್ನಿಧಾನದಲ್ಲಿಲ್ಲದ, ಭೂತ ಮತ್ತು ಭವಿಷ್ಯತ್ತಾದ, ವ್ಯವಹಿತವಾದ ಅರ್ಥವನ್ನು ಗೋಚರಿಸುತ್ತದೆ. ಆಗಮವು ಸ್ವತಂತ್ರವಾಗಿ ಅಶೇಷವಾದ ಅರ್ಥವನ್ನು ಗ್ರಹಿಸುತ್ತದೆ. ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಇವು ಮೂರೂ ಒಂದರಲ್ಲೊಂದು ಅಂತರ್ಭಾವವನ್ನು ಹೊಂದದ ಪ್ರಮಾಣಗಳಾಗಿರುತ್ತವೆ. ಅರ್ಥವನ್ನು ಕುರಿತು ಇಂದ್ರಿಯವೆಂದು ಪ್ರತ್ಯಕ್ಷಶಬ್ದದ ಅರ್ಥ. ಮತ್ತೊಂದು ಪ್ರಮಾಣವನ್ನು ಅನುಸರಿಸಿ ವಿಷಯುವನ್ನು ತಿಳಿಸುವುದು ಎಂದು ಅನುಮಾನಶಬ್ದದ ಅರ್ಥ. ಅತೀಂದ್ರಿಯ ವಸ್ತುವಿನ ಸರಿಯಾದ ಜ್ಞಾನವನ್ನು ಹುಟ್ಟಿಸುವುದೆಂದು ಆಗಮಶಬ್ದದ ಅರ್ಥ.

ಕರಣಗಳು ಯಾವಾಗಲೂ ಯಥಾರ್ಥ ಜ್ಞಾನಜನಕಗಳೆಂದು ಹೇಳಲಾಗುವುದಿಲ್ಲ. ಕೆಲವು ವೇಳೆ ಇವು ಅಯಥಾರ್ಥಜ್ಞಾನ ಜನಕವೂ ಆಗಿರುವುದು ಎಲ್ಲರ

ಅನುಭವದಲ್ಲಿರುವುದು. ಯಥಾರ್ಥವಾದದ್ದು ಪ್ರಮಾಣ. ಅಯಥಾರ್ಥವಾದದ್ದು ಪ್ರಮಾಣವಲ್ಲ.

ಸಾಕ್ಷೀಂದ್ರಿಯ

---------

ಜೀವರು ಸೃಷ್ಟಿಗೆ ಬರುವ ಮೊದಲೂ ಇಂದ್ರಿಯಗಳಿರುತ್ತವೆ ಎಂದು ನಮ್ಮ ಸಿದ್ಧಾಂತವಾಗಿರುತ್ತದೆ. ಈ ಸ್ವರೂಪೇಂದ್ರಿಯಗಳಿಗೇ "ಸಾಕ್ಷೀ" ಎಂದು ಹೆಸರು. ಸ್ವರೂಪಭೂತವಾದ ಈ ಇಂದ್ರಿಯಗಳು ಶುದ್ಧವಾದ ಜ್ಞಾನಜನಕಗಳಾಗಿರುತ್ತವೆ. ಸ್ವರೂಪೇಂದ್ರಿಯವಾದ ಸಾಕ್ಷೀಂದ್ರಿಯಕ್ಕೆ ವಿಷಯಗಳು – ಸುಖ, ದುಃಖ, ಇಚ್ಛೆ, ದ್ವೇಷ, ಅವಿದ್ಯಾ, ಕಾಲ, ಅವ್ಯಾಕೃತಾಕಾಶ, ಧರ್ಮಾಧರ್ಮಗಳು, ಇತ್ಯಾದಿಗಳು. ಇವುಗಳಲ್ಲದೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳ ಜ್ಞಾನವೂ ಬಾಹ್ಯೇಂದ್ರಿಯ ದ್ವಾರಾ ಸಾಕ್ಷಿಗೂ ವಿಷಯಗಳಾಗುತ್ತವೆ. ನಮ್ಮ ಇಂದ್ರಿಯಗಳು ನಮಗೆ ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲ. ಇವು ಕಾಣಿಸುವುದು ನಮ್ಮ ಸಾಕ್ಷೀಂದ್ರಿಯಕ್ಕೆಮಾತ್ರ. ಪ್ರತ್ಯಕ್ಷ, ಅನುಮಾನ ಮತ್ತು ಆಗಮಜನ್ಯವಾದ ಜ್ಞಾನವೂ ಸಾಕ್ಷೀಂದ್ರಿಯಕ್ಕೇ ವೇದ್ಯವಾಗುತ್ತದೆ. ಒಟ್ಟಿನಲ್ಲಿ ನಮಗೆ ಉಂಟಾಗುವ ಎಲ್ಲ ಜ್ಞಾನಗಳೂ ಸಾಕ್ಷಾತ್ತಾಗಿ ಯಾಗಲೀ ಪರಂಪರೆಯಿಂದಾಗಲೀ ಸ್ವರೂಪೇಂದ್ರಿಯವಾದ ವೇದ್ಯವಾಗುವುದು ಸಾಕ್ಷೀಂದ್ರಿಯಕ್ಕೇ ಹೊರತು ಕೇವಲ ಬಾಹ್ಯೇಂದ್ರಿಯಗಳಿಗಲ್ಲ. ಮನೋಜನ್ಯವಾದ ಜ್ಞಾನವೆಲ್ಲವೂ ನಿಶ್ಚಯಜ್ಞಾನವಲ್ಲ. ನಿಶ್ಚಯವಾದ ಜ್ಞಾನವಾಗುವುದು ಶುದ್ಧವಾದ ಸಾಕ್ಷೀಂದ್ರಿಯಕ್ಕೆ ಮಾತ್ರ ಮನಸ್ಸಿಗಲ್ಲ. ಸಾಕ್ಷೀಂದ್ರಿಯ ಜನ್ಯವಾದ ಜ್ಞಾನದ ವಿಷಯವಾಗಿ ಸಂಶಯವಾಗಲೀ ಭ್ರಮೆಯಾಗಲೀ ಇರುವುದಿಲ್ಲ.

ಸಾಕ್ಷೀಂದ್ರಿಯದ ವಿಷಯವಾಗಿ ಸ್ಥೂಲವಾಗಿ ಇಷ್ಟನ್ನು ತಿಳಿದನಂತರ ವಿಸ್ತಾರವಾಗಿ ವಿಚಾರಮಾಡೋಣ.

ಶ್ರೀಗುರುಭ್ಯೋ ನಮಃ, ಹರಿಃ ಓಂ॥

ನಮ್ಮ ಸಿದ್ಧಾಂತದ ಪ್ರಮಾಣ ಗ್ರಂಥಗಳಾದ ಪ್ರಮಾಣಚಂದ್ರಿಕಾ, ಪ್ರಮಾಣಪದ್ಧತಿ, ಅನುವ್ಯಾಖ್ಯಾನ ಶ್ರೀಮನ್ನ್ಯಾಯಸುಧಾ, (ಜಿಜ್ಞಾಸಾಧಿಕರಣ (೧-೧-೧), ಪ್ರಕೃತ್ಯಧಿಕರಣ (೧-೪-೬), ಸ್ಮೃತ್ಯಧಿಕರಣ (೨-೧-೧), ವೈಶೇಷಿಕಾಧಿಕರಣ (೨-೨-೬), ವಿಯದಧಿಕರಣ(೨-೩-೧), ಪೃಥಗಧಿಕರಣ (೨-೩-೧೪), ಚಕ್ಷುರಾದ್ಯಧಿಕರಣ (ಸಾಕ್ಷೀಂದ್ರಿಯ\ ಸಾಕ್ಷಿಪ್ರತ್ಯಕ್ಷದ ವಿಷಯುವನ್ನು ವಿಸ್ತಾರವಾಗಿ ನಿರೂಪಣೆ ಮಾಡಿದ್ದಾರೆ. ಇಷ್ಟೇ ಅಲ್ಲದೆ ಶ್ರೀಮದಾಚಾರ್ಯರು ಬೃಹದಾರಣ್ಯಕೋಪನಿಷದ್‌ಭಾಷ್ಯ, ಗೀತಾತಾತ್ಪರ್ಯ ಹಾಗೂ ಇನ್ನಿತರ ಗ್ರಂಥಗಳಲ್ಲಿ ಸಾಕ್ಷೀಂದ್ರಿಯದ ವಿಷಯುವನ್ನು ಪ್ರಸ್ತಾಪಮಾಡಿದ್ದಾರೆ. ಸರ್ವಮೂಲ, ಸುಧಾ, ಟೀಕಾ ಮತ್ತು ಟಿಪ್ಪಣಿಗಳೆಲ್ಲದರಲ್ಲಿರುವ ಸಾಕ್ಷೀಂದ್ರಿಯದ ವಿಚಾರವನ್ನು ಸಂಗ್ರಹಿಸಿದರೆ ಅದೇ ಒಂದು ಬೃಹದ್ಗ್ರಂಥವಾಗುವುದೆಂದರೆ ಅತಿಶಯೋಕ್ತಿಯಲ್ಲ. ಶ್ರೀಮದಾಚಾರ್ಯರು ಶ್ರೀಮದನುವ್ಯಾಖ್ಯಾನದಲ್ಲಿ ಬೇರೆ ಬೇರೆ ಪ್ರಕರಣಗಳಲ್ಲಿ ಸಾಕ್ಷೀಂದ್ರಿಯದ ವಿಚಾರವಾಗಿ ಹೇಳಿರುವುದರ ತಾತ್ಪರ್ಯವನ್ನುಮಾತ್ರ ಯಥಾಮತಿ, ಯಥಾಶಕ್ತಿ ಕನ್ನಡಭಾಷೆಯಲ್ಲಿ ನಿರೂಪಿಸಿ ಜಿಜ್ಞಾಸುಗಳ ಅವಗಾಹನೆಗಾಗಿ ಪರಿಶಿಷ್ಟದಲ್ಲಿ ಶ್ರೀಮದನುವ್ಯಾಖ್ಯಾನದ ಮೂಲವಾಕ್ಯಗಳನ್ನು ಕೊಡಲಾಗಿದೆ.

ಶ್ರೀಗುರುಭ್ಯೋ ನಮಃ ಹರಿಃ ಓಂ॥

ಪ್ರಪ್ರಥಮವಾಗಿ ಪ್ರಮಾಣಚಂದ್ರಿಕಾದ ಪ್ರತ್ಯಕ್ಷ ಪ್ರಕರಣದಲ್ಲಿ
"ಪ್ರತ್ಯಕ್ಷಂ ಸಪ್ತವಿಧಂ, ಸಾಕ್ಷೀಷಡಿಂದ್ರಿಯ ಭೇದಾತ್।
ಅತ್ರ ಚೇತನ ಸ್ವರೂಪೇಂದ್ರಿಯಂ ಸಾಕ್ಷೀತ್ಯುಚ್ಯತೇ।
ತಸ್ಯ ವಿಷಯಾಃ ಅತ್ಮಸ್ವರೂಪಂ, ತದ್ಧರ್ಮಾಃ
ಸುಖಾದಯೋ ಭಾವರೂಪಾವಿದ್ಯಾ, ಮನಃ
ತದ್ವೃತ್ತಯಃ ಜ್ಞಾನಸುಖಾದ್ಯಾಃ, ಕಾಲಃ,
ಅವ್ಯಾಕೃತಾಕಾಶಶ್ಚ ಇತ್ಯಾದಯಃ" ಎಂದು ಉಕ್ತವಾಗಿದೆ.

ಪ್ರಮಾಣಪದ್ಧತಿಯಲ್ಲಿ – ಇಂದ್ರಿಯ ಶಬ್ದೇನ ಜ್ಞಾನೇಂದ್ರಿಯಂ ಗೃಹ್ಯತೇ।
ತತ್ ದ್ವಿವಿಧಂ ಪ್ರಮಾತೃಸ್ವರೂಪಂ, ಪ್ರಾಕೃತಂ ಚೇತಿ।
ತತ್ರ ಸ್ವರೂಪೇಂದ್ರಿಯಂ ಸಾಕ್ಷೀತ್ಯುಚ್ಯತೇ।
ತಸ್ಯ ವಿಷಯಾಃ ಆತ್ಮ ಸ್ವರೂಪಂ,
ತದ್ಧರ್ಮಾಃ, ಅವಿದ್ಯಾ, ಮನಃ, ತದ್ವೃತ್ತಯಃ,
ಬಾಹ್ಯೇಂದ್ರಿಯ ಜ್ಞಾನಂ, ಸುಖಾದ್ಯಾಃ, ಕಾಲಃ, ಅವ್ಯಾಕೃತಾಕಾಶಶ್ಚ, ಇತ್ಯಾದ್ಯಾಃ।
ಸ ಚ ಸ್ವರೂಪಜ್ಞಾನಂ ಅಭಿವ್ಯನಕ್ತಿ, ಎಂದು ಹೇಳಿದ್ದಾರೆ.

ಜ್ಞಾನವು ವೃತ್ತಿಜ್ಞಾನ ಮತ್ತು ಸ್ವರೂಪಜ್ಞಾನಎಂದು ಎರಡು ವಿಧವಾಗಿರುತ್ತದೆ. ಚಕ್ಷುರಾದಿ ಪಂಚ ಜ್ಞಾನೇಂದ್ರಿಯಗಳಿಂದಲೂ ಮನಸ್ಸಿನಿಂದಲೂ ವೃತ್ತಿಜ್ಞಾನವು ಹುಟ್ಟುತ್ತದೆ. ಸ್ವರೂಪಜ್ಞಾನವನ್ನೇ ಸಾಕ್ಷಿಎನ್ನುತ್ತಾರೆ. ಸಾಕ್ಷಿಯು ಯಾವಾಗಲೂ ಸ್ವಯಂಪ್ರಕಾಶರೂಪವಾಗಿದ್ದು ನಿಯಮವಾಗಿ ಯಥಾರ್ಥವಾಗಿರುತ್ತದೆ.

## ಜ್ಞಾನವು ಸ್ವಪ್ರಕಾಶ ಮತ್ತು ಆತ್ಮಸ್ವರೂಪ

ಜ್ಞಾನವು ತನ್ನನ್ನುತಾನು ಪ್ರಕಾಶಪಡಿಸಿಕೋಳ್ಳುತ್ತದೆ. ತನ್ನನ್ನು ತಾನು ಪ್ರಕಾಶಪಡಿಸಿಕೊಳ್ಳುವ ಜ್ಞಾನವು ಆತ್ಮಸ್ವರೂಪವಾಗಿರುತ್ತದೆ. ಏಕೆಂದರೆ "ನಾನು" ಎನ್ನುವ ಆಕಾರದಲ್ಲಿ ಆತ್ಮನ ಪ್ರಕಾಶವು (ಜ್ಞಾನವು) ಎಲ್ಲರಿಗೂ ಇರುವುದು. ಈ ಕಾರಣದಿಂದ ಆತ್ಮನ ಧರ್ಮಗಳಾದ ಸುಖದುಃಖಾದಿಗಳೂ ಮತ್ತು ಆತ್ಮನಿಗೆ ಆಧಾರವಾದ ದೇಶಕಾಲಾದಿಗಳೂ ಪ್ರಕಾಶಿತವಾಗುತ್ತವೆ. ಈ ದೃಷ್ಟಿಯಿಂದ ಆತ್ಮನ ಸರ್ವಾವಸ್ಥೆಗಳನ್ನೂ ಸಾಕ್ಷಾತಾಗಿ ನೋಡುತ್ತಿರುವ ಆತ್ಮಸ್ವರೂಪವಾದ ಜ್ಞಾನವನ್ನೇ "ಸಾಕ್ಷೀ" ಎಂದು ಸಿದ್ಧಾಂತದಲ್ಲಿ ಕರೆಯಲಾಗಿದೆ.

ಸ್ವರೂಪೇಂದಿರುಯವಾದ ಸಾಕ್ಷೀಂದ್ರಿಯವೂ ಘ್ರಾಣಾದಿ ಭೇದದಿಂದ ಆರುವಿಧವಾಗಿದೆ ಎಂದು ಶ್ರೀನಿವಾಸತೀರ್ಥೀಯ ಪ್ರಮಾಣಪದ್ಧತಿ ಟಿಪ್ಪಣಿಯಲ್ಲಿ

"ಅತ್ರೇದಂ ಬೋಧ್ಯಂ। ಸ್ವರೂಪೇಂದ್ರಿಯಮಪಿ ಘ್ರಾಣಾದಿ ಭೇದೇನ ಷಡ್ವಿಧಂ ಸತ್ ಲಿಂಗದೇಹಸ್ಥ ಸೂಕ್ಷ್ಮ ಷಡಿಂದ್ರಿಯೈಃ ಸ್ಥೂಲಶರೀರಸ್ಥ ಸ್ಥೂಲೇಂದ್ರಿಯೈಶ್ಚ ಮಿಶ್ರಂ ತಿಷ್ಠತಿ, ಕ್ಷೀರ ನೀರವತ್. ತತ್ರ ಸ್ಪರ್ಶೇಂದ್ರಿಯಂ ಸ್ಥೂಲಶರೀರೇ ಸರ್ವತ್ರ ವ್ಯಾಪ್ತಂ, ಚಕ್ಷುರಾದಿ ಚತುಷ್ಟಯಂ ಸ್ವಗೋಲಕ ವೃತ್ತಿ, ಮನಸಸ್ತು ಸರ್ವೇಂದ್ರಿಯಾಧಿಷ್ಠಾತೃ, ಸರ್ವ ಶರೀರಸಂಚಾರೀ, ಪ್ರಾಯಃ ಹೃತ್ಕಂಠವೃತ್ತಿ। ತತ್ಮನಃ ಪಂಚವಿಧಂ, ಚಿತ್ತ, ಚೇತನಾ, ಅಹಂಕಾರ, ಬುದ್ಧಿಃ, ಅಂತಃಕರಣಂ ಇತಿ। ತತ್ರ ಕೇನಚಿದ್ರೂಪೇಣ ಬಾಹ್ಯೇಂದ್ರಿಯದ್ವಾರಾ ಘಟಾದಿ ಬಾಹ್ಯಾರ್ಥಜ್ಞಾನಂ ಜನಯತಿ, ರೂಪಾಂತರೇಣ ತದ್ ಜ್ಞಾನಸ್ಯ ತಜ್ಜನ್ಯ ಇಚ್ಛಾ, ಪ್ರಯತ್ನ, ಸುಖದುಃಖ ಸಂಸ್ಕಾರೋಪಾದನಂ ಭವತಿ। ತತ್ರ ಸಾಕ್ಷ್ಯಾಖ್ಯ ಮನೋರೂಪೇಂದ್ರಿಯಾಭಿವ್ಯಕ್ತಸ್ವರೂಪಜ್ಞಾನಂ, ಬಾಹ್ಯ ಮನೋರೂಪೇಂದ್ರಿಯ ತತ್ಪರಿಣತ ಜ್ಞಾನಾದಿಭಿಸ್ಸಹ ವಿಷಯೀಕರೋತಿ, ತಥಾ ಆತ್ಮ, ಕಾಲ, ಆಕಾಶ, ಅವಿದ್ಯಾ, ಪ್ರಕೃತ್ಯಾದಿ ವಿಷಯೀಕಾರ್ಯಪಿ ಭವತಿ। ತದುಕ್ತಂ ಬೃಹದಾರಣ್ಯಭಾಷ್ಯೇ, ತತ್ರೈವ ದ್ರಷ್ಟವ್ಯಂ" ಎಂದು ಹೇಳಿದೆ.

ಶ್ರೀಮದಾಚಾರ್ಯರು ಬೃಹದಾರಣ್ಯಭಾಷ್ಯ (ಅವ್ಯಾಕೃತ ಬ್ರಾಹ್ಮಣ)ದಲ್ಲಿ –
ಮನಶ್ಚ ದ್ವಿವಿಧಂ ಸ್ಮೃತಂ।
ಚೇತನಂ ಚ ಜಡಂ ಚೇತಿ ಚಕ್ಷುರಾದ್ಯಂ ತಥೈವ ಚ।
ಚೇತನಂ ತು ಇಂದ್ರಿಯಂ ಹಿ ಆತ್ಮಸ್ವರೂಪಾನ್ನಾಪರಂ ಸ್ಮೃತಂ।
ಮುಕ್ತಾನಾಂ ಚೇತನಂ ತ್ವೇವ ಬದ್ಧಾನಾಂ ಉಭಯಂ ಸ್ಮೃತಂ ತಥಾ" ಎಂದು ಹೇಳಿದ್ದಾರೆ.

ಬೃಹದಾರಣ್ಯಭಾವಬೋಧದಲ್ಲಿ ಶ್ರೀಮದ್ರಘೂತ್ತಮತೀರ್ಥರು 'ಮನಸಶ್ಚ ದ್ವಿವಿಧಂ ಸ್ಮೃತಂ' ಎನ್ನುವ ಭಾಷ್ಯದ ವಾಕ್ಯಕ್ಕೆ ಅವತರಣಿಕೆಯನ್ನು ಈ ಕೆಳಗೆ ಕಂಡಂತೆ ಕೊಟ್ಟಿದ್ದಾರೆ. "ಭಾವವದಭಾವಸ್ಯಾಪಿ ಸಾಕ್ಷೀಂದ್ರಿಯ ಸನ್ನಿಕರ್ಷೇ ಬಾಧಕಾಭಾವಾತ್ ಮನಸೋ ದುಃಖಾಭವೇನ ಸಂಯೋಗೋಪಪತ್ತೇರಿತಿ। ನನ್ವೇಕಂ ತತ್ರಾನುಭವತ ಇತ್ಯಾದೌ ದುಃಖಾಭವಸ್ಯ ಸಾಕ್ಷಿವೇದ್ಯತ್ವೋಕ್ತೇಃ ಕಥಂ ಮನೋ ವೇದ್ಯತ್ವಂ ಇತ್ಯತೋ ನ ವಯಂ ತಾರ್ಕಿಕಾದಿವತ್ ಸಾಕ್ಷಿಭಿನ್ನ

ಮನೋವೇದ್ಯತ್ವಂ ಬ್ರೂಮೋ ಯೇನ ಅಪಸಿದ್ಧಾಂತಃ ಸ್ಯಾತ್, ಕಿಂತು ಚೇತನಾತ್ಮಕ ಮನೋವೇದ್ಯತ್ವಂ ಇತ್ಯಾಶಯೇನ ಮನೋ ದ್ವೈವಿಧ್ಯಮಾಹ – ಮನಶ್ಚೇತಿ" ಎಂದು ಸಾಕ್ಷೀಂದ್ರಿಯವನ್ನು ಪ್ರಸ್ತಾಪಿಸಿದ್ದಾರೆ..

ಸ್ವಪ್ರಕಾಶರೂಪವಾದ ಸಾಕ್ಷೀಂದ್ರಿಯವಿದೆ ಎನ್ನುವುದಕ್ಕೆ ಪ್ರಮಾಣ ನಿರೂಪಣೆ
==========================================

ಸ್ವಪ್ರಕಾಶರೂಪವಾದ ಸಾಕ್ಷೀಂದ್ರಿಯವಿದೆ ಎನ್ನುವುದಕ್ಕೆ ಪ್ರಮಾಣವೇನು ಎಂದು ಪ್ರಶ್ನೆಗೆ ಉತ್ತರ ಈರೀತಿಯಾಗಿದೆ. ಸುಖ ದುಃಖಗಳು ಸಾಕ್ಷಿಯಲ್ಲದ ಚಕ್ಷುರಾದಿ ಪ್ರಾಕೃತೇಂದ್ರಿಯಗಳಿಂದ ಗೃಹೀತವಾಗುವುದಾದರೆ, ಪ್ರಾಕೃತೇಂಧ್ರಿಯಗಳಿಂದ ಗೃಹೀತವಾದ ಜ್ಞಾನವು ನಿಯಮವಾಗಿ ಪ್ರಮಾಣವೆನ್ನಲು ಸಾಧ್ಯವಿಲ್ಲ, ಏಕೆಂದರೆ ಇವು ಭ್ರಾಂತಿಜನಕವಾಗಿರುವುದು ನಮ್ಮೆಲ್ಲರ ಅನುಭವದಲ್ಲಿದೆ. ಆದರೆ ಸುಖದುಃಖಾದಿಗಳ ವಿಷಯದಲ್ಲಿ ಯಾರಿಗೂ ಯಾವಾಗಲೂ ಭ್ರಾಂತಿ ಇರುವುದಿಲ್ಲ. ದುಃಖಾನುಭವದ ಕಾಲದಲ್ಲಿ ನಾನು ಸುಖಿಯೆಂದಾಗಲೀ, ಸುಖಾನುಭವದಕಾಲದಲ್ಲಿ ನಾನು ದುಃಖಿಯೆಂದಾಲೀ ಯಾರೂ ತಿಳಿಯುವುದಿಲ್ಲ. ಇದೆರಿಂದಾಗಿ ಇವುಗಳ ಜ್ಞಾನವು ಎಲ್ಲರಿಗೂ ನಿಯಮವಾಗಿ ಯಥಾರ್ಥವಾಗಿರುತ್ತದೆ. ಸುಖದುಃಖಾದಿಗಳು ಪ್ರಾಕೃತೇಂದ್ರಿಯಗಳಿಗೆ ಗೋಚರವಲ್ಲ. ಇವುಗಳ ಜ್ಞಾನಜನಕವಾದ ಬೇರೆ ಒಂದು ಇಂದ್ರಿಯವಿರಬೇಕು. ಈ ಇಂದ್ರಿಯವೇ ಸಾಕ್ಷೀಂದ್ರಿಯವಾಗಿರುತ್ತದೆ.

ಸಾಕ್ಷೀಂದ್ರಿಯವನ್ನು ಇನ್ನೊಂದು ವಿಧವಾಗಿಯೂ ಸಾಧಿಸಬಹುದು. ಕಾಲ ಮತ್ತು ಆಕಾಶಾದಿಗಳು ರೂಪವೇ ಮೊದಲಾದ ಧರ್ಮ ರಹಿತವಾದ್ದರಿಂದ ಚಕ್ಷುರಾದಿ ಇಂದ್ರಿಯಗಳಿಂದ ಇವುಗಳ ಜ್ಞಾನವಾಗುವುದಿಲ್ಲ. ಇವುಗಳ ವಿಷಯದಲ್ಲಿ ವ್ಯಾಪ್ತ್ಯಾದಿ ಜ್ಞಾನವಿಲ್ಲದ್ದರಿಂದ ಇವು ಅನುಮಾನ ಗೋಚರವೂ ಅಲ್ಲ. ಹುಟ್ಟು ಕಿವುಡರಿಗೂ ಇವುಗಳ ಜ್ಞಾನವಿರುವುದರಿಂದ ಇವು ಆಗಮಗೋಚರವೂ ಅಲ್ಲ. ಈ ಕಾರಣದಿಂದ ಕಾಲ ಮತ್ತು ಆಕಾಶಾದಿಗಳು ಚಕ್ಷುರಾದಿ ಷಡಿಂದ್ರಿಯ ಗೋಚರವಲ್ಲದ್ದರಿಂದ ಪ್ರತ್ಯಕ್ಷಜನ್ಯವಲ್ಲ. ಹಿಂದೆ ಹೇಳಿದಂತೆ ಅನುಮಾನ ಗಮ್ಯವೂ ಅಲ್ಲ ಮತ್ತು ಆಗಮಜನ್ಯವೂ ಅಲ್ಲ.

ಆದರೂ ಇವುಗಳ ಜ್ಞಾನವು ಯಾವ ಇಂದ್ರಿಯದಿಂದ ಜ್ಞಾತವಾಗುತ್ತದೋ ಆ ಇಂದ್ರಿಯವೇ ಸಾಕ್ಷೀಂದ್ರಿಯವಾಗಿರುತ್ತದೆ. ಈ ವಿಷಯವನ್ನು ಶ್ರೀಮಜ್ಜಯತೀರ್ಥ ಶ್ರೀಮಚ್ಚರಣರು ತಮ್ಮ ಮೇರು ಗ್ರಂಥವಾದ ಶ್ರೀಮನ್ನ್ಯಾಯಸುಧೆಯಲ್ಲಿ – ವೈಶೇಷಿಕಾಧಿಕರಣದಲ್ಲಿ, ಈ ರೀತಿ ನಿರೂಪಿಸಿದ್ದಾರೆ "ಅವಿಶ್ರಾಂತಭಾಗಪರಂಪರಾ ಕುತಃ ಸಿದ್ಧೇತ್ಯತಃ ಸಾಕ್ಷಿಣೇತಿ ವಕ್ತವ್ಯಂ।ಸಾಕ್ಷೀನಾಮ ಪ್ರಮಾಣಮೇವ ನಾಸ್ತೀತಿ ವದತೋ ಬಾಧಕಂ ತಾವದಾಹ 'ಯದಿಸಾಕ್ಷೀ ಸ್ವಯಂಭಾತೋ ನ ಮಾನಂ ಕೇನಗಮ್ಯತೇ ಅಕ್ಷಜಾದೇಶ್ಚಮಾನಂ" (ಅನುವ್ಯಾಖ್ಯಾನ)। ಸಾಕ್ಷೀನಾಮ ಮಾನಂ ಯದಿನೇಷ್ಯತೇ ತದಾ ಅಕ್ಷಜಾದೇ ರ್ಜ್ಞಾನಸ್ಯ ಮಾನಂ। ಚ ಶಬ್ದಾತ್ ಬಹಿಃ ಕಾಲ ಆಕಾಶಾದಿಕಂ ಅಂತಃ ಸುಖಾದಿಕಂ ಚ ಕೇನ ಪ್ರಮಾಣೇನ ಗಮ್ಯತೇ। ನ ಕೇನಾಪಿ। ತದ್ಗ್ರಾಹಕಸ್ಯ ಪ್ರಮಾಣಾಂತರಸ್ಯ ಅಭಾವಾತ್। ನ ಚ ತನ್ಮಾಭೂದಿತಿ ವಾಚ್ಯಂ । ತದ್ವ್ಯವಹಾರವಿಕಲ ಪ್ರಸಂಗಾದಿತಿ॥ ನನ್ವಸ್ತು ಸಾಕ್ಷಿಣಮನಂಗೀಕುರ್ವಾಣಸ್ಯೇದಂ ಬಾಧಕಂ। ಸಾಧಕಂ ತು ಕಿಮಿತ್ಯತ ಆಹ, ಸ್ವಯಂಭಾತ ಇತಿ। ಯಸ್ತು ಸ್ವಯಂ ಪ್ರಕಾಶಮಾನೇ$ಪಿ ಸಾಕ್ಷಿಣಿ ವಿಪ್ರತಿಪದ್ಯತೇ। ಸೋ$ಕ್ಷಜಾದೇ ರ್ಮಾನತ್ವಂ ಸ ಪ್ರಮಾಣಕಂ ವಸ್ತುತ್ವಾತ್ ಘಟವದಿತಿ ಪ್ರಸಂಗಸೂಚಿತೇನ ಅನುಮಾನೇನ ಬೋಧನೀಯಃ। ಪ್ರಸಕ್ತ ಪ್ರತಿಷೇಧಶ್ಚ ವಕ್ಷ್ಯಮಾಣ ಪ್ರಮಾಣ ನ್ಯಾಯೇನ ಭವಿಷ್ಯತಿ। ಧರ್ಮಿಗ್ರಾಹಕ ಪ್ರಮಾಣೇನೈವಸಿದ್ಧೇಃ ನ ತತ್ಪ್ರಾಮಾಣ್ಯೇ ಪೃಥಕ್ ಪ್ರಮಾಣ್ಯಂ ವಕ್ತವ್ಯಂ। ಅತ ಏವ ಮಾನಮಿತ್ಯುಕ್ತಂ।"

ಇದಕ್ಕೆ ಶ್ರೀನಿವಾಸತೀರ್ಥೀಯ ಟಿಪ್ಪಣಿ – ಪ್ರಸಂಗ ಇತಿ – ಯದಿ ಸಾಕ್ಷೀನಾಮಕಂ ಮಾನಂ ನ ಸ್ಯಾತ್ ತದಾ ಅಕ್ಷಜಾದೇರ್ಮಾನತ್ವ ಗ್ರಾಹಕೋ ನ ಸ್ಯಾತ್ ಇತಿ ತರ್ಕೇತ್ಯರ್ಥಃ। ನನು ಸ ಪ್ರಮಾಣಕತ್ವ ಪ್ರವೃತ್ತಿ ಸಾಮರ್ಥ್ಯಾತ್ ಅನುಮಾನರೂಪ ಪ್ರಮಾಣಸಿದ್ಧಿರಿತ್ಯತ ಆಹ – ಪ್ರಸಕ್ತೇತಿ। ಅಸ್ತು ತತ್ ಪ್ರಾಮಾಣ್ಯಂ ಕುತಃ ಸಿದ್ಧಂ, ಯೇನ ಸ ಪ್ರಮಾಣಕಂ ಇತ್ಯುಕ್ತೇಃ ಸಾಕ್ಷಿಣಮಾದಾಯ ಪರ್ಯವಸಾನಂ ಸ್ಯಾತ್ ಇತ್ಯತ ಆಹ – ಧರ್ಮೀತಿ। ಸಾಕ್ಷಿರೂಪಕ ಧರ್ಮಿಗ್ರಾಹಕೇಣ ಪ್ರಮಾಣೇನ ಸ್ವೇನೈವ ಸಿದ್ಧೇಸಾಕ್ಷಿಪ್ರಾಣ್ಯಂ

ಇತ್ಯರ್ಥಃ। ತಸ್ಯ ಸ್ವಪ್ರಕಾಶತ್ವಾತ್ ಇತಿ ಭಾವಃ ಪೃಥಕ್ ಸಾಕ್ಷಿಭಿನ್ನಂ ಮಾನಂ ಸ್ವಸಿದ್ಧ ಮಾನತ್ವೋಪೇತಂ ಇತ್ಯರ್ಥಃ॥

ಪರಿಮಾಳಾಯಾಂ – ವಕ್ಷ್ಯಮಾಣೇತಿ – ಪ್ರಾಮಾಣ್ಯ ವಿಷಯೇ ಪ್ರಸಕ್ತಸ್ಯ ಅನುಮಾನಸ್ಯ ಅನವಸ್ಥಾ ಅನ್ಯಥಾ ಭವೇದಿತಿ ವಕ್ಷ್ಯಮಾಣ ವಿಪಕ್ಷಬಾಧಕನ್ಯಾಯೇನ ಇತ್ಯರ್ಥಃ। ಸುಖಾದಿ ವಿಷಯೇ ಚ 'ಇಚ್ಛಾ ಜ್ಞಾನಂ, ಸುಖಂದುಃಖಂ, ಭಯಾಭಯ ಕೃಪಾದಯಃ। ಸಾಕ್ಷಿಸಿದ್ಧಾ ನ ಕಶ್ಚಿದ್ಧಿ ತತ್ರ ಸಂಶಯುವಾನ್ ಕ್ವಚಿತ್। ಯತ್ ಕ್ವಚಿತ್ ವ್ಯಭಿಚಾರಿಸ್ಯಾತ್ ದರ್ಶನಂ ಮಾನಸಂ ಹಿ ತತ್। ಇತ್ಯಾದಿನಾ ಜ್ಞಾನಪಾದೇ ವಕ್ಷ್ಯಮಾಣ ಸಂಶಯಾ(ದ್ಯ)ಭಾವರೂಪ ನ್ಯಾಯೇನ ಪ್ರಸಕ್ತ ಮಾನಸ ಪ್ರತ್ಯಕ್ಷಾದೇಃ ಪ್ರತಿಷೇಧಶ್ಚ ಭವಿಷ್ಯತೀತ್ಯರ್ಥಃ। ಸಾಕ್ಷಿಸಿದ್ಧಾವಪಿ ತಸ್ಮಾನತ್ವಂ ಕೇನಸಿದ್ಧೇದಿತ್ಯತ ಆಹ – ಧರ್ಮೀತಿ। ಅಕ್ಷಜಾದೇರ್ಮಾನತ್ವಂ ಸ ಪ್ರಮಾಣಕಂ ವಸ್ತುತ್ವಾತ್ ಇತಿ ಸಮಾನ್ಯ ಅನುಮಾನರೂಪೇಣ ಪರಿಶೇಷಸಹಿತೇನ ಸಾಕ್ಷಿರೂಪಧರ್ಮಿಗ್ರಾಹಕೇಣ ಪ್ರಮಾಣೇನೇತ್ಯರ್ಥಃ॥

ಸಾಕ್ಷಿಯು ಸ್ವಪ್ರಕಾಶವಾದ ಆತ್ಮನಸ್ವರೂಪಜ್ಞಾನ
================================

ಸಾಕ್ಷಿಯು ಜ್ಞಾನವನ್ನುಗ್ರಹಿಸುವ ಕಾಲದಲ್ಲಿಯೇ ಅದು ನಿರ್ದೋಷವಾಗಿದ್ದರೆ ಯಥಾರ್ಥವೆಂದೂ, ಸದೋಷವಾಗಿದ್ದರೆ ಅಯಥಾರ್ಥವೆಂದೂ ನಿಶ್ಚಯಿಸುತ್ತದೆ. ಭ್ರಾಂತಿಯನ್ನು ಸಾಕ್ಷಿಯು ಯಥಾರ್ಥವೆಂದು ಯಾವಾಗಲೂ ಗ್ರಹಿಸುವುದಿಲ್ಲ. ಪುರುಷನಿಗೆ ಜ್ಞಾನವನ್ನು ಯಥಾರ್ಥವೆಂದು ನಿರ್ಣಯಿಸಬೇಕೆಂಬ ಅಪೇಕ್ಷೆಯುಂಟಾದರೆ, ಆಗ ಸಾಕ್ಷಿಯು ಸಜಾತೀಯ ಸಂವಾದಗಳಿರುವುವೋ ಇಲ್ಲವೋ ಎನ್ನುವುದನ್ನು ವಿಚಾರಮಾಡಿ, ಸಂವಾದವಿದ್ದರೆ ನಿರ್ದೋಷವೆಂದೂ ಅತಏವ ಪ್ರಮಾಣವೆಂದೂ, ಸಂವಾದ ರಹಿತವಾಗಿದ್ದರೆ ದೋಷಯುಕ್ತ ವಾದದ್ದೆಂದೂ ಅತಏವ ಅಯಥಾರ್ಥವೆಂದೂ ನಿರ್ಣಯಿಸುತ್ತದೆ. ಸಾಕ್ಷಿಯು ಸ್ವಪ್ರಕಾಶವೂ ಆತ್ಮಸ್ವರೂಪವೂ ಆದ ಜ್ಞಾನವಾದ್ದರಿಂದ ಒಂದು ಸಲ ಪರೀಕ್ಷಿತವಾದ ವಿಷಯದಲ್ಲಿ ಪುನಃ ಪರೀಕ್ಷೆಮಾಡುವ ಅವಶ್ಯಕತೆ ಅದಕ್ಕೆ

ಇರುವುದಿಲ್ಲ. ಸಾಕ್ಷಿಯು ಸ್ವಪ್ರಕಾಶರೂಪವಾದ ಕಾರಣದಿಂದ ಅದಕ್ಕೆ ತನ್ನನ್ನು ತಾನೇ ಪರೀಕ್ಷಿಸಿಕೊಳ್ಳುವ ಅವಶ್ಯಕತೆಯೂ ಇರುವುದಿಲ್ಲ. ಮತ್ತೂ ಸಾಕ್ಷಿಯು ನಿರ್ದೋಷವಾದ್ದರಿಂದ ಅದರಿಂದ ಸಿದ್ಧವಾದ ವಿಷಯದಲ್ಲಿ ಸತ್ಯವೋ ಅಸತ್ಯವೋ ಎಂಬ ಸಂದೇಹಕ್ಕೆ ಆಸ್ಪದವೇ ಇರುವುದಿಲ್ಲ.

ಕೆಲವು ವೇಳೆ ಯಥಾರ್ಥವೆಂದು ನಿಶ್ಚಯಿಸಲ್ಪಟ್ಟಜ್ಞಾನವೂ ಅಯಥಾರ್ಥವಾಗಿ ಕಂಡುಬರುವಂತಹ ಸಂದರ್ಭಗಳಲ್ಲಿ, ಸಾಕ್ಷಿಯು ಉದಾಸೀನ ವಾಗಿರುವಾಗ ಮನಸ್ಸೇ ನಿರ್ಣಯವನ್ನು ತೆಗೆದುಕೊಂಡಿರುತ್ತದೆ. ಸಾಕ್ಷಿಯಿಂದ ಅಯಥಾರ್ಥವೆಂದು ನಿರ್ಣಯಮಾಡಲ್ಪಟ್ಟರೆ ಮನಸ್ಸಿನ ನಿರ್ಣಯವು ತಪ್ಪೆಂದು ಗ್ರಹಣವಾಗುತ್ತದೆ. ಉದಾಹರಣೆಗಾಗಿ ಇಲ್ಲಿ ಕುಡಿಯುವ ನೀರು ಇರುವುದೆಂದು ಕೇಳಿದ ಪುರುಷನು ತನ್ನ ಜ್ಞಾನವು ಯಥಾರ್ಥವೋ ಅಲ್ಲವೋ ಎಂಬ ಸಂದೇಹ ಬರಲಾಗಿ ನೀರಿನ ಮೇಲಿನಿಂದ ಬೀಸುವ ಶೀತಲವಾದ ಗಾಳಿ ಮೊದಲಾದ ಲಕ್ಷಣಗಳಿಂದ ನೀರು ಇರುವುದು ಎಂದು ಊಹಿಸುತ್ತಾನೆ. ಆ ಅನುಮಾನಜನ್ಯವಾದ ಜ್ಞಾನದ ಯಾಥಾರ್ಥ್ಯದ ವಿಷಯದಲ್ಲಿ ಸಂದೇಹವುಂಟಾಗಲಾಗಿ ಸ್ವತಃ ನೀರು ಇರುವ ಸ್ಥಳಕ್ಕೆ ಹೋಗಿ ಪ್ರತ್ಯಕ್ಷವಾಗಿ ನೋಡಿ ನೀರು ಇರುವುದೆಂದು ತಿಳಿಯುತ್ತಾನೆ. ಮತ್ತೆ ಅವನಿಗೇ ಈ ಪ್ರತ್ಯಕ್ಷದ ವಿಷಯದಲ್ಲಿಯೂ ಸಂದೇಹ ಬರಲು ನೀರನ್ನು ಪಾನಮಾಡಿ ತೃಪ್ತಿಯನ್ನು ಹೊಂದುತ್ತಾನೆ ಮತ್ತು ಅದರಿಂದುಂಟಾದ ಸುಖವನ್ನು ಆತ್ಮಸ್ವರೂಪವಾದ ಸಾಕ್ಷಿಯು ಅನುಭವಿಸುತ್ತದೆ. ಈಸಾಕ್ಷಿ ಜ್ಞಾನವು ನಿಯಮವಾಗಿ ಯಥಾರ್ಥವಾಗಿರುವುದರಿಂದ ಅದರ ವಿಷಯವಾದ ಸುಖಾನುಭವಕ್ಕೆ ಕಾರಣವಾದ ನೀರಿನ ಜ್ಞಾನವೂ ಯಥಾರ್ಥವೆಂದು ನಿಶ್ಚಯಮಾಡುತ್ತಾನೆ. ಇದರಿಂದ ನೀರು ಇರುವುದು ಸತ್ಯವೆಂದು ಸಿದ್ಧವಾಗುತ್ತದೆ. ಪ್ರಥಮವಾಗಿ ನೀರಿನ ಜ್ಞಾನವುಂಟಾದರೂ ಅದು ಮನೋಜನ್ಯವಾದದ್ದರಿಂದ ಸಂದೇಹಕ್ಕೆ ಆಸ್ಪದವನ್ನು ಕೊಟ್ಟಿತು. ಸಾಕ್ಷಿಯಿಂದ ನೀರಿನ ಜ್ಞಾನವು ಯಥಾರ್ಥವೆಂದು ಸಿದ್ಧವಾದ ನಂತರ ಯಾವ ವಿಧವಾದ ಸಂಶಯಕ್ಕೂ ಅವಕಾಶವಿಲ್ಲದ ರೀತಿಯಲ್ಲಿ ನೀರಿನ ಜ್ಞಾನವು ಯಥಾರ್ಥವೆಂಬ ನಿರ್ಣಯವುಂಟಾಯಿತು. ಇದರಿಂದ ತಿಳಿದು ಬರುವುದೇನೆಂದರೆ

ಮನೋಜನ್ಯವಾದ ಜ್ಞಾನದ ವಿಷಯದಲ್ಲಿ ಅದು ಯಥಾರ್ಥ ಅಥವಾ ಅಯಥಾರ್ಥವೆಂಬರೆಡು ಕಲ್ಪಗಳನ್ನೂ ಸಾಕ್ಷಿಯು ಅನಾದಿಯಿಂದಲೂ ಅನುಭವಿಸುತ್ತಿರುವುದರಿಂದ, ಜ್ಞಾನೋತ್ಪತ್ತಿಯಾದ ಕ್ಷಣದಲ್ಲೇ ಅದನ್ನು ಯಥಾರ್ಥವೆಂದು ಗ್ರಹಣಮಾಡುವುದಿಲ್ಲ. ಮನೋಜನ್ಯವಾದ ಜ್ಞಾನವು ಸುಖಾದಿಗಳನ್ನುಂಟುಮಾಡಿದರೆ ಸಾಕ್ಷಿಯು ಅಫಲವನ್ನು ಅನುಭವಿಸುವ ಮೂಲಕ ಅಜ್ಞಾನವನ್ನು ಯಥಾರ್ಥವೆಂದು ನಿಶ್ಚಯಮಾಡುತ್ತದೆ.

ಸಾಕ್ಷಿಯು ಸ್ವಪ್ರಕಾಶ
=============

ಸಾಕ್ಷಿಯು ವೃತ್ತಿಜ್ಞಾನವನ್ನೂ ಅದರ ಪ್ರಾಮಾಣ್ಯವನ್ನೂ ಏಕಕಾಲದಲ್ಲಿಯೇ ಗ್ರಹಣ ಮಾಡುತ್ತದೆ. ಈ ಅರ್ಥದಲ್ಲಿಯೇ ಜ್ಞಾನದ ಪ್ರಾಮಾಣ್ಯವೂ ಸ್ವತಃ ಗೃಹೀತವಾಗುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಯಾಗಲೀ ಅದರ ಪ್ರಾಮಾಣ್ಯವಾಗಲೀ ಮತ್ತೊಂದರಿಂದ ಗೃಹೀತ ವಾಗುವುದಿಲ್ಲ. ಏಕೆಂದರೆ ಸಾಕ್ಷಿಯು ಸ್ವಪ್ರಕಾಶ. ಸ್ವಪ್ರಕಾಶವೆಂದರೆ ತನ್ನನ್ನು ತಾನೇ ತಳಿಯುವುದೆಂದು ಅರ್ಥ. ಸಾಕ್ಷಿಯು ತನ್ನನ್ನೂ ತನ್ನ ಪ್ರಾಮಾಣ್ಯವನ್ನೂ ಏಕಕಾಲದಲ್ಲಿಯೇ ಗ್ರಹಣಮಾಡುತ್ತದೆ. ಅದಕ್ಕೆ ತನ್ನ ಪ್ರಾಮಾಣ್ಯದ ವಿಷಯದಲ್ಲಿ ಯಾವಾಗಲೂ ಸಂದೇಹ ಉಂಟಾಗುವುದಿಲ್ಲ. ಈ ಕಾರಣದಿಂದಾಗಿ ಸಾಕ್ಷಿಯು ನಿಯಮವಾಗಿ ಯಥಾರ್ಥವೆಂದು ಹೇಳುತ್ತಾರೆ.

ಅನುಮಾನದ ಪ್ರಾಮಾಣ್ಯವನ್ನೂ ಸಾಕ್ಷಿಯು ಗ್ರಹಿಸುತ್ತದೆ.
=====================================

ಅನುಮಾನವನ್ನು ಗ್ರಹಿಸುವ ಸಾಕ್ಷಿಯೇ ಅದರ ಪ್ರಾಮಾಣ್ಯವನ್ನೂ ಗ್ರಹಿಸುತ್ತದೆ. ಇದಕ್ಕೆ ಸಾಕ್ಷಿಪ್ರತ್ಯಕ್ಷವೆನ್ನುತ್ತಾರೆ. ಇದು ಯಾವಾಗಲೂ ವರ್ತಮಾನಕಾಲದಲ್ಲಿರುತ್ತದೆ. ಇದಿದ್ದರೆ ಮಾತ್ರ ಅನುಮಾನವು ಪ್ರಮಾಣವಾಗುತ್ತದೆ, ಇಲ್ಲವಾದರೆ ಇಲ್ಲ. ಉದಾಹರಣೆಗಾಗಿ 'ವಿಶ್ವಂ ಮಿಥ್ಯಾ ಶುಕ್ತಿರಜತವತ್" ಎಂಬ ಅನುಮಾನವನ್ನು ಪರೀಕ್ಷೆಮಾಡೋಣ. ಈ ಅನುಮಾನವು ಪ್ರವೃತ್ತಿಯಾಗುವ ಕಾಲದಲ್ಲಿಯೇ ಜಗತ್ತು ಸತ್ಯವೆಂದು

ಸಿದ್ಧವಾಗಿರುವುದು. ಇದರಿಂದ ಅ ಅನುಮಾನವು ಪ್ರಮಾಣವಲ್ಲವೆಂಬ ತತ್ವವು ಸಾಕ್ಷಿಯಿಂದ ಸಿದ್ಧವಾಗಿರುವುದೆಂದು ಅರ್ಥವಾಗುತ್ತದೆ. ಒಂದು ವೇಳೆ ಈ ಅನುಮಾನವು ಮುಂದೆ ಬರುವ ಜಗತ್ತಿನ ಮಿಥ್ಯಾತ್ವವನ್ನು ಗ್ರಹಣಮಾಡುತ್ತದೆ ಎಂದು ಹೇಳಿದರೆ, ಅದು ಅರ್ಥಹೀನವಾಗುವುದಲ್ಲದೆ ಸಾಕ್ಷಿಪ್ರತ್ಯಕ್ಷದಿಂದಲೂ "ದ್ವಾಸುಪರ್ಣಾ", "ವಿಶ್ವಂ ಸತ್ಯಂ ಮಘವಾ" ಮುಂತಾದ ಆಗಮಗಳಿಂದಲೂ, "ಜಗತ್ ಸತ್ಯಂ ಪ್ರಮಾಣಸಿದ್ಧತ್ವಾತ್" ಎಂಬ ಅನುಮಾನ ಇವುಗಳ ಪ್ರಮಾಣವು ಸಾಕ್ಷಿಸಿದ್ಧವಾಗಿರುವುದರಿಂದ "ವಿಶ್ವಂ ಮಿಥ್ಯಾ ದೃಶ್ಯತ್ವಾತ್" ಎನ್ನುವ ಅನುಮಾನವು ಸರ್ವವಿಧವಾಗಿಯೂ ಬಾಧಿತವಾಗಿರುತ್ತದೆ.

ಭೇದವೂ ಸಾಕ್ಷಿಸಿದ್ಧವಾಗಿದೆ
=================

ಶ್ರೀಮನ್ ಮಧ್ವಸಿದ್ಧಾಂತದಲ್ಲಿ ಭೇದವು ಧರ್ಮಿಸ್ವರೂಪವೆಂದು ಹೇಳುತ್ತೇವೆ. ಭೇದವು ಧರ್ಮಿಸ್ವರೂಪವಾದರೆ, ಧರ್ಮಿಯು ಪ್ರಪಂಚದಲ್ಲಿರುವ ಇತರ ಎಲ್ಲಾ ವಸ್ತುಗಳಿಂದ ಭಿನ್ನವೆಂದು ತಿಳಿಯುವಾಗ ಎಲ್ಲಾ ವಸ್ತುಗಳ ಜ್ಞಾನವಿರುವುದು ಅವಶ್ಯಕವಾಗಿರುತ್ತದೆ. ಅಲ್ಪಜ್ಞಾನಿಗಳಿಗೆ ಇದು ಹೇಗೆ ಸಾಧ್ಯವಾಗುತ್ತದೆ ಎಂಬ ಶಂಕೆಯುಂಟಾಗುವುದು ಸಹಜ. ಆದರೆ ವಸ್ತುಸ್ಥಿತಿಯು ಏನೆಂದರೆ ದೇಶಕಾಲಗಳನ್ನು ಗ್ರಹಣಮಾಡುವ ಸಾಕ್ಷಿಯೇ ಪ್ರಪಂಚಗತವಾದ ಎಲ್ಲವಸ್ತುಗಳನ್ನೂ ಸಾಮಾನ್ಯಾಕಾರವಾಗಿ ಗ್ರಹಿಸಿ, "ಇದು ಬೇರೆ, ಇದು ಬೇರೆ"ಎಂದು ಒಂದು ವಸ್ತುವನ್ನು ಗ್ರಹಣಮಾಡುತ್ತದೆ. ವಸ್ತುಗ್ರಹಣವನ್ನು ಒಪ್ಪುವ ಎಲ್ಲ ವಾದಿಗಳೂ ಸಾಕ್ಷಿಯ ಈ ವ್ಯಾಪಾರವನ್ನು ಒಪ್ಪಿಕೊಳ್ಳಲೇ ಬೇಕು. ಒಂದು ವೇಳೆ ಇದನ್ನು ಒಪ್ಪದಿದ್ದರೆ "ಸರ್ವ"ಎಂಬ ಜ್ಞಾನವೂ ಅದರಿಂದುಂಟಾಗುವ ವ್ಯವಹಾರವೂ ಅಯುಕ್ತವಾಗುತ್ತದೆ. ಈ ಕಾರಣದಿಂದ ಭೇದವು ಧರ್ಮಿಸ್ವರೂಪವೆಂದು ಒಪ್ಪಿಕೊಳ್ಳಲೇ ಬೇಕು.

ತಮೋಯೋಗ್ಯರು ಮತ್ತು ನಿತ್ಯಸಂಸಾರಿಗಳ ಸಾಕ್ಷಿಸ್ವರೂಪ
====================================

ತಮೋಯೋಗ್ಯರ ಸಾಕ್ಷಿಯು ತನ್ನ ಸ್ವರೂಪ ವಿಷಯದಲ್ಲಿ ಯಥಾರ್ಥವಾದರೂ ಸ್ವಾತಂತ್ರ್ಯ ಮೊದಲಾದ ವಿಷಯಗಳಲ್ಲಿ ಅಯಥಾರ್ಥ ವಾಗಿರುತ್ತದೆ. ಆದರೆ ಇದು ಅವರು ತಮಸ್ಸನ್ನು ಹೊಂದಿದನಂತರವೇ ವ್ಯಕ್ತವಾಗುತ್ತದೆ ಸಂಸಾರದಶೆಯಲ್ಲಿ ಅಲ್ಲ. ಇದರಂತಯೇ ನಿತ್ಯಸಂಸಾರಿಗಳ (ಮಧ್ಯಮ ಜೀವರ) ಸಾಕ್ಷಿಯು ಲಿಂಗಭಂಗಾನಂತರವೇ ಯಥಾರ್ಥ-ಅಯಥಾರ್ಥ ರೂಪವಾಗಿರುತ್ತದೆ. ಸಂಸಾರದಶೆಯಲ್ಲಿ ತಮೋಯೋಗ್ಯರ ಮತ್ತು ನಿತ್ಯಸಂಸಾರಿಗಳ ಸಾಕ್ಷಿಯು ಪ್ರಪಂಚದ ಪ್ರವೃತ್ತಿಗೋಸ್ಕರ ಪರಮಾತ್ಮನ ಇಚ್ಛೆಯಂತೆ ಯಥಾರ್ಥವಾಗಿರುತ್ತದೆ ಹಾಗೂ ಮನೋವೃತ್ತಿರೂಪವಾದ ವಿವಿಧ ಜ್ಞಾನಗಳನ್ನು ಹುಟ್ಟಿಸುತ್ತದೆ. ಅಂದರೆ ಸಂಸಾರದೆಶೆಯಲ್ಲಿ ಸಾಕ್ಷಿಯಿಂದ ಗೃಹೀತವಾದ ಸುಖದುಃಖಾದಿಗಳ ವಿಷಯದಲ್ಲಿ ವಿಸಂವಾದವಿಲ್ಲದೇ ಪ್ರವೃತ್ತಿಯುಂಟಾಗುತ್ತದೆ. ಒಟ್ಟಿನಲ್ಲಿ ತಮೋಯೋಗ್ಯರ ಮತ್ತು ನಿತ್ಯಸಂಸಾರಿಗಳ ಸಾಕ್ಷಿಯು ಲಿಂಗಭಂಗಾನಂತರದಲ್ಲಿ ಅಪ್ರಮಾಣವಾದರೂ, ಈಶ್ವರೇಚ್ಛಾನುಸಾರವಾಗಿ ಸಂಸಾರದಶೆಯಲ್ಲಿ ಮಾತ್ರ ಪ್ರಮಾಣವಾಗಿರುತ್ತದೆ. ಈಕಾರಣದಿಂದಾಗಿ ಅವರಿಂದ ಅನುಭೂತವಾಗುವ ಸುಖದುಃಖಾದಿಗಳು ಪ್ರಮಾಣವಾಗಿದ್ದು ಪ್ರವೃತ್ತಿ ಜನಕವಾಗಿರುತ್ತವೆ.

ಈ ವಿಷಯದಲ್ಲಿ ಶ್ರೀಮದಾಚಾರ್ಯರು ಗೀತಾತಾತ್ಪರ್ಯ (ಅಧ್ಯಾಯ ೧೩, ಶ್ಲೋಕ ೩)ದಲ್ಲಿ ಈ ರೀತಿಯಾಗಿ ಅಪ್ಪಣೆಯನ್ನು ಕೊಡಿಸಿದ್ದಾರೆ.

ವಿಕಾರೇಚ್ಛಾದಿ ನಿರ್ಮುಕ್ತಃ ಚಿನ್ಮಾತ್ರೇಚ್ಛಾದಿ ಸಂಯುತಃ ।
ಮುಕ್ತ ಇತ್ಯುಚ್ಯತೇ ಜೀವೋ ಮುಕ್ತಿಶ್ಚ ದ್ವಿವಿಧಾ ಮತಾ॥
ಚಿನ್ಮಾತ್ರ ದ್ವೇಷದುಃಖೇ ಚ ದೇಹೋ ಮಿಥ್ಯಾ ದೃಗಾತ್ಮಕಃ।
ನಿಷಿಧೇಚ್ಛಾ ಚ ಯತ್ರ ಸ್ಯುಃ ನಿತ್ಯಾ ಸಾ ಮುಕ್ತಿರಾಸುರೀ॥
ಚಿನ್ಮಾತ್ರಾ ವೈಷ್ಣವೀ ಭಕ್ತಿಃ ದೇಹಃ ಸಮ್ಯಕ್ ದೃಗಾತ್ಮಕಃ।
ಸುಖಮಿಚ್ಛಾನುಕೂಲಾ ಚ ಧೃತಿಃ ದೈವೀತಿ ಸಾ ಮತಾ॥
– ಇತಿ ನಾರಾಯಣಸಂಹಿತಾಯಾಮ್॥

ಅಚಿದ್ವಿಕಾರರೂಪವಾದ ಇಚ್ಛಾದಿಗಳು ಇಲ್ಲದ ಮತ್ತು ಕೇವಲ ಚಿದ್ರೂಪವಾದ ಇಚ್ಛಾದಿಗಳನ್ನು ಹೊಂದಿರುವ ಜೀವನು ಮುಕ್ತನೆನಿಸಿ ಕೊಳ್ಳುತ್ತಾನೆ. ಮುಕ್ತಿಯು ಎರಡು ವಿಧವಾಗಿರುತ್ತದೆ. ಒಂದು ಆಸುರೀ ಮುಕ್ತಿಯು ಇನ್ನೊಂದು ದೈವೀ ಮುಕ್ತಿಯು. ದ್ವೇಷ, ಸುಖ, ಮಿಥ್ಯಾಜ್ಞಾನರೂಪವಾದ ದೇಹ, ನಿಷಿದ್ಧವಿಷಯುಕವಾದ ಇಚ್ಛೆ ಇವೆಲ್ಲಾ ಚಿನ್ಮಾತ್ರವಾಗಿರುವುದು ಆಸುರೀ ಮುಕ್ತಿಯು. ವಿಷ್ಣು ವಿಷಯಕವಾದ ಭಕ್ತಿ, ಸಮ್ಯಕ್ ಜ್ಞಾನಾತ್ಮಕವಾದ ದೇಹ, ಸುಖ, ಪರಮಾತ್ಮನ ಇಚ್ಛೆಗೆ ಅನುಕೂಲವಾದ ಇಚ್ಛೆ, ಧೃತಿ ಇವುಗಳೆಲ್ಲಾ ಚಿನ್ಮಾತ್ರವಾಗಿರುವ ಮುಕ್ತಿಯು ದೈವೀಮುಕ್ತಿ ಎಂಬುದಾಗಿ ನಾರಾಯಣಸಂಹಿತೆಯಲ್ಲಿ ಹೇಳಿದೆ.

ಸಾಕ್ಷೀಂದ್ರಿಯದ ವಿಷವಾಗಿ ಶ್ರೀಮದಾಚಾರ್ಯರಿಂದ ಶ್ರೀಮದನುವ್ಯಾಖ್ಯಾನದಲ್ಲಿ ಉಕ್ತವಾಗಿರುವುದೇನೆಂದರೆ :

ನ ಪರೀಕ್ಷಾನವಸ್ಥಾಸ್ಯಾತ್ ಸಾಕ್ಷಿಸಿದ್ಧೇತ್ವಸಂಶಯಾತ್।
ಮಾನಸೇ ದರ್ಶನೇ ದೋಷಾಃ ಸ್ಯುರ್ನವೈ ಸಾಕ್ಷಿದರ್ಶನೇ॥೧೫೯॥
ಸುದೃಢೋ ನಿರ್ಣಯೋ ಯತ್ರ ಜ್ಞೇಯ ತತ್ಸಾಕ್ಷಿದರ್ಶನಂ।
ಇಚ್ಛಾಜ್ಞಾನಂ ಸುಖಂ ದುಃಖಂಭಯಾಭಯಕೃಪಾದಯಃ॥೬೦॥
ಸಾಕ್ಷಿಸಿದ್ಧಾ ನ ಕಶ್ಚಿದ್ಧಿ ತತ್ರ ಸಂಶಯವಾನ್ ಕ್ವಚಿತ್।
ಯತ್ರ ಕಾಚಿತ್ ವ್ಯಭಿಚಾರಿ ಸ್ಯಾತ್ ದರ್ಶನಂ ಮಾನಸಂ ಹಿ ತತ್॥೬೧॥
ಮನಶ್ಚಕ್ಷುರ್ದರ್ಶನಾದೇರಪಿ ಯತ್ರೈವ ಸಾಕ್ಷಿಣಾ।
ಪ್ರಾಮಾಣ್ಯಂ ಸುಗೃಹೀತಂಸ್ಯಾತ್ತತ್ಪರೀಕ್ಷಿತ ದರ್ಶನಮ್॥೬೨॥
ನ ಜ್ಞಾನ ದೃಷ್ಟಿಮಾತ್ರೇಣ ಪ್ರಾಮಾಣ್ಯಂ ತಸ್ಯ ದೃಶ್ಯತೇ।
ನಿಯಮೇನ ಸುಖಾದ್ಯೇಷು ಪ್ರಾಮಾಣ್ಯಂ ಸಾಕ್ಷಿಗೋಚರಮ್॥೬೩॥
ಸ್ವಪ್ರಾಮಾಣ್ಯಂ ಸಾಕ್ಷೀ ಪಶ್ಯತ್ಯೇವ ಸುನಿಶ್ಚಯಾತ್।
ಜ್ಞಾನಸ್ಯ ಗ್ರಾಹಗಕೇಣೈವ ಸಾಕ್ಷಿಣಾ ಣಮುಙನಮುಙ ಮಾನತಾಮಿತೇಃ॥೬೪॥
ದೋಷಾಭಾವೇ ಪ್ರಮಾಣತ್ವಂ ದೋಷಾಭಾವಸ್ಯ ಸಾಕ್ಷಿಣಾ।
ನಿಶ್ಚಿತತ್ವಂ ಕ್ವಚಿಚ್ಚೈವ ಸ್ವತಃ ಪ್ರಾಮಾಣ್ಯಮಿಷ್ಯತೇ॥೬೫॥
ಅತೋ ಸರ್ವಮಾನಾನಾಂ ಪ್ರಾಮಾಣ್ಯಂ ನಿಶ್ಚಿತಂ ಭವೇತ್।

ಸಾಕ್ಷಿಣಾ ನಿಶ್ಚಿತಂ ಯತ್ರ ತತ್ಪ್ರಾಮಾಣ್ಯಂ ಸ್ವಲಕ್ಷಣಮ್॥೬॥
ನ ಹಿ ಕಶ್ಚಿತ್ ಸುಖಾದ್ಯೇಷು ಸಂಶಯಂ ಕುರುತೇ ಜನಃ।
ನ ಚೈವಾಖಿಲಮಾನಾನಿ ನಿನ್ನೋತ್ಯಖಿಲೋ ಜನಃ॥೭॥
ತಸ್ಮಾಧನ ತಸ್ಮಾದನುಭವಾರೂಢಂ ಕಿಮರ್ಥಮುಪಲಪ್ಯತೇ।
ದೋಷಾಭಾವಾದಿಕಂ ಚೈವ ಸಾಕ್ಷೀ ಸಮ್ಯಕ್ ಪ್ರಪಶ್ಯತಿ॥೧೫೬೮॥

ಇತರ ವಾದಿಗಳ ದರ್ಶಗಳನ್ನು ಅವಲೋಕನಮಾಡಿದರೆ ಅವರಿಗೆ ಶ್ರಿಮನ್ಮಧ್ವಸಿದ್ಧಾಂತದಲ್ಲಿ ನಿರೂಪಿತಾದಂತಹ ಸಾಕ್ಷೀಂದ್ರಿಯ ಜ್ಞಾನವೇ ಇಲ್ಲದಿರುವುದು ಗೋಚರವಾಗುತ್ತದೆ. "ತ್ವಯಿ ರತ್ನಾಕರೇ ರತ್ನಶ್ರೇಣೀರ್ವಾ ಗಣಯಂತಿ ಕೇ"ಎಂದು ಶ್ರೀಮನ್ನಾರಾಯಣ ಪಂಡಿತಾಚಾರ್ಯರು ಶ್ರೀಮತ್ಸುಮಧ್ವವಿಜಯದಲ್ಲಿ ಹೇಳಿರುವಂತೆ ಶ್ರೀಮದಾಚಾರ್ಯರ ಸಿದ್ಧಾಂತದಲ್ಲಿ ಸಾಕ್ಷೀಂದ್ರಿಯ ಪ್ರಮಾಣದಂಥಾ ಅನೇಕ ಪ್ರಮೇಯರತ್ನಗಳು ಇರುವುದು ಶಾಸ್ತ್ರವೇತೃಗಳೆಲ್ಲರಿಗೂ ತಿಳಿದೇ ಇದೆ. ಇಂಥಾ ಅಪೂರ್ವವಾದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ ಶಾಸ್ತ್ರವನ್ನು ಯಥಾಯೋಗ್ಯವಾಗಿ ಸಂಪ್ರದಾಯಾಗತರಾದ ಗುರುಗಳನ್ನು ಆಶ್ರಯಮಾಡಿ ಅಭ್ಯಾಸಮಾಡಿ ಶಾಸ್ತ್ರಜನ್ಯಜ್ಞಾನದಿಂದ ಶ್ರೀಹರಿಯನ್ನು ಸರ್ವತ್ರ, ಸರ್ವದಾ ಸರ್ವಾಕಾರ, ಸರ್ವಾಧಾರ, ಸರ್ವಾಶ್ರಯ ಸರ್ವೋತ್ಪಾದಕ ಸರ್ವಪಾಲಕ ಸರ್ವಸಂಹಾರಕ ಸರ್ವನಿಯಾಮಕ ಸರ್ವಪ್ರೇರಕ ಸರ್ವಪ್ರವರ್ತಕ ಸರ್ವನಿವರ್ತಕ ಯಥಾಯೋಗ್ಯಂ ಸರ್ವಜ್ಞಾನಾಜ್ಞಾನಬಂಧಮೋಕ್ಷಪ್ರದ ಸರ್ವಸತ್ತಾಪ್ರದ ಸರ್ವಶಬ್ದವಾಚ್ಯ ಸರ್ವಶಬ್ದಪ್ರವೃತ್ತಿನಿಮಿತ್ತ ಸರ್ವಗುಣಾತಿಪೂರ್ಣತಮ ಸರ್ವದೋಷಾತಿದೂರ ಸರ್ವಾಚಿಂತ್ಯ ಸರ್ವೋತ್ತಮ ಸರ್ವೇಶ್ವರ ಸರ್ವಾತ್ಯಂತ ವಿಲಕ್ಷಣ ಸ್ವಗತಭೇದವಿವರ್ಜಿತ ಎಂದು ತಿಳಿದು ಯಥಾಯೋಗ್ಯವಾಗಿ ಉಪಾಸನೆಮಾಡಿ ವೈಷ್ಣವಜನ್ಮವನ್ನು ಸಾರ್ಥಕಮಾಡಿಕೊಂಡು ಸ್ವಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷವನ್ನು ಪಡೆಯುವುದೇ ನಮ್ಮಗಳೆಲ್ಲರ ಮುಖ್ಯಕರ್ತವ್ಯವಾಗಿರುವುದು.

ಮಹಾನಂದತೀರ್ಥಸ್ಯ ಯೇ ಭಾಷ್ಯಭಾವಂ ಮನೋವಾಗ್ಭಿರಾವರ್ತಯಂತೇ ಸ್ವಶಕ್ತ್ಯಾ। ಸುರಾದ್ಯಾ ನರಾಂತಾ ಮುಕುಂದ ಪ್ರಸಾದಾದಿಮಂ ಮೋಕ್ಷಮೇತೇ ಭಜಂತೇ ಸದೇತಿ॥
(ಶ್ರೀಮತ್ ಸುಮಧ್ವವಿಜಯ ಸರ್ಗ ೧೧ ಶ್ಲೋಕ.೭೯)

ಮದಾರ್ಯ ಸುಮನೋಧಾಮ ಮಧ್ವಮಾನಸ ಮಂಚಕೇ। ಶಯಾನಃ ಕರಿಗಿರೀಶಃ ಪ್ರೀಯತಾಂ ಸೇವಯಾ$ನಯಾ॥

ಪರಿಶಿಷ್ಟ

ಸಾಕ್ಷಿಯ ವಿಷಯವಾಗಿ ಶ್ರೀಮದನುವ್ಯಾಖ್ಯಾನದಲ್ಲಿ ಉಕ್ತವಾದ ವಾಕ್ಯಗಳ ಸಂಗ್ರಹ (ಬೇರೆ ಬೇರೆ ಅಧಿಕರಣಗಳಲ್ಲಿ ಹೇಗೆ ಉಕ್ತವಾಗಿದೆಯೋ ಹಾಗೆ ಸಂಗ್ರಹಿಸಲಾಗಿದೆ. ವಿಷಯವಿವೇಚನೆಯಂತೆ ವಾಕ್ಯಗಳ ಸಂಗ್ರಹವನ್ನು ಮಾಡಿರುವುದಿಲ್ಲ)

1. (ಪ್ರಕೃತ್ಯಧಿಕರಣ)

೧. ಸತ್ಯಸ್ಯ ಸಾಕ್ಷಿಣಃ ಪ್ರಮಾಣತ್ವಮುಭಯಸಂಪ್ರತಿಪನ್ನಮ್
---------------------------------------

ಸಾಧಕತ್ವಂ ತು ಸತ್ಯಸ್ಯ ಸಾಕ್ಷಿಣೋ ಹ್ಯಾವಯೋರ್ದ್ವಯೋಃ।ಸಮ್ಯಕ್ ಸಂಪ್ರತಿಪಮನ್ನಂ ತನ್ನ ವಿವರ್ತಮತಂ ಭವೇತ್॥೩೯॥

೨. ವಿಶ್ವಸತ್ಯತ್ವೇ ಪ್ರತ್ಯಕ್ಷಮಪಿ ಪ್ರಮಾಣಂ, ಗಗನಾದೀನಾಂ ಸಾಕ್ಷಿಪ್ರತ್ಯಕ್ಷತ್ವಮ್ ಸತ್ಯತ್ವಂ ಗಗನಾದೇಶ್ಚ ಸಾಕ್ಷಿಪ್ರತ್ಯಕ್ಷಸಾಧಿತಮ್॥

೩. ಸಾಕ್ಷಿಸಿದ್ಧಸ್ಯ ತ್ರೈಕಾಲಿಕಾಬಾಧ್ಯತ್ವಮ್
--------------------------

ಸಾಕ್ಷಿಸಿದ್ಧಸ್ಯ ನ ಕ್ವಾಪಿ ಬಾಧ್ಯತ್ವಂ ತದದೋಷತಃ।
ಸರ್ವಲೋಕೇಷ್ವಬಾಧ್ಯತ್ವಂ ಸಾಕಷಿಣೈವ ಪ್ರತೀಯತೇ॥

೪. ಕಾಲಸ್ಯ ಸಾಕ್ಷಿಪ್ರತ್ಯಕ್ಷತ್ವಂ, ಸಾಕ್ಷಿಸಿದ್ಧತ್ವಮ್/ಸಾಕ್ಷಿಸಿದ್ಧಸ್ಯ ಸತ್ಯತ್ವೋಪಸಂಹಾರಃ

---

ಕಾಲೋ ಹಿ ಸಾಕ್ಷಿಪ್ರತ್ಯಕ್ಷಃ ಸುಷುಪ್ತೌ ಚ ಪ್ರತೀತಿತಃ।
ಅತೀತಾನಾಗತೌ ಕಾಲಾವಪಿ ನಾಸಾಕ್ಷಿಗೋಚರೌ॥೪೦೨-೪೦೪॥
ಅತೋಽದೋಷಪ್ರತೀತಸ್ಯ ಸತ್ಯತ್ವಂ ಸಾಕ್ಷಿಣಾ ಮತಮ್॥೪೦೭॥

೫. ಸಾಕ್ಷೀ ಹಿ ಜ್ಞಾನಸ್ವರೂಪಂ ಪ್ರಾಮಾಣ್ಯಂ ಚ
ಸ್ವಮಹಿಮ್ನೈವ ವಿಷಯೀಕರೋತಿ,
ಪರೀಕ್ಷಯಾ ದೋಷಶಂಕಾನಿರಾಸಮಾತ್ರಮ್

೬. ಸಾಕ್ಷಿಣಃ ಸರ್ವಥಾ ಪ್ರಾಮಾಣ್ಯಾಗ್ರಾಹಕತ್ವೇ
ಬ್ರಹ್ಮಣೋಽಪಿ ವಿನಿವೃತ್ತಿಃ ಸ್ಯಾತ್

---

ಪರೀಕ್ಷಾದೇಶ್ಚ ಸತ್ಯತ್ವಂ ತೇನ ಹ್ಯೇವ ಮತಂ ಭವೇತ್॥೪೦೭॥
ಅನ್ಯಥಾ ಶ್ರುತಿಯುಕ್ತ್ಯಾದಿಪ್ರಮಾಣೈಶ್ಚ ಸಹೈವ ತು।
ಅಕಸ್ಮಾದ್ವಿನಿವೃತ್ತಿಶ್ಚ ಕಿಂ ವಿಶ್ವಸ್ಯ ನ ಶಂಕ್ಯತೇ॥೪೦೮॥
ಇತಃ ಪೂರ್ವಂ ತಥಾ ಭಾವಾದ್ಯದಿ ಮನೋ ಸಂಸ್ಕೃತೇಗೃತಿಃ।
ವಾಕಯಾನುಮಾದಿತಶ್ಚೇತ್ಸ್ಯಾತ್ತತ್ಪ್ರಮಾಣ್ಯಂ ಚ ಸಾಕ್ಷಿತಃ॥೪೦೯॥

೭. ಸಾಕ್ಷೀ ಬ್ರಹ್ಮಸತ್ಯತ್ವಪ್ರತಿಪಾದಕವಾಕ್ಯಾದೇಃ
ಪ್ರಾಮಾಣ್ಯಂ ಸರ್ವಕಾಲೇಷು ಆತ್ಯಂತಿಕಂ ಗೃಹ್ಣಾತಿ

---

ತತ್ಪ್ರಮಾಣ್ಯಂ ಯಥಾ ಸಾಕ್ಷೀ ಸ್ಥಾಪಯತ್ಯೇವಮೇವ ಹಿ।
ಸರ್ವಕಾಲೇಷ್ವಪಿ ಸ್ಥೈರ್ಯಾದ್ವ್ಯಭಿಚಾರಮಪೋಹ್ಯ ಚ॥೪೧೦॥

೮. ಅಕ್ಷಜಾದಿಜ್ಞಾನಸ್ಯ ಆತ್ಯಂತಿಕಂ ಪ್ರಾಮಾಣ್ಯಂ ಗೃಹ್ಣನ್ ಸಾಕ್ಷೀ ವಿಶ್ವಸತ್ಯತಾಂ ಸ್ಥಾಪಯತಿ

----------------------------------------------------------------

ಏವಮಕ್ಷಜಮಾನತ್ವಸಿದ್ಧಾಂ ವಿಊಶ್ವಸ್ಯ ಸತ್ಯತಾಂ।
ಕಿಮಿತಿ ಸ್ಥಾಪಯೇನ್ನಾಯಂ ನಿರ್ದೋಷಜ್ಞಾನಶಕ್ತಿತಃ॥೪೧೧॥

ನವಿಲಕ್ಷತ್ವಾಧಿಕರಣ – ಪ್ರತ್ಯಕ್ಷ ಲಕ್ಷಣಂ, ತದ್ವಿಭಾಗಃ

============ ------------------

ನಿದೋಷಾಕ್ಷೋದ್ಭವಂ ಹ್ಯತ್ರ ಪ್ರತ್ಯಕ್ಷಮಿತಿ ಗೀಯತೇ॥।
ಪ್ರಾಕೃತಂ ಶುದ್ಧಚೈತನ್ಯಮುಕ್ಷ್ಂ ತು ದ್ವಿವಿಧಂ ಮತಂ।
ಶುದ್ಧಮೀಶ್ವರಮಾಮುಕ್ತೇಷ್ವನ್ಯತ್ರ ಪ್ರಾಕೃತೈರ್ಯುತಂ॥
ನಿರ್ಧೋಷಮೇವ ಚೈತನ್ಯಮನ್ಯತ್ರೋಭಯಮಿಷ್ಯತೇ।
ಸುಖದುಃಖಾದಿವಿಷಯಂ ಶುದ್ಧಂ ಸಂಸಾರಗೇಷ್ವಪಿ॥
ನಿರ್ದೋಷತ್ವಾತಿ ನಿಯಮಾತ್ತದ್ವಲಿಷ್ಠತಮಂಮತಂ।
ಪಂಚೇಂದ್ರಿಯಮನೋಭೇದಾತ್ ಪ್ರಾಕೃತಂ ಷಡ್ವಿಧಂ ಸ್ಮೃತಂ॥೪೬೦–೪೬೩॥

ವೈಶೇಷಿಕಾಧಿಕರಣ (೨–೨–೬)

============

೧. ಕಾಲಾಕಾಶಾದೇಃ ಪರಿಮಾಣೋತ್ಕರ್ಷಸ್ಯ ಆನಂತ್ಯಮಿವ ತಪಕರ್ಷಾನಂತ್ಯಮಪಿ ಸಾಕ್ಷಿಸಿದ್ಧಂ

ಕೇವಲಂ ಸಾಕ್ಷಿಮಾನೇನ ಕಾಲೋ ದೇಶೋ$ಪಿ ನಾಂತವಾನ್॥೬೧೭॥
ಅಪರರ್ಯವಸಿತಿಶ್ಚಾಣೋದೃಶ್ಯತೇ ಸಾಕ್ಷಿಣಾ ದ್ವಯೋಃ।
ಯದಿ ನೋ ಸಾಕ್ಷಿಗಮ್ಯಂ ತನ್ಮಹತ್ವಂ ಕೇನ ಗಮ್ಯತೇ॥೬೧೮॥

೨. ಪ್ರತ್ಯಕ್ಷಾದಿ ಪ್ರಾಮಾಣ್ಯಸಿದ್ಧ್ಯರ್ಥಂ ಸಾಕ್ಷೀ ಅಂಗೀಕರ್ತವ್ಯಃ

------------------------------------------

ಯದಿ ಸಾಕ್ಷೀ ಸ್ವಯಂ ಭಾತೋ ನ ಮಾನಂ ಕೇನ ಗಮ್ಯತೇ॥
ಅಕ್ಷಜಾದೇಶ್ಚ ಮಾನತ್ವಮನವಸ್ಥಾನ್ಯಥಾ ಭವೇತ್॥೬೨೯-೬೩೦॥'

೩. ಪರಮಾಣ್ವಾದಿಭಿಃ ಅನಿಯಮಸ್ಪೃಷ್ಟಾ ಸಾಕ್ಷೀ ಪ್ರಮಾಣಂ
------------------------------------

ಕಥಂ ಸಾಕ್ಷಿಮಿತಸ್ಯಾಸ್ಯ ಶಕ್ನುಯಾದ್ವಾರಣೇ ಕ್ವಚಿತ್॥

೪. ಪರಮಾಣ್ವಾದೇಃ ಸಾಕ್ಷ್ಯವೇದ್ಯತ್ವೇ ಅನುಮಾನವೇದ್ಯತ್ವಮಪಿ ನ ಸ್ಯಾತ್
----------------------------------------------------

ಯದಿ ಸಾಕ್ಷಿಮತಂ ನೈತನ್ನಾನುಮಾ ತತ್ರ ರ್ತತೇ॥
ಪಕ್ಷೀಕರ್ತುಮಶಕ್ಯತ್ವಾತ್ ಕುತ ಏವಾನುಮಾ ಭವೇತ್।
ಯತ್ರ ನಾಸ್ತಿ ಪದನ್ಯಸಃ ಕಸ್ತಂ ವಿಷಯಮುಪ್ನುಯತ್॥೬೩೪-೬೩೫॥

೫. ಸಾಕ್ಷೀ ಅವಯವಾವಯವ್ಯಾದೇಃ ಸವಿಶೇಷಭೇದಂ ಗೃಹ್ಣಾತಿ
------------------------------------

ಅಭೇದೇನ ಪ್ರತೀತಿಶ್ಚ ಕಾರ್ಯಕಾರಣಪೂರ್ವಕೇ।
ಅಭಾವಾಂತೇ ಪದಾಥೇ$ಸ್ತಿ ಸವಿಶೇಷಾವಸೀಯತೇ॥೬೪೯॥

ವಿಯುದಧಿಕರಣಂ – ಅವ್ಯಾಕೃತಾಕಾಶಃ ಸಾಕ್ಷಿಪ್ರತ್ಯಕ್ಷ ಸಿದ್ಧಃ, ನಿತ್ಯಃ
=========== ----------------------------

ಅವ್ಯಾಕೃತಂ ಹಿ ಗಗನಂ ಸಾಕ್ಷಿಗೋಚರಮ್॥೮೭೬॥

ಪೃಥಗಧಿಕರಣಮ್
=============

ಸ್ವಾತ್ಮನಃ ಪರಮಾತ್ಮಭೇದಗ್ರಾಹಕಂ ಸಾಕ್ಷಿಪ್ರತ್ಯಕ್ಷಂ ಪ್ರಬಲಂ ಅತಃ ತದ್ವಿರೋಧೇನ ಜೀವಬ್ರಹ್ಮಣೋಃ ಏಕತ್ವಂ ನಾನುಮಾತುಂ ಶಕ್ಯತೇ
---------------------------------------------

ಅನುಭೂತಿವಿರೋಧೇನ ಕಥಮೇಕತ್ವಮುಚ್ಯತೇ।
ಕಿಂಚಿಕರ್ತಾ ಚ ದುಃಖೀತಿ ಸರ್ವೈರೇವಾನುಭೂಯತೇ॥೯೯॥
ಸರ್ವಜ್ಞೋ ಭಗವಾನ್ವಿಷ್ಣುಃ ಸರ್ವಶಕ್ತಿರಿತಿ ಶ್ರುತಃ॥೧೭॥

ಸಂಧ್ಯಧಿಕರಣಂ

==========

೧. ಅದೃಷ್ಟವ್ಯಭಿಚಾರಸ್ಯೈವ ಹೇತೋಃ ಸಾಧ್ಯಸಾಧಕತ್ವಂ ಸಕ್ಷಿಣಾ ಸಿದ್ಧಂ ಪ್ರಮಾಣಬಾಧೇ ಚ ಅದೃಷ್ಟವ್ಯಭಿಚಾರಿತ್ವಂ ನ ಭವತಿ ಅತೋ ಬಾಧಸ್ಯ ದೂಷಣತ್ವಂ

----------------------------------------------------

ಅದೃಷ್ಟೇ ವ್ಯಭಿಚಾರೇ ತು ಸಾಧಕಂ ತದಿತಿ ಸ್ಫುಟಂ॥೯೨॥
ಜ್ಞಾಯತೇ ಸಾಕ್ಷಿಣೈವಾದ್ಧಾ ಮನ ಬಾಧೇ ನ ತದ್ಭವೇತ್॥೯೩॥

೨. ಸರ್ವೇಷಾಂ ಮಾನಾನಾಂ ಮಾನತ್ವಂ ಸಾಕ್ಷಿಣೈವ ಅವಸೀಚುತೆ

----------------------------------------------

ಯತ್ಸಾಕ್ಷಿಣೈವ ಮನತ್ವಂ ಮಾನಾನಾಮವಸೀಯತೇ॥೯೩॥

೩. ಸರ್ವ ಪ್ರಮಾಣಪ್ರಾಮಾಣ್ಯಂ ಸಾಕ್ಷಿವೇದ್ಯಂ

------------------------------

ಪ್ರಾಮಾಣ್ಯಮಾಗಸ್ಯಾಪಿ ಪ್ರತ್ಯಕ್ಷಾದನ್ಯತಃ ಕುತಃ।
ಸಾಕ್ಷಿಪ್ರತ್ಯತೋ ಹ್ಯೇವ ಮಾನಾನಾಂ ಮಾನತೇಯತೇ॥೧೦೨೮॥

೪. ಸಾಕ್ಷಿಣಃ ಸ್ವಪ್ರಕಾಶತ್ವಾತ್ ನ ಅನವಸ್ಥಾ

-----------------------------

ಸಾಕ್ಷಿಣಃ ಸ್ವಪ್ರಕಾಶತ್ವಮನವಸ್ಥಾ ತತೋ ನ ಹಿ॥೧೦೨೯॥

೫. ಪ್ರತ್ಯಕ್ಷಸ್ಯ ನ ವರ್ತಮಾನಮಾತ್ರಗ್ರಾಹಿತ್ವನಿಯಮಃ, ಉತ್ತರಕಾಲಸ್ಯ ಸಾಕ್ಷಿವೇದ್ಯತ್ವಾಭಾವೇ ಮೋಕ್ಷಸ್ಯಾಪಿ ತದವೇದ್ಯತ್ವಂ ಸ್ಯಾತ್, ತತಶ್ಚ ತದರ್ಥಃ ಪ್ರಯತ್ನೋ ನ ಸ್ಯಾತ್

---------------------------------------------

(ತತೋ ಹಿ ಪ್ರತ್ಯಕ್ಷ ಸಿದ್ಧಂ ನನ್ಯೇನ ಕೇನಚಿತ್॥೨೧೦೪೫॥

ಶಕ್ಯಂ ವಾರಯಿತುಂ ಕ್ವಾಪಿ) ತಚಚೇನ್ನೋತ್ತರಗೋಚರಂ।

ಕಥಮೇವೋತ್ತರಃ ಕಾಲಸ್ತದ್ಗೋ ಮೋಕ್ಷಶ್ಚ ಗಮ್ಯತೇ॥೧೦೪೬॥

೬. ಅನುಗತ ಸಾಮಾನ್ಯಭಾವೇನ ವರ್ತಮಾನಾತೀತಾನಾಗತಾಃ ಸಾಕ್ಷಿಗೋಚರಾಃ

------------------------------------------

ಅತಃ ಸರ್ವೇ ಪದಾರ್ಥಾಶ್ಚ ಸಾಮಾನ್ಯಾತ್ ಸಾಕ್ಷಿಗೋಚರಾಃ॥೧೦೫೬॥

ಸರ್ವಮಿತ್ಯೇವ ವಿಜ್ಞನಂ ಸರ್ವೇಷಾಂ ಕಥಮನ್ಯಥಾ।೧೦೫೭॥

ಚಕ್ಷುರಾದ್ಯಧಿಕರಣಂ

============

ಪ್ರಾಮಾಣ್ಯಗ್ರಹಣಸ್ಯ ಪರೀಕ್ಷಾಧೀನತ್ವೇ ಅನವಸ್ಥೇತಿ ನ ವಾಚ್ಯಂ, ಸಂಭಾವಿತದೋಷೇ ಅಂತಃಕರಣಪರಿಣಾಮರೂಪೇ ವೃತ್ತಿಜ್ಞಾನೇ ಏವ ಪರೀಕ್ಷಾಪೇಕ್ಷಾ ನ ತು ಬಾಧರಹಿತೇ ಸಾಕ್ಷಿಜ್ಞಾನೇ

---------------------------------------------

ನ ಪರೀಕ್ಷಾನವಸ್ಥಾಸ್ಯಾತ್ ಸಾಕ್ಷಿಸಿದ್ಧೇತ್ವಸಂಶಯಾತ್।

ಮಾನಸೇ ದರ್ಶನೇ ದೋಷಾಃ ಸ್ಯುರ್ನವೈ ಸಾಕ್ಷಿದರ್ಶನೇ॥೧೫೫೯॥

ಸುದೃಢೋ ನಿರ್ಣಯೋ ಯತ್ರ ಜ್ಞೇಯತತ್ಸಾಕ್ಷಿದರ್ಶನಂ।

ಇಚ್ಛಾಜ್ಞಾನಂ ಸುಖಂ ದುಃಖಂಭಯಾಭಯಕೃಪಾದಯಃ॥೬೦॥

ಸಾಕ್ಷಿಸಿದ್ಧಾ ನ ಕಶ್ಚಿದ್ಧಿ ತತ್ರ ಮಸಂಶಯವಾನ್ ಕ್ವಚಿತ್।

ಯತ್ರ ಕಾಚಿತ್ ದ್ವ್ಯಭಿಚಾರಿ ಸ್ಯಾತ್ ದರ್ಶನಂ ಮಾನಸಂ ಹಿ ತತ್॥೬೧॥

ಮನಚ್ಚುರ್ದರ್ಶನಾದೇರಪಿ ಯತ್ರೈವ ಸಾಕ್ಷಿಣಾ।

ಪ್ರಾಮಾಣ್ಯಂ ಸುಗೃಹೀತಂಸ್ಯಾತ್ತತ್ಪರೀಕ್ಷಿತ ದರ್ಶನಮ್॥೬೨॥

ನ ಜ್ಞಾನ ದೃಷ್ಟಿಮಾತ್ರೇಣ ಪ್ರಾಮಾಣ್ಯಂ ತಸ್ಯ ದೃಶ್ಯತೇ।
ನಿಯಮೇನ ಸುಖಾದ್ಯೇಷು ಪ್ರಾಮಾಣ್ಯಂ ಸಾಕ್ಷಿಗೋಚರಮ್॥೬೩॥
ಸ್ವಪ್ರಾಮಾಣ್ಯಂ ಸಾಕ್ಷೀ ಪಶ್ಯತ್ಯೇವ ಸುನಿಶ್ಚಯಾತ್॥
ಜ್ಞಾನಸ್ಯ ಗ್ರಾಹಗಕೇಣೈವ ಸಾಕ್ಷಿಣಾಆಮಾನತಾಮಿತೇಃ॥೬೪॥
ದೋಷಾಭಾವೇ ಪ್ರಮಾಣತ್ವಂ ದೋಷಾಭಾವಸ್ಯ ಸಾಕ್ಷಿಣಾ।
ನಿಶ್ಚಿತತ್ವಂ ಕ್ವಚಿಚ್ಚೈವ ಸ್ವತಃ ಪ್ರಾಮಾಣ್ಯಮಿಷ್ಯತೇ॥೬೫॥
ಅತೋ ಸರ್ವಮಾನಾಂ ಪ್ರಾಂಆಣ್ಯಂ ನಿಶ್ಚಿತಂ ಭವೇತ್।
ಸಾಕ್ಷಿಣಾ ನಿಶ್ಚಿತಂ ಯತ್ರ ತತ್ಪ್ರಾಮಾಣ್ಯಂ ಸ್ವಲಕ್ಷಣಮ್॥೬೬।
ನ ಹಿ ಕಶ್ಚಿತ್ ಸುಖಾದ್ಯೇಷು ಸಂಶಯಂ ಕುರುತೇ ಜನಃ।
ನ ಚೈವಾಖಿಲಮಾನಾನಿ ನಿನೋತ್ಯಖಿಲೋ ಜನಃ॥೬೭॥
ತಸ್ಮಾಧನುಭಾವಾರೂಢಂ ಕಿಮರ್ಥಮುಪಲಪ್ಯತೇ।
ದೋಷಾಭಾವಾದಿಕಂ ಚೈವ ಸಾಕ್ಷೀ ಸಮ್ಯಕ್ ಪ್ರಪಶ್ಯತಿ॥೧೫೬೮॥

ಶ್ರೀಮನ್ನ್ಯಾಯಸಧಾ ಹಾಗೂ ಅದರ ಟಿಪ್ಪಣಿಗಳಿಂದ ಸಾಕ್ಷಿಯ ವಿಷಯವಾಗಿ ಇನ್ನೂ ಅನೇಕ ಗ್ರಂಥಗಳಲ್ಲಿರುವ ಪ್ರಮಾಣಗಳನ್ನು ಸಂಗ್ರಹಿಸಬಹುದು. ನನ್ನ ಅಲ್ಪಜ್ಞತೆಯಿಂದಲೂ ಗ್ರಂಥಬಾಹುಳ್ಯಭೀತಿಯಿಂದಲೂ ಸಂಗ್ರಹವನ್ನು ಇಲ್ಲಿ ಮಾಡಿಲ್ಲ. ಜಿಜ್ಞಾಸುಗಳು ಹೆಚ್ಚಿನ ವಿಷಯಗಳನ್ನು ಅಲ್ಲಿಯೇ ನೋಡಬಹುದು.

ಅಸ್ಮದ್ಗುರ್ವಂತರ್ಗತ ಶ್ರೀಮದ್ಧನುಮಭೀಮ ಮಧ್ವಾಂತರಾತ್ಮಕ ಶ್ರೀರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಕರಿಗಿರಿ ಶ್ರೀಲಕ್ಷ್ಮೀನರಸಿಂಹಃ ಪ್ರೀಯತಾಂ ಸುಪ್ರೀತೋ ವರದೋ ಭವತು॥

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಮನ್ಮಧ್ವಸಿದ್ಧಾಂತದಲ್ಲಿ ಹೇಳಿರುವ ಸಾಧನ ಸೂತ್ರಗಳು
-----------------------------------

೧. ಸಾಧಕನಾದ ಜೀವನಿಗೆ ಎಲ್ಲಕ್ಕೂ ಮೊದಲು ಅತ್ಯವಶ್ಯಕವಾಗಿ ಇರಬೇಕಾದ ಗುಣಗಳು : ಪರಮಾತ್ಮನಲ್ಲಿ ಭಕ್ತಿ, ಅಧ್ಯಯನ, ಶಮ, ದಮ, ಉಪರತಿ ಅಂದರೆ ವಿಷಯ ವೈರಾಗ್ಯ ಮತ್ತು ತಿತಿಕ್ಷುತ್ವ ಅಂದರೆ ಸುಖದುಃಖ ಮುಂತಾದ ದ್ವಂದ್ವಗಳ ಸಹನೆ.

೨. ಸಾಧಕನ ಸರ್ವೋತ್ತಮವಾದ ಧರ್ಮವೆಂದರೆ ಜ್ಞಾನಪೂರ್ವಕವಾದ ಭಕ್ತಿಯಿಂದ ಸ್ವವಿಹಿತವೃತ್ತಿಯಿಂದ ಭಗವಂತನಾದ ಶ್ರೀಹರಿಯ ಆರಾಧನೆಯನ್ನುಮಾಡುವುದೊಂದೇ ಆಗಿರುವುದು.

೩. ಸ್ವವಿಹಿತ ವೃತ್ತಿಯೆಂದರೆ ತನ್ನ ವರ್ಣ ಮತ್ತು ಆಶ್ರಮಗಳಿಗೆ ಶಾಸ್ತ್ರದಲ್ಲಿ ಹೇಳಿರುವಂತಹ ಧರ್ಮಗಳು. ಈ ಧರ್ಮಗಳನ್ನು ಮನಃಪೂರ್ತಿಯಾಗಿ ಪರಮಾತ್ಮನ ಪ್ರೀತಿಗೋಸ್ಕರ ಮಾಡಿದರೆ ಮಾತ್ರ ಅದು ಸ್ವವಿಹಿತ ವೃತ್ತಿ ಯಾಗುತ್ತದೆ ಮತ್ತು ಭಗವತ್ಪ್ರಾಪ್ತಿ ಸಾಧಕವಾದ ಕರ್ಮವಾಗುತ್ತದೆ. ಇದೇ ಸ್ವೋಚಿತಕರ್ಮ.

೪. ಜ್ಞಾನವೆಂದರೆ ಶ್ರವಣ, ಮನನ ಮತ್ತು ನಿಧಿಧ್ಯಾಸನ ಅಥವಾ ಧ್ಯಾನ (ಇದೇ ಜಿಜ್ಞಾಸಾ) ಇವುಗಳಿಂದ ಉತ್ಪನ್ನವಾದ ಜ್ಞಾನ. ಇದನ್ನು ಪರೋಕ್ಷವೆಂದೂ ಕರೆಯುತ್ತಾರೆ. ಅಪರೋಕ್ಷಜ್ಞಾನವೆಂದರೆ ಪರೋಕ್ಷಜ್ಞಾನದಿಂದ ಕೂಡಿದ ಉಪಾಸನೆ ಭಕ್ತಿಗಳಿಂದ ಉಂಟಾದ ಪರಮಾತ್ಮನ ಸಾಕ್ಷಾತ್ಕಾರ.೫. ಭಕ್ತಿಯೆಂದರೆ ಮಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ ಸ್ನೇಹ. ಇದು ನಿಷ್ಕಾಮವಾಗಿಯೂ ಇರಬೇಕು.

೬. ಶಾಸ್ತ್ರದಲ್ಲಿ ಎಲ್ಲಿ ಜ್ಞಾನವು ಮೋಕ್ಷಸಾಧನವೆಂದು ಹೇಳಿದೆಯೋ ಅಲ್ಲಿ ಜ್ಞಾನಪದದಿಂದ ಅಪರೋಕ್ಷಜ್ಞಾನವನ್ನೇ ಹೇಳಿದೆ ಎಂದು ತಿಳಿಯಬೇಕು. ಜ್ಞಾನವೆಂದರೆ ಪುಸ್ತಕವನ್ನು ಓದಿ ಸಂಪಾದಿಸಿದ ಅಕ್ಷರಜ್ಞಾನವಲ್ಲ.

೭. ಪರೋಕ್ಷಜ್ಞಾನವೇ ಸುದೃಢವಾದ ಸ್ನೇಹರೂಪವನ್ನು ಹೊಂದಿದರೆ ಭಕ್ತಿಯಾಗುತ್ತದೆ.

೮. ಉಪಾಸನೆ ಎರಡುವಿಧವಾಗಿದೆ. ಸತತವಾದ ಶಾಸ್ತ್ರಾಭ್ಯಾಸರೂಪವಾದದ್ದು ಮತ್ತು ಧ್ಯಾನರೂಪವಾದದ್ದು. ವಿಶೇಷವಾದ ಅಧಿಕಾರವುಳ್ಳ ಕೆಲವರಿಗೆ ಸತತವಾದ ಶಸ್ತ್ರಾಭ್ಯಾಸದಿಂದಲೇ ಅಪರೋಕ್ಷವಾಗುತ್ತದೆ. ಮತ್ತೆ ಕೆಲವರಿಗೆ ಶಾಸ್ತ್ರಾಭ್ಯಾಸವು ಧ್ಯಾನಕ್ಕೆ ಸಹಾಯವಾಗಿ ಅಪರೋಕ್ಷಜ್ಞಾನಜನಕವಾಗುತ್ತದೆ.

೯. ಶ್ರವಣಮನನಾದಿಗಳಿಂದ ಅಜ್ಞಾನ ಮಿಥ್ಯಾಜ್ಞಾನಾದಿಗಳು ನಾಶಹೊಂದುತ್ತವೆ.

೧೦. ಪರಮಾತ್ಮನು ಅವ್ಯಕ್ತನಾದರೂ ಜೀವನ ಬಿಂರೂಪಿಯಾದ ಅವನು ತನ್ನ ಅಚಿಂತ್ಯವಾದ ಶಕ್ತಿಯಿಂದ ಭಕ್ತರಿಗೆ ದರ್ಶನಕೊಡುತ್ತಾನೆ. ಇದೇಬಿಂಬಾಪರೋಕ್ಷ.

೧೧. ಶ್ರಣಮನನಾದಿಗಳಿಂದ ಪರೋಕ್ಷಜ್ಞಾನ. ಪರೋಕ್ಷಜ್ಞಾನದಿಂದ ಪಕ್ವಭಕ್ತಿ. ಪಕ್ವಭಕ್ತಿಯಿಂದ ಧ್ಯಾನ. ಧ್ಯಾನದಿಂದ ಪರಿಪಕ್ವಭಕ್ತಿ. ಪರಿಪಕ್ವಭಕ್ತಿಯಿಂದ ಅತಿಪರಿಪಕ್ವಭಕ್ತಿ. ಇದೇ ಭಕ್ತಿಯೋಗದ ಫಲ.

೧೨. ಭಕ್ತರಲ್ಲಿ ನಾಲಕ್ಕು ವಿಧವಿದೆ. ಆರ್ತರು, ಇವರು ಸಂಕಟ ಪ್ರಾಪ್ತವಾದಾಗ ಪರಮಾತ್ಮನಲ್ಲಿ ಭಕ್ತಿಮಾಡತಕ್ಕವರು. ಜಿಜ್ಞಾಸುಗಳು. ಪುರುಷಾರ್ಥಗಳ ಇಚ್ಛೆಯಿಂದ ಭಕ್ತಿಮಾಡುವವರು ಮತ್ತು ಅಪರೋಕ್ಷಜ್ಞಾನಿಗಳಾದ ಭಕ್ತರು.

೧೩. ಯಮ, ನಿಯಮ, ಪ್ರಾಣಾಯಾಮಾದಿಗಳು ಧ್ಯಾನಕ್ಕೆ ಅಂಗ ಅಂದರೆ ಕೇವಲ ಸಹಾಯುಕಗಳು.

೧೪. ಫಪರಮಾತ್ಮನ ಅಪರೋಕ್ಷದಿಂದ ಸಂಚಿತಕರ್ಮಗಳು ನಾಶಹೊಂದುತ್ತವೆ. ಆಗಾಮಿ ಕರ್ಮಗಳ ಲೇಪವಾಗುವುದಿಲ್ಲ. ಪ್ರಾರಬ್ಧಕರ್ಮವು ಅನುಭವದಿಂದಲೇ

ನಾಶಹೊಂದುತ್ತದೆ. ಸಮಸ್ತ ಕರ್ಮಗಳ ನಾಶಾ ನಂತರವೇ ಮೋಕ್ಷ ಪ್ರಾಪ್ತಿಯಾಗುತ್ತದೆ.

೧೫. ಶ್ರವಣ–ಮನನ–ಧ್ಯಾನ–ಭಕ್ತಿ ಇವುಗಳಿಲ್ಲದೆ ಯಾರಿಗೂ ಭಗವಂತನ ಅಪರೋಕ್ಷವಾಗುವುದಿಲ್ಲ.

೧೬. ಸರ್ವಸಮರ್ಪಣ – ಹೆಂಡತಿ, ಮಕ್ಕಳು, ಧನ, ಧಾನ್ಯ, ತನ್ನನ್ನೂ ಮತ್ತು ತನ್ನ ಸರ್ವಸ್ವವನ್ನೂ ಪರಮಾತ್ಮನಿಗೆ ಸಮರ್ಪಣೆಮಾಡಿ ಕೇವಲ ಅವನ ಪೂಜೆಯೆಂದು ತಿಳಿಯಬೇಕು.